ISSN 2321 - 3590





ಇತಿಹಾಸ ದರ್ಪಣ

(ತ್ರೈಮಾಸಿಕ)

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ಪುಸ್ತಕ 31–32 (ಸಂಯುಕ್ತ ವಿಶೇಷ ಸಂಚಿಕೆ)
ಅಕ್ಟೋಬರ್ 2016 – ಮಾರ್ಚ್ 2017

ಪರಿಶೋಧ

ಕರ್ನಾಟಕದ ಕಲೆ, ವಾಸ್ತುಶಿಲ್ಪ ಮತ್ತು ಪುರಾತತ್ತ್ವ
ಕುರಿತಾದ ಹೊಸ ಶೋಧನೆಗಳು


Itihasa Darpana (Kannada Quarterly)

A Peer Reviewed Journal of Historical Research in Kannada

Book 31-32 (Combined Special Issue)
October 2016 - March 2017



ಗವಿ/ಕಲ್ಲಾಸರೆಯಲ್ಲಿ ಪ್ರಾಚೀನ ಕರ್ನಾಟಕ ಸಂಸ್ಕೃತಿ



ಬೆಂಗಳೂರು ಸಮೀಪ (ಬಂಕಾರಸನಗುಂಡು) ಕೈಗುರುತು ವರ್ಣಚಿತ್ರಗಳ ಶೋಧನೆ



ಕಳಭ್ರರ ಮೂಲಸ್ಥಾನ ಕಳವಾರ ಬೆಟ್ಟವೇ (ಸ್ಕಂಧಗಿರಿಯೇ)?

ISSN 2321 - 3590

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ಇತಿಹಾಸ ದರ್ಪಣ

(ತ್ರೈಮಾಸಿಕ)

A Peer Reviewed Journal of
Historical Research in Kannada

ಪರಿಶೋಧ

ಕರ್ನಾಟಕದ ಕಲೆ, ವಾಸ್ತುಶಿಲ್ಪ ಮತ್ತು ಪುರಾತತ್ತ್ವ
ಕುರಿತಾದ ಹೊಸ ಶೋಧನೆಗಳು



ಇತಿಹಾಸ ದರ್ಪಣ
(ತ್ರೈಮಾಸಿಕ)
ಪುಸ್ತಕ 31–32
(ಸಂಯುಕ್ತ ವಿಶೇಷ ಸಂಚಿಕೆ)
ಅಕ್ಟೋಬರ್ 2016 – ಮಾರ್ಚ್ 2017

Itihasa Darpana
(Kannada Quarterly)
Book 31-32
(Combined Special Issue)
October 2016 - March 2017

ಸಂಪಾದಕರು
ಹಂ.ಗು. ರಾಜೇಶ್
ಮೊ: 78294 04063

ಉಪ ಸಂಪಾದಕರು
ಸುಂಕಂ ಗೋವರ್ಧನ
ರಶ್ಮಿ ಎಸ್.
ಶಿವಕುಮಾರಿ ಎಂ.ಎಸ್.

ಪುಸ್ತಕ ವಿನ್ಯಾಸ
ಶ್ವೇತ ಬಿ.ಎಸ್.

Editor
H.G. Rajesh
Mob: 78294 04063

Sub Editors
Sunkam Govardhan
Rashmi S.
Shivakumari M.S.

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ಓದುಗರ ಸಲಹೆ–ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.
E-mail: itihasadarpana@gmail.com
ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. –ಸಂ.

"THE PUBLICATION OF THIS JOURNAL HAS BEEN FINANCIALLY SUPPORTED BY THE INDIAN COUNCIL OF HISTORICAL RESEARCH. THE RESPONSIBILITY FOR THE FACTS STATED ON OPINIONS EXPRESSED IS ENTIRELY OF THE AUTHOR AND NOT OF THE I.C.H.R."

ಪರಿವಿಡಿ. . .

'ಇತಿಹಾಸ ದರ್ಪಣ'ಕ್ಕೆ ಪ್ರಬಂಧವನ್ನು ಕಳುಹಿಸುವ ಮುನ್ನ...

'ಇತಿಹಾಸ ದರ್ಪಣ'ಕ್ಕೆ ಸಂಶೋಧನ ಪ್ರಬಂಧವನ್ನು ಕಳುಹಿಸುವವರು ಈ ಕೆಳಕಂಡ ಕ್ರಮಗಳನ್ನು ಪಾಲಿಸಬೇಕು.

- ಪ್ರಬಂಧವು ಅಪ್ರಕಟಿತವಾಗಿರಬೇಕು ಮತ್ತು ನವ ಶೋಧನೆ, ವಿನೂತನ ವಿಶ್ಲೇಷಣೆ, ಆಲೋಚನೆ ಹಾಗೂ ಸಂಶೋಧನಾ ವಿಧಾನಗಳಿಂದಾಗಿ ಹೊಸತನದಿಂದ ಕೂಡಿದ ಮತ್ತು ಚರಿತ್ರೆಯ ಅಧ್ಯಯನದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಬಂಧವಾಗಿರಬೇಕು.
- ಪ್ರಬಂಧವನ್ನು 'ನುಡಿ' ತಂತ್ರಾಂಶದಲ್ಲಿ ಬೆರಳಚ್ಚು ಮಾಡಿ ಇ-ಮೇಲ್ ಮಾಡುವುದು ಹೆಚ್ಚು ಸೂಕ್ತವಾಗಿರುತ್ತದೆ. ಉಲ್ಲೇಖದ ಟಿಪ್ಪಣಿಗಳನ್ನು ಉಲ್ಲೇಖ, ಹೆಚ್ಚಿನ ಮಾಹಿತಿ ಹಾಗೂ ಅಗತ್ಯ ವಿವರಣೆಗಳನ್ನು ಕೊನೆ ಟಿಪ್ಪಣಿಗಳ ರೂಪದಲ್ಲಿ ನೀಡಬೇಕು.
- ಕೊನೆ ಟಿಪ್ಪಣಿಗಳನ್ನು ನೀಡುವಾಗ ಲೇಖಕರ ಹೆಸರು, ಪ್ರಕಟಣಾ ವರ್ಷ, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು ಮತ್ತು ಪುಟಗಳ ವಿವರಗಳನ್ನು ಮೊದಲ ಬಾರಿ ನೀಡಬೇಕು. ಪುನರುಕ್ತಗೊಳ್ಳುವಾಗ ಲೇಖಕರ ಹೆಸರು, ವರ್ಷ ಬರೆದು 'ಪೂರ್ವೋಕ್ತ' ಎಂದು ಕೃತಿಯ ಹೆಸರ ಸ್ಥಳದಲ್ಲಿ ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು. ತತ್ಕೂಡಲೇ ಉಲ್ಲೇಖಿಸುವ ಸಂದರ್ಭದಲ್ಲಿ 'ಇಲ್ಲೇ' ಎಂದು ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು.
- ಲೇಖನಗಳನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' ' ಈ ಚಿಹ್ನೆಯಲ್ಲಿ ಕೊಡುವುದು), ಈ ಲೇಖನ ಪ್ರಕಟವಾದ ನಿಯತಕಾಲಿಕೆ ಹೆಸರು (ಇಟ್ಯಾಲಿಕ್‌ನಲ್ಲಿ), ಸಂಚಿಕೆ, ಸಂಪುಟ, ವರ್ಷ, ಪ್ರಕಟವಾಗುತ್ತಿರುವ ಸ್ಥಳ ಮತ್ತು ಪುಟಗಳ ವಿವರ ಸೂಚಿಸುವುದು.
- ಸಂಪಾದಿತ ಕೃತಿಯಲ್ಲಿನ ಲೇಖನವನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (' '), ಸಂಪಾದಕರ ಹೆಸರು, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು, ಪುಟಗಳ ವಿವರ ಸೂಚಿಸುವುದು.
- ಪ್ರಬಂಧಕ್ಕೆ ಪೂರಕವಾದ ಚಿತ್ರಗಳನ್ನು ಕಳುಹಿಸಿಕೊಡಬಹುದು. ಅವುಗಳಿಗೆ ಕಡ್ಡಾಯವಾಗಿ ಚಿತ್ರ ಶೀರ್ಷಿಕೆಗಳನ್ನು ನೀಡಿರಬೇಕು.
- ಇತಿಹಾಸ ದರ್ಪಣ ಚಂದಾದಾರರಾಗಿರುವವರಿಗೆ ಮೊದಲ ಆದ್ಯತೆ.
- ಪ್ರಕಟಣೆಗೆ ಬರುವ ಪ್ರಬಂಧಗಳನ್ನು ಪೂರ್ವಾವಲೋಕನಕ್ಕಾಗಿ ತಜ್ಞರಿಗೆ ಕಳುಹಿಸಿ ಕೊಡಲಾಗುವುದು. ಆಯ್ಕೆಯಾದ ಪ್ರಬಂಧಗಳನ್ನು ಪ್ರಕಟಣಾ ಪೂರ್ವದಲ್ಲಿಯೇ ಲೇಖಕರಿಗೆ ತಿಳಿಸಲಾಗುವುದು.
- ಪ್ರಕಟವಾದ ಪ್ರಬಂಧಗಳಿಗೆ ಯಾವುದೇ ಸಂಭಾವನೆಯನ್ನು ನೀಡಲಾಗುವುದಿಲ್ಲ ಮತ್ತು ತಾವು ಕಳುಹಿಸಿಕೊಟ್ಟ ಲೇಖನ ಸಂಬಂಧ ಯಾವುದೇ ಪತ್ರ ವ್ಯವಹಾರ ಮತ್ತು ದೂರವಾಣಿ ಸಂಭಾಷಣೆಗೆ ಅವಕಾಶವಿರುವುದಿಲ್ಲ.
- ಪ್ರಬಂಧಗಳನ್ನು **'itihasadarpana@gmail.com'**ಗೆ ಇ-ಮೇಲ್ ಮಾಡುವುದು.

–ಸಂಪಾದಕರು

ಸಹೃದಯ ಸಂಪನ್ನರು

ಇವರ ವ್ಯಕ್ತಿತ್ವವೇ ಹಾಗೆ! ಕಚೇರಿಗೆ ತಮ್ಮನ್ನು ಕೇಳಿಕೊಂಡು ಯಾರೇ ಬಂದರೂ ಕೂಡ ಅಷ್ಟೇ ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತಾರೆ. ಕುಳ್ಳಿರಿಸಿ, ದಣಿವಾರಿಸಿದ ನಂತರ ಬಂದ ಉದ್ದೇಶವನ್ನು ವಿಚಾರಿಸುತ್ತಾರೆ. ಇವರೆಷ್ಟೇ ಉನ್ನತ ಪದವಿಯನ್ನು ಅಲಂಕರಿಸಿದರೂ ಕೂಡ, ಯಾವ ಹಮ್ಮುಬಿಮ್ಮುಗಳೂ ಇವರಲ್ಲಿ ನುಸುಳುವುದಿಲ್ಲ. ತಮ್ಮ ಕೆಳಹಂತದ ನೌಕರರನ್ನೂ ಸಹ, ಅಧಿಕಾರಿಗಳನ್ನು ನಡೆಸಿಕೊಂಡಷ್ಟೇ ಗೌರವಯುತವಾಗಿ ನಡೆಸಿಕೊಳ್ಳುವ ಸೌಜನ್ಯ ಇವರದು. ಅಸಹಾಯಕರು, ದುರ್ಬಲರನ್ನು ಕಂಡರೆ ತಮ್ಮ ಶಕ್ತಿ ಮೀರಿ ನೆರವಾಗುವ ಸದ್ಗುಣ ಇವರದು. ಕಿರಿಯರಿರಲಿ, ಹಿರಿಯರಿರಲಿ ವಿದ್ವತ್ತುಳ್ಳವರನ್ನು ಅತ್ಯಂತ ಗೌರವದಿಂದ ಕಾಣುವುದು ಇವರ ಸ್ವಭಾವ. ಹೀಗಾಗಿ ತಮ್ಮ ವ್ಯಕ್ತಿತ್ವದಿಂದಲೇ ಎಲ್ಲರ ಪ್ರೀತಿಯನ್ನು ಗಳಿಸಿಕೊಂಡವರು. ಇವರು ನೋಡಲು ಬಲು ಸಾಧಾರಣ ವ್ಯಕ್ತಿಯಂತೆ ಕಂಡರೂ ವ್ಯಕ್ತಿತ್ವದಲ್ಲಿ ಮಾತ್ರ 'ಸಹೃದಯ ಸಂಪನ್ನರು'. ಇವರು ಬರೆದ **ಸುರಪುರ ಸಂಸ್ಥಾನ (ಇಂಗ್ಲಿಷ್) ಮತ್ತು ಯಲಹಂಕ ನಾಡಪ್ರಭುಗಳ ವಾಸ್ತುಶಿಲ್ಪ – ಶಿಲ್ಪಕಲೆ** (ಕನ್ನಡ) ಸೇರಿದಂತೆ ಇತರ ಕೃತಿಗಳು ಬೃಹತ್ತು ಮತ್ತು ಮಹತ್ತಿನಲ್ಲಿ ಇವರಿಗಿಂತಲೂ ತುಸು ಭಾರವಾಗಿಯೇ ಇವೆ. ಇಷ್ಟೆಲ್ಲ ಹೇಳಿದ ಮೇಲೆ ಯಾರ ಬಗೆಗೆ ಹೇಳುತ್ತಿದ್ದೇನೆಂದು ಅವರನ್ನು ಬಲ್ಲವರಿಗೆ ಅರ್ಥವಾಗಿರಲೇ ಬೇಕು. ಹೌದು. ಅವರೇ, 'ಶಿವಶರಣ ಕರಿಬಸವ ಅರುಣಿ' ಅರ್ಥಾತ್ ಎಸ್.ಕೆ. ಅರುಣಿ. ಹೆಸರಿನಲ್ಲಿ ಮಾತ್ರವಲ್ಲ ವ್ಯಕ್ತಿತ್ವದಲ್ಲಿಯೂ ನಿಜ ಶರಣರು. ಎಸ್.ಕೆ. ಅರುಣಿ ಹೆಸರನ್ನು ಕೇಳಿ ಅನೇಕರು ಇವರನ್ನು ಹೆಣ್ಣುಮಗಳೆಂದುಕೊಂಡಿರುವವರೂ ಉಂಟು. ಇವರಲ್ಲಿನ ಹೆಂಗರುಳಿನ ಮಮತೆಯಿಂದ ಅದು ಒಂದು ತರಹದಲ್ಲಿ ನಿಜವೂ ಹೌದು ಎಂದರೆ ಅತಿಶಯೋಕ್ತಿಯಾಗಲಾರದು.

ಅರುಣಿಯವರ ಬಗೆಗೆ ಇಷ್ಟೆಲ್ಲ ಮಾತುಗಳನ್ನು ಈ ವಿಶೇಷ ಸಂಚಿಕೆಯಲ್ಲಿ ಬರೆಯಲು ಕಾರಣವೂ ಇದೆ. **ಇತಿಹಾಸ ದರ್ಪಣ**ದ ಆರಂಭಿಕ ದಿನಗಳಿಂದಲೂ ಇದರ ಶ್ರೇಯೋಭಿವೃದ್ಧಿಗೆ ಅಹರ್ನಿಶಿ ಶ್ರಮಿಸಿದವರಲ್ಲಿ ಅರುಣಿಯವರೂ ಒಬ್ಬರು. ಇವರಿಗೆ ಕಳೆದ ಡಿಸೆಂಬರ್ 25ಕ್ಕೆ ಐವತ್ತು ಸಂವತ್ಸರಗಳು ತುಂಬಿದವು. ಈ ಸಂದರ್ಭದಲ್ಲಿ ಗಂಭೀರ ಲೇಖನಗಳನ್ನು ಒಳಗೊಂಡ ವಿಶೇಷ ಸಂಚಿಕೆಯೊಂದನ್ನು ರೂಪಿಸಿ ಇವರಿಗೆ ಅರ್ಪಿಸಬೇಕೆಂದು **ಇತಿಹಾಸ ದರ್ಪಣ** ಬಳಗ ಯೋಚಿಸಿತು. "ಅರುಣಿ –50 : ಕರ್ನಾಟಕದ ಕಲೆ, ವಾಸ್ತುಶಿಲ್ಪ ಮತ್ತು ಪುರಾತತ್ತ್ವ ಕುರಿತಾದ ಹೊಸ ಶೋಧನೆಗಳು" ಹೆಸರಿನಲ್ಲಿ ಪರಿಕಲ್ಪನೆಯನ್ನು ಸಿದ್ಧಪಡಿಸಿದೆವು. ಅರುಣಿಯವರಿಗೆ ಯಾವ ಕಾರಣಕ್ಕೂ ಈ ಸಂಗತಿಯ ಮಾಹಿತಿ ಸೋರಿಕೆಯಾಗದಂತೆ ರೂಪಿಸುವುದು ನಮ್ಮ ಮುಂದಿದ್ದ ಒಂದು ಸವಾಲು! ಕಾರಣ, ಅರುಣಿ ಅವರು ಇದ್ಯಾವುದನ್ನು ಒಪ್ಪುವವರಲ್ಲ. ಆದ್ದರಿಂದ ಕೆಲವು ವಿದ್ವಾಂಸರಿಂದ ಲೇಖನಗಳನ್ನು ಕೋರಿದೆವು. ನಮ್ಮ ಕೋರಿಕೆಗೆ ಬಹುತೇಕ ವಿದ್ವಾಂಸರು ಸಕಾಲದಲ್ಲಿ ಸ್ಪಂದಿಸಿದರು. ಮೊದಲಿಗೆ ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ನಮ್ಮ ಯೋಚನೆ, ಯೋಜನೆ ಮತ್ತು ಆಲೋಚನೆಗಳು ಮೂರ್ತರೂಪ ಪಡೆದುಕೊಳ್ಳುತ್ತಿರುವಾಗಲೇ ಅದ್ಹೇಗೊ ಅರುಣಿಯವರಿಗೆ ವಿಚಾರ ತಿಳಿದೇ ಬಿಟ್ಟಿತು. ಅಂದು ರಾತ್ರಿಯೇ ಕರೆ ಮಾಡಿದ ಅವರು ಮಹಾಪ್ರಮಾದವೇನೋ ಆಗಿದೆ ಎಂಬಂತೆ ಗಂಭೀರವಾಗಿ ಹೀಗೆ ಹೇಳಿದರು: "ನೋಡಿ ರಾಜೇಶ್ ಅವರೇ, ವಿಶೇಷ ಸಂಚಿಕೆ ಏನೋ ಮಾಡಲು ಹೊರಟಿದ್ದೀರೆಂದು ತಿಳಿಯಿತು. ನಾನೀಗ ಐ.ಸಿ.ಎಚ್.ಆರ್.ನ (ಹಂಗಾಮಿ) ಮೆಂಬರ್ ಸೆಕ್ರೇಟರಿ. ಇತಿಹಾಸ ದರ್ಪಣಕ್ಕೆ ಐ.ಸಿ.ಎಚ್.ಆರ್ ಧನ ಸಹಾಯ ನೀಡುತ್ತಾ ಬರುತ್ತಿದೆ. ನೀವೀಗ ನನ್ನ ಹೆಸರಿನಲ್ಲಿ ವಿಶೇಷ ಸಂಚಿಕೆಯನ್ನು ತಂದರೆ ನಮ್ಮಿಬ್ಬರಿಗೂ ತೊಂದರೆಯಾಗುತ್ತದೆ. ನಾಳೆ ದಿನ ದುಡ್ಡು ಕೊಡಿಸಿ ಸಂಚಿಕೆ ಮಾಡಿಸಿಕೊಂಡಿದ್ದಾನೆ ಎಂಬ ಆರೋಪ ಬರಬಹುದು. ಅದು ನಿಮ್ಮ ವ್ಯಕ್ತಿತ್ವಕ್ಕೂ ಶೋಭೆ ತರುವುದಿಲ್ಲ. ದಯವಿಟ್ಟು ನಿಮ್ಮ ಆಲೋಚನೆಯನ್ನು ಕೈ ಬಿಡಿ" ಎಂದರು. ನನ್ನ ಬಗೆಗಾಗಲಿ, ಅವರ ಬಗೆಗಾಗಲಿ ಜನ ಯಾವತ್ತೂ ಹೀಗೂ ಯೋಚಿಸುತ್ತಾರೆಂದು ನಾನು ಅಂದು ಕೊಂಡವನಲ್ಲ. ಆದರೆ, ಈ ಮಾತಿನಿಂದ ನಾನು ಕಕ್ಕಾಬಿಕ್ಕಿಯಾದೆ. ಮುಂದುವರೆದು "ತಾಂತ್ರಿಕವಾಗಿ ನೀವು ಮಾಡುತ್ತಿರುವುದು ಸರಿಯಲ್ಲ" ಎಂಬುದನ್ನು ನನಗೆ ಮನವರಿಕೆ ಮಾಡಿಕೊಟ್ಟರು.

ಸದಾ ತೆರೆ ಮರೆಯಲ್ಲಿರಲು ಬಯಸುವ ಅರುಣಿ ಅವರು ಯಾವಾಗಲೂ ಅಷ್ಟೆ, ತಮ್ಮ ವೈಯಕ್ತಿಕ ವಿಚಾರ ಬಂದಾಗ ಯಾವುದಕ್ಕೂ ಒಪ್ಪುವುದಿಲ್ಲ. ನಮ್ಮನ್ನು ಹೇಗಾದರೂ ಒಪ್ಪಿಸುತ್ತಾರೆ ಇಲ್ಲವೇ ಗೊಂದಲಕ್ಕೀಡು (Convince or Confuse) ಮಾಡುತ್ತಾರೆ. ಈ ಬಾರಿಯೂ ಹಾಗೆ ಮಾಡಿದರು. ಆನಂತರ ಮುಂದೇನು ಮಾಡಬೇಕೆಂದು ತೋರಲಿಲ್ಲ. ಸಂಚಿಕೆಯ ಕಾರ್ಯವನ್ನು ಕೆಲದಿನಗಳವರೆಗೆ ಹಾಗೆಯೇ ತಡೆ ಹಿಡಿದೆವು. ಅಷ್ಟೊತ್ತಿಗೆ ಮೆಂಬರ್ ಸೆಕ್ರೇಟರಿ ಸ್ಥಾನಕ್ಕೆ ಖಾಯಂ ಸದಸ್ಯರೊಬ್ಬರು ಬಂದ ಕಾರಣ ಅರುಣಿ ಅವರು ಸ್ಥಾನವನ್ನು ತೆರವುಗೊಳಿಸಿದರು. ಆಗ ಮತ್ತೊಮ್ಮೆ ವಿಶೇಷ ಸಂಚಿಕೆಯ ಬಗ್ಗೆ ಪ್ರಸ್ತಾಪಿಸಿದಾಗ ಮತ್ತೇನೇನೋ ಸಮಸ್ಯೆಗಳನ್ನು ನನ್ನ ಮುಂದಿಟ್ಟು ಪುನಃ ನನ್ನನ್ನು ಗೊಂದಲಕ್ಕೀಡು ಮಾಡಿದರು. ಒಟ್ಟಾರೆ, "ಯಾವುದೇ ಕಾರಣಕ್ಕೂ ನನ್ನ ಹೆಸರಿನಲ್ಲಿ ಸಂಚಿಕೆ ಮಾಡಬಾರದು" ಎಂಬುದು ಅವರ ನೈತಿಕ ವಿಚಾರವಾಗಿತ್ತು. ಕೊನೆಗೂ ಶಿವಶರಣರಿಗೆ ನಾನು ಶರಣಾಗಲೇಬೇಕಾಯಿತು! ಅಂತಿಮವಾಗಿ, ವಿಶೇಷ ಸಂಚಿಕೆಯ ಶೀರ್ಷಿಕೆಯಲ್ಲಿದ್ದ "ಅರುಣಿ-50" ಎಂಬುದನ್ನು ಒಲ್ಲದ ಮನಸ್ಸಿನಿಂದಲೇ ಕೈಬಿಟ್ಟು "ಪರಿಶೋಧ: ಕರ್ನಾಟಕದ ಕಲೆ, ವಾಸ್ತುಶಿಲ್ಪ ಮತ್ತು ಪುರಾತತ್ತ್ವ ಕುರಿತಾದ ಹೊಸ ಶೋಧನೆಗಳು" ಹೆಸರಿನಲ್ಲಿಯೇ ಸಂಯುಕ್ತ ವಿಶೇಷ ಸಂಚಿಕೆಯನ್ನು ಹೊರತರಲು ತೀರ್ಮಾನಿಸಲಾಯಿತು.

ಅಗ್ಗದ ಪ್ರಚಾರದ ಕಾಯಿಲೆಯಿಂದ ಬಳಲುತ್ತಿರುವ ಅನೇಕರ ನಡುವೆ ಪ್ರಚಾರ ಪ್ರಿಯತೆಯಿಂದ ದೂರವೇ ಉಳಿಯುವ ಅರುಣಿಯವರ ಸ್ವಭಾವ ಹಲವರಿಗೆ ಅಚ್ಚರಿಯೆನಿಸಬಹುದು. ಸರಳತೆ, ಮಾನವೀಯತೆ ಮತ್ತು ಅಂತಃಕರಣವನ್ನು ಮೈವೆತ್ತ ಅರುಣಿ ಅವರ ವಿದ್ವತ್ತು ಮತ್ತು ಸಜ್ಜನಿಕೆ ಇಂದಿನ ಯುವ ತಲೆಮಾರಿಗೆ ಸ್ಫೂರ್ತಿಯಾಗುವಂತದ್ದು. ಇಂದು ಅರ್ಥಪೂರ್ಣ ಅರ್ಧಶತಮಾನವನ್ನು ಪೂರೈಸಿರುವ ಅರುಣಿ ಅವರು ಪೂರ್ಣಶತಮಾನವನ್ನೂ ಪೂರೈಸುವಂತಹ ಆಯಸ್ಸು, ಆರೋಗ್ಯ ಮತ್ತು ಸಕಲ ಸಂಪತ್ತನ್ನು ಕರುಣಿಸಲೆಂದು ಪ್ರಕೃತಿಯಲ್ಲಿ ಮೊರೆಯಿಡುತ್ತೇನೆ. ಇಂತವರ ಸಂತತಿ ಹೆಚ್ಚಿದಲ್ಲಿ ಕಮರಿ ಹೋಗಿರುವ ಇತಿಹಾಸ ಮತ್ತು ಪುರಾತತ್ತ್ವಶಾಸ್ತ್ರಗಳು ಮತ್ತೆ ಚಿಗುರಬಲ್ಲವು ಎಂದು ಆಶಿಸುತ್ತಾ, ಇವರ ಸಕುಟುಂಬ ಪರಿವಾರಕ್ಕೂ **ಇತಿಹಾಸ ದರ್ಪಣ** ಬಳಗದ ಪರವಾಗಿ ಶುಭಕೋರುತ್ತೇನೆ.

ಪರಿಶೋಧ: ಕರ್ನಾಟಕದ ಕಲೆ, ವಾಸ್ತುಶಿಲ್ಪ ಮತ್ತು ಪುರಾತತ್ತ್ವ ಕುರಿತಾದ ಹೊಸ ಶೋಧನೆಗಳು ಎಂಬ ಈ ವಿಶೇಷ ಸಂಚಿಕೆಯು ಒಟ್ಟು 14 ಬರವಣಿಗೆಗಳನ್ನು ಒಳಗೊಂಡಿದೆ.

ಇಲ್ಲಿನ ಎಲ್ಲ ಬರವಣಿಗೆಗಳೂ ಕರ್ನಾಟಕದ ಕಲೆ, ವಾಸ್ತುಶಿಲ್ಪ ಮತ್ತು ಪುರಾತತ್ತ್ವ ವಿಷಯಗಳನ್ನು ಕುರಿತಾಗಿವೆ ಮತ್ತು ಎಲ್ಲವೂ ಹೊಸ ಶೋಧ ಹಾಗೂ ವಿನೂತನ ಚಿಂತನೆಗಳ ಮೇಲೆ ರೂಪುಗೊಂಡಿವೆ.

ಮೊದಲಿಗೆ ಹಿರಿಯ ತಜ್ಞರಾದ ಕೆ.ಬಿ. ಶಿವತಾರಕ್ ಅವರು 'ಶಿವಗಂಗಾ ಕ್ಷೇತ್ರದ ಪ್ರಾಗಿತಿಹಾಸ' ಎಂಬ ಬರವಣಿಗೆಯಲ್ಲಿ ಶಿವಗಂಗೆ ಬೆಟ್ಟ ಮತ್ತು ಅದರ ಪರಿಸರದಲ್ಲಿ ಸೂಕ್ಷ್ಮ ಶಿಲಾಯುಗದ ಉಪಕರಣಗಳನ್ನು ಶೋಧಿಸಿದ್ದಾರೆ. ಇದರಿಂದಾಗಿ ಶಿವಗಂಗೆಯ ಚರಿತ್ರೆಗೆ ಪ್ರಾಗಿತಿಹಾಸದ ಮಹತ್ವ ದೊರೆತಿದೆ. ಹಿರಿಯ ಚಿತ್ರಕಲಾ ವಿಮರ್ಶಕರಾದ ಕೆ.ವಿ. ಸುಬ್ರಹ್ಮಣ್ಯ ಅವರು ಕೋಲಾರದ ಟೇಕಲ್, ಘಟ್ಟಮಾದ ಮಂಗಲ, ಯಾದಗಿರಿ ಜಿಲ್ಲೆಯ ಬಳಚಕ್ರ ಮತ್ತು ಆಂಧ್ರಪ್ರದೇಶದ ಕಂಗುಂದಿ, ರಾಯದುರ್ಗಗಳಲ್ಲಿ ಶೋಧಿಸಿದ ಕೆಂಗಾವಿ ಬಣ್ಣದ ರೇಖಾಚಿತ್ರಗಳು, ಗೀರುಚಿತ್ರಗಳು ಮತ್ತು ಉಬ್ಬು ಶಿಲ್ಪಗಳನ್ನು ತಮ್ಮ 'ಆದಿಮ ಸೌಂದರ್ಯ ಪ್ರಜ್ಞೆಯ ಅನಾವರಣ' ಬರವಣಿಗೆಯ ಮೂಲಕ ಬೆಳಕಿಗೆ ತಂದಿದ್ದಾರೆ. ನಮ್ಮ ಪೂರ್ವಿಕರಲ್ಲಿದ್ದ ಸೌಂದರ್ಯ ಪ್ರಜ್ಞೆಯನ್ನು ಸುಂದರವಾಗಿ ಚಿತ್ರಿಸಿದ್ದಾರೆ.

ಯುವ ಸಂಶೋಧಕರಾದ ಮೋಹನ ಆರ್. ಅವರು ಶಿಲಾಯುಗದ ಬಂಡೆ ಚಿತ್ರಗಳ ಮೇಲೆ ಸಂಶೋಧನೆ ನಡೆಸಿದವರು. ಇವರು ತಮ್ಮ 'ಗವಿ/ಕಲ್ಲಾಸರೆಯಲ್ಲಿ ಪ್ರಾಚೀನ ಕರ್ನಾಟಕ ಸಂಸ್ಕೃತಿ' ಬರವಣಿಗೆಯಲ್ಲಿ ಈವರೆಗೆ ಕರ್ನಾಟಕದಲ್ಲಿ ಬಂಡೆಚಿತ್ರಕಲೆಯ ಮೇಲೆ ನಡೆದಿರುವ ಸಂಶೋಧನೆಗಳ ಸಮೀಕ್ಷೆಯನ್ನು ನಡೆಸಲು ಪ್ರಯತ್ನಿಸಿದ್ದಾರೆ. ಈ ಸಮೀಕ್ಷೆಯು ಕೆಲವು ಮಿತಿಗಳನ್ನು ಹೊಂದಿದ್ದರೂ, ಸಾಕಷ್ಟು ಮಾಹಿತಿಪೂರ್ಣವಾಗಿದ್ದು, ಈ ಕ್ಷೇತ್ರವನ್ನು ಪ್ರವೇಶಿಸುವವರಿಗೆ ಪ್ರವೇಶಿಕೆಯಾಗಿದೆ. ಮತ್ತೋರ್ವ ಯುವ ಸಂಶೋಧಕರಾದ ಅರ್ಜುನ್ ಆರ್. ಅವರು ರಾಯುಚೂರು ಜಿಲ್ಲೆಯ ಲಿಂಗಸಗೂರು ಸಮೀಪದ ಬಿಲಮರಾಯನಗುಡ್ಡದಲ್ಲಿ ನಡೆಸಿದ ವೈಜ್ಞಾನಿಕ ಸಂಶೋಧನೆಯಲ್ಲಿ ಸೂಕ್ಷ್ಮಶಿಲಾಯುಗ ಮತ್ತು ನವಶಿಲಾಯುಗದ ಉಪಕರಣಗಳನ್ನು, ಮಡಕೆಗಳನ್ನು ಹಾಗೂ ಸಾಕಷ್ಟು ಸಂಖ್ಯೆಯಲ್ಲಿ ಗೀರುಚಿತ್ರ, ಕುಟ್ಟು ಚಿತ್ರಗಳನ್ನು ಗುರುತಿಸಿದ್ದಾರೆ. ಇದೊಂದು ಮಹತ್ವದ ಸಂಶೋಧನೆಯಾಗಿದೆ. 'ಕೊಳ್ಳೇಗಾಲ ತಾಲ್ಲೂಕಿನ ಎರಡು ಅಪರೂಪದ ಬಂಡೆ ಚಿತ್ರಗಳು' ಎಂಬ ಬರವಣಿಗೆಯಲ್ಲಿ ಶೋಭಾ ವಿ. ಅವರು ನೆಕ್ಕುಂದಿ ಮತ್ತು ಮಿಣ್ಯಂ ಎಂಬ ಕೊಳ್ಳೆಗಾಲ ತಾಲ್ಲೂಕಿನ ಗಡಿಗ್ರಾಮಗಳಲ್ಲಿ ಮಹತ್ವಪೂರ್ಣ ಬಂಡೆಚಿತ್ರಗಳನ್ನು ಗುರುತಿಸಿ, ಈ ಚಿತ್ರಗಳು ಧಾರ್ಮಿಕ ಆಚರಣೆಗಳೊಂದಿಗೆ ಸಂಬಂಧ ಹೊಂದಿರುವುದರ ಮೇಲೆ ಬೆಳಕು ಚೆಲ್ಲಿರುವುದು ಮುಖ್ಯವಾಗಿದೆ.

'ಬೆಂಗಳೂರು ಸಮೀಪ (ಬಂಕರಸನಗುಂಡು) ಕೈಗುರುತು ವರ್ಣಚಿತ್ರಗಳ ಶೋಧನೆ' ಎಂಬ ಬರವಣಿಗೆ ಆಸಕ್ತಿದಾಯಕವಾಗಿದೆ. ಮೋಹನ್ ಆರ್. ಮತ್ತು ಹಂ.ಗು. ರಾಜೇಶ್ ಅವರುಗಳು ಬೆಂಗಳೂರಿನ ಪರಿಸರದಲ್ಲಿ ಮೊದಲ ಬಾರಿಗೆ ವರ್ಣಚಿತ್ರವೊಂದನ್ನು ಗುರುತಿಸಿರುವುದು ವಿಶೇಷ. ಇದರ ಮಹತ್ವವನ್ನು ಗುರುತಿಸುವ ಮೋಹನ್ ಅವರು ವಿಶ್ವದ ನಾನಾ ಪ್ರಾಚೀನ ಸಂಸ್ಕೃತಿಗಳಲ್ಲಿ ಕಂಡು ಬಂದಿರುವ ಕೈಗುರುತುಗಳೊಂದಿಗೆ ಇದನ್ನು ಸಮೀಕರಿಸಿ ನೋಡಿದ್ದಾರೆ. ಸ್ಥಳೀಯ ಸಂಸ್ಕೃತಿಯ ಜೊತೆಗೆ ಕೈಗುರುತು ಹೊಂದಿರುವ ಮಹತ್ವವನ್ನು ಈ ಬರವಣಿಗೆ ಪರಿಚಯಿಸುತ್ತದೆ. ಮತ್ತೊಬ್ಬ ಯುವ ಸಂಶೋಧಕರಾದ ಪ್ರವೀಣ್ ಕುಮಾರ್ ಕೆ. ಅವರು ಮಾಗಡಿ ತಾಲ್ಲೂಕಿನ ಬೃಹತ್ ಶಿಲಾ ಸಂಸ್ಕೃತಿಯನ್ನು ಕುರಿತು ಅಧ್ಯಯನ ನಡೆಸಿದವರು. ಈ ಪರಿಸರದಲ್ಲಿ ವ್ಯಾಪಕ ಕ್ಷೇತ್ರ ಕಾರ್ಯ ನಡೆಸಿರುವ ಇವರು 20ಕ್ಕೂ ಹೆಚ್ಚು ಬೃಹತ್ ಶಿಲಾಯುಗದ ನೆಲೆಗಳನ್ನು ಗುರುತಿಸಿದ್ದಾರೆ. ಈ ಲೇಖನದಲ್ಲಿ ಹೊಸ ನೆಲೆಗಳನ್ನು ಬೆಳಕಿಗೆ ತರುವ ಹಾಗೂ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಿ ಈ ಪರಿಸರದ ಪ್ರಾಗಿತಿಹಾಸ ಸಂಸ್ಕೃತಿಯನ್ನು ಅರ್ಥೈಸಲು ಗಂಭೀರ ಪ್ರಯತ್ನ ನಡೆಸಿದ್ದಾರೆ.

'ಕಳಭ್ರರ ಮೂಲಸ್ಥಾನ ಕಳವಾರ ಬೆಟ್ಟವೇ?' ಎಂಬ ಬರವಣಿಗೆಯಲ್ಲಿ ಹಂ.ಗು. ರಾಜೇಶ್ ಅವರು ಅಸ್ಪಷ್ಟ ಚರಿತ್ರೆಯನ್ನು ಹೊಂದಿರುವ 'ಕಳಭ್ರ' ಎಂಬ ಮಹತ್ವದ ಪ್ರಾಚೀನ ಕರ್ನಾಟಕದ ಮನೆತನವೊಂದರ ಮೂಲಸ್ಥಾನವನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.

ಹಿರಿಯ ವಿದ್ವಾಂಸರಾದ ರೇಖಾರಾವ್ ಅವರು ಬೇಲೂರಿನ ಶಿಲಾಬಾಲಿಕೆಯರನ್ನು **ಮಾನಸೋಲ್ಲಾಸ** ಗ್ರಂಥದ ಅಧಾರದ ಮೇಲೆ ಬಹಳ ವಿಶಿಷ್ಟವಾಗಿ ವಿಶ್ಲೇಷಿಸಿದ್ದಾರೆ. ಇದೊಂದು ಒಳ್ಳೆಯ ಪ್ರಯತ್ನ. ಈ ವಿಶ್ಲೇಷಣೆಗೆ ಅವರೇ ಹೇಳಿರುವಂತೆ **ನಾಟ್ಯಶಾಸ್ತ್ರ** ಮತ್ತು **ಶ್ರೀಮದ್ಭಗವದ್ಗೀತೆ**ಗಳನ್ನೂ ಬಳಸಿಕೊಂಡಿದ್ದಲ್ಲಿ ಬರವಣಿಗೆಯ ಸೊಬಗು ಮತ್ತಷ್ಟು ಹೆಚ್ಚುತ್ತಿತ್ತು. ಶಶಿಕುಮಾರ ಎಸ್. ಅವರ 'ಮಳೂರು ಪಟ್ಟ ಗ್ರಾಮದ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪದ ಸಾಂಸ್ಕೃತಿಕ ಅಧ್ಯಯನ' ಬರವಣಿಗೆ ಚಾರಿತ್ರಿಕ ವಿವರಣೆ ಹಾಗೂ ವಾಸ್ತುಶಿಲ್ಪದ ಮಾಹಿತಿಗಳೊಂದಿಗೆ ಉಪಯುಕ್ತವಾಗಿದೆ. ಲ.ನ. ಸ್ವಾಮಿ ಅವರ 'ವಿಜಯನಗರ ರಾಜಪ್ರಾಂಗಣದ ಪ್ರಾಚೀನತೆ' ಎಂಬ ಬರವಣಿಗೆಯು ಹಂಪಿಯ ರಾಜಪ್ರಾಂಗಣದ ಪರಿಸರದಲ್ಲಿ ದೊರೆತಿರುವ ಪುರಾತತ್ತ್ವ ಅವಶೇಷಗಳನ್ನು ಇರಿಸಿಕೊಂಡು ಅದರ ಪ್ರಾಚೀನತೆಯನ್ನು ಅರಿಯಲು ಪ್ರಯತ್ನಿಸಿದ್ದಾರೆ. ಇದೊಂದು ಒಳ್ಳೆಯ ಪ್ರಯತ್ನವಾಗಿದೆ.

'ತಳಗುಂದಲ್ಲಿ ದೊರೆತಿರುವ ಕನ್ನಡ ಭಾಷೆಯ ಪ್ರಥಮ ಶಾಸನ, ಉತ್ಖನನ ಮತ್ತು ಇತರ ಅಂಶಗಳು' ಎಂಬ ಸಂಶೋಧನ ಬರವಣಿಗೆಯನ್ನು ಹಿರಿಯ ಪುರಾತತ್ತ್ವವಿದರಾದ ಟಿ.ಎಂ. ಕೇಶವ ಹಾಗೂ ಸಂಶೋಧಕ ಎಸ್. ಕಾರ್ತಿಕ್ ರಚಿಸಿದ್ದಾರೆ. ತಾಳಗುಂದದಲ್ಲಿ ನಡೆಸಿದ ಉತ್ಖನನ ಮತ್ತು ಅಲ್ಲಿ ದೊರೆತ ಚಾರಿತ್ರಿಕ ಅವಶೇಷಗಳ ವಿವರಗಳನ್ನು ನೀಡುತ್ತಾರೆ. ಇವುಗಳಲ್ಲಿ ಮಹತ್ವಪೂರ್ಣವಾದುದೆಂದರೆ ಸಿಂಹ ಕಟಾಂಜನದ ಮೇಲಿರುವ ಶಾಸನ. ಈ ಶಾಸನವು ಪುರಾತತ್ವ, ನಾಣ್ಯಶಾಸ್ತ್ರ, ಲಿಪಿಶಾಸ್ತ್ರಗಳ ಆಧಾರದ ಮೇಲೆ ಹಲ್ಮಿಡಿ ಶಾಸನಕ್ಕಿಂತಲೂ ಹೆಚ್ಚು ಹಳೆಯದಾದ ಕನ್ನಡ ಶಾಸನವೆಂದು ಪ್ರತಿಪಾದಿಸುತ್ತಾರೆ. ಇದೊಂದು ಮಹತ್ವದ ಸಂಶೋಧನೆಯಾಗಿದೆ. ಇತಿಹಾಸ ಆಸಕ್ತರಾದ ರಾಜಗೋಪಾಲ ಎಂ. ವಿಭೂತಿ ಅವರು ಗುರುತಿಸಿದ ಸೇವುಣದೊರೆ 2ನೇ ಸಿಂಘಣನ ಅಪ್ರಕಟಿತ ಶಾಸನವನ್ನು ಯುವ ಶಾಸನತಜ್ಞ ಎಸ್.ಹೆಚ್. ಗೋವರ್ಧನ ಅವರು ಓದಿ 'ಯಾದಗಿರಿ ಜಿಲ್ಲೆ ಶಹಾಪುರ ತಾಲ್ಲೂಕಿನ ರಾಮಗಿರಿಮಠದಲ್ಲಿ ಪತ್ತೆಯಾದ ಸೇವುಣದೊರೆ 2ನೇ ಸಿಂಘಣನ ಅಪ್ರಕಟಿತ ಶಾಸನ' ಎಂಬ ಲೇಖನದ ಮೂಲಕ ಬೆಳಕಿಗೆ ತಂದಿದ್ದಾರೆ. ಸೇವುಣರ ಚರಿತ್ರೆಯ ರಚನೆಗೆ ಮಹತ್ವದ ಆಕರವೊಂದು ಸೇರಿದಂತೆ ಆಗಿದೆ. ಕೊನೆಯ ಬರಹ ಪುಸ್ತಕ ಪರಿಚಯ. ಮುರಳಿ ಕೆ.ವಿ. ಅವರು ಕ.ವೆಂ. ರಾಜಗೋಪಾಲ ಅವರ **ಬೌದ್ಧ ಮತದಲ್ಲಿ ಯಕ್ಷಕಲೆ** ಎಂಬ ಸಂಶೋಧನಾ ಕೃತಿಯನ್ನು ಪರಿಚಯಿಸಿದ್ದಾರೆ. ಎರಡು ದಶಕಗಳ ಹಿಂದೆ ಪ್ರಕಟವಾದ ಈ ಕೃತಿಯು ಚಾರಿತ್ರಿಕವಾಗಿ ಇಂದಿಗೂ ಮಹತ್ವಪೂರ್ಣವಾಗಿದೆ ಎಂಬುದನ್ನು ಮುರಳಿ ಅವರು ತಿಳಿಸಲು ಇಲ್ಲಿ ಪ್ರಯತ್ನಿಸಿದ್ದಾರೆ.

ಒಟ್ಟಾರೆ, 'ಪರಿಶೋಧ' ವಿಶೇಷ ಸಂಚಿಕೆಯು ಯುವ ಸಂಶೋಧಕರ ಮತ್ತು ಹಿರಿಯ ಸಂಶೋಧಕರ ಸಂಶೋಧನಾ ಬರವಣಿಗೆಗಳನ್ನು ಒಳಗೊಂಡ ಅತ್ಯುತ್ತಮ ಸಂಕಲನವಾಗಿದೆ ಎಂಬುದು ನನ್ನ ಭಾವನೆ. ಇಲ್ಲಿನ ಬರವಣಿಗೆಗಳು ಎಸ್.ಕೆ. ಅರುಣಿ ಅವರನ್ನು ಅಭಿನಂದಿಸುವ ನೆಪದಲ್ಲಿ ಸಂಗ್ರಹವಾಗಿದ್ದು ಎಂದು ಮತ್ತೆ ಹೇಳಬೇಕಿಲ್ಲ. ಅವರ ಮೇಲಿನ ಪ್ರೀತಿಗಾಗಿ ಲೇಖನಗಳನ್ನು ನೀಡಿದ ಎಲ್ಲ ಸಂಶೋಧಕರಿಗೂ ಮತ್ತೊಮ್ಮೆ ನನ್ನ ನಮನಗಳು. ಈ ಪುಸ್ತಕವನ್ನು ಓದುಗರು ಪ್ರೀತಿಯಿಂದ ಸ್ವೀಕರಿಸುತ್ತಾರೆ ಎಂದು ಭಾವಿಸಿದ್ದೇನೆ.

ಹಂ.ಗು. ರಾಜೇಶ್
ಸಂಪಾದಕರು

ಓದುಗರ ಗಮನಕ್ಕೆ

ರೋಮಿಲಾ ಥಾಪರ್ ಅವರ ಸಂದರ್ಶನವನ್ನು ಮುಂದಿನ ಸಂಚಿಕೆಗೆ ಕಾಯ್ದಿರಿಸಲಾಗಿದೆ. –ಸಂ.

ಶಿವಗಂಗಾ ಕ್ಷೇತ್ರದ ಪ್ರಾಗಿತಿಹಾಸ

ಕೆ.ಬಿ. ಶಿವತಾರಕ್
ಸಹ ಪ್ರಾಧ್ಯಾಪಕ (ನಿವೃತ್ತ)
11/53/2, ಅರವಿಂದ ಕಾವೇರಿ
ಮನೆ-404, 4ನೇ ಮಹಡಿ
ಬೇಂದ್ರೆನಗರ, ಸುಬ್ರಹ್ಮಪುರ ಮುಖ್ಯರಸ್ತೆ
ಬನಶಂಕರಿ 2ನೇ ಹಂತ
ಬೆಂಗಳೂರು-560 070
shivatarak.02feb52@gmail.com

ಕರ್ನಾಟಕವು ಪ್ರಾಗಿತಿಹಾಸ ಸಂಸ್ಕೃತಿಗಳ ಸಮೃದ್ಧ ಕೇಂದ್ರ. ಈ ಭೂಭಾಗದಲ್ಲಿ ಸಾಕಷ್ಟು ಕ್ಷೇತ್ರಕಾರ್ಯ ಹಾಗೂ ಉತ್ಖನನಗಳು ನಡೆದಿದ್ದು, ಪ್ರಾಗಿತಿಹಾಸದ ಹೊಸ ಹೊಸ ಆಯಾಮಗಳನ್ನು ಗುರುತಿಸಲು ಸಹಾಯಕವಾಗಿದೆ. ವಿವಿಧ ಪ್ರಾಗೈತಿಹಾಸಿಕ ಸಂಸ್ಕೃತಿಯ ಪ್ರಾಕ್ತನ ಅವಶೇಷಗಳು ದೊರಕುತ್ತಲೇ ಇದ್ದು, ಹಲವಾರು ಉಪ ಸಂಸ್ಕೃತಿಗಳನ್ನು ಗುರುತಿಸಿಲು ಅಧ್ಯಯನ ನಡೆಸಲಾಗುತ್ತಲೇ ಇದೆ. ಇತ್ತೀಚಿನ ಶೋಧಗಳು ಅಧ್ಯಯನಕ್ಕೆ ಕುತೂಹಲಗಳನ್ನೊದಗಿಸುವುದರ ಜೊತೆಗೆ ಹಲವು ದೃಷ್ಟಿಕೋನದಲ್ಲಿ ಚಿಂತನ-ಮಂಥನ ಮಾಡಲು ಸಹಾಯಕವಾಗುತ್ತಲೇ ಇದೆ.

ಕರ್ನಾಟಕದ ಭೂಭಾಗದಲ್ಲಿ ಪುರಾತತ್ವ ಅಧ್ಯಯನ ನಡೆದಿದೆಯಾದರೂ, ಈ ನಿಟ್ಟಿನಲ್ಲಿ ಶೋಧ ವಾಗಿರುವುದು ಕೇವಲ ಶೇಕಡ ಹತ್ತು-ಹದಿನೈದು ಮಾತ್ರ. ಇದುವರೆವಿಗೂ ಸುಮಾರು 3400 ವಿವಿಧ ಸಾಂಸ್ಕೃತಿಕ ನೆಲೆಗಳು ಕಂಡು ಬಂದಿದ್ದು, ಇವುಗಳಲ್ಲಿ ಹಳೆ ಶಿಲಾಯುಗ ಸಂಸ್ಕೃತಿಯ ಮೂರೂ ಹಂತಗಳ ನೆಲೆಗಳು, ಸೂಕ್ಷ್ಮ ಶಿಲಾಯುಗ ಸಂಸ್ಕೃತಿ, ನೂತನ ಮತ್ತು ನೂತನ-ತಾಮ್ರ ಶಿಲಾಯುಗ ಸಂಸ್ಕೃತಿ, ಬೃಹತ್ ಶಿಲಾಯುಗ ಸಂಸ್ಕೃತಿಯ ವಾಸ್ತವ್ಯದ ಮತ್ತು ಗೋರಿ ನೆಲೆಗಳು, ಬೂದಿದಿಬ್ಬದ ಅವಶೇಷಗಳು, ಪಳಯುಳಿಕೆಗಳು, ಪ್ರಾಗ್ ಚಿತ್ರಕಲೆ ಇರುವ ನೆಲೆಗಳು, ಜೊತೆಗೆ ಇತಿಹಾಸ ಆರಂಭಕ್ಕೆ ಸೇರಿದ ಅವಶೇಷಗಳಿರುವ

ನೆಲೆಗಳನ್ನು ಶೋಧಿಸಲಾಗಿದೆ. ಒಟ್ಟಾರೆ ಕರ್ನಾಟಕವು ಶಿಲಾಯುಗ ಸಂಸ್ಕೃತಿಯ ತವರೂರಾಗಿದೆ.

ಪ್ರಸ್ತುತ ಅಧ್ಯಯನ ಪ್ರದೇಶವು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ಭಾಗವಾಗಿದ್ದು, ಇದಕ್ಕೆ ಪೂರಕವಾಗಿ ಮೊದಲಿಗೆ ಜಿಲ್ಲೆಯಲ್ಲಿ ಇದುವರೆವಿಗೂ ದೊರೆತಿರುವ ನೆಲೆಗಳಲ್ಲಿ ಆಗಿರುವ ಅಧ್ಯಯನದ ಹಿನ್ನೆಲೆಯನ್ನು ಅವಲೋಕಿಸೋಣ. ಜಿಲ್ಲೆಯಲ್ಲಿ ಈಗಾಗಲೇ ಪ್ರಾಗೈತಿಹಾಸಿಕ ಕುರುಹುಗಳು ದೊರೆತಿದ್ದು, ಇವು ಒಟ್ಟು 51 ವಿವಿಧ ಹಂತಗಳಿಗೆ ಸೇರಿದ ನೆಲೆಗಳಾಗಿವೆ, ಈ ಅವಶೇಷಗಳು ಜಿಲ್ಲೆಯ ಒಟ್ಟು 45 ಗ್ರಾಮಗಳಲ್ಲಿ ದೊರೆತಿವೆ. ಅವುಗಳ ಅವಲೋಕನ ಈ ಕೆಳಗಿನಂತಿದೆ.

ಬೆಂಗಳುರು ಗ್ರಾಮಾಂತರ ಜಿಲ್ಲೆಯ ಪ್ರಾಗಿತಿಹಾಸದ ನೆಲೆಗಳು

	ತಾಲ್ಲೂಕು	ಹಳೆ ಶಿಲಾಯುಗ ಸಂಸ್ಕೃತಿ			ಸೂಕ್ಷ್ಮ ಶಿಲಾ ಯುಗ ಸಂಸ್ಕೃತಿ	ನೂತನ ಶಿಲಾ ಯುಗ ಸಂಸ್ಕೃತಿ	ಶಿಲಾ-ತಾಮ್ರ ಯುಗ ಸಂಸ್ಕೃತಿ	ಬೃಹತ್ ಶಿಲಾಯುಗ ಸಂಸ್ಕೃತಿ		ಪ್ರಾಗ್ ಚಿತ್ರಕಲೆ	ಇತಿಹಾಸ ಆರಂಭ ಕಾಲ	ಒಟ್ಟು ಸಾಂಸ್ಕೃತಿಕ ಹಂತಗಳು	ಗ್ರಾಮಗಳ ಸಂಖ್ಯೆ
		ಆದಿ	ಮಧ್ಯ	ಅಂತ್ಯ				ನೆಲೆ	ಗೋರಿ				
1.	ದೇವನಹಳ್ಳಿ	–	–	–	3	–	–	–	12			15	12
2.	ದೊಡ್ಡಬಳ್ಳಾಪುರ	–	–	–	–	–	–	–	18	1	2	21	19
3.	ನೆಲಮಂಗಲ	–	–	–	1	1	–	1	11	–	1	15	13
4.	ಹೊಸಕೋಟೆ	–	–	–	–	–	–		2	–	–	2	02
	ಒಟ್ಟು	–	–	–	4	1	–	–	43	1	2	51	46

ಶಿವಗಂಗಾ ಕ್ಷೇತ್ರದ ಶಿಲಾಯುಗ ಸಂಸ್ಕೃತಿ

ಶಿವಗಂಗಾ ಕ್ಷೇತ್ರವು ಪೌರಾಣಿಕ ಹಿನ್ನೆಲೆಯ ಕೇಂದ್ರವಾಗಿದ್ದು, ಇತಿಹಾಸದ ಕಾಲದುದ್ದಕ್ಕೂ ತನ್ನದೇ ಹಿರಿಮೆಯನ್ನು ಪಡೆದು ಕೊಂಡಿದೆ. ಇದಕ್ಕೆ ಸಾಕ್ಷಿಯಾಗಿ ಇಲ್ಲಿರುವ ಸಾಹಿತ್ಯ ಕೃತಿಗಳು, ನಿರ್ಮಿತಿಗಳು, ಶಿಲಾ ಮತ್ತು ತಾಮ್ರ ಶಾಸನಗಳು, ವೀರಗಲ್ಲು ಮಾಸ್ತಿಕಲ್ಲು, ಮೂರ್ತಿಶಿಲ್ಪ, ಕಂಚಿನ ಮೂರ್ತಿ ಮೊದಲಾದ ಹತ್ತು ಹಲವಾರು ಆಕರಗಳು ದೊರೆಯುತ್ತವೆ. ಆದರೆ ಇತಿಹಾಸ ಕಾಲಮಾನಕ್ಕೂ ಮೊದಲಿನ ಇತಿಹಾಸವೇನು ಎಂಬುದಕ್ಕೆ ಉತ್ತರವನ್ನು ಕಂಡು ಕೊಳ್ಳುವ ಪ್ರಯತ್ನ ಈ ಬರಹದಿಂದ ಮಾಡಲಾಗಿದೆ. ಮೊದಲಿನ ಹಳೆ ಶಿಲಾಯುಗದ ಕುರುಗಳನ್ನು ಜಿಲ್ಲೆಯ ಯಾವ ಭಾಗದಲ್ಲಿಯೂ ಗುರುತಿಸಲಾಗಿಲ್ಲ. ಆದರೆ ಈ ಪ್ರದೇಶದಲ್ಲಿ ಸೂಕ್ಷ್ಮ ಮತ್ತು ನೂತನ ಶಿಲಾಯುಗ ಸಂಸ್ಕೃತಿಗಳಿಗೆ ಸೇರಿದ ಅವಶೇಷಗಳು ತಾಲ್ಲೂಕಿನಲ್ಲಿ ಮೊಟ್ಟಮೊದಲಿಗೆ ದೊರೆತಂತಾಗಿದೆ.

ಶಿಲಾಯುಗ ಸಂಸ್ಕೃತಿಯ ವಿವಿಧ ಹಂತಗಳು

ಶಿವಗಂಗಾ ಕ್ಷೇತ್ರವು ಭೌಗೋಳಿಕವಾಗಿ ಪ್ರಾಗೈತಿಹಾಸಿಕ ಸಂಸ್ಕೃತಿಯ ಬೆಳವಣಿಗೆಗೆ ಪೂರಕವಾದ ಕ್ಷೇತ್ರವಾಗಿದ್ದು, ಇಲ್ಲಿ ದೊರಕುವ ವಿವಿಧ ಶಿಲಾ ಮಾದರಿಗಳು, ನೀರಿನಾಸರೆ, ಸಸ್ಯಸಂಪತ್ತು, ಪ್ರಾಣಿವರ್ಗ ಮೊದಲಾದವುಗಳು ಈ ಕಾಲದ ಮಾನವನಿಗೆ ಆಸರೆಯಾಗಿ ತನ್ನ ಜೀವನವನ್ನು ಆರಂಭಿಸಲು ಸಾಧ್ಯವಾಗಿದೆ. ಹೀಗೆ ಇಲ್ಲಿ ಎರಡು ಹಂತಗಳಿಗೆ ಸೇರಿದ ಅವಶೇಷಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ ಸೂಕ್ಷ್ಮ ಶಿಲಾಯುಗ ಮತ್ತು ನೂತನ ಶಿಲಾಯುಗ. ದೊರೆತಿರುವ ಅವಶೇಷಗಳ ವಿವರಣೆಯನ್ನು ಈ ಕೆಳಗಿನಂತೆ ವಿಶ್ಲೇಶಿಸ ಬಹುದಾಗಿದೆ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ

ಕರ್ನಾಟಕದಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಹಂತವನ್ನು ನಿರ್ದಿಷ್ಟವಾಗಿ ಈಗಾಗಲೇ ಗುರುತಿಸಲಾಗಿದೆ. ಈ ಹಂತವನ್ನು ಇಲ್ಲಿಯೂ ಶೋಧಿಸಲಾಗಿದೆ. ಮೊದಲಿನ

ಕ್ಷೇತ್ರಕಾರ್ಯದ ಸಮಯದಲ್ಲಿ ಶಿವಗಂಗಾ ಬೆಟ್ಟದ ಎದುರು ಭಾಗದಲ್ಲಿರುವ ಹಲವು ಕಿರು ಎತ್ತರದ ಗುಡ್ಡಗಳಿದ್ದು, ಈ ಗುಡ್ಡಗಳ ಸುತ್ತ ಮುತ್ತಲ ಪ್ರದೇಶಗಳಲ್ಲಿ ಕ್ಷೇತ್ರ ಕಾರ್ಯ ಕೈಗೊಂಡು ಹಲವಾರು ಕುರುಹುಗಳನ್ನು ಸಂಗ್ರಹಿಸಲಾಗಿದೆ. ಇತ್ತೀಚಿನ ವೀಕ್ಷಣೆಯ ಸಮಯದಲ್ಲಿ ದೇವಾಲಯಗಳಿರುವ ಬೆಟ್ಟದ ಮೊದಲ ಎತ್ತರದ ಹಂತ(ಹೊಳಕಲ್ಲು ತೀರ್ಥದ ಪ್ರದೇಶ)ದಲ್ಲಿ ಹಲವು ಸೂಕ್ಷ್ಮ ಶಿಲೋಪಕರಣಗಳು ಕಂಡು ಬಂದಿವೆ. ಈ ಎರಡೂ ಸಮಯದಲ್ಲೂ ದೊರೆತ ವೈವಿಧ್ಯ ಉಪಕರಣಗಳ ವಿವರಣೆಯನ್ನು ಈ ಕೆಳಕಂಡಂತೆ ಅವಲೋಕಿಸಬಹುದಾಗಿದೆ.

ಶಿಲೋಪಕರಣಗಳ ಮಾದರಿ ಮತ್ತು ವೈವಿಧ್ಯ

ಶಿವಗಂಗೆಯಲ್ಲಿ ಪ್ರಸ್ತುತ ದೊರೆತಿರುವ ಒಟ್ಟು ಸೂಕ್ಷ್ಮ ಶಿಲಾಯುಗದ ಉಪಕರಣಗಳ ಸಂಖ್ಯೆ 107 ಇದ್ದು, ಇವುಗಳನ್ನು ಅದಿರುಯುಕ್ತ ಜಾಸ್ಪರ್, ಕ್ವಾರ್ಟ್ಜ್, ಅದಿರುಯುಕ್ತ ಕ್ವಾರ್ಟ್ಜ್ ಮತ್ತು ಹಾಲುಗಲ್ಲುಗಳಲ್ಲಿ ರೂಪಿಸಲಾಗಿದೆ. ದೊರೆತಿರುವ ಉಪಕರಣಗಳ ವೈವಿಧ್ಯದಂತೆ, 28 ನೀಳಚಕ್ಕೆ ಮಾದರಿಯವುಗಳಾಗಿದ್ದು, ಇವುಗಳ ಉಪಮಾದರಿಗಳಾದ ಒರಟು ನೀಳಚಕ್ಕೆ, ಒಬ್ಬದಿ ನೀಳಚಕ್ಕೆ, ಇಬ್ಬದಿ ನೀಳಚಕ್ಕೆ, ಕಚ್ಚುಳ್ಳ ನೀಳಚಕ್ಕೆ, ಹಾಗೂ ಕೈ ಚಾಕು ನೀಳಚಕ್ಕೆಗಳಾಗಿವೆ. ಹೆರೆಚಕ್ಕೆ ಮಾದರಿಯ ಉಪಕರಣಗಳ ಸಂಖ್ಯೆ 34 ಇದ್ದು, ಇವುಗಳ ಉಪಮಾದರಿಗಳಾದ ಒಬ್ಬದಿ ಹೆರೆಚಕ್ಕೆ, ಇಬ್ಬದಿ ಹೆರೆಚಕ್ಕೆ, ತುದಿ ಹೆರೆಚಕ್ಕೆ, ದುಂಡು ಹೆರೆಚಕ್ಕೆ, ಒಳಬಾಗಿದಂಚಿನ ಹೆರೆಚಕ್ಕೆ ಹಾಗೂ ಹೆಬ್ಬೆಟ್ಟುಗುರಿನಂತಹ ಹೆರೆಚಕ್ಕೆಗಳಾಗಿವೆ. ಮೊನೆ ಮಾದರಿಯ ಉಪಕರಣಗಳ ಸಂಖ್ಯೆ 21 ಇದ್ದು, ಅವುಗಳ ಉಪಮಾದರಿಗಳಾದ ಸಾಮಾನ್ಯ ಮೊನೆ, ತ್ರಿಭುಜಾಕಾರದ ಮೊನೆ, ಎಲೆಯಕಾರದ ಮೊನೆ, ಕೊಕ್ಕುಳ್ಳ ಮೊನೆ ಹಾಗೂ ಕಚ್ಚುಳ್ಳ ಮೊನೆಗಳಾಗಿವೆ. ಇಂತಹ ಉಪಕರಣಗಳು ಸಂಯುಕ್ತ ಉಪಕರಣಗಳಾಗಿದ್ದು, ಇವುಗಳನ್ನು ಮರದ ಹಿಡಿಕೆಗೆ ಅಥವಾ ಮೂಳೆಗೆ ಸಿಕ್ಕಿಸಿಕೊಂಡು ಬಳಸಲಾಗುತ್ತಿದ್ದಿತು. ಈ ಉಪಕರಣಗಳ ಜೊತೆಯಲ್ಲಿ ನಿರುಪಯುಕ್ತ ಚಕ್ಕೆ ಕಲ್ಲುಗಳ ಜೊತೆಗೆ ಮೂಲ ಶಿಲಾಗಟ್ಟಿಗಳೂ ಕಂಡು ಬಂದಿದ್ದು, ಅವುಗಳಲ್ಲಿ ಉಬ್ಬೇಣುಗಳಿವೆ. ಇಲ್ಲಿ ದೊರೆತ ವಿಶೇಷ ಉಪಕರಣಗಳನ್ನು ನಿರ್ದಿಷ್ಟ ಕಾರ್ಯಗಳಿಗೆ ಬಳಸಲು ರೂಪಿಸಲಾಗುತ್ತಿತ್ತೆಂದು ತಿಳಿದು ಬರುತ್ತದೆ. ಇವುಗಳ ಕಾರ್ಯ ನಿರ್ವಹಣೆಯನ್ವಯದಂತೆ, ರೂಪಣಾ ತಾಂತ್ರಿಕತೆಯಲ್ಲಿ ಸಾಕಷ್ಟು ನೈಪುಣ್ಯತೆಯನ್ನು ಸಾಧಿಸಿರುವುದನ್ನು ಅದರಲ್ಲಿಯೂ ಉತ್ತಮ ಜಾತಿಯ ಶಿಲಾ ಮಾದರಿಯ ಕೊರತೆ ಇದ್ದರೂ, ಸ್ಥಳೀಯವಾಗಿ ದೊರಕುವ ಶಿಲಾ ಮಾದರಿಗಳನ್ನೇ ಬಳಸಿ ಉತ್ತಮ ರೀತಿಯಲ್ಲಿ ಉಪಕರಣಗಳನ್ನು ತಯಾರಿಸಿರುವುದು ಶ್ಲಾಘನೀಯವಾಗಿದೆ.

ಉಪಕರಣ ತಯಾರಿಕೆಯ ತಾಂತ್ರಿಕತೆ

ತಾಂತ್ರಿಕತೆಯ ಪ್ರಾವೀಣ್ಯತೆಯಲ್ಲಿ ವಕ್ಷಸ್ಥಳ, ಪರೋಕ್ಷ ಮತ್ತು ನೇರ ಒತ್ತಡ ತಂತ್ರಗಳನ್ನು ಬಳಸಿ, ಜ್ಯಾಮಿತಿಯ ಆಕೃತಿಗಳನ್ನು ರೂಪಿಸಲು ಹಾಗೂ ಕಚ್ಚುಗಳನ್ನುಂಟು ಮಾಡಲು ಈ ಶಿಲೆಗಳನ್ನು ಕತ್ತರಿಸುವ ತಂತ್ರವೂ ಬಳಕೆಯಾಗಿರುವುದು ಕಂಡು ಬರುತ್ತದೆ. ಈ ಕಾಲಮಾನದಲ್ಲಿ ಅಲಗುಳ್ಳ, ಅಲಗಿಲ್ಲದ ಹಾಗೂ ಸಂಯುಕ್ತ ಉಪಕರಣಗಳ ಬಳಕೆ ಹೆಚ್ಚಾಗಿರುವುದು ಕಂಡುಬರುತ್ತದೆ.

ಪರಿಶೀಲನೆ ಮತ್ತು ಕಾಲಮಾನ

ಉಪಕರಣಗಳ ವೈವಿಧ್ಯ, ತಾಂತ್ರಿಕತೆ, ಬಳಸಿರುವ ಶಿಲಾ ಮಾದರಿ ಹಾಗೂ ನಿರೂಪಣಾ ವಿಧಾನದಲ್ಲಿ ನೆರೆಯ ತುಮಕೂರು ಜಿಲ್ಲೆಯ ವಿವಿಧ ನೆಲೆಗಳು ಮತ್ತು ಜಾಲಹಳ್ಳಿ (ಬೆಂಗಳೂರು ನಗರ ಜಿಲ್ಲೆ)ಯಲ್ಲಿ ದೊರೆತ ಉಪಕರಣಗಳಂತೆಯೇ ಇದ್ದು, ಇಲ್ಲಿ

ದೊರೆತಿರುವ ಉಪಕರಣಗಳಲ್ಲಿ ಹೆಚ್ಚಿನ ಸಾಮ್ಯತೆ ಇರುವುದು ಕಂಡು ಬರುತ್ತದೆ. ಅಥವಾ ಹೆಚ್ಚಿನ ಸಾಮ್ಯತೆಯನ್ನೊಳಗೊಂಡಿವೆ. ಹಾಗಾಗಿ ಈ ಪ್ರದೇಶದ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕಾಲಮಾನದಲ್ಲಿಯೂ ಸಾಮ್ಯತೆಯನ್ನು ಗುರುತಿಸಬಹುದು. ಅಂದರಂತೆ ಈ ಸಂಸ್ಕೃತಿಯು ಸುಮಾರು ಕ್ರಿ. ಪೂ. 6000–5000 ದಿಂದ 2000–1500 ರ ಕಾಲಮಾನದಲ್ಲಿದ್ದಿರ ಬೇಕೆಂದು ಅಂದಾಜಿಸಬಹುದಾಗಿದೆ.

ಇದುವರೆವಿಗೂ ಬೆಂಗಳೂರು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಈ ಹಂತದ ಸಾಂಸ್ಕೃತಿಕ ಅವಶೇಷಗಳು ಇದುವರೆಗೂ ಶೋಧವಾಗಿಲ್ಲದಿರುವುದರಿಂದ ಮತ್ತು ಈ ಏಕೈಕ ನೆಲೆಯ ಶೋಧವು ಒಂದು ಮಹತ್ವದ್ದು ಎನ್ನಬಹುದಾಗಿದೆ.

ನೂತನ ಶಿಲಾಯುಗ ಸಂಸ್ಕೃತಿ

ಈ ಪ್ರದೇಶದ ಕ್ಷೇತ್ರ ಕಾರ್ಯದ ಸಮಯದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಕುರುಹುಗಳು ಕಂಡು ಬಂದಿದ್ದು, ಈ ಸಂಸ್ಕೃತಿಯ ಇರುವಿಕೆಯನ್ನು ಸ್ಪಷ್ಟ ಪಡಿಸುತ್ತದೆ. ಯಾವುದೇ ಶಿಲೋಪಕರಣ ದೊರೆಯದಿದ್ದರೂ, ಕಪ್ಪು ವರ್ಣದ ಮಡಕೆ ಭಾಗಗಳು ದೊರೆತಿದ್ದು, ಈ ಪ್ರದೇಶದಲ್ಲಿ ಈ ಸಂಸ್ಕೃತಿಯ ನೆಲೆಯಿರುವುದನ್ನು ತಿಳಿಸುತ್ತದೆ. ಹೆಚ್ಚಿನ ಕ್ಷೇತ್ರಕಾರ್ಯವು ಈ ನಿಟ್ಟಿನಲ್ಲಿ ಬೆಳಕು ಚೆಲ್ಲುವ ಸಾಧ್ಯತೆ ಇದೆ.

ಜಿಲ್ಲೆಯ ಪ್ರಾಗಿತಿಹಾಸದ ಮೇಲೆ ಪ್ರಭಾವ

ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಪ್ರಾಗೈತಿಹಾಸಿಕವಾಗಿ ಪ್ರಮುಖವೆಂದೇ ಹೇಳಬಹುದು. ಇಲ್ಲಿ 43 ಬೃಹತ್ ಶಿಲಾಗೋರಿಗಳು ದೊರೆತಿದ್ದು, ಇವುಗಳಲ್ಲಿ ಒಂದಾದ ಜಡಿಗೇನಹಳ್ಳಿಯಲ್ಲಿ ಉತ್ಖನನವನ್ನು ಕೈಗೊಳ್ಳಲಾಗಿದೆ. ಇಲ್ಲಿ ಸುಟ್ಟ ಮಣ್ಣಿನ ಪೆಟ್ಟಿಗೆ ಮಾದರಿಯ ಗೋರಿ ದೊರೆತಿದೆ. ಈ ಮಾದರಿಯ ಗೋರಿ ಅತ್ಯಾಕರ್ಷಕವಾಗಿದ್ದು, ಈ ಮಾದರಿಯ ಗೋರಿ ನೆಲೆಗಳಲ್ಲಿ ಇದು ಪ್ರಮುಖವಾಗಿದೆ. ಉಳಿದ ಗೋರಿ ಮಾದರಿಗಳಲ್ಲಿ ಕಲ್ಮನೆ ಮಾದರಿಗಳು ಅದರಲ್ಲೂ ಪ್ರಮುಖವಾಗಿ ಹಾದಿಕೋಣೆ ಮತ್ತು ಕಿಂಡಿಕೋಣೆಗಳು ಪ್ರಮುಖವಾಗಿವೆ. ಅಲ್ಲಲ್ಲಿ ಶಿಲಾ ವೃತ್ತ ಮಾದರಿಯ ಗೋರಿಗಳನ್ನೂ ಗುರುತಿಸಲಾಗಿದೆ.

ಅದೇ ರೀತಿ ನೂತನ ಶಿಲಾಯುಗದ ಏಕೈಕ ನೆಲೆಯು ಶಿವಗಂಗೆಯಲ್ಲಿ ಕಂಡು ಬಂದಿದ್ದು, ಇಲ್ಲಿ ಕೇವಲ ಈ ಹಂತಕ್ಕೆ ಸೇರಿದ ಮಡಕೆ ಭಾಗಗಳಷ್ಟೇ ದೊರೆತಿದ್ದು, ಯಾವುದೇ ಉಪಕರಣಗಳು ದೊರೆತಿಲ್ಲ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಹಂತಕ್ಕೆ ಸೇರಿದ 4 ನೆಲೆಗಳನ್ನು ಶೋಧಿಸಲಾಗಿದ್ದು, ದೇವನಹಳ್ಳಿ ತಾಲ್ಲೂಕಿನ ದೇವನಹಳ್ಳಿ, ಮನಗೊಂಡನಹಳ್ಳಿ ಮತ್ತು ಸೂಡಸಂದ್ರ, ನೆಲಮಂಗಲ ತಾಲ್ಲೂಕಿನ ಶಿವಗಂಗೆಗಳಾಗಿವೆ. ಈ ನೆಲೆಗಳಲ್ಲಿ ಪ್ರಮುಖವಾಗಿ ನೀಳಚಕ್ಕೆ ಮಾದರಿಗಳು, ಹೆರೆಚಕ್ಕೆ ಮಾದರಿಗಳು, ಮೊನೆ ಮಾದರಿಗಳು ಜೊತೆಗೆ ವಿಶೇಷ ಉಪಕರಣಗಳಾದ ಚಂದ್ರಾಕೃತಿ, ಕೊರೆಗ ಕೊರೆಯುಳಿ, ಬಾಣದ ಮೊನೆ, ದಬ್ಬಳದಂತಹ ಉಪಕರಣಗಳು ದೊರೆತಿದ್ದು, ಇವುಗಳನ್ನು ಕ್ವಾರ್ಟ್ಸೈಟ್ ಮತ್ತು ಜಾಸ್ಪರ್ ಶಿಲೆಗಳಲ್ಲಿ ರೂಪಿಸಲಾಗಿದೆ.

ಒಟ್ಟಾರೆ ದೊರೆತಿರುವ ವಿವಿಧ ಹಂತಗಳ ವಿವರಣೆಯಿಂದಾಗಿ ರಾಜ್ಯದ ಉಳಿದ ಜಿಲ್ಲೆಗಳಂತೆಯೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯೂ ಪ್ರಾಗಿತಿಹಾಸದ ಒಂದು ಸಮೃದ್ಧ ಕ್ಷೇತ್ರವಾಗಿದ್ದಿತೆಂದು ತಿಳಿದು ಬರುತ್ತದೆ.

ಶಿವಗಂಗಾ ಕ್ಷೇತ್ರದಲ್ಲಿ ದೊರೆತಿರುವ ಸೂಕ್ಷ್ಮ ಶಿಲೋಪಕರಣಗಳು



ಮೇಲಿನ ಸಾಲು 1: ನೀಳಚಕ್ಕೆ ಮಾದರಿ 2: ಮೊನೆ ಮಾದರಿ.
3: ಹೆರೆಚಕ್ಕೆ ಮಾದರಿ. 4. ಚಂದ್ರಾಕೃತಿ ಉಪಕರಣ.5: ಮೂಲಶಿಲಾಗಟ್ಟಿ.

ಉಪಸಂಹಾರ

ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಪ್ರಾಗೈತಿಹಾಸಿಕವಾಗಿ ಒಂದು ಸಮೃದ್ಧ ಕ್ಷೇತ್ರವಾಗಿ, ಇಲ್ಲಿನ ಬೆಟ್ಟಗುಡ್ಡಗಳು, ನದಿ ಹಾಗೂ ನೀರಿನಾಸರೆಗಳು, ದೊರಕುವ ಶಿಲಾ ಮಾದರಿಗಳು, ಇಲ್ಲಿನ ಬಯಲು ಪ್ರದೇಶ ಹೀಗೆ ಹತ್ತು ಹಲವಾರು ಪ್ರಾಕೃತಿಕ ಲಕ್ಷಣಗಳನ್ನೊಳಗೊಂಡು ಕಾಲಮಾನದುದ್ದಕ್ಕೂ ಮಾನವನ ವಾಸ್ತವ್ಯದ ಕ್ಷೇತ್ರವಾಗಿದ್ದುದು ತಿಳಿಯುತ್ತದೆ. ಈ ಪ್ರದೇಶದಲ್ಲಿ ಸಂಕೀರ್ಣ ಕ್ಷೇತ್ರ ಕಾರ್ಯ ಕೈಗೊಂಡಲ್ಲಿ ಇನ್ನೂ ಹೆಚ್ಚಿನ ವಿಷಯಗಳು ದೊರೆಯುವುದರಲ್ಲಿ ಯಾವುದೇ ಅನುಮಾನವಿಲ್ಲ.

ಆಧಾರಸೂಚಿ

1. ಅರುಣಿ ಎಸ್. ಕೆ. 2013– 'ಬೆಂಗಳೂರು ಪರಿಸರದ ಪ್ರಾಗೈತಿಹಾಸಿಕ ಸಂಸ್ಕೃತಿ: ಒಂದು ಅವಲೋಕನ' **ಇತಿಹಾಸ ದರ್ಪಣ** (ತ್ರೈಮಾಸಿಕ) 17. ಏಪ್ರಿಲ್-ಜೂನ್. ಸಂ: ಹಂ. ಗು. ರಾಜೇಶ್. ಪುಟ: 7–38.
2. ಗೋಪಾಲರಾವ್ ಎಚ್. ಎಸ್. & ವೇದಾವತಿ ಎಸ್. ಬಾಲು 2015– 'ಬೆಟ್ಟಹಳ್ಳಿ ಪಾಳ್ಯ ಮತ್ತಿತರ ನೆಲೆಗಳಲ್ಲಿ ಪ್ರಾಗ್ ಮತ್ತು ಇತಿಹಾಸ ಕಾಲದ ಕುರುಹು' **ಇತಿಹಾಸ ದರ್ಶನ ಸಂ: 30.** ಸಂ- ದೇವರಕೊಂಡಾರೆಡ್ಡಿ & ದೇವರಾಜ ಸ್ವಾಮಿ ಜೆ. ಕೆ. ಕರ್ನಾಟಕ ಇತಿಹಾಸ ಅಕಾದೆಮಿ (ರಿ). ಬೆಂಗಳೂರು. ಪುಟ; 22–25.
3. ಜಯರಾಮಯ್ಯ ಜೆ. ಟಿ. 1998– 'ಬಂಡೆಚಿಕ್ಕನಹಳ್ಳಿಯ ಶಿಲಾಯುಗದ ಸಮಾಧಿಗಳು-ಶೋಧನೆ' **ಇತಿಹಾಸ ದರ್ಶನ ಸಂ:13,** ಸಂ: ನಾಗರಾಜ್ ಎಂ. ಜಿ. & ಕೃಷ್ಣಮೂರ್ತಿ ಪಿ. ವಿ., ಕರ್ನಾಟಕ ಇತಿಹಾಸ ಅಕಾದೆಮಿ (ರಿ), ಬೆಂಗಳೂರು, ಪುಟ; 11.
4. ನಿರ್ಮಲಾ ಎಸ್. ವೈ. 1998– 'ಶ್ರೀನಿವಾಸಪುರ ಮತ್ತು ಮಾದೀಪುರದ ಬೃಹತ್ ಶಿಲಾಯುಗದ ಸಮಾಧಿಗಳು' **ಇತಿಹಾಸ ದರ್ಶನ ಸಂ:13.** ಸಂ- ನಾಗರಾಜ್ ಎಂ. ಜಿ. & ಕೃಷ್ಣಮೂರ್ತಿ ಪಿ. ವಿ., ಕರ್ನಾಟಕ ಇತಿಹಾಸ ಅಕಾದೆಮಿ (ರಿ).

ಕೆ.ಜಿ. ಶಿವತಾರಕ್

ಬೆಂಗಳೂರು ಪುಟ; 13–14.

5. ಮಂಜುನಾಥ ಎಂ. ಜಿ. 1995– 'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನವ ಶೋಧಿತ ಬೃಹತ್ ಶಿಲಾ ನಿವೇಶನಗಳು' **ಇತಿಹಾಸ ದರ್ಶನ ಸಂ:10**, ಸಂ–ಸೂರ್ಯನಾಥ ಕಾಮತ್. & ಕೃಷ್ಣಮೂರ್ತಿ ಪಿ. ವಿ., ಕರ್ನಾಟಕ ಇತಿಹಾಸ ಅಕಾದೆಮಿ (ರಿ), ಬೆಂಗಳೂರು, ಪುಟ; 18–20.

6. ಶಿವತಾರಕ್ ಕೆ. ಬಿ. 1996– 'ಶಿವಗಂಗಾ ಕ್ಷೇತ್ರದ ಪ್ರಾಗಿತಿಹಾಸ' ಸಂಪ್ರಬಂಧ (ಅಪ್ರಕಟಿತ)

7. Gorden D.H. 1938- 'THE MICROLITHIC INDUSTRIES OF INDIA' MAN vol.: 18-19-20 Pp: 21-24.


8. Todd K.R.U. 1948- 'A Microlithic Industry in Eastern Mysore' MAN vol.48: 28-31.

9. Seshadri M. 1954- 'Microlithic Industry of Kibbanahalli Mysore State' *"Cirrent Science"*, October 1954, 23, Pp: 326-327.

ಭೂಪಟ:

ಪ್ರಾಗಿತಿಹಾಸದ ಹಿನ್ನೆಲೆಯಲ್ಲಿ ದೊರೆತಿರುವ ಎಲ್ಲಾ ನೆಲೆಗಳನ್ನು ಸೂಚಿಸಲಾಗಿದ್ದು, ಮೇಲೆ ಬಳಸಲಾಗಿರುವ ಸಂಖ್ಯೆಯನ್ನೇ ಇಲ್ಲಿಯೂ ಉಪಯೋಗಿಸಲಾಗಿದೆ. ತಾಲ್ಲೂಕಿನ ಭೂಪಟದಲ್ಲಿ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನಿಲ್ಲಿ ಕೈಗೊಳ್ಳಲಾಗಿದೆ.

ನೆಲಮಂಗಲ ತಾಲ್ಲೂಕು (ಬೆಂಗಳೂರು(ಗ್ರಾ)ಜಿಲ್ಲೆ) ಪ್ರಾಗಿತಿಹಾಸ ನೆಲೆಗಳು



ಆದಿಮ ಸೌಂದರ್ಯ ಪ್ರಜ್ಞೆಯ ಅನಾವರಣ

ಕೆ.ವಿ. ಸುಬ್ರಹ್ಮಣ್ಯಂ
\# 40/3, 10ನೇ ಅಡ್ಡರಸ್ತೆ
ಬಾಪೂಜಿನಗರ
ಬೆಂಗಳೂರು–560026
keveesubramanyam@gmail.com

ಆದಿಮ ಕಲೆಯ[1] ಮೂಲ ಕಾರಣವಾಗಿ ಸಂದರ್ಭ ಮತ್ತು ಅಭಿವ್ಯಕ್ತಿಗಳ ಬಗೆಗಿನ ಕೌತುಕತೆಯು ಇಂದಿಗೂ ಮುಂದುವರೆದಿದೆ. ಆ ಕಲೆಯ ಆರಂಭದ ಹೆಜ್ಜೆಗಳು ಇಡೀ ವಿಶ್ವವನ್ನು ಆವರಿಸಿಕೊಂಡು ಅನಾವರಣಗೊಂಡಿವೆ. ಹಾಗಾಗಿಯೇ ಈಗಾಗಲೇ ಪರಿಚಿತ ನಮ್ಮ ರಾಜ್ಯದ ನೂರಾರು ಇತಿಹಾಸ ಪೂರ್ವ ಆದಿಮ ಗುಹಾಚಿತ್ರ ನೆಲೆಗಳ ಜತೆಜತೆಗೇ ನಮ್ಮ ನಡುವೆ ಇಂದಿಗೂ ಅಪರೂಪಕ್ಕೊಮ್ಮೆ ಅಚ್ಚರಿ ಮೂಡಿಸುವ ಹೊಸಹೊಸ ನೆಲೆಗಳು ಆಸಕ್ತರಿಂದ ಅನ್ವೇಷಣೆಗೊಳ್ಳುತ್ತಲೇ ಇವೆ. ಹಾಗಾಗಿ ಈ ಕೌತುಕಮಯ ಹುಡುಕಾಟದ ಅಲೆಮಾರಿ ಪ್ರವೃತ್ತಿಯವರ ವಿಶಿಷ್ಟ ಕಣ್ಣು ಮತ್ತು ಮನಸ್ಸುಗಳಿಗೆ ಆಗುವ ಆನಂದವು ಅನನ್ಯವಾದುದೇ ಸರಿ.

ಇಂದಿನ ಜಾಗತೀಕರಣದ, ಅಭಿವೃದ್ಧಿ ರಾಜಕಾರಣದ ಯಜ್ಞಕ್ಕೆ ಆದಿವಾಸಿಗಳೇ ಅಲ್ಲದೆ ಅವರ ಕಲೆಗಳೂ ಆಹುತಿಯಾಗುತ್ತಿವೆ. ಇಂತಹ ಸಂಕೀರ್ಣ ಸಂದರ್ಭದಲ್ಲಿಯೂ ಅಲೆಮಾರಿ ಪ್ರವೃತ್ತಿಯ ಈ ಬರಹದ ಲೇಖಕನಿಗೆ ಕರ್ನಾಟಕವೇ ಅಲ್ಲದೆ ಆಂಧ್ರ ಪ್ರದೇಶದಲ್ಲಿಯೂ ಬೃಹತ್ ಶಿಲಾಯುಗದ ಹಲವು ನೆಲೆಗಳು ಕಾಣಿಸಿಕೊಂಡವು! ಕರ್ನಾಟಕದ ಕೋಲಾರ ಜಿಲ್ಲೆಯ ಟೇಕಲ್ (1992), ಘಟ್ಟಮಾದ ಮಂಗಲ (2009), ಆಂಧ್ರಪ್ರದೇಶದ ಕಂಗುಂದಿ (2010), ರಾಯದುರ್ಗ (2011), ಹಾಗೂ ಯಾದಗಿರಿ ಜಿಲ್ಲೆಯ ಬಳಿಚಕ್ರದ ಚಿತ್ರಗಳ

ಪುನರ್‌ಪರಿಶೀಲನೆ (2010), ಯಾದಗಿರಿ ಪಟ್ಟಣದ ಹೊರವಲಯದ ಬೃಹತ್ ಮುಖದ ಶಿಲ್ಪಗಳೇ (2010), ಅವು.

ನಿಗೂಢ ಬೆಟ್ಟಗಳ ಸಾಲುಗಳನ್ನು ಹಲವೆಡೆ ಹೊಂದಿರುವ ಕೋಲಾರ ಜಿಲ್ಲೆಯಲ್ಲಿ ಬೃಹತ್ ಶಿಲಾಯುಗದ ಹಲವಾರು ನೆಲೆಗಳಿವೆ. ಈಗಾಗಲೇ ಹಲವರಿಂದ ಅನ್ವೇಷಿಸಲ್ಪಟ್ಟಿರುವ ಬನಹಳ್ಳಿ, ಹುನಕುಂದ, ಪಾರಂಡಪಲ್ಲಿ, ಆವಣಿ, ತೇರುಹಳ್ಳಿ ಮತ್ತು ಗರುಡನಹಳ್ಳಿಗಳ ಸಾಲಿಗೆ ಟೇಕಲ್, ಘಟ್ಟಮಾದಮಂಗಲಗಳನ್ನೂ ಸೇರಿಸಬಹುದಾಗಿದೆ. ಟೇಕಲ್ ರೈಲು ನಿಲ್ದಾಣದ ಬೆಂಗಳೂರು ಬಂಗಾರಪೇಟೆಯ ರೈಲು ಮಾರ್ಗದ ಎಡಗಡೆ ಮತ್ತು ಬಲಗಡೆ ಬೃಹತ್ ಶಿಲಾಯುಗದ ಹಲವು ಶಿಲಾಶ್ರಯಗಳು ಇದ್ದುವಾದರೂ, ಪ್ರಸ್ತುತ ಅಲ್ಲಿನ ಗ್ರಾನೈಟ್ ಗಣಿಗಾರಿಕೆಗೆ ಹಲವಾರು ಶಿಲಾಶ್ರಯಗಳು ಬಲಿಯಾಗಿವೆ. ರೈಲು ನಿಲ್ದಾಣದ ರೈಲು ಹಳಿಯ ಎಡಬದಿಯಲ್ಲಿ ವಿಶಾಲ ಗ್ರಾನೈಟ್ ಹಾಸು ಶಿಲಾ ಆವರಣದಲ್ಲಿ ಬೃಹತ್ ಶಿಲಾಶ್ರಯವೊಂದು ಉಳಿದುಕೊಂಡಿದ್ದು ನೆಲಹಾಸು ಬಂಡೆಯ ಸಹಜ ಅವಕಾಶ (Space)ದಲ್ಲಿ ಕೊರೆದು ರೇಖಿಸಿರುವ ಎರಡು ವೃತ್ತ / ತ್ರಿಶೂಲ (Etched circle and trident symbol) ರೇಖಾಕಾರಗಳನ್ನು ಕಾಣಬಹುದು.[2]

1. ಸಾಂಕೇತಿಕ ರೇಖಾಚಿತ್ರಗಳು: ಟೇಕಲ್ ಮತ್ತು ಘಟ್ಟಮಾದಮಂಗಲ

ಅ) ಟೇಕಲ್: ಟೇಕಲ್ (ಅಕ್ಷಾಂಶ: 12.747000 N, ರೇಖಾಂಶ: 78.346000 E) ಊರಿನ ದೇವಾಲಯ ಮತ್ತು ಮಸೀದಿಗಳ ಬದಿಯಲ್ಲಿಯೇ ಇರುವ ಒಂದು ಶಿಲಾಶ್ರಯವು ಬಹುಮುಖ್ಯ ಶಿಲಾಶ್ರಯವಾಗಿದೆ. ಪ್ರಸ್ತುತ ಸಾಂಕೇತಿಕ ರೇಖಾಚಿತ್ರಗಳಿರುವುದು ಇಲ್ಲಿಯೇ. ಜನರ ಗ್ರಾನೈಟ್ ಕಲ್ಲಿನ ಹಸಿವಿಗೆ ಇದರ ಸುತ್ತಲಿನ ಕಲ್ಲಿನ ಪ್ರಕೃತಿ ಸಹಜ ಶಿಲಾಹಾಸು ಬಲಿಯಾಗಿದೆ. ಶಿಲಾಶ್ರಯವು ಹೇಗೋ ಉಳಿದು ಕೊಂಡಿದೆ. ಇತಿಹಾಸಕಾಲದ ತಮಿಳು ಶಾಸನವೂ ಇರುವ ಬಯಲು ಆವರಣ ಇದು; ಇರಲಿ. ಬೃಹತ್ ಶಿಲಾಯುಗದ ನೆಲೆಯೂ ಇದಾಗಿರುವಂತಿದೆ. ಈ ವಿಶಿಷ್ಟ ಶಿಲಾಶ್ರಯದಲ್ಲಿ ಜಾರುವಿಕೆಯ ಅಡ್ಡಿಯಿಂದ ಪಾರಾಗಿ, ನೆಲಕ್ಕೆ ಬೆನ್ನು ಮಾಡಿ ಮೇಲೆ ಚಿತ್ರಗಳನ್ನು ನೋಡಬಹುದು. ಜ್ಯಾಮಿತಿಯ (Geometry) ಮತ್ತು ಸಾಂಕೇತಿಕ (Coded) ರೇಖೆಗಳ ರೂಪನಿರೂಪಣೆಯು ಬಿಳಿಯ ಬಣ್ಣದಲ್ಲಿ ಮೂಡಿಬಂದಿದೆ. ಮನುಷ್ಯನ ರೇಖಾರೂಪವೂ ಇದೆ.

ಆ) ಘಟ್ಟಮಾದ ಮಂಗಲ: ಟೇಕಲ್‌ನಿಂದ ಕೆಲವೇ ಕಿಲೋಮೀಟರುಗಳ ದೂರದ ಬಂಗಾರಪೇಟೆ ತಾಲ್ಲೂಕಿನ ಘಟ್ಟಮಾದ ಮಂಗಲ (ಅಕ್ಷಾಂಶ: 12.958000 N, ರೇಖಾಂಶ: 78,268000 E) ಗುಡ್ಡದ ಶಿಲಾಶ್ರಯ ಚಿತ್ರಗಳು ಕೆಂಗಾವಿ (Red Ochre– ಕಾವಿ ಮಣ್ಣಿನ ಮೂಲದ ಬಣ್ಣ) ಬಣ್ಣದಲ್ಲಿ ಚಿತ್ರಿಸಲ್ಪಟ್ಟಿದ್ದು ಸ್ಪಷ್ಟವಾಗಿ ಸಾಂಕೇತಿಕತೆಯನ್ನು ಹೊಂದಿವೆ. ಎಲುಬುಗಳನ್ನು ಅಧ್ಯಯನ ಮಾಡಿ ರೇಖಿಸಿರುವ ಹಸ್ತದ ರೇಖಾಚಿತ್ರ ಮತ್ತು ಬಹುಮುಖ್ಯವಾಗಿ ಸಾಂಕೇತಿಕ ವಿನ್ಯಾಸದಂತಹ ರೂಪವೊಂದರ ಕೆಂಗಾವಿ ರೇಖಾ ಚಿತ್ರಗಳು (ಚಿತ್ರ–1ಆ. (ಎ)) ಗಮನಾರ್ಹ. ತೆರೆದ ಬಂಡೆಯ ಮೇಲ್ಮೈನ ಈ ಚಿತ್ರಗಳ ಜತೆ ಜತೆಗೇ ಇನ್ನೂ ಹಲವಾರು ಸಾಂಕೇತಿಕ ರೇಖಾ ವಿನ್ಯಾಸಗಳಿವೆ. ಜೇನುಗೂಡಿನ ರಚನಾ ರೇಖಾ ಸೌಂದರ್ಯದ ಜತೆಗೆ ಮನುಷ್ಯರೂಪೀ ಸಾಂಕೇತಿಕ ಅಲಂಕರಣದ ರೇಖಾ ಚಿತ್ರವೂ ಇದೆ. ಜತೆಗೆ ಹಲವಾರು ಅಸ್ಪಷ್ಟ ರೇಖಾಚಿತ್ರಗಳು ಇನ್ನಷ್ಟೇ ಆಸಕ್ತರಿಂದ ಅಧ್ಯಯನಕ್ಕೆ ಒಳಗಾಗಬೇಕಿವೆ. ಬಿಸಿಲು ಮಳೆ, ಗಾಳಿಗಳಿಗೆ ಇಲ್ಲಿನ ಹಲವು ಚಿತ್ರಗಳು ಭಾಗಶಃ

ಬಲಿಯಾಗಿವೆ. ಎದ್ದು ಕಾಣುವಂತೆ ವಿಶಿಷ್ಟ ಸಾಂಕೇತಿಕ ಚಿತ್ರವೂ ಉಳಿದು ಕೊಂಡಿದೆ. (ಚಿತ್ರ–1ಆ. (ಡಿ)) ಈ ನೆಲೆಯಲ್ಲಿ ಇರುವ ಗುಹೆಯೊಂದರಲ್ಲಿ ಚಿತ್ರಗಳು ಇಲ್ಲ. ಹೊರಗೆ ಕಾಣುವಂತೆ ತೆರೆದ ಬಂಡೆಗಳ ಅವಕಾಶದಲ್ಲಿ ಮಾತ್ರ ಚಿತ್ರಗಳಿವೆ. ಈ ನೆಲೆಯ ಆವರಣದಲ್ಲಿ ನಿಂತ ವಿಶಿಷ್ಟ ನಿಲುವುಗಲ್ಲೂ ಇದೆ. ಈ ಕಲ್ಲಿನ ತುದಿಯಲ್ಲಿ ಬಹುಶಃ ಶಬ್ದ ಸಂಬಂಧೀ ಬಡಿತದ ಕಾರಣಕ್ಕಾಗಿ ಕುಳಿಯೊಂದು (ಚಿತ್ರ–1ಆ. (ಸಿ)) ಸೃಷ್ಟಿಗೊಂಡಿದೆ.[3]



1ಆ. (ಎ) ಕೆಂಗಾವಿ ಬಣ್ಣದ ರೇಖಾಚಿತ್ರಗಳು (ಘಟ್ಟಮಾದ ಮಂಗಲ)



1ಆ. (ಬಿ) ಕೆಂಗಾವಿ ಬಣ್ಣದ ರೇಖಾಚಿತ್ರಗಳು (ಘಟ್ಟಮಾದ ಮಂಗಲ)

ಘಟ್ಟಮಾದಮಂಗಲದ ಗುಡ್ಡದ ಪಶ್ಚಿಮಕ್ಕೆ ಕೆರೆಕೋಡಿಯ ಬಳಿಯ ನೆಲದ ಮೇಲಿನ ಬಂಡೆಗಳ ಚಪ್ಪಟೆ ಮೇಲ್ಮೈಯಲ್ಲಿ ಬೃಹತ್ ಶಿಲಾಯುಗದ ಆಯುಧಗಳನ್ನು ಹರಿತಗೊಳಿಸುವ ಪ್ರಕ್ರಿಯೆಯಲ್ಲಿ ಮೂಡಿದ ವಿಶಿಷ್ಟ ಕುಳಿಗಳಿವೆ. ಇಂತಹ ಕುಳಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಸುಮಾರು ಹತ್ತು ಕಿ.ಮೀ. ದೂರದಲ್ಲಿರುವ ಪಾರಂಡ ಪಲ್ಲಿಯ ಕೆರೆಯ ಬಳಿಯ ಬಂಡೆಗಳ ಮೇಲೆಯೂ ಹೀಗೆಯೇ ಇವೆ. ಘಟ್ಟಮಾದಮಂಗಲದ ಶಿಲಾಶ್ರಯದ ವಿಶಿಷ್ಟ ಆವರಣ, ಸಾಂಕೇತಿಕ ರೇಖಾ ಚಿತ್ರಗಳು, ಶಿಲಾಶ್ರಯದ ಕೆಳಗೆ ತೆರೆದ ಪ್ರವೇಶದ್ವಾರದಂತಹ ಕಲ್ಲಿನ ರಚನೆ ಇತ್ಯಾದಿಗಳು ಪುರಾತತ್ವ ತಜ್ಞರಿಂದ ಅಧ್ಯಯನಕ್ಕೆ ಒಳಗಾಗಬೇಕಿದೆ.

2. ಕಂಗುಂದಿ

ಘಟ್ಟಮಾದಮಂಗಲದ ಗುಡ್ಡದ ಪೂರ್ವಕ್ಕೆ ಸುಮಾರು 20 ಕಿ.ಮೀ. ದೂರದಲ್ಲಿ ಆಂಧ್ರಪ್ರದೇಶದ ಗಡಿಯ ಭಾಗದ ಚಿತ್ತೂರು ಜಿಲ್ಲೆಯ ಕುಪ್ಪಂ ತಾಲ್ಲೂಕಿನ ಪುಟ್ಟ ಗ್ರಾಮವೇ ಕಂಗುಂದಿ (ಅಕ್ಷಾಂಶ: 12.747000N, ರೇಖಾಂಶ: 78.346000E). ಐತಿಹಾಸಿಕ ಮಹತ್ವದ ಇಲ್ಲಿನ ಕಪ್ಪು ಮರಳುಗಲ್ಲು ಬೆಟ್ಟವು ವಿಶಿಷ್ಟವಾಗಿದೆ. ಅಲ್ಲಿನ ಎರಡು ಗುಹೆಗಳಲ್ಲಿ ಕೆಂಗಾವಿ ಮತ್ತು ಬಿಳಿಯ ಬಣ್ಣದ ಚಿತ್ರಗಳಿವೆ. ಇತಿಹಾಸ ಪೂರ್ವ ಮತ್ತು ಇತಿಹಾಸ ಕಾಲಗಳಿಗೆ ಸೇರಿರಬಹುದಾದ ಚಿತ್ರಗಳು ಇವು. ಹಿಂದೆ ವೈಭವೋಪೇತ ನಾಯ್ದುಗಳ ಆಡಳಿತವನ್ನು ಕಂಡಿರುವ ಈ ಬೆಟ್ಟವು ಕಪ್ಪುಕಲ್ಲಿನ ಪದರ ಪದರ ರಚನೆ. ನಡುನಡುವೆ (ಕಾಲದ ಪ್ರಭಾವಕ್ಕೆ ಸಿಲುಕಿ ವಿವಿಧ ಎತ್ತರಗಳಲ್ಲಿ ಕಂಡು, ಕಪ್ಪು ಬಣ್ಣದ ಮರಳುಗಲ್ಲುಗಳ ಬೃಹದ್ ಪದರಗಳು ಮೂಲಬೆಟ್ಟದ



1ಆ. (ಸಿ) ನಿಲುವುಗಲ್ಲೊಂದರ ಮೇಲೆ ಇರುವ ವಿಶಿಷ್ಟ ಕುಳಿ. (ಘಟ್ಟಮಾದಮಂಗಲ)



1ಆ. ಡಿ ಕೆಂಗಾವಿಬಣ್ಣದ ಒಂದು ಸಾಂಕೇತಿಕ ರೇಖಾಚಿತ್ರ

ಒಡಲಿಂದ ಜರುಗಿ ಹೊರಬಂದಂತೆ) ಹಲವು ಸಂಕೀರ್ಣ ಪ್ರವೇಶಗಳನ್ನು ಹೊಂದಿದೆ. ಅಲ್ಲಲ್ಲಿ ಹಲವಾರು ತೆರೆದ ಸ್ಥಳಗಳಿವೆ; ಶಿಲಾಶ್ರಯಗಳೂ ಇವೆ. ಪುಟ್ಟ ನೀರಿನ ಆಶ್ರಯವೂ ಇದೆ. ಇಂತಹ ಸ್ಥಳವೊಂದರಲ್ಲಿ ಇತಿಹಾಸ ಪೂರ್ವ ಹೊಸಶಿಲಾಯುಗದ ಗುಹೆಯೊಂದು ದಕ್ಷಿಣ ದಿಕ್ಕಿಗೆ ಮುಖಮಾಡಿದೆ. ಅದನ್ನು 1ನೆಯ ವರ್ಣಚಿತ್ರ ಗುಹೆ ಎನ್ನೋಣ. ಅಲ್ಲಿ ಕೆಂಗಾವಿ (Red-ochre) ಮತ್ತು ಬಿಳಿಯ ಬಣ್ಣಗಳನ್ನು ದುಡಿಸಿಕೊಳ್ಳಲಾಗಿದೆ.

ಸ್ವಲ್ಪ ಮಸುಕಾಗಿರುವ ಬಿಳಿಯ ಬಣ್ಣದ, ನಿಂತ ಭಂಗಿಯಲ್ಲಿ ಬಿಲ್ಲಿನಿಂದ ಬಾಣ ಪ್ರಯೋಗನಿರತ ರೇಖಾ ರೂಪವೊಂದಿದೆ. ಹಾಗೆಯೇ ಬಿಳಿಯ ಬಣ್ಣವನ್ನು ಚಪ್ಪಟೆ(Flat)ಯಾಗಿ ದುಡಿಸಿಕೊಂಡ ಮಾನವರೂಪಗಳೂ ಇವೆ. ಕೌತುಕವೆಂದರೆ ಈ ಗುಹೆ ಮತ್ತು ಚಿತ್ರಗಳನ್ನು ಮಾಂತ್ರಿಕ ಕಾರಣಗಳಿಗಾಗಿ ಬಳಸಿಕೊಂಡಿರಬಹುದಾದ ಸಾಧ್ಯತೆಗಳು. ಆದಿಮ ಕಲೆಯನ್ನು ಮಾಂತ್ರಿಕ ದಂಡವಾಗಿ (Magical tool) ಬಳಸಿರುವ ಪುರಾವೆಗಳು ವಿಶ್ವದ ಹಲವೆಡೆ ಇವೆ. ಕಂಗುಂದಿಯ ಈ ನೆಲೆಯಲ್ಲಿಯೂ ಹಾಗೆಯೇ ಕಲೆಯನ್ನು ಬಳಸಿರುವಂತಿದೆ. ಬಿಳಿಯ ಬಣ್ಣದ ಮಾನವ ರೂಪದ ಚಿತ್ರಗಳ ಮೇಲೆ ಕೆಂಗಾವಿ ಬಣ್ಣವನ್ನು ಧಾರೆ ಧಾರೆಯಾಗಿ ಹರಿಸಿರುವಂತಿದೆ. 10–12 ಅಡಿಗಳಷ್ಟು ಎತ್ತರದ ಸೂರಿನ ಮೇಲ್ಮೈ ಅವಕಾಶದಲ್ಲಿಯೂ ಕೆಂಗಾವಿ ಬಣ್ಣದಿಂದ ಮೂಡಿಸಿರುವ ಹಲವಾರು ಬಿಂದು ರೂಪಗಳಿವೆ. ಇಲ್ಲಿಯ ಗುಹೆಯ ಬಿರುಕು, ಬಿಲ, ಅಂಕುಡೊಂಕುಗಳನ್ನೂ ಬಳಸಿಕೊಂಡು ಕೆಲವು ರೂಪಗಳನ್ನು ರೇಖಿಸಲಾಗಿದೆ.[4] ಇವೆಲ್ಲವೂ ಕೆಂಪು ಬಣ್ಣದ ಧಾರೆಧಾರೆ ಸುರಿಯುವಿಕೆಯ ನಡುವೆ ಯಾವುದೋ ಆಚರಣೆಯೊಂದರ ಸಂದರ್ಭದ ವಿಶಿಷ್ಟ ದೃಶ್ಯ ಕಲೆಯ ಮಾಂತ್ರಿಕತೆಯನ್ನು ನೆನಪಿಗೆ ತರಬಲ್ಲವು.

ಕಂಗುಂದಿ ಬೆಟ್ಟದ ಪೂರ್ವ ದಿಕ್ಕಿಗೆ ಮತ್ತೊಂದು ಶಿಲಾಶ್ರಯವಿದೆ. ಇದನ್ನು 2ನೇ ಚಿತ್ರ ನೆಲೆ ಎನ್ನೋಣ. ಇಲ್ಲಿ ಬಹುಶಃ ಇತಿಹಾಸ ಪೂರ್ವ ಅಥವಾ ಇತಿಹಾಸ ಕಾಲದಲ್ಲಿ ಚಿತ್ರಿತಗೊಂಡಿರುವ ಬಿಳಿಯ ಬಣ್ಣದ ರೇಖಾಚಿತ್ರಗಳು ಅಲಂಕಾರವನ್ನು ಅರಗಿಸಿಕೊಂಡಿವೆ. ರಂಗೋಲಿಯಂತೆ ಪಕ್ಷಿನೋಟಕ್ಕೆ ಕಂಡರೆ, ಹತ್ತಿರ ಹೋದಂತೆ ಪ್ರಕೃತಿಯ ವೃಕ್ಷ ಸಂಪತ್ತು ಸೌಂದರ್ಯಗಳ ಆತ್ಮವನ್ನೇ ಅರಗಿಸಿಕೊಂಡಂತೆ ಈ ಚಿತ್ರ ಸಮೂಹ ಸಂಯೋಜನೆಗೊಂಡಿದೆ. ಮರ, ಜೇನುಗೂಡು, ಮನುಷ್ಯರು, ಆನೆ, ನೀರಿನ ಆಸರೆ ಇತ್ಯಾದಿ ರೇಖಾ ರೂಪ ಕಲ್ಪನೆಗಳು ಆದಿಮ ಪ್ರಜ್ಞೆಯ ಮುಗ್ಧತೆ, ಸರಳತೆ ಮತ್ತು ಸಾಂಕೇತಿಕತೆಗಳನ್ನು ಅನನ್ಯತೆಯಿಂದ ಒರಟು ಮರಳುಗಲ್ಲಿನ ಹೊರಮೈಯಲ್ಲಿ ಗ್ರಹಿಸಿಕೊಂಡಿವೆ: ದಿಟ್ಟ ರೇಖೆಗಳಿವು.

3. ರಾಯದುರ್ಗದ ಅಪೂರ್ವ ರೇಖಾಚಿತ್ರಗಳು

ಅನಂತಪುರ ಜಿಲ್ಲೆಯ ಕೆಲವೇ ಬೃಹತ್ ಶಿಲಾಯುಗದ ಶಿಲಾಶ್ರಯ ಚಿತ್ರ ನೆಲೆಗಳಲ್ಲಿ ತೇನೆಗಲ್ ಒಂದು. ಈ ನೆಲೆಯ ಸಮೀಪವೇ ಇದೀಗ ಮತ್ತೊಂದು ಶಿಲಾಶ್ರಯ ಚಿತ್ರಗಳ ನೆಲೆಯು 2011ರಲ್ಲಿ ಈ ಬರಹದ ಲೇಖಕನ ಅನ್ವೇಷಣೆಯ ಸಂದರ್ಭದಲ್ಲಿ ಕಾಣಿಸಿಕೊಂಡಿತು. ಅದೇ ರಾಯದುರ್ಗ.

ರಾಯದುರ್ಗದಲ್ಲಿ ಐತಿಹಾಸಿಕ ಕೋಟೆ, ದೇವಾಲಯ ವಾಸ್ತುಶಿಲ್ಪಗಳು ಇವೆ. ಈ ಎಲ್ಲದರ ನಡುವೆ ಬೃಹತ್ ಶಿಲಾಯುಗದ ಕೆಲವು ನೆಲೆಗಳೂ ಇವೆ. ನೀರಿನ ಆಸರೆಗೆ

ಹತ್ತಿರವಿರುವ ಒಂದು ಶಿಲಾಶ್ರಯದಲ್ಲಿ ಗ್ರಾನೈಟ್ ಬೃಹತ್ ಬಂಡೆಯ ಅವಕಾಶದಲ್ಲಿ ಚಿತ್ರಗಳಿವೆ.

ಈ ಚಿತ್ರಗಳ ವಿಶೇಷವೆಂದರೆ ಕಲ್ಲಿನ ಮೇಲ್ಮೈ ಅವಕಾಶದಲ್ಲಿ ಕೆಂಗಾಪಿ ಬಣ್ಣವನ್ನು ಲೇಪಿಸಿ ಅದರ ಮೇಲೆ ಚೂಪು ಮೊನೆಯೊಂದರಿಂದ ತೀಡಿ, ಉಜ್ಜಿ ಕೆಂಗಾಪಿ ಬಣ್ಣ (Red Ochre) ತೆಗೆದು ರೇಖಾಚಿತ್ರಗಳನ್ನು ರೇಖಿಸಲಾಗಿದೆ! ಇದೊಂದು ಆ ಸಂದರ್ಭದ ಅಪೂರ್ವ ಪ್ರಯೋಗದಂತೆ ಕಾಣುತ್ತದೆ. ಕೆಂಗಾವಿ ಬಣ್ಣದಿಂದ ಚಿತ್ರಿಸುವ ಬದಲಿಗೆ ಅದನ್ನೇ ಲೇಪಿಸಿರುವುದು (ಚಿತ್ರ–3 (ಬಿ)) ಅಪರೂಪ. ಹತ್ತಿರದ ತೇನೆಗಲ್‌ನಲ್ಲಿರುವ ಆನೆಗಳ ಗುಹೆಯಲ್ಲಿ ಬಿಳಿಯ ಬಣ್ಣದ ಚಿತ್ರಗಳಿವೆ.[5] ಅನಂತಪುರ–ಬಳ್ಳಾರಿ ರಸ್ತೆಯ ವೇಲ್ಪುಮಡುಗುನಲ್ಲಿ ಡುಬ್ಬದ ಗೂಳಿಗಳ ಉಜ್ಜಿ / ಕುಟ್ಟಿ ಮೂಡಿಸಿದ ರೇಖಾಚಿತ್ರಗಳಿವೆ. ಇವೆಲ್ಲವುಗಳಿಗಿಂತಲೂ ರಾಯದುರ್ಗದ ಚಿತ್ರಗಳ ಚಿತ್ರಿತ ದೃಷ್ಟಿಯು ಅಪೂರ್ವವೇ ಆಗಿದೆ. ಕೈ ಕೈ ಹಿಡಿದ ಕೆಲವೇ ಜನರ ಸಾಲುಗಳು, ಡುಬ್ಬವಿರುವ ಒಂದೇ ಎತ್ತು ವಿಶಿಷ್ಟವಾಗಿ (ಚಿತ್ರ–3 (ಎ)) ವೈಭವೀಕೃತಗೊಂಡಿದೆ. ಈ Humped bulls ಹತ್ತಿರದ ಮತ್ತೊಂದು ಶಿಲಾಶ್ರಯ ನೆಲೆಯಾದ ಬುದಗವಿ, ಕಡಪ ಜಿಲ್ಲೆಯ ಚಿಂತಕುಂಟಗಳಲ್ಲಿಯೂ[6] ಇವೆ. ಬಳ್ಳಾರಿ ಜಿಲ್ಲೆಯ ಹಲವು ಶಿಲಾಶ್ರಯಗಳಲ್ಲಿಯೂ ಇವೆ.

ರಾಯದುರ್ಗದ ಚಿತ್ರಗಳು ಬಿಸಿಲು, ಮಳೆ ಗಾಳಿಯ ಪ್ರಭಾವದಿಂದ ಮಸುಕಾಗಿವೆ.

4. ನಿರಮಾನ್ವಿಯ ವಿಶಿಷ್ಟ ಶಿಲಾರೂಪಗಳು

ಒಮ್ಮೆ ರಾಯಚೂರು ಹತ್ತಿರದ ಬೆಟ್ಟದೂರಿನ ಕಲಾವಿದ ಶಂಕರಗೌಡರನ್ನು ಹುಡುಕಿ ಹೋಗಿದ್ದಾಗ ಅವರು ಸಿಗದೆ ಆ ಭಾಗದ ಶಿಲಾಗುಡ್ಡಗಳಲ್ಲಿ ನಡೆದಾಡಲು ಇಷ್ಟಪಟ್ಟು ಒಬ್ಬನೇ ಒಂದು ದಿನ ಅಲೆದಾಡಿದೆ. ಮಧ್ಯಾಹ್ನದ ಹೊತ್ತಿಗೆ ನಿರಮಾನ್ವಿಯ ಹತ್ತಿರದ ಕೆಲವು ಗುಡ್ಡಗಳ ಶಿಲಾರಚನೆಗಳು ತಮ್ಮ ವಿಶಿಷ್ಟರೂಪಗಳಿಂದ ಆಕರ್ಷಿಸಿದವು. ಹತ್ತಿರ ಹೋದರೆ ಅಲ್ಲಿನ ಶಿಲಾಶ್ರಯವು ದರ್ಗಾವೊಂದಕ್ಕೆ ಆಶ್ರಯ ನೀಡಿತ್ತು. ಸುತ್ತಲಿನ ಆವರಣದ ಕಲ್ಲುಬಂಡೆಗಳ ರೂಪ, ನಿಲುವುಗಳು ಬಹುಶಃ ಹೊಸ ಶಿಲಾಯುಗದ ಹಿನ್ನೆಲೆಯಿಂದಾಗಿ ಆದಿಮ ಸತ್ವಗಳ ಅನುಭವ ನೀಡಿದವು. ಕಲ್ಲಿನ ವಿಶಿಷ್ಟ, ವಿಚಿತ್ರ ರೂಪಗಳು ಅಂದಿನವರಿಗೆ ಇತರ ಬಂಡೆಗಲ್ಲುಗಳ ನಡುವೆ ವಿಚಿತ್ರವಾಗಿ ಕಾಣಿಸಿ ಆಕರ್ಷಿಸಿರಬೇಕು. ಅವುಗಳ ಮೇಲ್ಮೈರೂಪಗಳನ್ನು ಅಲ್ಪಸ್ವಲ್ಪ ಬದಲಿಸಿ ಇನ್ನಷ್ಟು ವಿಶಿಷ್ಟವಾಗಿರುವಂತೆ ಅವರು



3(ಎ) ರಾಯದುರ್ಗದ ಶಿಲಾಶ್ರಯದ ಕೆಂಗಾವಿ ಬಣ್ಣ ಲೇಪಿಸಿ ನಂತರ ಮೂಡಿಸಿದ ರೇಖಾ ಚಿತ್ರಗಳು




3(ಬಿ) ರಾಯದುರ್ಗದ ರೇಖಾ ಚಿತ್ರಗಳು



4(ಎ) ನಿರಮಾನ್ವಿಯ ವಿಶಿಷ್ಟ ನಿಲುವುಗಲ್ಲು



4 (ಬಿ) ನಿಲುವುಗಲ್ಲಿನ ಮೇಲಿರುವ ಸಾಂಕೇತಿಕ ಕೆಂಗಾವಿ ರೇಖಾರೂಪಗಳು.



5 (ಎ) ಬಳಿಚಕ್ರದ ಕೆಂಗಾವಿ ಬಣ್ಣದ ರೇಖಾ ಚಿತ್ರಗಳ ಬಲಬದಿ ಇರುವ ಉಬ್ಬು ಮುಖ ಶಿಲ್ಪ.



5 (ಬಿ) ಬಳಿಚಕ್ರದ ಉಬ್ಬು ಮುಖ ಶಿಲ್ಪ.

(ಚಿತ್ರ–4 (ಎ)) ರೂಪಿಸಿಕೊಂಡಿರುವ ಸಾಧ್ಯತೆಗಳಿವೆ. ಹಾಗೆ ಮಾಡಿಕೊಂಡೇ ಈ ಶಿಲಾರೂಪಗಳ ಆವರಣವನ್ನು ಅವರಿಗೆ ಅನುವಾಗಿಸಿಕೊಂಡು ಆದಿಮ ಆಚರಣೆಗಳ ಸಂದರ್ಭಗಳಿಗಾಗಿ ಈ ಆವರಣವನ್ನು ದುಡಿಸಿಕೊಂಡಿರುವಂತಿದೆ. ಇಲ್ಲಿನ ಹಲವು ಶಿಲಾರಚನೆಗಳಲ್ಲಿ ಒಂದು ವಿಶಿಷ್ಟ ಕೋಡುಗಲ್ಲಿನ ಶಿಲಾ ಅವಕಾಶದಲ್ಲಿ ಕೆಂಗಾವಿ ಬಣ್ಣದ ಸಾಂಕೇತಿಕ ರೇಖಾ ವಿನ್ಯಾಸಗಳಿವೆ. ಇತ್ತೀಚಿನವರೆಗೂ ಅಲ್ಲಲ್ಲಿ ಮಸಕಾಗಿದ್ದರೂ ಕೆಲವು ರೇಖಾ ರೂಪಗಳು ಕಾಣುತ್ತಿದ್ದವು. ಕಳೆದ ತಿಂಗಳ ನನ್ನ ಮರು ಭೇಟಿಯ ಅವಧಿಯಲ್ಲಿ ಬಹು ಎತ್ತರದಲ್ಲಿರುವ ಆ ಚಿತ್ರಗಳ ಮೇಲೆ ಯಾರೋ ಬಿಳಿಯ ಸುಣ್ಣದ ಬಣ್ಣವನ್ನು ಸುರಿದಿದ್ದಾರೆ; ಆದರೂ ಅವುಗಳ ಒಳಗಿಂದ ಕೆಂಗಾವಿ ರೇಖಾ ವಿನ್ಯಾಸಗಳು (ಚಿತ್ರ–4 (ಬಿ)) ಇಣುಕಿ ನೋಡುತ್ತವೆ! ಈ ವಿಶಿಷ್ಟ ಶಿಲಾನೆಲೆಯು ಹಲವು ನಿಗೂಢತೆಗಳನ್ನು ಹೊಂದಿರುವಂತಿದೆ.

5. ಬಳಿಚಕ್ರ: ಒಂದು ಹೊಸ ನೋಟ

ಯಾದಗಿರಿಯ ಹತ್ತಿರ ಬಳಿಚಕ್ರದ ಪೂರ್ವದಿಕ್ಕಿಗೆ ಇರುವ ಹಲವು ಗುಡ್ಡಗಳಲ್ಲಿ ಒಂದರಲ್ಲಿನ ವಿಶಾಲ (2x2 ಮೀಟರಿಗಿಂತಲೂ ಹೆಚ್ಚು) ತೆರೆದ ಅವಕಾಶದಲ್ಲಿ ಇತಿಹಾಸಕಾಲದಲ್ಲಿ ಚಿತ್ರಿತಗೊಂಡಿರುವ ಕೆಂಗಾವಿ (Red ochre) ಬಣ್ಣಗಳ ಚಿತ್ರಗಳು ಹಲವು ಘಟ್ಟಗಳಲ್ಲಿ ಚಿತ್ರಿಸಿ ಕೊಂಡಿವೆ.[7] ಪ್ರಾಣಿ, ಪಕ್ಷಿ, ಮನುಷ್ಯರೇ ಅಲ್ಲದೆ ವೈವಿಧ್ಯಮಯ ಜ್ಯಾಮಿತೀಯ ರೇಖಾರೂಪ ಇತ್ಯಾದಿಗಳನ್ನು ಅಲೆಮಾರಿ ಪ್ರವೃತ್ತಿಯ ನನ್ನ ಹಲವು ಭೇಟಿಗಳಲ್ಲಿ ಒಮ್ಮೆ ಆ ಹಿಂದಿನ ಹಲವು ಭೇಟಿಗಳಲ್ಲಿ ನೋಡಿದಂತೆ ನೋಡುತ್ತಾ, ಛಾಯಾಚಿತ್ರಗಳನ್ನು ತೆಗೆಯುತ್ತಾ ಒಬ್ಬನೇ ಪರಿಶೀಲಿಸುತ್ತಿದ್ದಾಗ ಇವೆಲ್ಲವುಗಳ ಜತೆಗೇ ಮುಖದ ಉಬ್ಬುರೂಪವೂ ಶಿಲಾ ಚಿತ್ರಭಿತ್ತಿಯ ಬಲಬದಿಗೆ ಕಂಡಿತು! ಈ ಮುಖದ ಚಪ್ಪಟೆ ಉಬ್ಬುಶಿಲ್ಪವನ್ನು ಮನುಷ್ಯರ ಕೈ ಸ್ಪರ್ಶದಿಂದ ರೂಪಿಸಲಾಗಿರುವುದು ಸ್ಪಷ್ಟ. ಕಲ್ಲಿನ ರಚನಾಸಹಜತೆಯಿಂದ ಉಂಟಾಗಿರುವ ರಾಸಾಯನಿಕ ಪ್ರಕ್ರಿಯೆಯ ಶಿಥಿಲತೆಯನ್ನು ಕಣ್ಣಾಗಿ ಗ್ರಹಿಸಿ, ಮೂಗು ತುಟಿಗಳೆಡೆ ಕಲ್ಲನ್ನು ಕೆತ್ತಿ ತೆಗೆಯಲಾಗಿದೆ. ಮುಖದ ನೋಟವು ಅಲ್ಲಿನ ಚಿತ್ರಲೋಕದ ವಿರಾಟ್ ಸ್ವರೂಪವನ್ನು ದರ್ಶಿಸುವಂತಿದೆ. ಮುಖದ ಮೇಲೂ ಸಾಂಕೇತಿಕ ರೂಪಗಳು ರೇಖಿಸಲ್ಪಟ್ಟಿರುವುದರ ಸೂಚನೆಗಳಿವೆ.

6. ಆದಿಮ ಸೌಂದರ್ಯದ ದುಂಡುಮುಖ

ಐತಿಹಾಸಿಕವೇ ಅಲ್ಲದೆ ಆದಿಮ ಕಾಲೀನ ಚಹರೆಗಳನ್ನೂ ಉಳಿಸಿ ಕೊಂಡಿರುವ ಯಾದಗಿರಿ ಪಟ್ಟಣದ ಬೆಟ್ಟಕ್ಕೆ ಪೂರ್ವಾಭಿಮುಖವಾಗಿ ಇರುವ ಯಾದಗಿರಿ – ಗುರುಮಠಕಲ್ ರಸ್ತೆಯ ಎಡಭಾಗದಲ್ಲಿ ವಿಶಾಲ ನೀರಿನ ಆಸರೆಗಳಿದ್ದರೆ ಬಲಭಾಗದಲ್ಲಿ ಹಲವಾರು ಶಿಲಾಶ್ರಯಗಳು ಅಭಿವೃದ್ಧಿ ರಾಜಕಾರಣಕ್ಕೆ ಬಲಿಯಾಗಿವೆ. ಒಂದು ಶಿಲಾಶ್ರಯದ ಬಂಡೆಗಳು ಮಾಯ ವಾಗಿದ್ದು ಬೃಹತ್ ಮಾನವ ತಲೆ ಗ್ರಾನೈಟ್ ಶಿಲ್ಪವೊಂದು ಉಳಿದು ಕೊಂಡಿದೆ. ಈ ಮೊದಲೆ ಸೂಚಿಸಿರುವಂತೆ ಆದಿಮ ಜನರ ಮನಸ್ಸು ಮತ್ತು ಕರಕುಶಲತೆಗಳು ಸ್ಪರ್ಶಿಸಿರುವ ಶಿಲಾಶಿಲ್ಪವಿದು. ಕಾಲದ ಪ್ರಭಾವದಿಂದ ಶಿಲೆಯ ಮೇಲ್ಮೈಯಲ್ಲಿ ಉಂಟಾಗಿರುವ ರಾಸಾಯನಿಕ ಪ್ರಕ್ರಿಯೆಯ ಕಪ್ಪುಬಣ್ಣದ ನೀಳ ರೇಖೆಯನ್ನು ಮೂಗಿನ ರೇಖೆಯಂತೆ ಭಾವಿಸಲಾಗಿದೆ. ಕಣ್ಣು ಮತ್ತು ತುಟಿ, ಹಲ್ಲುಗಳನ್ನು ಲಭ್ಯಪರಿಕರಗಳ ನೆರವಿನಿಂದ ಶಿಲೆಯ ಮೇಲ್ಮೈಯನ್ನು ಕೆತ್ತಿ, ಕೊರೆದು ರೂಪಿಸಿ ಮುಖದ ಭಾವವನ್ನು ಮೂಡಿಸಲಾಗಿದೆ. ಆ ರಸ್ತೆಯಲ್ಲಿ ಹೋಗುವ ವಿಶಿಷ್ಟ ಕಣ್ಣು ಇರುವವರಿಗೆ ಮಾತ್ರ ಈ ಶಿಲ್ಪವು ಅಪರೂಪದ ರೂಪವಾಗಿ ನಿಗೂಢತೆಯನ್ನು ಹೊಂದಿದ ಶಿಲ್ಪವಾಗಿ (ಚಿತ್ರ–6 (ಎ)) ಕಾಣಬಲ್ಲದು. ಆದಿಮ ಕಲೆಯ ಬಹುಮುಖ್ಯ ಲಕ್ಷಣವಾದ ವಿಕೃತಿ ಸೌಂದರ್ಯವನ್ನು

(Aesthetics of Distortion) ಉತ್ತಮವಾಗಿ ಅರಗಿಸಿಕೊಂಡಿರುವ ಶಿಲ್ಪ ಇದು. 2010ರಲ್ಲಿ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಡವೇ ಅಲ್ಲದೆ ಯಾದಗಿರಿ ಬಳಿಯ ಬಳಿಚಕ್ರ, ಕೊಡೇಕಲ್ಲು, ಗುರುಮಠಕಲ್ಲುಗಳಿಗೆ ನೀಡಿದ ಭೇಟಿಗಳ ಸಂದರ್ಭದಲ್ಲಿ ಈ ವಿಶಿಷ್ಟ, ವಿಚಿತ್ರ ಮುಖವು ನನ್ನೊಂದಿಗೆ ಮುಖಾಮುಖಿಯಾಯಿತು. ಈ ಮುಖದ ಶಿಲ್ಪದ ಮುಂದಿನ ಆವರಣವು ಅಂದಿನ ಸಂದರ್ಭದ ಆದಿಮ ಆಚರಣೆಗಳಿಗೆ ಸಾಕ್ಷಿಯಾಗಿರುವಂತಿದೆ. ಇಂತಹ ನೆಲೆಗಳು ಸೂಕ್ತ ರಕ್ಷಣೆ ಇಲ್ಲದೆ ಮಾಯವಾಗುವ ಮೊದಲೇ ಪುರಾತತ್ವ ತಜ್ಞರು ಈ ಶಿಲ್ಪಗಳ ಅಧ್ಯಯನವೇ ಅಲ್ಲದೆ ಸಂರಕ್ಷಣೆಗೂ ನೆರವಾಗಬೇಕಾಗಿದೆ.



6 (ಎ) ಯಾದಗಿರಿ ಆದಿಮ ಮುಖಶಿಲ್ಪದ ಒಂದು ನೋಟ.

ಕೊನೆಯ ಟಿಪ್ಪಣಿಗಳು

1. ಆದಿಮ ಕಲೆ ಎಂದರೆ ಪ್ರಕೃತಿ ಸಹಜ ಪ್ರಭಾವೀ ರೂಪಾಂತರಗಳಲ್ಲದ ಕಲೆ. ಆದಿಮಜನರ ಮನಸ್ಸು ಮತ್ತು ಕೈಚಳಕ / ಕಸುಬು / ಕುಶಲತೆಗಳ ಸ್ಪರ್ಶದಿಂದ ಮೂಡಿಬಂದ ಚಿತ್ರ, ಶಿಲ್ಪಗಳು. ಬಾದಾಮಿ, ಹಂಪೆ, ರಾಯಚೂರು, ಯಾದಗಿರಿ ಸುತ್ತ ಮುತ್ತಲಿನ ಶಿಲಾಶ್ರಯ ಚಿತ್ರಗಳು, ಕೂಡಲಗಿ ಹತ್ತಿರದ ಕುಮತಿಯ ಬೃಹತ್ ಶಿಲಾಯುಗದ ಗ್ರಾನೈಟ್ ಮಾನವರೂಪೀ ಚಪ್ಪಟೆ ಶಿಲ್ಪಗಳು ಲೋಹದ ಚೂಪುಮೊನೆಯಿಂದ ಕೊರೆದ ಕಲ್ಲಿನಿಂದ ಕುಟ್ಟಿದ, ಉಜ್ಜಿದ ಪ್ರಕ್ರಿಯೆಗಳಿಂದ ಉಂಟಾದ ಚಿತ್ರಗಳು ಮೇಲಿನ ಅಂಶಕ್ಕೆ ಪೂರಕ ಉದಾಹರಣೆಗಳಾಗುತ್ತವೆ.
2. ಇಂತಹ ರೂಪಗಳು ಕೆಂಗಾವಿ ಬಣ್ಣದಲ್ಲಿ ಆನೆಗೊಂದಿ ಬಳಿಯ ರಾಮಾಪುರದ ಒನಕೆ ಕಿಂಡಿ ಶಿಲಾಶ್ರಯ ಒಂದರಲ್ಲಿವೆ. ಟೇಕಲ್‌ನಲ್ಲಿರುವಂತೆಯೇ ಲೇಪಾಕ್ಷಿ ದೇವಾಲಯಕ್ಕೆ ಒಂದೆರಡು ಕಿ.ಮೀ. ಅಂತರದ ಶಿಲಾಶ್ರಯವೊಂದರಲ್ಲಿಯೂ ಕೊರೆದು ರೇಖಿಸಿದ ವೃತ್ತ ಮತ್ತು ತ್ರಿಶೂಲಗಳನ್ನು ಗಮನಿಸಿದ್ದೇನೆ. ಬಹುಶಃ ಇವು ಇತಿಹಾಸಕಾಲದ್ದು ಇರಬಹುದು. ಟೇಕಲ್‌ಗೆ ಕೆಲವೇ ಕಿ.ಮೀ.ಗಳ ಸಮೀಪದಲ್ಲಿ ಹೈದರಾಲಿಯು ಹುಟ್ಟಿದ ಬೂದಿಕೋಟೆ ಸ್ಥಳವು ಇದೆ.
3. ಆದಿಮ ಪ್ರಜ್ಞೆಯ ಜನರಿಗೆ ದೃಶ್ಯಲೋಕದ ಜತೆಜತೆಗೇ ಶಬ್ದಲೋಕದ ಅನುಭವವೂ ಸಹಜವಾಗಿ ಇದ್ದಿತು. ಹಲವು ಶಿಲಾಶ್ರಯ ನೆಲೆಗಳ ಆವರಣಗಳಲ್ಲಿ ವಿಶಿಷ್ಟ ಮೌನವೂ ಮನೆಮಾಡಿದೆ. ಭೂಪಾಲ್ ಸಮೀಪದ ಭೀಮ್‌ಬೇಡ್ಕಾದ Audience Hall, ಮಲ್ಲಾಪುರದ ಖಾನ್‌ಸಾಬ್ ಚಿತ್ರಗುಹೆ, ಬಾದಾಮಿಯ ಸಿಡಿಲಪಡಿ ಇತ್ಯಾದಿ ಆವರಣಗಳು ಇಲ್ಲಿ ನೆನಪಾಗುತ್ತವೆ.

   ಶಬ್ದ, ಸಂಕೇತ ರವಾನೆಗೆ ಆದಿಮ ಜನರು ಶಿಲಾಪದರಗಳಿಗೆ ಕಿವಿಯಿಟ್ಟು ಗ್ರಹಿಸುವಂತೆ ಶಿಲಾಶ್ರಯಗಳಲ್ಲಿ ಒಂದು ನಿರ್ದಿಷ್ಟ ಕಲ್ಲಿನ, ನಿರ್ದಿಷ್ಟ ಸ್ಥಳಾವಕಾಶಗಳಲ್ಲಿ ಮತ್ತೊಂದು ಕಲ್ಲಿನಿಂದ ಕುಟ್ಟಿ, ಬಡಿದು ಶಬ್ದ ಸಂಕೇತಗಳನ್ನು ಒಳಗಿನವರಿಗೆ ರವಾನಿಸುವ ಸಾಧ್ಯತೆಗಳನ್ನು ಊಹಿಸಬಹುದಾಗಿದೆ. ಹಾಗೆಯೇ ನಿರ್ದಿಷ್ಟ ಆಚರಣೆಗಳ ಸಂಬಂಧೀ ಶಬ್ದ ಸೃಷ್ಟಿಗೂ ಈ ಕಲ್ಲುಗಳನ್ನು ಕುಟ್ಟಿಕುಳಿಗಳಾಗಿಸಿರಬಹುದು. ಇಂತಹ ಊಹೆಗಳಿಗೆ ಕಾರಣವಾಗುವಂತಹ ಉದಾಹರಣೆಗೆ ಪೂರಕವಾದ ಕಲ್ಲಿನ ಮೇಲೆ ಹಲವೆಡೆ ಹಲವು ಬಾರಿ ಕುಟ್ಟಿರುವಿಕೆಗಳು ಹಂಪಿಯ ಮಸಲಯ್ಯನಗುಡ್ಡದ ಎರಡು ಶಿಲಾಶ್ರಯಗಳಲ್ಲಿವೆ. ಅಲ್ಲಿ ನಿರ್ದಿಷ್ಟವಾದ ಒಂದೇ ಕಲ್ಲನ್ನು ಹಲವೆಡೆ ಹಲವು ಬಾರಿ ತಾಡನ / ಹೊಡೆದು ಉಂಟು ಮಾಡಿರುವ ನಿಮ್ನ ಅವಕಾಶದ ಹಲವಾರು ಗುರುತುಗಳು ಎರಡೂ ಶಿಲಾಶ್ರಯಗಳಲ್ಲಿವೆ. ಅವು ಸುರಕ್ಷಿತ ಸ್ಥಳಗಳಲ್ಲಿರುವುದರಿಂದ ಇಂದಿಗೂ ಸ್ಪಷ್ಟವಾಗಿ ನಮ್ಮ ಕಣ್ಣಿಗೆ ಬೀಳುತ್ತವೆ. ಧ್ವನಿಶಾಸ್ತ್ರ ಸಂಬಂಧಿ ಶಬ್ದದ ಪುರಾತತ್ತ್ವತೆಯನ್ನು ಧ್ವನಿ ವೈಜ್ಞಾನಿಕರು ಅನ್ವೇಷಿಸುವ ನಿಟ್ಟಿನಲ್ಲಿ ನಮ್ಮಲ್ಲಿ ಗಮನ ನೀಡಬೇಕಿದೆ. ಇತಿಹಾಸಪೂರ್ವ ಮತ್ತು ನಂತರದ ಕಾಲಗಳಲ್ಲಿ ಶಿಲಾಶ್ರಯ ನೆಲೆಗಳನ್ನು ಹೇಗೆಲ್ಲಾ ಬಳಸಲು ಪ್ರಯತ್ನಿಸಿರಬಹುದು! ಪ್ರಕೃತಿಯು ನಿಶ್ಯಬ್ದವಾದ ಶಬ್ದವನ್ನೂ ಸೃಷ್ಟಿಸಬಲ್ಲದು. ಕೆಲವು ಮಿತಿಗಳಿಂದಾಗಿ ಮನುಷ್ಯನು ಅದನ್ನು ಕೇಳಲಾರ ಎಂದೂ ಹೇಳಲಾಗಿದೆ. ಪ್ರಾಣಿಗಳು ಈ ಶಬ್ದವಿಲ್ಲದ ನಿಶ್ಯಬ್ದವನ್ನು ಉಂಟು ಮಾಡಬಲ್ಲವೆಂದೂ ಹೇಳಲಾಗಿದೆ. ಪ್ರಕೃತಿಯ ಭಾಗವೇ ಆಗಿದ್ದ ಆದಿಮ ಜನರು ಈ ನಿಶ್ಯಬ್ದವನ್ನು ಗ್ರಹಿಸಬಲ್ಲವರಾಗಿದ್ದಿರಬೇಕು. ಹಾಗಾಗಿ ಸ್ಥಳ, ಶಬ್ದ ಮತ್ತು ಸ್ಮೃತಿಗಳು ಶಿಲಾಶ್ರಯಗಳಲ್ಲಿ ನೆಲೆಸಿದ್ದವರನ್ನು ಪ್ರಭಾವಿಸಿರುವ ಊಹೆಗಳೂ ಪುರಾವೆಗಳ ಅನ್ವೇಷಣೆಯಿಂದ ನಿಜವಾಗಬಲ್ಲದಿನಗಳು ಬರಬಹುದು.
4. ಆನೆಗೊಂದಿ ಬಳಿಯ ರಾಮಾಪುರದ ಒನಕೆ ಕಿಂಡಿಯ ಶಿಲಾಶ್ರಯವೊಂದರಲ್ಲಿ ಕಿಂಡಿಯನ್ನು ಶಿಲೆಯ ಶಿಥಿಲತೆಯನ್ನು ಬಳಸಿಕೊಂಡು, ಕಿಂಡಿಯಿಂದ ಹೊರಬಂದ ಹಾವು ಹೆಡೆಯನ್ನು ತೆರೆದಿರುವಂತೆ ಚಿತ್ರಿಸಲಾಗಿದೆ.
5. N.Chandramouli, 2003, 'Rock art of Andhra Pradesh', Edited by M.L.K. Murty, *Pre and Proto historic Andhra Pradesh up to 500 B.C, Kuppam*, Orient Longman: Chennai. Page:156.
6. ಇಲ್ಲೇ, ಪುಟ: 152, 155.
7. ಅ.ಸುಂದರ, 1994, **ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ**, ಕರ್ನಾಟಕ ಲಲಿತ ಕಲಾ ಅಕಾಡೆಮಿ: ಬೆಂಗಳೂರು. ಪುಟ: 29–30.

■

ಗವಿ/ಕಲ್ಲಾಸರೆಯಲ್ಲಿ ಪ್ರಾಚೀನ ಕರ್ನಾಟಕ ಸಂಸ್ಕೃತಿ

ಮೋಹನ ಆರ್.
ಸಹಾಯಕ ಪ್ರಾಧ್ಯಾಪಕರು
ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕರ್ನಾಟಕ ಕೇಂದ್ರಿಯ
ವಿಶ್ವವಿದ್ಯಾಲಯ, ಕಲಬುರಗಿ
ಹಾಗೂ ಪೋಸ್ಟ್ ಡಾಕ್ಟರಲ್ ಫೆಲೋ
ಡೆಕ್ಕನ್ ಕಾಲೇಜ್, ಪುಣೆ.
mohangulya@gmail.com


ಪ್ರಾಚೀನ ಮಾನವನ ಬಗ್ಗೆ ತಿಳಿಯಲು ಇರುವ ಆಕರಗಳಲ್ಲಿ ವರ್ಣಚಿತ್ರಕಲೆಯು ಪ್ರಮುಖವಾದದ್ದು. ಯಾಕೆಂದರೆ ಅವರ ದಿನನಿತ್ಯದ ಚಟುವಟಿಕೆಗಳನ್ನು ಅಂದರೆ ಆಹಾರ ಸಂಗ್ರಹಣೆ, ಬೇಟೆಗಾರಿಕೆ, ಮನೋರಂಜನೆ, ಸಾಮಾಜಿಕ, ಧಾರ್ಮಿಕ ವಿಧಿವಿಧಾನಗಳನ್ನು ಕೂಲಂಕಷ ಅಧ್ಯಯನದಿಂದ ಅರ್ಥೈಸಿಕೊಳ್ಳಬಹುದು. ಗವಿ/ಕಲ್ಲಾಸರೆಗಳಲ್ಲಿನ ಪ್ರಾಚೀನ ಕರ್ನಾಟಕ ಸಂಸ್ಕೃತಿಯು ಸುಮಾರು 25,000 ವರ್ಷಗಳಷ್ಟು ಪ್ರಾಚೀನತೆಯನ್ನು ಹೊಂದಿದ್ದು, ಇಲ್ಲಿ ದೊರೆತಿರುವ ಪ್ರಾಗ್ಯೈತಿಹಾಸಿಕ ಚಿತ್ರಕಲೆಯ ವೈಶಿಷ್ಟತೆಯಯನ್ನು ಆಧಾರಿಸಿ ವಿಶ್ಲೇಷಿಸಬಹುದು. ಈ ಚಿತ್ರಕಲೆಯನ್ನು ಪ್ರಮುಖವಾಗಿ ಎರಡು ವರ್ಗಗಳಾಗಿ ವಿಂಗಡಿಸಿದ್ದು, ಅವುಗಳೆಂದರೆ:

1. **ವರ್ಣಚಿತ್ರಕಲೆ (Pictograph) (ಚಿತ್ರ1):** ನೈಸರ್ಗಿಕವಾಗಿ ದೊರಕುವ ಗಿಡಮೂಲಿಕೆ ಮತ್ತು ಖನಿಜಾಂಶಗಳಿಂದ ತಯಾರಿಸಿ ಕೊಳ್ಳುತ್ತಿದ್ದ ಉರುಮಂಜಿ ವರ್ಣಚಿತ್ರಗಳು ಪ್ರಮುಖವಾಗಿದ್ದು, ಅವು ಬಿಳಿ, ಹಳದಿ, ಹಸಿರು ಮತ್ತು ಕಪ್ಪು ಬಣ್ಣದಲ್ಲಿವೆ.
2. **ಪೆಟ್ರೊಗ್ಲಿಪ್ಸ್ (Petroglyphs) (ಚಿತ್ರ 2):** ವರ್ಣಚಿತ್ರಗಳಿಗೆ ಹೊರತಾದ ಚಿತ್ರಾಕೃತಿಗಳಾಗಿದ್ದು ಅದರಲ್ಲಿ ಮೂರು ಬಗೆಗಳಿವೆ.


ಅ. ಕುಟ್ಟು ಚಿತ್ರಗಳು (Bruising)

ಆ. ಗೀರು/ರೇಖಾ ಚಿತ್ರಗಳು (Engraving)


ಇ. ಕಲ್ಗುಳಿಗಳು (Cupule/Cup-mark)



ಚಿತ್ರ 1 .ವರ್ಣಚಿತ್ರಕಲೆ (Pictograph) – ಹಿರೇ ಗುಡ್ಡ: ಉರುಮಂಜಿ; ಹುಲಿ ಘಡಿ: ಬಿಳಿ ವರ್ಣಚಿತ್ರ



ಚಿತ್ರ 2 ಪೆಟ್ರೊಗ್ಲಿಫ್ (Petroglyphs)



ಚಿತ್ರ 3. ಕರ್ನಾಟಕ ಪ್ರಾಗಿತಿಹಾಸ ಕಲೆಯ ನೆಲೆಗಳು

ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಹೆನ್‌ವುಡ್'ರವರು 1856 ರಲ್ಲಿ ಉತ್ತರ ಖಂಡ್ ರಾಜ್ಯದ ಅಲ್‌ಮೋರ ನೆಲೆಯಲ್ಲಿ ಗೀರು/ರೇಖಾ ಚಿತ್ರಗಳನ್ನು ಬೆಳಕಿಗೆ ತಂದರು. ಇದು ಭಾರತದಲ್ಲಿ ಅಲ್ಲದೇ ಪ್ರಪಂಚದಲ್ಲಿಯೇ ಮೊದಲಿನದ್ದು. ನಂತರ ಸಾಕಷ್ಟು ಸಂಶೋಧನೆಗಳು ನಡೆದಿದ್ದರೂ ವ್ಯವಸ್ಥಿತ ಹಾಗೂ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅಧ್ಯಯನಗಳು ಪ್ರಾರಂಭವಾಗಿದ್ದು 1957 ರಲ್ಲಿ ಭೀಂಬೆಟ್ಕ್ ನೆಲೆಯನ್ನು ವಿ. ಎಸ್. ವಾಕನ್‌ಕರ್[2-3]ರವರು ಬೆಳಕಿಗೆ ತಂದ ನಂತರ. ಹಾಗೆಯೇ ದಕ್ಷಿಣ ಭಾರತದಲ್ಲಿಯು ಸಾಕಷ್ಟು ಸಂಶೋಧನೆಗಳು ನಡೆದಿದ್ದು ಅದರಲ್ಲಿ ಪ್ರಮುಖವಾಗಿ ಕರ್ನಾಟಕದಲ್ಲಿ ಇದುವರೆಗೂ ನಡೆದ ಸಂಶೋಧನೆಗಳಿಂದ ಸುಮಾರು 160ಕ್ಕೂ ಹೆಚ್ಚು ಪ್ರಾಗಿತಿಹಾಸ ಕಲೆಯ ನೆಲೆಗಳು (ಚಿತ್ರ 3) ಬೆಳಕಿಗೆ ಬಂದಿದ್ದು, ಅವುಗಳ ಒಂದು ಕಿರು ಪರಿಚಯವನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.

ಕರ್ನಾಟಕದಲ್ಲಿ 1892 ರಲ್ಲಿ ಫಾಸೆಟ್[4]ರವರು ಬಳ್ಳಾರಿ ಸಮೀಪವಿರುವ ಕಪ್ಪಗಲ್ಲು (ಕುಪ್‌ಗಲ್) ನೆಲೆಯಲ್ಲಿ ಕುಟ್ಟು/ರೇಖಾ ಚಿತ್ರಗಳನ್ನು ಮೊದಲು ಶೋಧಿಸಿದರು. ಇದು ದಕ್ಷಿಣ

ಭಾರತದಲ್ಲಿಯೇ ಮೊದಲಿನದ್ದಾಗಿದೆ. ನಂತರ 1915ರಲ್ಲಿ ಲಿಯೋನಾರ್ಡ್‌ಮನ್[5-6] ರವರು ಹಿರೇಬೆನಕಲ್ ಗುಡ್ಡ ಪ್ರದೇಶಗಳಲ್ಲಿ (ಗಂಗಾವತಿ ತಾಲ್ಲೂಕು) ಮೂರು ಗವಿ ವರ್ಣಚಿತ್ರಗಳನ್ನು ಹಾಗೂ ಭಿಲ್ಲಮರಾಯನ ಗುಡ್ಡದಲ್ಲಿ ಕುಟ್ಟು/ಗೀರು ಚಿತ್ರಗಳನ್ನು ಶೋಧಿಸಿದ್ದರು.


ಲಿಯೋನಾರ್ಡ್‌ಮನ್‌ಅವರ ಶೋಧನೆಯ ನಂತರ 1940ರ ದಶಕದಲ್ಲಿ ಮಸ್ಕಿ ಕಲ್ಲೂರು (ರಾಯಚೂರು ತಾಲ್ಲೂಕು) ಬಲಚಕ್ರ (ಯಾದಗಿರಿ ತಾಲ್ಲೂಕು) ಮತ್ತು ಆತನೂರು ಎಂಬಲ್ಲಿ ಹಿಂದಿನ ಹೈದರಾಬಾದ್ ಸಂಸ್ಥಾನದ ಪುರಾತತ್ವ ಸರ್ವೇಕ್ಷಣ ಮತ್ತು ಭೂ ವಿಜ್ಞಾನ ಇಲಾಖೆಗಳು ಕುಟ್ಟು ಮತ್ತು ವರ್ಣ ಚಿತ್ರಗಳನ್ನು ಶೋಧಿಸಿ ತಮ್ಮ ಶಾಖೆಗಳ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿದೆ. ಆಗಿನ ಮುಂಬೈ ಸರ್ಕಾರದ ಕನ್ನಡ ಸಂಶೋಧನ ಸಂಸ್ಥೆಯು ಕುಳ್ಳೊಳ್ಳಿಯಲ್ಲಿ ಗೀರು/ಕುಟ್ಟಿದ ಚಿತ್ರಗಳನ್ನು ಬೆಳಕಿಗೆ ತಂದಿತ್ತು. ಆಲ್ಚಿನ್[7-8]ರವರು ಪಿಕ್ಲಿಹಾಳ್‌ನಲ್ಲಿ ಕುಟ್ಟು ಮತ್ತು ಗೀರುಚಿತ್ರಗಳನ್ನು ಶೋಧಿಸಿ ಅವುಗಳ ಕಾಲಮಾನವನ್ನು ಈ ನೆಲೆಯಲ್ಲಿಯೇ ಕೈಗೊಂಡ ಭೂ ಉತ್ಖನನದ ಮೂಲಕ ನವಶಿಲಾಯುಗಕ್ಕೆ ಸೇರಿದ್ದಾವೆಂಬುದನ್ನು ದೃಢಪಡಿಸಿದ್ದಾರೆ.

ಕರ್ನಾಟಕದ ಪ್ರಾಗಿತಿಹಾಸಿಕ ಕಾಲದ ಕಲೆಯ ಶೋಧನೆ ಮತ್ತು ಅಧ್ಯಯನ ಕ್ಷೇತ್ರದಲ್ಲಿ ಅ. ಸುಂದರ, ಶರಣಬಸಪ್ಪ ಕೊಲ್ಕರ್ ಮತ್ತು ಪ್ರಸ್ತುತ ಲೇಖಕರ ಕೊಡುಗೆ ಅಪೂರ್ವವಾಗಿದೆ. ಅದರಲ್ಲಿ ಅ. ಸುಂದರ[9-15]ರವರು ವ್ಯವಸ್ಥಿತ ಅಧ್ಯಯನಕ್ಕೆ ನಾಂದಿಹಾಡಿದ್ದರು. ಸುಂದರ ಅವರು 1968 ರಲ್ಲಿ ಲಿಯೋನಾರ್ಡ್‌ಮನ್ ರವರು ಹಿರೇಬೆನಕಲ್ಲಿನಲ್ಲಿ ಶೋಧಿಸಿದ ಚಿತ್ರಗಳ ಕಲ್ಲಾಸರೆಗಳನ್ನು ಹುಡುಕುವ ಸಂದರ್ಭದಲ್ಲಿ ಇನ್ನೂ ಒಂಬತ್ತು ಹೊಸ ಕಲ್ಲಾಸರೆಗಳನ್ನು ಬೆಳಕಿಗೆ ತಂದರು. ತದನಂತರ ಅವರು ಕರ್ನಾಟಕದ ಹಲವಾರು ಭಾಗಗಳಲ್ಲಿ ಭೂ ಅನ್ವೇಷಣೆ ಕಾರ್ಯವನ್ನು ಕೈಗೊಂಡು ಮಲಪ್ರಭಾ ನದಿತೀರದ ರಾಮದುರ್ಗ, ಬಾದಾಮಿ, ಹೊಸಮಹಾಕೂಟ, ಐಹೊಳೆ; ತುಂಗಭದ್ರ ನದಿತೀರದ ಬಿಳೆಬಾವಿ, ನಾರಾಯಣಪೇಟೆ, ಬಂಡಿಹರ್ಲಾಪುರ, ಮಲ್ಲಾಪುರ, ಆನೆಗೊಂದಿ, ತಿರುಮಲಾಪುರ, ಮಾನ್ವಿ, ಬೈಲಮರ್ಚೇಡ್, ತಾವರೆಗೆರೆ, ಕುರುಗೋಡು, ಹಳಕುಂದಿ; ಹೊಳಲೂರು, ಮುತ್ತನಹಳ್ಳಿ (ಶಿವಮೊಗ್ಗ ತಾ.) ವೇದಾವತಿ (ಹಗರಿ) ನದಿ ತೀರದ ಬ್ರಹ್ಮಗಿರಿ, ಜಟ್ಟಂಗರಾಮೇಶ್ವರ, ಬೂದರ ದಿಬ್ಬ, ಚಂದ್ರವಳ್ಳಿ (ಚಿತ್ರದುರ್ಗ ಜಿಲ್ಲೆ); ಮತ್ತು ಕೊಂಕಣ ತೀರ ಪ್ರದೇಶದ ಬೋಳೆ; ಹಾಗೂ ಹಿರೇಮಾದಾಪುರ (ಧಾರವಾಡ ಜಿಲ್ಲೆ) ನಲ್ಲಿ ಪ್ರಾಗಿತಿಹಾಸ ಕಾಲದ ಚಿತ್ರಗಳನ್ನು ಬೆಳಕಿಗೆ ತಂದಿದ್ದಲ್ಲದೆ ಶೋಧಿಸಿದ್ದನ್ನೆಲ್ಲಾ ಪುನರ್ ಅಧ್ಯಯನ ಮಾಡಿ, **'ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ'** (ಚಿತ್ರ 4ಅ) ಶೀರ್ಷಿಕೆಯಡಿ ಹೊತ್ತಿಗೆಯನ್ನು ಹಾಗೂ ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವರು ವರ್ಣ/ರೇಖಾ ಚಿತ್ರಗಳನ್ನಲ್ಲದೇ ಅನೇಕ ಪುರಾತತ್ವ ನೆಲೆಗಳನ್ನು ಶೋಧಿಸಿ ಕರ್ನಾಟಕ ಸಂಸ್ಕೃತಿಗೆ ಹೊಸ ಮೆರುಗನ್ನು ನೀಡಿದ್ದಾರೆ. ಇವರ ಹಾದಿಯಲ್ಲಿ ಶರಣಬಸಪ್ಪ ಕೋಲ್ಕಾರ[16]ರವರು ಅವರ ಪಿಎಚ್.ಡಿ. ಮಹಾಪ್ರಬಂಧ ವರ್ಣ/ರೇಖಾಚಿತ್ರವನ್ನು ವಸ್ತುವಿಷಯವನಾಗಿಸಿಕೊಂಡು ತುಂಗಭದ್ರ ನದಿ ತೀರದ ಕೊಪ್ಪಳ-ಹಂಪಿ ಪ್ರದೇಶವನ್ನು ಅನ್ವೇಷಣೆ ಮಾಡಿ ಸುಮಾರು 17 ಹೊಸ ನೆಲೆಗಳ ಜೊತೆಗೆ ಒಟ್ಟಾರೆ 76 ಹೊಸ ಗವಿ/ಕಲ್ಲಾಸರೆಗಳನ್ನು ಶೋಧಿಸಿ ಕರ್ನಾಟಕ ಪುರಾತತ್ವ ಲೋಕಕೆ ಅದ್ವಿತೀಯ

ಕೊಡುಗೆಯನ್ನು ನೀಡಿದ್ದಾರೆ. ಆ ನೆಲೆಗಳೆಂದರೆ ಇಂದರಗಿ, ಹೊಸಬಂಡಿಹರ್ಲಾಪುರ, ಚಿಕ್ಕ ಬೆಣಕಲ್, ಎಮ್ಮಿಗುಡ್ಡ, ಗಡ್ಡಿ, ಅಗೋಲಿ, ಹಂಪನದುರ್ಗ, ಬೊಮ್ಮಸಾಗರತಾಂಡಾ, ರಾಮದುರ್ಗ, ತೆಂಬಾ, ಸಂಗಾಪುರ, ಗೂಗಿಬಂಡೆ, ರಾಂಪುರ, ನಾಗೇನಹಳ್ಳಿ, ಬಸಾಪಟ್ಟಣ, ಹಿಟ್ಟಿಕೇರಿ, ಮತ್ತು ಮಲ್ಲಾಪುರ. ಈ ನೆಲೆಗಳನೆಲ್ಲ ಕ್ರೋಢಿಕರಿಸಿ 2010ರಲ್ಲಿ **ಶಿಲಾಯುಗದ ಗವಿ ಚಿತ್ರಗಳು** (ಚಿತ್ರ 4ಅ)ಶೀರ್ಷಿಕೆಯ ಹೊತ್ತಿಗೆಯನ್ನು ಪ್ರಕಟಿಸಿದ್ದರು.

ಪ್ರಸ್ತುತ ಲೇಖಕರು[17-25]2012–15ರವರಗೆ ಮಲಪ್ರಭಾ ನದಿ ತೀರದಲ್ಲಿ ಪಿಎಚ್.ಡಿ. ಮಹಾಪ್ರಬಂಧ ಸಲುವಾಗಿ ಕೈಗೊಂಡ ಭೂ ಅನ್ವೇಷಣೆಯಲ್ಲಿ ಈ ತೀರದ 35 ನೆಲೆಗಳನ್ನು (ಚಿತ್ರ 5) ಕುರಿತು ವೈಜ್ಞಾನಿಕ ಅಧ್ಯಯನ ನಡೆಸಿದ್ದಲ್ಲದೆ ಸುಮಾರು 70 ಹೆಚ್ಚು ಹೊಸ ಕಲ್ಲಾಸರೆಗಳನ್ನು ಬೆಳಕಿಗೆ ತಂದರು. ಅದರಲ್ಲಿನ ಪ್ರಮುಖ ನೆಲೆಗಳೆಂದರೆ ಚಿಂಚಖಂಡಿ, ಗೂಗ್ಲಾಡಿ, ರಾಮದೇವರಗುಂಡು, ಹೊರಗಿನದುರ್ಗಮ್ಮಗುಡಿ, ಕೆಂದೂರುಕೆರೆಗೊಂದಿ, ದೊಡ್ಡದಮಳಿ, ಚಿಕ್ಕದಮಳಿ, ಹಂಸನೂರು.

ಈ ನದಿ ತೀರದಲ್ಲಿ ದೊರೆತಿರುವ ವರ್ಣಚಿತ್ರಗಳನ್ನು ಏಕ ದೃಷ್ಟಿಕೋನದಲ್ಲಿ ನೋಡುವುದಾದರೆ ಇವು ಭಾರತದ ಉಪಖಂಡದಲ್ಲಿಯೇ ಹೆಚ್ಚು ಪ್ರಾಚೀನತೆಯನ್ನು ಹೊಂದಿವೆ. ಉದಾಹರಣೆಗೆ: ಪ್ರಪಂಚದಲ್ಲಿಯೇ ಬಹುಶಃ ಪ್ರಥಮ ನಕಾಶೆಯ ಪ್ರಯತ್ನದ ವರ್ಣಚಿತ್ರವನ್ನು (ಚಿತ್ರ 6) ಬಾದಾಮಿ ಸಮೀಪದ ಅರೆಗುಡ್ಡ ನೆಲೆಯಲ್ಲಿನ ಆನೆಘಡಿ ಕಲ್ಲಾಸರೆಯಲ್ಲಿ ನೋಡಬಹುದು. ಒಂದು ವೇಳೆ ಹೆಚ್ಚಿನ ಅಧ್ಯಯನಗಳು ನಡೆದರೆ ಈ ವರ್ಣಚಿತ್ರವು ಪ್ರಪಂಚದ ಚಿತ್ತವನ್ನು ತನ್ನೆಡೆ ಸೆಳೆಯುವುದರಲ್ಲಿ ಯಾವುದೇ ಅನುಮಾನವಿಲ್ಲ.



ಚಿತ್ರ 4ಅ ಚಿತ್ರ 4ಆ



ಚಿತ್ರ 5. ಮಲಪ್ರಭಾ ನದಿ ತೀರದಲ್ಲಿನ ಪ್ರಾಗಿತಿಹಾಸ ಚಿತ್ರ ನೆಲೆಗಳು



ಚಿತ್ರ 6. ಅರೆ ಗುಡ್ಡ: ವಜ್ರಾಕೃತಿ, ಪ್ರಾಚೀನ ನಕಾಶೆ ಮತ್ತು ಪ್ರಾಣಿ-ಮನುಷ್ಯಾಕೃತಿ



ಚಿತ್ರ 7 ಅಗುಂದ ಗೊಲ್ಲರಪಟ್ಟಿ: ನಿಲುವು ಗಲ್ಲು ಮೇಲೆ ಕಲ್ಕುಳಿಗಳು

ವೇದಾವತಿ (ಹಗರಿ) ನದಿಯು ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿಯಲ್ಲಿ ಉಗಮಗೊಂಡು ಚಿತ್ರದುರ್ಗ, ಬಳ್ಳಾರಿ ಹಾಗೂ ಆಂಧ್ರ ಪ್ರದೇಶದ ಅನಂತಪುರಂ ಜಿಲ್ಲೆಗಳ ಮೂಲಕ ಹರಿದು ರಾಯಚೂರು ಜಿಲ್ಲೆಯ ಶಿರಗುಪ್ಪವೆಂಬಲ್ಲಿ ತುಂಗಭದ್ರ ನದಿಯೊಂದಿಗೆ ವಿಲೀನವಾಗುತ್ತದೆ. ವಿಶೇಷವೆಂದರೆ ಈ ನದಿಯು ಚಿತ್ರದುರ್ಗ ಜಿಲ್ಲೆಯ ಗಡಿ ದಾಟಿದ ನಂತರ ಹಗರಿ ಎಂಬ ನಾಮಾರ್ಥವನ್ನು ಪಡೆದುಕೊಳ್ಳುತ್ತದೆ. ಪುರಾತಾತ್ವಿಕವಾಗಿ ಈ ನದಿ ತೀರದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿದ್ದು ಇದುವರಗೂ 40 ಕ್ಕೂ ಹೆಚ್ಚು ವರ್ಣ/ರೇಖಾ/ಕಲ್ಗುಳಿ ನೆಲೆಗಳನ್ನು ಗುರುತಿಸಲಾಗಿದೆ. ಹೆಚ್ಚಿನ ಸಂಖ್ಯೆಯ ನೆಲೆಗಳು ಚಿತ್ರದುರ್ಗದ ಜಿಲ್ಲೆಯಲ್ಲಿ ಕೇಂದ್ರಿಕೃತವಾಗಿವೆ. ಎಚ್. ಶ್ರೀಶೈಲ ಆರಾಧ್ಯ[26]ರು ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯಲ್ಲಿ ವರ್ಣಚಿತ್ರ ಹಾಗೂ ಬಯಲುಬಂಡೆ. ಚಿತ್ರಗಳನ್ನು ತಮ್ಮ "ಸಂಶೋಧನೆಯ ಹಾದಿಯಲ್ಲಿ" ಎಂಬ ಹೊತ್ತಿಗೆ ಪ್ರಕಟಿಸಿದ್ದಾರೆ.

ಲಕ್ಷ್ಮಣ್ ತೆಲಗಾವಿ,[27–28] ಎಸ್. ತಿಪ್ಪೇಸ್ವಾಮಿ[29–30]ಯವರು ಹಲವಾರು ನೆಲೆಗಳನ್ನು ಈ ಗುಡ್ಡಗಳ ಪರಿಸರದಲ್ಲಿ ಶೋಧಿಸಿ ಹೆಚ್ಚಿನ ಅಧ್ಯಯನ ಮಾಡಿದ್ದಾರೆ. ಹಾಗೆಯೇ ಪ್ರಸ್ತುತ ದಿನಗಳಲ್ಲಿ ಲೇಖಕರು[31–32] ಈ ನೆಲೆಗಳ ಬಗ್ಗೆ ಸವಿವರವಾದ ಅಧ್ಯಯನ ಕೈಗೊಂಡು ಈ ನದಿ ತೀರದಲ್ಲಿ ಹಲವಾರು ನೆಲೆಗಳನ್ನು ಶೋಧಿಸಿದ್ದಾರೆ. ಅವುಗಳಲ್ಲಿ ಕೃಷ್ಣಪುರ (ತರೀಕರೆ ತಾ.) ಮತ್ತು ಧರ್ಮಪುರ (ಹಿರಿಯೂರು ತಾ.) ಮುಖ್ಯವಾದವು. ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಗವಿಮಠ, ಚೆಲುವನಹಳ್ಳಿ, ಭೈರಗೊಂಡನಹಳ್ಳಿ, ಬೆಂಡೆಕೆರೆ ಮತ್ತು ಯಡಪುರ ನೆಲೆಗಳನ್ನು ಹನುಮನಾಯಕ ಅವರು ಶೋಧಿಸಿದ್ದು, ಇವುಗಳ ಪುನರ್ ಸಂಶೋಧನೆಯ ವೇಳೆ ಪ್ರಸ್ತುತ ಲೇಖಕರು ಅಗುಂದ ಗೊಲ್ಲರಹಟ್ಟಿ ಸರಹದ್ದಿನಲ್ಲಿರುವ ಎರಡು ಪ್ರತ್ಯೇಕ ಕೃಷಿ ಭೂಮಿಯಲ್ಲಿರುವ ನಿಲುವು ಗಲ್ಲುಗಳ ಮೇಲ್ಭಾಗದಲ್ಲಿ ಕಲ್ಗುಳಿಗಳು (ಚಿತ್ರ 7) ಹೆಚ್ಚಿನ ಗಮನ ಸೆಳೆದಿದ್ದು ಹೆಚ್ಚಿನ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿದೆ.

ಕರ್ನಾಟಕದ ಕೊಂಕಣ/ಕರಾವಳಿ ತೀರ ಪ್ರದೇಶವು ಸುಮಾರು 300 ಕಿ.ಮೀ. ಸುತ್ತಳತೆಯನ್ನು ಹೊಂದಿದ್ದು, ಉಡುಪಿ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ಇದುವರೆಗೂ 8 ನೆಲೆಗಳನ್ನು ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಶೋಧಿಸಲಾಗಿದೆ. ಅದರಲ್ಲಿ ಕುಂದಾಪುರ ಹತ್ತಿರವಿರುವ ಗಾವಳಿ(ಚಿತ್ರ 8) ಯಲ್ಲಿ ಬಯಲುಬಂಡೆ ಮತ್ತು ಗೀರು ಚಿತ್ರಗಳನ್ನು ವಸಂತ ಶೆಟ್ಟಿ[33]ಯವರು, ಸೋಂದಾದಲ್ಲಿ ಎಚ್. ಆರ್. ರಘುನಾಥ್ ಭಟ್ಟರು ಚಿತ್ರಗಳನ್ನು ಶೋಧಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಟಿ. ಮುರುಗೇಶಿ[34] ರವರು ಮಂದಾರ್ತಿ, ಸುಬ್ರಮಣ್ಯ ನೆಲೆಗಳನ್ನು ಶೋಧಿಸುವ ಜೊತೆಗೆ ಬುದ್ಧನಜೇಡ್ಡು ಮತ್ತು ಇತರ ನೆಲೆಗಳ ಬಗ್ಗೆ ಹೆಚ್ಚಿನ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ವಿಶೇಷವೆನೆಂದರೆ ಇದುವರೆಗಿನ ಸಂಶೋಧನೆಗಳನ್ನು ಗಮನಿಸಿದರೆ ಈ ಪರಿಸರದಲ್ಲಿ ಯಾವುದೇ ವರ್ಣಚಿತ್ರ ನೆಲೆಗಳು ಕಂಡುಬಂದಿಲ್ಲ.



ಚಿತ್ರ 8. ಗಾವಳಿ: ಮಂಡಲ ಮತ್ತು ಗೂಳಿ ರೇಖಾ ಚಿತ್ರಗಳು

ಕರ್ನಾಟಕದಲ್ಲಿನ ಪ್ರಾಗಿತಿಹಾಸಕಾಲದಕಲೆಯ ನೆಲೆಗಳು

ಕ್ರ. ಸಂ.	ನೆಲೆ	ತಾಲ್ಲೂಕ	ಜಿಲ್ಲೆ	ನದಿ ತೀರ
		ವರ್ಣಚಿತ್ರ ನೆಲೆಗಳು		
೧.	ರಾಮದುರ್ಗ	ರಾಮದುರ್ಗ	ಬೆಳಗಾವಿ	ಮಲಪ್ರಭಾ
೨.	ಖಾಜಿಗುಡ್ಡ	ರಾಮದುರ್ಗ	ಬೆಳಗಾವಿ	ಮಲಪ್ರಭಾ
೩.	ಚಂಚಖಂಡಿ	ರಾಮದುರ್ಗ	ಬೆಳಗಾವಿ	ಮಲಪ್ರಭಾ
೪.	ಗೂಗ್ಲಾಡಿ (GLD)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೫.	ಪಿಲ್ಲುಗುಂಡು (PLG)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೬.	ರಾಮದೇವರಗುಂಡು (RDG)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೭.	ರಂಗನಾಥಗುಡ್ಡ (RGB)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೮.	ಹೊರಗಿನದುರ್ಗಮ್ಮಗುಡಿ (HDG)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೯.	ಸಿತಿ ದೋಣೆ (SDN)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೦.	ಹೊಸಮಹಾಕೂಟ (HMT)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೧.	ಮಂಗ್ಯೂರುಗುಡ್ಡ (MGG)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೨.	ದೊಡ್ಡಜೋಗೆರ ಫಡಿ (DJP)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೩.	ಕೆಂದೂರುಕೆರೆಗೊಂದಿ (KKG)	ಬಾದಾಮಿ	ಬಾಗಲಕೋಟೆ	ಮಲಪ್ರಭಾ

೧೪.	ಸುರ್ಗಿ ಫಡಿ (SGP)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೫.	ತಿಮ್ಮಪ್ಪ ಗುಡ್ಡ (TMG)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೬.	ಹುಲಿಫಡಿ (HPD)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೭.	ನಿರಗುಂದ	ಮುಂಡರಗಿ	ಗದಗ	ತುಂಗಭದ್ರ
೧೮.	ಹರಪ್ಪನಹಳ್ಳಿ	ಹರಪ್ಪನಹಳ್ಳಿ	ದಾವಣಗೆರೆ	ತುಂಗಭದ್ರ
೧೯.	ಕೊಪ್ಪಳ	ಕೊಪ್ಪಳ	ಕೊಪ್ಪಳ	ತುಂಗಭದ್ರ
೨೦.	ಬೊಮ್ಮಸಾಗರತಾಂಡಾ	ಗಂಗಾವತಿ	ಕೊಪ್ಪಳ	ತುಂಗಭದ್ರ
೨೧.	ಹಂಪನದುರ್ಗ	ಗಂಗಾವತಿ	ಕೊಪ್ಪಳ	ತುಂಗಭದ್ರ
೨೨.	ಅಗೋಲಿ	ಗಂಗಾವತಿ	ಕೊಪ್ಪಳ	ತುಂಗಭದ್ರ
೨೩.	ಗಡ್ಡಿ	ಗಂಗಾವತಿ	ಕೊಪ್ಪಳ	ತುಂಗಭದ್ರ
೨೪.	ನಾಗೇನಹಳ್ಳಿ	ಹೊಸಪೇಟೆ	ಬಳ್ಳಾರಿ	ತುಂಗಭದ್ರ
೨೫.	ಬುಕ್ಕಾಸಾಗರ	ಹೊಸಪೇಟೆ	ಬಳ್ಳಾರಿ	ತುಂಗಭದ್ರ
೨೬.	ಇಂದರಗಿ	ಗಂಗಾವತಿ	ಕೊಪ್ಪಳ	ತುಂಗಭದ್ರ
೨೭.	ಹಿರೇ ಬೆಣಕಲ್	ಗಂಗಾವತಿ	ಕೊಪ್ಪಳ	ತುಂಗಭದ್ರ
೨೮.	ಚಿಕ್ಕ ಬೆಣಕಲ್	ಗಂಗಾವತಿ	ಕೊಪ್ಪಳ	ತುಂಗಭದ್ರ
೨೯.	ಎಮ್ಮಿಗುಡ್ಡ	ಗಂಗಾವತಿ	ಕೊಪ್ಪಳ	ತುಂಗಭದ್ರ
೩೦.	ಬಸಾಪಟ್ಟಣ	ಗಂಗಾವತಿ	ಕೊಪ್ಪಳ	ತುಂಗಭದ್ರ
೩೧.	ತೆಂಬಾ	ಗಂಗಾವತಿ	ಕೊಪ್ಪಳ	ತುಂಗಭದ್ರ
೩೨.	ಬಿಳೇಭಾವಿ	ಗಂಗಾವತಿ	ಕೊಪ್ಪಳ	ತುಂಗಭದ್ರ
೩೩.	ಶಿವಪುರ	ಗಂಗಾವತಿ	ಕೊಪ್ಪಳ	ತುಂಗಭದ್ರ
೩೪.	ಬಂಡಿಹರ್ಲಾಪುರ	ಕೊಪ್ಪಳ	ಕೊಪ್ಪಳ	ತುಂಗಭದ್ರ
೩೫.	ಹೊಸಬಂಡಿಹರ್ಲಾಪುರ	ಕೊಪ್ಪಳ	ಕೊಪ್ಪಳ	ತುಂಗಭದ್ರ
೩೬.	ಹರ್ಲಾಪುರ	ಗಂಗಾವತಿ	ಕೊಪ್ಪಳ	ತುಂಗಭದ್ರ
೩೭.	ನಾರಾಯಣಪುರ	ಗಂಗಾವತಿ	ಕೊಪ್ಪಳ	ತುಂಗಭದ್ರ
೩೮.	ತಿಮ್ಮಲಪುರ	ಗಂಗಾವತಿ	ಕೊಪ್ಪಳ	ತುಂಗಭದ್ರ
೩೯.	ಹಂಪಿ	ಹೊಸಪೇಟೆ	ಬಳ್ಳಾರಿ	ತುಂಗಭದ್ರ
೪೦.	ಕಮಲಾಪುರ	ಹೊಸಪೇಟೆ	ಬಳ್ಳಾರಿ	ತುಂಗಭದ್ರ
೪೧.	ವೆಂಕಟಾಪುರ	ಹೊಸಪೇಟೆ	ಬಳ್ಳಾರಿ	ತುಂಗಭದ್ರ
೪೨.	ಆಂಜನಹಳ್ಳಿ	ಗಂಗಾವತಿ	ಕೊಪ್ಪಳ	ತುಂಗಭದ್ರ
೪೩.	ಸಂಗಾಪುರ	ಗಂಗಾವತಿ	ಕೊಪ್ಪಳ	ತುಂಗಭದ್ರ
೪೪.	ರಾಮದುರ್ಗ	ಗಂಗಾವತಿ	ಕೊಪ್ಪಳ	ತುಂಗಭದ್ರ
೪೫.	ಚಿಕ್ಕರಾಂಪುರ	ಗಂಗಾವತಿ	ಕೊಪ್ಪಳ	ತುಂಗಭದ್ರ
೪೬.	ರಾಂಪುರ	ಗಂಗಾವತಿ	ಕೊಪ್ಪಳ	ತುಂಗಭದ್ರ
೪೭.	ಆನೆಗೊಂದಿ	ಗಂಗಾವತಿ	ಕೊಪ್ಪಳ	ತುಂಗಭದ್ರ
೪೮.	ಗೂಗಿಬಂಡೆ	ಗಂಗಾವತಿ	ಕೊಪ್ಪಳ	ತುಂಗಭದ್ರ
೪೯.	ತೆಕ್ಕಲಕೋಟೆ	ಸಿರುಗುಪ್ಪ	ಬಳ್ಳಾರಿ	ತುಂಗಭದ್ರ
೫೦.	ಬೈಲ್ ಮರ್ಚೆಡ್	ಮಾನ್ವಿ	ರಾಯಚೂರು	ತುಂಗಭದ್ರ
೫೧.	ಸಿರಿವಾರ	ಮಾನ್ವಿ	ರಾಯಚೂರು	ತುಂಗಭದ್ರ
೫೨.	ಮಾನ್ವಿ	ಮಾನ್ವಿ	ರಾಯಚೂರು	ತುಂಗಭದ್ರ

೫೩.	ಆತನೂರು (ತೊಗಲಗುಡ್ಡ)	ಮಾನ್ವಿ	ರಾಯಚೂರು	ತುಂಗಭದ್ರ
೫೪.	ಬುರುದೇಕಟ್ಟೆ	ಹೊಸದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೫೫.	ಮುತ್ತಿನಗಿರಿ	ಹೊಸದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೫೬.	ಮೈಲಾರಪಟ್ಟ (ಶ್ರೀರಾಂಪುರ)	ಹೊಸದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೫೭.	ಸಂತೆಗುಡ್ಡ	ಮೊಳಕಾಲ್ಮೂರು	ಚಿತ್ರದುರ್ಗ	ವೇದಾವತಿ (ಹಗರಿ)
೫೮.	ಜೀರಪ್ಪಕಲ್ಲಾಸರೆ	ಬಳ್ಳಾರಿ	ಬಳ್ಳಾರಿ	ವೇದಾವತಿ (ಹಗರಿ)
೫೯.	ಗವಿಮಠ	ಅರಸೀಕೆರೆ	ಹಾಸನ	ವೇದಾವತಿ (ಹಗರಿ)
೬೦.	ಚೆಲುವನಹಳ್ಳಿ	ಅರಸೀಕೆರೆ	ಹಾಸನ	ವೇದಾವತಿ (ಹಗರಿ)
೬೧.	ಭೈರಗೊಂಡನಹಳ್ಳಿ	ಅರಸೀಕೆರೆ	ಹಾಸನ	ವೇದಾವತಿ (ಹಗರಿ)
೬೨.	ದೆಂಡೆಕೆರೆ	ಅರಸೀಕೆರೆ	ಹಾಸನ	ವೇದಾವತಿ (ಹಗರಿ)
೬೩.	ಯಡಪುರ	ಅರಸೀಕೆರೆ	ಹಾಸನ	ವೇದಾವತಿ (ಹಗರಿ)
೬೪.	ದೊಡ್ಡಬಳ್ಳಾಪುರ-ದೇವನಹಳ್ಳಿ	ದೊಡ್ಡಬಳ್ಳಾಪುರ	ಬೆಂಗಳೂರು ಗ್ರಾಮಾಂತರ	ಅರ್ಕಾವತಿ
೬೫.	ಬಂಕಾರಸನಗುಂಡು (ಮಾದಪಟ್ನ)	ನೆಲಮಂಗಲ	ಬೆಂಗಳೂರು ಗ್ರಾಮಾಂತರ	ಅರ್ಕಾವತಿ
೬೬.	ಸೂಳೆಕಲ್	ಕನಕಪುರ	ರಾಮನಗರ	ಅರ್ಕಾವತಿ
		ಕುಟ್ಟುಚಿತ್ರ ನೆಲೆಗಳು		
೬೭.	ತವರಗೆರ	ಲಿಂಗಸೂಗೂರು	ರಾಯಚೂರು	ಕೃಷ್ಣ
೬೮.	ಮಸ್ಕಿ	ಲಿಂಗಸೂಗೂರು	ರಾಯಚೂರು	ಕೃಷ್ಣ
೬೯.	ಮಲ್ಲದಕಲ್ಲು	ದೇವದುರ್ಗ	ರಾಯಚೂರು	ಕೃಷ್ಣ
೭೦.	ಕಲ್ಲೂರು	ಮಾನ್ವಿ	ರಾಯಚೂರು	ತುಂಗಭದ್ರ
೭೧.	ಬೆಳಗಲ್	ಬಳ್ಳಾರಿ	ಬಳ್ಳಾರಿ	ವೇದಾವತಿ (ಹಗರಿ)
೭೨.	ಗೂಳಿಹಳ್ಳಿ	ಹೊಸದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೭೩.	ಸೋಲಾಪುರ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೭೪.	ಬಂಗಾರದೇವರಹಟ್ಟಿ	ಚಳ್ಳಕೆರೆ	ಚಿತ್ರದುರ್ಗ	ವೇದಾವತಿ (ಹಗರಿ)
		ಗೀರು/ರೇಖಾಚಿತ್ರ ನೆಲೆಗಳು		
೭೫.	ನವಿಲುತೀರ್ಥ	ಸವದತ್ತಿ	ಬೆಳಗಾವಿ	ಮಲಪ್ರಭಾ
೭೬.	ಕುಳ್ಳೊಳ್ಳಿ	ಜಮಖಂಡಿ	ಬಾಗಲಕೋಟೆ	ಕೃಷ್ಣ
೭೭.	ತಾಯವ್ವ ಫಡಿ (TYP)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೭೮.	ಹೊಳಲೂರು	ಶಿವಮೊಗ್ಗ	ಶಿವಮೊಗ್ಗ	ತುಂಗಾ
೭೯.	ಹೊಳೆಹಟ್ಟಿ	ಶಿವಮೊಗ್ಗ	ಶಿವಮೊಗ್ಗ	ತುಂಗಾ
೮೦.	ತಾವರೆಕೆರೆ	ಕುಷ್ಟಗಿ	ಕೊಪ್ಪಳ	–
೮೧.	ಹಿರೇಮಾದಪುರ	ಹಿರೇಕೆರೂರು	ಹಾವೇರಿ	ತುಂಗಭದ್ರ
೮೨.	ಬಸಾಪಟ್ಟಣ	ಗಂಗಾವತಿ	ಕೊಪ್ಪಳ	ತುಂಗಭದ್ರ
೮೩.	ಸಿದ್ದಿಕೇರಿ	ಗಂಗಾವತಿ	ಕೊಪ್ಪಳ	ತುಂಗಭದ್ರ
೮೪.	ಹಳಕುಂದಿ	ಹೊಸಪೇಟೆ	ಬಳ್ಳಾರಿ	ತುಂಗಭದ್ರ
೮೫.	ಗಟ್ಟಿಹೊಸಹಳ್ಳಿ	ಹೊಳಲ್ಕೆರೆ	ಚಿತ್ರದುರ್ಗ	ವೇದಾವತಿ (ಹಗರಿ)
೮೬.	ಮಲ್ಲಪ್ಪನಗುಡ್ಡ	ಹಿರಿಯೂರು	ಚಿತ್ರದುರ್ಗ	ವೇದಾವತಿ (ಹಗರಿ)

ಮೋಹನ ಆರ್.

೮೭.	ಚೋಳಗುಡ್ಡ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೮೮.	ಕಾವಾಡಿಗರಹಟ್ಟಿ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೮೯.	ಬೂದರ ದಿಬ್ಬ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೯೦.	ಚಂದ್ರವಳ್ಳಿ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೯೧.	ಕೂನಾಬೇವು	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೯೨.	ಚಿಕ್ಕಜಗಳೂರು	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೯೩.	ಕಲ್ಲೇನಹಳ್ಳಿ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೯೪.	ಅಪ್ಪಯನ ಮಾಳಿಗೆ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೯೫.	ಅಜ್ಜನಹಳ್ಳಿ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೯೬.	ವೀರಮದಿಕೇರಿಪುರ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೯೭.	ಗೋನೂರು	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೯೮.	ನನ್ನಿವಲ	ಚಳ್ಳಕೆರೆ	ಚಿತ್ರದುರ್ಗ	ವೇದಾವತಿ (ಹಗರಿ)
೯೯.	ಸಿದ್ದೇಶ್ವರ ಗುಡ್ಡ	ಚಳ್ಳಕೆರೆ	ಚಿತ್ರದುರ್ಗ	ವೇದಾವತಿ (ಹಗರಿ)
೧೦೦.	ಜಟಂಗರಾಮೇಶ್ವರ	ಮೊಳಕಾಲ್ಮೂರು	ಚಿತ್ರದುರ್ಗ	ವೇದಾವತಿ (ಹಗರಿ)
೧೦೧.	ಬೈರನಾಯಕನಹಳ್ಳಿ	ಸಂಡೂರು	ಬಳ್ಳಾರಿ	ವೇದಾವತಿ (ಹಗರಿ)
೧೦೨.	ರಾಜಪುರ	ಸಂಡೂರು	ಬಳ್ಳಾರಿ	ವೇದಾವತಿ (ಹಗರಿ)
೧೦೩.	ಕೊಟ್ನಕಲ್ಲು	ಹೂವಿನಹಡಗಲಿ	ಬಳ್ಳಾರಿ	ವೇದಾವತಿ (ಹಗರಿ)
೧೦೪.	ಅಪ್ಪಯ್ಯನಹಳ್ಳಿ	ಬಳ್ಳಾರಿ	ಬಳ್ಳಾರಿ	ವೇದಾವತಿ(ಹಗರಿ)
೧೦೫.	ಬೋಳೆ	ಅಂಕೋಲಾ	ಉತ್ತರ ಕನ್ನಡ	ಕೊಂಕಣತೀರ
೧೦೬.	ಗುಡ್ನಾಪುರ	ಶಿರಸಿ	ಉತ್ತರ ಕನ್ನಡ	ಕೊಂಕಣತೀರ
೧೦೭.	ಬುದ್ಧನಜೇಡ್ಡು	ಕುಂದಾಪುರ	ಉಡುಪಿ	ಕೊಂಕಣತೀರ
೧೦೮.	ಸೊಂಡ	ಕುಂದಾಪುರ	ಉಡುಪಿ	ಕೊಂಕಣತೀರ
೧೦೯.	ಬಸಾರೂರು	ಕುಂದಾಪುರ	ಉಡುಪಿ	ಕೊಂಕಣತೀರ
೧೧೦.	ಗಾವಳ್ಳಿ	ಉಡುಪಿ	ಉಡುಪಿ	ಕೊಂಕಣತೀರ
೧೧೧.	ಮಂದರಾತಿ	ಉಡುಪಿ	ಉಡುಪಿ	ಕೊಂಕಣತೀರ
೧೧೨.	ಸುಬ್ರಮಣ್ಯ	ಉಡುಪಿ	ಉಡುಪಿ	ಕೊಂಕಣತೀರ
೧೧೩.	ವೇದಿಕ್ ನಗರ	ಮಂಡ್ಯ	ಮಂಡ್ಯ	ಕಾವೇರಿ
೧೧೪.	ಪರ್ಚೆಹಳ್ಳಿ	ಕೋಲಾರ	ಕೋಲಾರ	–
	ಕಲ್ಗುಳಿ ನೆಲೆಗಳು			
೧೧೫.	ಬಿಳಗಿ	ಬಿಳಗಿ	ಬಾಗಲಕೋಟೆ	ಘಟಪ್ರಭಾ
೧೧೬.	ದಬ್ಬಲ್ (ಪಟ್ಟದಕಲ್ಲು) (DBK)	ಬಿಳಗಿ	ಬಾಗಲಕೋಟೆ	ಮಲಪ್ರಭಾ
೧೧೭.	ದೊಡ್ಡದಮಳಿ (DDM)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೧೮.	ಚಿಕ್ಕದಮಳಿ (CDM)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೧೯.	ವೀರಗಲ್ಲು	ಸುರಪುರ	ಯಾದಗಿರಿ	ಕೃಷ್ಣ
೧೨೦.	ಬೆನಹಟ್ಟಿ	ಸುರಪುರ	ಯಾದಗಿರಿ	ಕೃಷ್ಣ
೧೨೧.	ದೇವಪುರ	ಸುರಪುರ	ಯಾದಗಿರಿ	ಕೃಷ್ಣ
೧೨೨.	ಕುಪ್ಪಗಲ್	ಸುರಪುರ	ಯಾದಗಿರಿ	ಕೃಷ್ಣ
೧೨೩.	ದೊಡ್ಡಬಾತಿ	ದಾವಣಗೆರೆ	ದಾವಣಗೆರೆ	–

೨೪. ಕೃಷ್ಣಾಪುರ	ತರೀಕೆರೆ	ಚಿಕ್ಕಮಗಳೂರು	ವೇದಾವತಿ (ಹಗರಿ)
೨೫. ಬಾಗೂರ ಗೊಲ್ಲರಹಳ್ಳಿ	ಅರಸೀಕೆರೆ	ಹಾಸನ	ವೇದಾವತಿ (ಹಗರಿ)
೨೬. ಹಾನಗಲ್ಲು	ಹೊಸದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೨೭. ಅಜ್ಜಗುಡ್ಡ	ಹೊಸದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೨೮. ಭೀಮನಗುಂಡು	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೨೯. ಧರ್ಮಪುರ	ಹಿರಿಯೂರು	ಚಿತ್ರದುರ್ಗ	ವೇದಾವತಿ (ಹಗರಿ)
ವರ್ಣ/ಗೀರು ಚಿತ್ರ ನೆಲೆಗಳು			
೩೦. ಹುಲಿಗೆಮ್ಮನಕೊಳ್ಳ (HMK)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೩೧. ರಾಮತೀರ್ಥ (RTT)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೩೨. ಬಲಚಕ್ರ	ಯಾದಗಿರಿ	ಯಾದಗಿರಿ	ಕೃಷ್ಣ
೩೩. ಚಿಕ್ಕಿಹಾಳ್	ಲಿಂಗಸೂಗೂರು	ರಾಯಚೂರು	ವೇದಾವತಿ (ಹಗರಿ)
೩೪. ಮಲ್ಲಾಪುರ	ಗಂಗಾವತಿ	ಕೊಪ್ಪಳ	ತುಂಗಭದ್ರ
೩೫. ತಣೆಗೆಕಲ್ಲು	ಹೊಸದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೩೬. ಸಂಗನಕಲ್ಲು	ಬಳ್ಳಾರಿ	ಬಳ್ಳಾರಿ	ವೇದಾವತಿ (ಹಗರಿ)
ವರ್ಣ, ರೇಖಾ ಮತ್ತುಕುಟ್ಟುಚಿತ್ರ ನೆಲೆಗಳು			
೩೭. ಕನ್ನೇರಗವಿ ಗುಡ್ಡ (KGG)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೩೮. ಕುರುಗೋಡು	ಬಳ್ಳಾರಿ	ಬಳ್ಳಾರಿ	ವೇದಾವತಿ (ಹಗರಿ)
೩೯. ಗಂಗಿಗಟ್ಟೆ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೪೦. ಪಂಡರಹಳ್ಳಿ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
ವರ್ಣ, ರೇಖಾ ಮತ್ತು ಕಲ್ಗುಳಿ ನೆಲೆಗಳು			
೪೧. ಭಾ.ಪು.ಇ. ವಸ್ತು ಸಂಗ್ರಹಾಲಯ, ಬಾದಾಮಿ (BDMM)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೪೨. ಬಾದಾಮಿ-ಈಶಾನ್ಯ ಬೆಟ್ಟ (BDMH)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೪೩. ತಟ್ಟಕೋಟೆ (TKT)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೪೪. ಬಾದಾಮಿ (BDM)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೪೫. ಹಿರೇಗುಡ್ಡ (HRD)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
ವರ್ಣ, ಕಲ್ಗುಳಿ ನೆಲೆಗಳು			
೪೬. ಅರೆಗುಡ್ಡ (AGD)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೪೭. ಸಿದ್ಧಪಡಿ (SDP)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೪೮. ಐಹೊಳೆ (AHL)	ಹುನಗುಂದ	ಬಾಗಲಕೋಟೆ	ಮಲಪ್ರಭಾ
೪೯. ಹಂಸನೂರು (HMN)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೫೦. ಖಾನಾಪುರ (KNP)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
ಕುಟ್ಟು ಮತ್ತು ರೇಖಾಚಿತ್ರ ನೆಲೆಗಳು			
೫೧. ಗೊಳಿಕಟ್ಟೆ (GLK)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೫೨. ಬಿಲ್ಲಮರಾಯನಗುಡ್ಡ	ಲಿಂಗಸೂಗೂರು	ರಾಯಚೂರು	ಕೃಷ್ಣ

೧೫೩.	ದೊಡ್ಡಸಿದ್ದವ್ವನಹಳ್ಳಿ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೧೫೪.	ಸಂಗೇನಹಳ್ಳಿ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
	ಕುಟ್ಟು, ರೇಖಾಚಿತ್ರ ಮತ್ತು ಕಲ್ಗುಳಿ ನೆಲೆಗಳು			
೧೫೫.	ತಮಿನಾಳ್ (RGT)	ಬಾದಾಮಿ	ಬಾಗಲಕೋಟೆ	ಮಲಪ್ರಭಾ
೧೫೬.	ಕಪ್ಪಗಲ್ಲು (ಹಿರೇಗುಡ್ಡ)	ಬಳ್ಳಾರಿ	ಬಳ್ಳಾರಿ	ವೇದಾವತಿ (ಹಗರಿ)
೧೫೭.	ಕುಂಚಿಗನಾಳ್	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
	ರೇಖಾ ಮತ್ತು ಕಲ್ಗುಳಿ ನೆಲೆಗಳು			
೧೫೮.	ಚಿತ್ರದುರ್ಗ ಕೋಟೆ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೧೫೯.	ಬಗ್ಗಲು ರಂಗವನಹಳ್ಳಿ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೧೬೦.	ಬೆಳಗಟ್ಟ	ಚಿತ್ರದುರ್ಗ	ಚಿತ್ರದುರ್ಗ	ವೇದಾವತಿ (ಹಗರಿ)
೧೬೧.	ಸೊಂಡೆಕೆರೆ	ಹಿರಿಯೂರು	ಚಿತ್ರದುರ್ಗ	ವೇದಾವತಿ (ಹಗರಿ)
೧೬೨.	ನೇರಳಕುಂಟೆ	ಚಳ್ಳಕೆರೆ	ಚಿತ್ರದುರ್ಗ	ವೇದಾವತಿ (ಹಗರಿ)
೧೬೩.	ಬ್ರಹ್ಮಗಿರಿ	ಮೊಳಕಾಲ್ಮೂರು	ಚಿತ್ರದುರ್ಗ	ವೇದಾವತಿ (ಹಗರಿ)

ಕೃತಜ್ಞತೆಗಳು

ನನಗೆ ಎಲ್ಲ ರೀತಿಯ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡಿದ ನನ್ನ ಪೂಜ್ಯ ಗುರುಗಳಾ ಅ. ಸುಂದರ, ಸುಷಮ ದೇವ್, ಶೀಲಾ ಮಿಶ್ರ, ಜಿ.ಎಲ್. ಬಾದಮ್, ಶೋಭಾ ಮತ್ತು ಯೋಗೇಶ ಎಮ್. ಎಮ್. ಅವರಿಗೆ ಹೃದಯ ಪೂರ್ವಕ ನಮನಗಳು. ಹಾಗೆಯೇ ಕಾರ್ಯಕ್ಷೇತ್ರ ಅನ್ವೇಷ ಹಾಗೂ ತಾಂತ್ರಿಕತೆಯಲ್ಲಿ ಸಹಕರಿಸಿದ ನನ್ನ ಸ್ನೇಹಿತರಾದ ಹೇಮಂತ್ ದಳವಿ, ಚಂದ್ರಕಾಂತ ಕಲ್‌ವಾಂಕರ್, ಆರ್. ಅರ್ಜುನ್, ಡಿ. ವಿನಯ್ ಕುಮಾರ್, ಅಶೋಕ್ ಪೂಜಾರ, ನವೀನ್ ಕುಮಾ ಕಲ್ಮನೆ, ಸಿ. ಶಿವರಾಜ್, ಮೋಹನ್ ಪಾರ್ಥಿ, ಎಂ. ಸಿದ್ದರಾಜು ಕಪ್ಪಸೋಗೆ, ಮತ್ತು ಈ ವೇಳೆಯ ತಂಗಲು ವ್ಯವಸ್ಥೆ ಮಾಡಿಕೊಟ್ಟ ಇಷ್ಟಲಿಂಗ ಸಿರಿಸಿ ಹಾಗೂ ಸಂಶೋಧನೆಗೆ ಧನ ಸಹಾಯ ನೀಡಿ ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ನವ ದೆಹಲಿ ರವರಿಗೆ ಹೃತ್ಪೂರ್ವಕ ಕೃತಜ್ಞತೆಗಳು

ಗ್ರಂಥ ಋಣ

ಕನ್ನಡ

1. ಸುಂದರ ಅ., 1994, **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ**, ಕರ್ನಾಟಕ ಲಲಿತ ಕಲ ಅಕಾಡೆಮಿ, ಬೆಂಗಳೂರು.
2. ಸುಂದರ ಅ. (ಸಂ), 1997, **ಕರ್ನಾಟಕ ಚರಿತ್ರೆ ಸಂ. 1.**, ಕನ್ನಡ ವಿಶ್ವವಿದ್ಯಾಲಯ, ಹಂ ವಿದ್ಯಾರಣ್ಯ 583, 276.
3. ಸುಂದರ ಅ., 1974, "ಕರ್ನಾಟಕದಲ್ಲಿಯ ಪ್ರಾಗೈತಿಹಾಸಿಕ ವರ್ಣಚಿತ್ರಗಳು", **ಸವಿಚಂಚ** ಶ್ರೀ ಸದಾಶಿವ ಒಡೆಯರ 50 ನೇ ಹುಟ್ಟುಹಬ್ಬ ಉತ್ಸವ ಸಮಿತಿ, ಚೌಡಯ್ಯ ದಾನಾಪುರ.
4. ಸುಂದರ ಅ., 1987, "ಪ್ರಾಗೈತಿಹಾಸಿಕ ಗವಿವರ್ಣ ಮತ್ತು ಬಯಲು ಬಂಡೆ ಚಿತ್ರಗಳ ಕರ್ನಾಟಕ", ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.
5. ಸುಂದರ ಅ. 1993, "ವಿಶಿಷ್ಟ ವರ್ಣಚಿತ್ರ ಕಲೆಯ ಆಗರ ಬಾದಾಮಿ", **ಚಿತ್ರಕಲಾ ಪ್ರಪಂ** ಲಲಿತಕಲಾ ಅಕಾಡೆಮಿ, ಬೆಂಗಳೂರು.

6. ಸುಂದರ ಅ. 1995, "ಶಿವಮೊಗ್ಗ ನಗರ ಪ್ರದೇಶದಲ್ಲಿ ಮಹತ್ವದ ಪ್ರಾಗಿತಿಹಾಸದ ಸಾಂಸ್ಕೃತಿಕ ಕುರುಹುಗಳು", **ವಜ್ರಪಥ**.

7. ಶರಣಬಸಪ್ಪ ಕೋಲ್ಕಾರ, 2010, **ಶಿಲಾಯುಗದ ಗವಿಚಿತ್ರಗಳು**, ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.

8. ಮೋಹನ ಆರ್. 2016. 'ಹಿರೇಗುಡ್ಡ: ಮನುಕುಲ ಪೂರ್ವ ಸಂಸ್ಕೃತಿಯ ಪ್ರತಿಬಿಂಬಕ', **ಇತಿಹಾಸ ದರ್ಪಣ ಸಂ. 29 (ಏಪ್ರಿಲ್–ಜೂನ್)**: 11–18.

9. ಮೋಹನ ಆರ್. 2016. 'ಮಲಪ್ರಭಾ ನದಿ ತೀರದ ಪ್ರಾಗಿತಿಹಾಸ ವರ್ಣಚಿತ್ರ ನೆಲೆಯ (ಕೆಂದೂರು) ಅನ್ವೇಷಣೆ ಮತ್ತು ಅದರ ಮಹತ್ವ' **ಇತಿಹಾಸ ದರ್ಶನ 31: 15–18**.

10. ಮೋಹನ ಆರ್. 2016. 'ಕನ್ನೇರ್‌ಗವಿ ಗುಡ್ಡ: ಶಿಲಾಯುಗ ಚಿತ್ರಕಲೆಯ ನೆಲೆ'. **ಇತಿಹಾಸ ದರ್ಪಣ ಸಂ. 28 (ಜನವರಿ–ಮಾರ್ಚ್)**: 9–20.

11. ಮೋಹನ ಆರ್. 2015. 'ಹಂಸನೂರು : ಪ್ರಾಗೈತಿಹಾಸಿಕ ವರ್ಣಚಿತ್ರಕಲೆನೆಲೆಯ ಅನ್ವೇಷಣೆ'. **ಇತಿಹಾಸ ದರ್ಪಣ ಸಂ. 24(ಜನವರಿ–ಮಾರ್ಚ್)**: 11–16.

12. ಶ್ರೀಶೈಲ ಆರಾಧ್ಯ ಎಚ್., 1987, 'ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸ ಚಿತ್ರಗಳು', **ಹರತಿಸಿರಿ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

13. ಲಕ್ಷ್ಮಣ್ ತೆಲಗಾವಿ, 2004. 'ಬೆಳಗಟ್ಟ ಗ್ರಾಮ ಪರಿಸರದ ಎದ್ದುಲುಬಂಡೆ ಬಯಲುಬಂಡೆ ರೇಖಾಕೃತಿಗಳು'. **ಇತಿಹಾಸ ದರ್ಶನ 19: 1–5**.

14. ಲಕ್ಷ್ಮಣ್ ತೆಲಗಾವಿ, 2006. 'ಚಿತ್ರದುರ್ಗ ಪರಿಸರದ ಕುಳಿಭರಿತ ಭೀಮನಗುಂಡು: ಪರಾತಾತ್ವಿಕ ಅಧ್ಯಯನ'. **ಇತಿಹಾಸ ದರ್ಶನ 19: 1–14**.

15. ತಿಪ್ಪೇಸ್ವಾಮಿ, ಎಸ್. 2006. 'ಸಂತೇಗುಡ್ಡದ ಗುಹಾ ವರ್ಣಚಿತ್ರಗಳು ಹಾಗೂ ಪ್ರಾಚ್ಯಾವಶೇಷಗಳು'. **ಇತಿಹಾಸ ದರ್ಶನ 21: 24–27**.

16. ತಿಪ್ಪೇಸ್ವಾಮಿ, ಎಸ್. 2007. 'ಚಿತ್ರದುರ್ಗ ತಾಲ್ಲೂಕಿನ ಮತ್ತಷ್ಟು ಪ್ರಾಗೈತಿಹಾಸಿಕ ನೆಲೆಗಳು'. **ಇತಿಹಾಸ ದರ್ಶನ 22: 13–16**.

ಇಂಗ್ಲಿಷ್

17. Henwood, W.G. 1856. *Edinburgh New Philosophical Journal 204-205.*

18. Wakankar, V.S. 1973. *Rock Paintings of India*. Ph.D. Dissertation. Pune: Deccan College, Post Graduate and Research Institute.

19. Wakankar, V.S. 1975. *Bhimbetka - The Prehistoric Paradise*, Prachya Pratibha 3(2): 7-29.

20. Fawcett, F. 1892. 'Prehistoric Rock Paintings near Bellary, South India', *Asiatic Quarterly Review (New Series) III: 147-157.*

21. Munn. L. 1934. Prehistoric and Protohistoric Finds, The Journal Hyderabad *Geological Society I* (2): 121-135.

22. Munn L. 1935. 'Prehistoric and Protohistoric Finds of the Raichur and Shorapur Districts of H. E. H, the Nizam's State', *Man in India XV(4): 225-250.*

23. Allchin, F.R. 1960. *Piklihal Excavation*. Hyderabad: Andhra Pradesh Government Publications.

24. Allchin, F.R. and B. Allchin 1994-95. 'Rock art of North Karnataka', *Bulletin o the Deccan College Post-Graduate and Research Institute 54-55: 313-39.*

25. Sundara, A. 2014. 'Some Insights into Rock Art Research in Karnataka' *Purakala 24: 27-42.*

26. Mohana, R. 2013. 'Newly Discovered Rock Art Sites in North Karnataka India'. In: Anura Manatunga and Chamindi Dilkushi Senaratne Wettewe (Eds.) *Asian Art, Culture and Heritage.Pp. 191-198.* International Association for Asian Heritage, Centre for Asian Studies, University of Kelaniya, Sri Lanka.

27. Mohana, R. 2015. *Reading Rock Art: Interreting Temporal and Geographic Variability in the Lower Malaprabha Basin, Karnataka.* Ph.D thesis submitted to the Deccan College, Post Graduate and Research Institute, Pune.

28. Mohana, R.2014. 'Cupules in Karnataka: Their Significance', *Bulletin of the Deccan College,* Post Graduate and Research Institute 74: 1724.

29. Mohana, R.2014. 'Further Discovery of Rock-at at Tatakoti (Badami), North Karnataka'. In: Ajit Kumar (ed.) *Rock Art: Recent Researches and New Perspectives (Festschrift to Yashodhar Mathpal),* pp. 416-425. Delhi: New Bharatiya Book Corporation.

30. Mohana, R. (In press). *A Multidisciplinary Approach to the Study of Rock Art: A Case Study of Karnataka,* Indira Gandhi National Centre for the Arts, New Delhi.

31. Mohana, R.2016. 'Discovey of Cupule Site at Dharmapura, District Chitradurga, Central Karnataka', *Arnava IV(2): 11-19.*

32. Mohana, R and A. Sundara (In Press.). *Petroglyphs in Chitradurga District, Karnataka, Peninsular India.*

33. Murugeshi, T.2014. 'A Note on the Rock Art in Coastal Karnataka'. In: Ajit Kumar (ed.) *Rock Art: Recent Researches and New Perspectives (Festschrift to Yashodhar Mathpal),* pp. 425-432. Delhi: New Bharatiya Book .

34. Mohana, R and Hemant Dalavi. 2015. 'Geographical Distribution of Rock Art Sites in Karnataka'. Poster presented in National Conference on *"Ancient Science and Technology: Retrospection and Aspirations (ASTRA-2015)"* Organised by Deccan Education Society's Fergusson College, Pune on 10th-11th January.

ಬಲಮರಾಯನಗುಡ್ಡದ ಪ್ರಾಗೈತಿಹಾಸಿಕ ನೆಲೆಯ ಮಹತ್ವ

ದಕ್ಷಿಣ ಭಾರತದ ನವಶಿಲಾಯುಗದ ನೆಲೆಗಳು ಅವರ ಕಲ್ಲಿನ ಆಯುಧಗಳ ಹೊರತಾಗಿ, ಭಾರತೀಯ ಉಪಖಂಡದ ಇತರ ನವಶಿಲಾ ಯುಗದ ವಲಯಗಳಿಗಿಂತ, ಸಾಂಸ್ಕೃತಿಕ ವಸ್ತುಗಳ ಕಾಲಗಣನೆಯಲ್ಲಿ ಮತ್ತು ಭೂದೃಶ್ಯ ಹಾಗೂ ಭೂಮೇಲ್ಮೈ ಸ್ವರೂಪದ ಒಡನಾಟಗಳು ಭಿನ್ನವಾಗಿವೆ.

ದಕ್ಷಿಣ ನವಶಿಲಾಯುಗದ ನೆಲೆಗಳು ಪೆಡಿಪ್ಲೇನ್ (Pediplain) ಮತ್ತು ಇನ್‌ಸೆಲ್‌ಬರ್ಗ್ (Inselberg) ಭೂಪ್ರದೇಶಗಳಲ್ಲಿ ಹಾಗೂ ನದಿತೀರಗಳು ಮತ್ತು ತೊರೆ ತೀರಗಳಲ್ಲಿಯೂ ಕಂಡು ಬರುತ್ತಿವೆ. ಕಣಿವೆಯ ತೀರಗಳ ಹಾಗೂ ಕಣಿವೆಯ ಮೇಲೆ ನೆಲೆಸಿರುವ ನೆಲೆಗಳಿಗೆ ಇನ್‌ಟ್ರುಸೀವ್ ಡೈಕ್ (Intrusive dyke)ಗಳಿಂದ ಕಾರಣವಾದ ಬುಗ್ಗೆ ಆಧಾರಿತ ನೆಲೆಗಳಾಗಿವೆ.[1] ಅಂತಹ ನೆಲೆಗಳ ಮಡಿಕೆಗಳು, ಮಣಿಗಳು, ಕಲ್ಲಿನ ಆಯುಧಗಳು ಹಾಗೂ ತಂತ್ರಗಾರಿಕೆಗಳು, ಬೂದಿ ದಿಬ್ಬ, ಶಿಲಾ ಕಲೆಗಳ, ಶವಸಂಸ್ಕಾರ ಸಂಪ್ರದಾಯಗಳ ಮತ್ತು ಅವರ ಆಹಾರ ಪಥ್ಯನ್ನದ ವೈವಿಧ್ಯತೆಗಳ ಬಗ್ಗೆ ನವಶಿಲಾಯುಗದ ನೆಲೆಗಳಾದ ಪಿಕ್ಲಿಹಾಳ[2], ಸಂಗನಕಲ್ಲು,[3] ಮಸ್ಕಿ,[4] ಬೂದಿಹಾಳ್[5] ಹಾಗೂ ವಟಗಲ್[6] ಬೆಳಕು ಚೆಲ್ಲಿವೆ. ಈ ನೆಲೆಗಳ ಪೈಕಿ, ಬಲಮರಾಯನಗುಡ್ಡ ಕೂಡ ಒಂದು ಮಹತ್ವದ ನವಶಿಲಾಯುಗ – ಕಬ್ಬಿಣಯುಗ ಸಂಸ್ಕೃತಿಯ ಮುಖ್ಯ ನೆಲೆಯಾಗುವ ಲಕ್ಷಣಗಳು ಕಂಡುಬರುತ್ತಿವೆ.

ಅರ್ಜುನ್ ಆರ್.
ಸಂಶೋಧನಾ ವಿದ್ಯಾರ್ಥಿ
ಡೆಖಿನ್ ಕಾಲೇಜು, ಪುಣೆ
arjunrao93@gmail.com

ಈ ಲೇಖನವು ಬಿಲಮರಾಯನಗುಡ್ಡದಲ್ಲಿ (ಚಿತ್ರ 1 ಮತ್ತು 2; ಲಿಂಗಸಗೂರು ಪಟ್ಟಣದಿಂದ ಪಶ್ಚಿಮಕ್ಕೆ 5 ಕಿ.ಮೀ. ದೂರದಲ್ಲಿದೆ) ಇತ್ತೀಚೆಗೆ ಅಧಿಕ್ಯವಾಚಕವಾಗಿ ಪರಿಶೋಧಿಸಿದ ಬಹುಘಟಕಗಳುಳ್ಳ ಪ್ರಾಗೈತಿಹಾಸಿಕ ಕಾಲದ ಬಹು ಅವಧಿಗಳ ವಾಸ್ತವಿಕ ಆಧಾರಗಳನ್ನು ಪರಿಚಯಿಸಿದೆ. ಈ ನೆಲೆಯಿಂದ ರಾಬರ್ಟ್ ಬ್ರೂಸ್ ಫೂಟ್[7] ನವಶಿಲಾಯುಗದ ಡೊಲರೈಟ್ ಹಾಗೂ ಚೆರ್ಟ್ ಕಲ್ಲಿನ ಅನೇಕ ವಿಧಗಳ ಆಯುಧಗಳನ್ನು ಸಂಗ್ರಹಿಸಿದ್ದಾರೆ. ಮುನ್ (1934) ಅವರು ಬೃಹತ್ ಶಿಲಾಯುಗದ ಸಮಾಧಿಗಳು ಹಾಗೂ ಶಿಲಾ ಕಲೆಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಆಲ್ಚಿನ್ ಮತ್ತು ಆಲ್ಚಿನ್ (2011) ಅವರು ತಮ್ಮ ಡಾಕ್ಟರೋಲ್ ಸಂಶೋಧನೆಯ ಸಲುವಾಗಿ 1952ರಲ್ಲಿ ಈ ನೆಲೆಗೆ ಭೇಟಿ ನೀಡಿದ್ದಾರೆ. ಈ ಎಲ್ಲಾ ಲೇಖನಗಳಿಂದ ನಮಗೆ ಮೇಲುನೋಟಕ್ಕೆ ತಿಳಿದು ಬರುವುದೇನೆಂದರೆ, ಇದು ನವಶಿಲಾಯುಗ ಹಾಗೂ ಕಬ್ಬಿಣ ಯುಗದ ಸಂಸ್ಕೃತಿಗಳ ದೀರ್ಘಕಾಲದ ವಾಸ್ತವಿಕ ನೆಲೆಯಾಗಿತ್ತು ಹಾಗೂ ಈ ಸಂಸ್ಕೃತಿಗಳ ಸಮಗ್ರ ಸಂಶೋಧನೆ ಕೈಗೊಳ್ಳಲು ಸಂಭಾವ್ಯ ನೆಲೆಯಾಗಿದೆ ಎಂದು ತಿಳಿದುಬರುತ್ತದೆ.

ಈ ನೆಲೆಯ ಸಾಂಸ್ಕೃತಿಕ ಸ್ವಭಾವಜನ್ಯವನ್ನು ತಿಳಿಯಲು 2016ರಲ್ಲಿ ಈ ಲೇಖಕ ಡಾಕ್ಟರೋಲ್ ಸಂಶೋಧನೆಯ ಸಲುವಾಗಿ ಆಧುನಿಕ ತಂತ್ರಜ್ಞಾನಗಳನ್ನು ಬಳಸಿ, ಪೋಸ್ಟ್ ಪ್ರೊಸೆಸಲ್ (Post Processual), ಭೂಮೇಲ್ಮೈಸ್ವರೂಪ ಮತ್ತು ಸೂಕ್ಷ್ಮ ನೆಲೆಯ ಅಧ್ಯಯನಗಳ (Micro settlement Studies) ಹಿನ್ನೆಲೆಯಲ್ಲಿ ಕ್ರಮಬದ್ಧ ಪುರಾತತ್ತ್ವ ತನಿಖೆಯನ್ನು ನಡೆಸಲಾಗಿದೆ.

ಗುಡ್ಡದ ತಪ್ಪಲು ಹಾಗೂ ಗುಡ್ಡದ ಬಯಲಿನಲ್ಲಿ ನವಶಿಲಾಯುಗ ಪೂರ್ವದ ಸೂಕ್ಷ್ಮ ಶಿಲಾಯುಧಗಳು, ನವಶಿಲಾಯುಗದ ಕೈಗೊಡಲಿಗಳು, ಡೊಲರೈಟ್ ಬ್ಲೇಡ್‌ಗಳು ಹಾಗೂ ಮಚ್ಚು, ಕಬ್ಬಿಣ ಯುಗದ ಮಡಕೆಗಳಾದ ಕಪ್ಪು ಮತ್ತು ಕೆಂಪು, ಕೆಂಪು ಹಾಗೂ ಕಪ್ಪು ವರ್ಣದ ಚೂರುಗಳು, ಇತಿಹಾಸ ಆರಂಭಿಕ ಕಾಲದ ಕಾವಿ ಲೇಪನದಡಿ ಬಿಳಿ ಚಿತ್ರವುಳ್ಳ ಮಡಕೆ (RCPW) ಚೂರುಗಳು ಮತ್ತು ಬೂದಿದಿಬ್ಬಗಳು ಗುಡ್ಡದ ಉತ್ತರ, ದಕ್ಷಿಣ ಮತ್ತು ಪೂರ್ವದಿಕ್ಕುಗಳಲ್ಲಿ ಚದುರಿವೆ. ಪೂರ್ವ ಇತಿಹಾಸ ಹಾಗೂ ಆರಂಭಿಕ ಇತಿಹಾಸದ ಸಂಸ್ಕೃತಿಯ ಚಟುವಟಿಕೆಗಳು ಅತಿ ವಿಸ್ತಾರ ಪ್ರದೇಶದಲ್ಲಿ ಅಂದಾಜು 29 ಹೆಕ್ಟೇರ್ ಭೂಪ್ರದೇಶದಲ್ಲಿ ನಡೆದಿದೆ.

ಗುಡ್ಡದ ತಪ್ಪಲು ಸಮುದ್ರ ಮಟ್ಟದಿಂದ ಸು. 500 ಮೀ. ಎತ್ತರದಲ್ಲಿದ್ದರೆ (AMSL), ಗುಡ್ಡದ ತುದಿಯು ಸುಮಾರು 535 ಮೀ. ಎತ್ತರದಲ್ಲಿರುವ ಗುಡ್ಡವನ್ನು ಮೂರು ಉಚ್ಚ ಸ್ತರ (ಪದರ)ಗಳನ್ನಾಗಿ ವಿಂಗಡಿಸಲಾಗಿದೆ (ಪಟ್ಟಿಕೆ 1). ಕೆಳಸ್ತರ (ಸು. 500–515 ಮೀ), ಮಧ್ಯಮ ಸ್ತರ (ಸು. 516–525 ಮೀ.) ಮತ್ತು ಮೇಲ್‌ಸ್ತರ (ಸು. 526–536 ಮೀ.)ಗಳಲ್ಲಿ ಯಾದೃಚ್ಛಿಕ ಮಾದರಿಯ ಸಮೀಕ್ಷೆಯಲ್ಲಿ (Random Sampling Survey) ಅತಿ ಸೂಕ್ಷ್ಮ ನೋಟವನ್ನು, ಜಿ.ಪಿ.ಎಸ್. ಉಪಗ್ರಹದ ಪಕ್ಷಿ ನೋಟದ ಚಿತ್ರಗಳನ್ನು ಉಪಕರಣದ ಸಹಾಯದಿಂದ ಗೀರಿದ ಕುಟ್ಟುಚಿತ್ರಗಳು, ಕಂಸಾಳೆ ಬಂಡೆಗಳು (Rock gongs / Ringing rocks) ಕಲ್ಲಿನ ಕೊಡಲಿಗಳನ್ನು ನಯಮಾಡಿದ / ಸಪಾಟಾಗಿಸಿದ ಕಾರಣದಿಂದ ಉಂಟಾದ ಕೊರಕಲುಗಳು, ಧಾನ್ಯ ಪರಿಷ್ಕರಣೆಯಿಂದ ಉಂಟಾದ ಪೊಳ್ಳಾದ ಕೊರಕಲುಗಳು ಮತ್ತು ನೀರು ಶೇಕರಣೆಯ ಸಲುವಾಗಿ ಭಾಗಶಃ ಪ್ರಮಾಣದ ತಗ್ಗುಗಳ ಪ್ರತ್ಯೇಕ ಸ್ಥಳಗಳನ್ನು ಉಪಗ್ರಹ ದೃಶ್ಯಾವಳಿಯ ಮೇಲೆ ಜಿ.ಪಿ.ಎಸ್ ಮೂಲಕ ಗುರುತಿಸಿ, ಅವುಗಳ ರೂಪವಿಜ್ಞಾನ (Morphology), ಚಿಕನಿ

ಭೂದೃಶ್ಯ (Micro landscape) ಹಾಗೂ ಅವುಗಳ ಸಮ್ಮಿಶ್ರ ಸಾಂದರ್ಭಿಕ ವೀಕ್ಷಣೆಯನ್ನು (Contextual analysis of the features) ಮಾಡಲಾಗಿದೆ (ಚಿತ್ರ 3, 4 ಮತ್ತು Table 1).

ಗುಡ್ಡದಲ್ಲಿಯ ಪುರಾತತ್ವ ಆಧಾರಗಳು ಹಾಗೂ ಅವುಗಳ ಸಂದರ್ಭೋಚಿತ ವಿಶ್ಲೇಷಣೆ (Contextual analysis of the features)

ಗೀರಿದ ಕಟ್ಟಿದ ಚಿತ್ರಗಳು ನವಶಿಲಾಯುಗದ ನೆಲೆಗಳ ಬಂಡೆಗಳ ಮೇಲೆ ಹೇರಳವಾಗಿ ಕಂಡುಬಂದಿವೆ.[8] ಅವುಗಳ ಜೊತೆಯಲ್ಲಿ / ಸಮೀಪದಲ್ಲಿ ಕಂಸಾಳೆ ಬಂಡೆಗಳು ಕಾಣಬರುತ್ತವೆ.[9] ಕಲ್ಲಿನಿಂದ ಬಂಡೆಯ ಮೇಲೆ ಕುಟ್ಟಿದ / ಉಜ್ಜಿದ ಗುರುತುಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಗೀರಿದ ಚಿತ್ರಗಳು, ಅದರಲ್ಲಿಯೂ ಸಂಗನಕಲ್ಲು – ಕುಪ್ಪಗಲ್ಲಿನ ಬಂಡೆಗಳ ಮೇಲೆ ಚಿತ್ರಿಸಿದ ಮನುಷ್ಯರ ಚಿತ್ರಗಳು ಹಾಗೂ ಗೂಳಿ ಚಿತ್ರಗಳ ನಡುವೆ ಕಂಸಾಳೆ ಬಂಡೆಗಳು ನವಶಿಲಾಯುಗದ ಸಮಾಜದಲ್ಲಿನ ಒಂದು ಧಾರ್ಮಿಕ ಪದ್ಧತಿಯ ರೂಪದಲ್ಲಿ ಜೀವಂತವಾಗಿದ್ದವು ಎಂದು ತೋರುತ್ತದೆ.[10] ಇದೇ ರೀತಿಯ ಸಾಂದರ್ಭಿಕ ಸಾಕ್ಷ್ಯಗಳು ಜಿಲಮರಾಯನಗುಡ್ಡದಲ್ಲಿಯೂ ಕಂಡುಬರುತ್ತಿದೆ. ಈ ನೆಲೆಯು[11] ಸಂಗನಕಲ್ಲು – ಕುಪ್ಪಗಲ್ಲುಗಳಲ್ಲಿ ಕಂಡುಬಂದ ಮತ್ತು ಅವರುಗಳ ಈ ಸಂಶೋಧನೆಯ ಪರೀಕ್ಷಣೀಯ ಪರಿಕಲ್ಪನೆಯ ಪೂರಕವಾಗಿದ್ದು (Testable Hypothesis) ಮತ್ತು ಅದಕ್ಕೂ ಮೀರಿದ ಸಾಂದರ್ಭಿಕ ಸಾಕ್ಷ್ಯಗಳು; ಇಂತಹ ಸೂಕ್ಷ್ಮ ನೆಲೆಗಳಲ್ಲಿ ಆರ್ಥಿಕ ಹಾಗೂ ಸಂಪನ್ಮೂಲ ತಾರಕ ಚಟುವಟಿಕೆಗಳು ನಡೆಯುತ್ತಿದ್ದವು ಎಂದು ಕೋರಗಲ್ಲುಗಳು ಹಾಗೂ ನೀರು ಶೇಖರಣೆಯ ತಗ್ಗುಗಳ ಮುಖಾಂತರ ತಿಳಿಯುತ್ತದೆ.


ಇಂತಹ ಪುರಾತತ್ವ ಸಾಕ್ಷ್ಯಾಧಾರಗಳು ಗುಡ್ಡದ ಮೇಲೆ ಹಾಗೂ ಗುಡ್ಡದ ವಿವಿಧ ಶ್ರೇಣಿಗಳ 21 ಸ್ಥಳಗಳಲ್ಲಿ ಕಂಡುಬಂದಿವೆ. ಪ್ರತ್ಯೇಕ ಸ್ಥಳಗಳಲ್ಲಿನ ವಿವಿಧ ಕುರುಹುಗಳ ಇರುವಿಕೆಯನ್ನು ಪಟ್ಟಿಕೆ–1ರಲ್ಲಿ ಹಾಗೂ ಚಿತ್ರ–4ರಲ್ಲಿ ಸೂಚಿಸಲಾಗಿದೆ. ಮಧ್ಯಮ ಹಾಗೂ ಮೇಲ್ಭಾಗದ ಗುಡ್ಡದ ತಾರಸಿಗಳಲ್ಲಿ, ಅದರಲ್ಲಿಯೂ ಉತ್ತರ ಹಾಗೂ ದಕ್ಷಿಣ ಭಾಗದಲ್ಲಿ ಹೆಚ್ಚಾಗಿ ಕಂಡುಬಂದಿವೆ.

AMS ಕಾಲಗಣನೆ[12] ಹಾಗೂ ಬಯೋಸಿಯನ್ ಕಾಲಗಣನಾ ಮಾದರಿಗಳು[13] ದಕ್ಷಿಣ ನವಶಿಲಾಯುಗವು ಸುಮಾರು ಸಾಮಾನ್ಯ ಶಕ ಪೂರ್ವ (ಸಾ.ಶ.ಪೂ.) 2800 ರಿಂದ ಸಾ.ಶ.ಪೂ. 1400ರ ಕಾಲಾವಧಿಯಲ್ಲಿ ಉತ್ತರ ಕರ್ನಾಟಕ ನೆಲೆಗಳು ವಿವಿಧ ಸಾಂಸ್ಕೃತಿಕ ಹಂತಗಳಲ್ಲಿ ಜೀವಂತವಾಗಿದ್ದವು. ಅದರಲ್ಲಿಯೂ ಗುಡ್ಡದ ಮೇಲೆ ಹಾಗೂ ಗುಡ್ಡದ ಬುಡಗಳ ನಡುವೆ ಔದ್ಯೋಗಿಕ ಬದಲಾವಣೆಗಳು ಕಂಡಿವೆ. ನಂತರ ಸುಮಾರು ಸಾ.ಶ.ಪೂ. 1400–1200ರ ಅಂತರದಲ್ಲಿ ಸಂಗನಕಲ್ಲು ನೆಲೆಗಳಲ್ಲಿ ನವಶಿಲಾಯುಗ – ಕಬ್ಬಿಣ ಯುಗದ ನಡುವಿನ ಪರಿವರ್ತನೆಯ ಕಾಲ ಎಂದು ಬೃಹತ್ ಶಿಲಾಯುಗದ ಸಾಂಸ್ಕೃತಿಕ ವಸ್ತುಗಳ ಮೂಲಕ ತಿಳಿಯುತ್ತದೆ. ಈ ಕಾಲದಲ್ಲಿ ಮಧ್ಯ ಹಾಗೂ ದಕ್ಷಿಣ ದಖ್ಖನ್ ಪ್ರಾಂತ್ಯಗಳಲ್ಲಿ ಅತೀ ಶುಷ್ಕ ವಾತಾವರಣದ ಪರಿಸ್ಥಿತಿ ಎದುರಾಗಿತ್ತು.[14]

ಸಮರ್ಥ ಭಾರತೀಯ ಬೇಸಿಗೆ ಮುಂಗಾರು (Indian summer monsoon/ ISM) ಹೊರತಾಗಿಯೂ ಅತೀ ಶುಷ್ಕ ಪರಿಸ್ಥಿತಿ ಎದುರಾಗಿದ್ದವು ಎಂದು ಪ್ರಾಚೀನ ಹವಾಮಾನ (Palaeoclimate) ಮತ್ತು ಪ್ರಾಚೀನ ವಾತಾವರಣಗಳ (Palaeoenvironment) ಅಧ್ಯಯನಗಳು ಸೂಚಿಸುತ್ತಿವೆ.[15] ಈ ತರಹದ ಪರಿಸ್ಥಿತಿ ಸುಮಾರು ಸಾ.ಶ.ಪೂ. 1200 ರಿಂದ

ಸಾ.ಶ. 300ರವರೆಗೂ ಮುಂದುವರೆದಿದೆ. ಹೀಗಾಗಿ ನವಶಿಲಾಯುಗದಿಂದ ಆರಂಭವಾದ ಕೃಷಿ ಉತ್ಪನ್ನಗಳು ಹಾಗೂ ಶುಷ್ಕ ವಾತಾವರಣದ ಮುಂದುವರೆದ ಕಾಲದಲ್ಲಿ ಉಗಮಿಸಿದ ಕಬ್ಬಿಣ ಯುಗದಲ್ಲಿ ಹೊಸ ಬೆಳೆಗಳ ಹಾಗೂ ಕೃಷಿಯ ಪದ್ಧತಿಗಳಲ್ಲಿ ಬದಲಾವಣೆ ಕಂಡವು,[16] ಅಂತೆಯೇ ನೀರಿನ ಬುಗ್ಗೆಗಳ ಮತ್ತು ನೀರು ಶೇಖರಣೆಯ ಸ್ಥಳಗಳ ಪ್ರಾಮುಖ್ಯತೆಯ ನಡುವೆ ನೀರಿನ ತೊಟ್ಟಿಗಳು ಪರಿಚಿತವಾದವು. ಉದಾ. ಕಡೆಬಾಕಿಲು[17] ಈ ಎಲ್ಲಾ ಹಿನ್ನೆಲೆಯಲ್ಲಿ ಬಿಲಮರಾಯನಗುಡ್ಡದ ಕುಟ್ಟಿದ ಚಿತ್ರಗಳು ಹಾಗೂ ಕಂಸಾಳೆ ಬಂಡೆಗಳ ತಯಾರಿಕೆಗಳು, ಅವರ ಧಾರ್ಮಿಕ ಕಾರ್ಯಗಳ ಉಗಮವಾಗುತ್ತಾ, ಕಾಲಕ್ರಮೇಣ ಅಂತಹ ತಾಣಗಳಲ್ಲಿ ನವಶಿಲಾಯುಗದ ಜನರು ಬೇರೆ ತರಹದ ಚಟುವಟಿಕೆಗಳನ್ನು ವಿಶೇಷವಾಗಿ ಅವರ ಆಯುಧಗಳನ್ನು ನುಣುಪುಗೊಳಿಸುತ್ತಾ ಹಾಗೂ ಧಾನ್ಯ ಪರಿಷ್ಕರಣೆಗಳಲ್ಲಿ ತೊಡಗಿರಬಹುದು. ಕಾಲ ಕ್ರಮೇಣ ಇವುಗಳು ಧಾರ್ಮಿಕ ಹಾಗೂ ಆರ್ಥಿಕ ಸ್ವರೂಪ ಪಡೆದಿರಬಹುದು. ಗೂಳಿಗಳ ಚಿತ್ರಗಳಲ್ಲಿ ನೈಜತೆಯಿಂದ ಪ್ರಾಕೃತ (Naturalistic to Crude) ಹಂತಗಳೂ ಕಂಡುಬಂದಿವೆ; ಇದು ನವಶಿಲಾಯುಗ ಹಾಗೂ ಕಬ್ಬಿಣಯುಗದ ವಿಶೇಷತೆಯನ್ನು ಸೂಚಿಸಿದೆ. ಕಬ್ಬಿಣ ಯುಗದ ಜನರಿಗೆ ಇಂತಹ ಸ್ಥಳಗಳು ನವಶಿಲಾಯುಗದ ಸಾಂಕೇತಿಕ ಸ್ಥಳಗಳಾಗಿ ಕಂಡಿರಬಹುದು. ಶುಷ್ಕ ಹಾಗೂ ಹೆಚ್ಚಿದ ಜನಸಂಖ್ಯೆಯ ಪರಿಣಾಮವಾಗಿ ನೀರಿನ ಪ್ರಾಮುಖ್ಯತೆಯನ್ನು ಅರಿತು, ನೀರಿನ ತೊಟ್ಟಿಗಳ ಮುಖಾಂತರ ಸಂಸ್ಕೃತಿಯ ಏಳಿಗೆ ಕಂಡಿರಬಹುದು. ಕಲೆ, ಕಂಸಾಳೆ ಬಂಡೆಗಳು ಹಾಗೂ ಜಾಡುಗಳ ಮುಖಾಂತರ ಗುಡ್ಡದ ಮೇಲೆ ನವಶಿಲಾಯುಗದ ಜನರು ವಿವಿಧ ಚಟುವಟಿಕೆಗಳಲ್ಲಿ ತೊಡಗುತ್ತಾ, ನವಶಿಲಾಯುಗ – ಕಬ್ಬಿಣ ಯುಗದ ಸಂಕ್ರಮಣ ಕಾಲದಲ್ಲಿ ಹಾಗೂ ಪರಿಪೂರ್ಣ ಕಬ್ಬಿಣ ಯುಗದಲ್ಲಿ ನೀರಿನ ತೊಟ್ಟಿಗಳ ನಿರ್ಮಾಣವಾಗಿರಬಹುದು.


ಈ ಲೇಖನದಲ್ಲಿ ಉಲ್ಲೇಖಿಸಿರುವ ಬಿಲಮರಾಯನ ಗುಡ್ಡದ ಸಾಮಾಜಿಕ, ಆರ್ಥಿಕ ಪ್ರಗತಿ ಹಾಗೂ ಬದಲಾವಣೆಗಳು ಪೂರ್ವಭಾವಿಯಾಗಿರುತ್ತದೆ.



ಚಿತ್ರ 1. ನವಶಿಲಾಯುಗದ ಕೆಲವು ಪ್ರಮುಖ ನೆಲೆಗಳು:
1. ಬಿಲ್ಲಮರಾಯನಗುಡ್ಡ, 2. ಫಿಕ್ಲಿಹಾಳ, 3. ಮಸ್ಕಿ, 4. ಮಾನ್ವಿ, 5. ಗೌಡೂರ್, 6. ವಂಡಳ್ಳಿ, 7. ವಟಗಲ್ಲು



ಚಿತ್ರ 2. ಬಿಲಮರಾಯನಗುಡ್ಡ ನೆಲೆಯ ದಕ್ಷಿಣ ದಿಕ್ಕಿನ ಸಾಮಾನ್ಯ ನೋಟ.



ಚಿತ್ರ 3. ಎ. ಕುಟ್ಟುಚಿತ್ರಗಳು, ಬಿ. ಕಂಸಾಳೆ ಬಂಡೆಗಲ್ಲು, ಸಿ. ನೈಸರ್ಗಿಕ ನೀರಿನ ಗುಂಡಿಗಳು
ಡಿ ಮತ್ತು ಇ. ನವಶಿಲಾಯುಗದ ಆಯುಧಗಳನ್ನು ನಯಗೊಳಿಸಿದ ಗುರುತುಗಳು



ಚಿತ್ರ 4. Integrated locations of rock bruisings, ringing rocks, grooves, slicks, and water pools across the lower, middle, upper and hilltop, Bilamrayanagudda. See this figure with

Table 1. ಬಿಲ್ಲಮರಾಯನಗುಡ್ಡದ ಪುರಾತತ್ತ್ವ ಪುರಾವೆಗಳ ಸಂದರ್ಭೋಚಿತ ವಿಶ್ಲೇಷಣೆ.
See this table with Figure 4.

Code: L:Lower terrace (300-315m msl). M: Middle terrace (316-325m msl).U: Upper terrace 326-335m msl).HT: Hilltop.

ಸಂಖ್ಯೆ	ಕುಟ್ಟು ಚಿತ್ರಗಳು	ಕಂಸಾಳೆ ಕಲ್ಲುಗಳು	ನೀರಿನ ತೊಟ್ಟಿಗಳು	ಕೊರಕಲುಗಳು	Slick
L1	Manava	■		■	■
L17	Gooli	■	■	■	■
M2	Gooli				
M3		■			
M4	Huli				
M5	Ane				
M10	JinkemattuManavas				
M11	Gooli				
M12			■		
M13	Gooli	■	■	■	■
U6	Gooli				
U7	Gooli	■			
U8	Manava	■	■	■	■
U14			■	■	■
U15	Gooli	■			
U16	Gooli	■		■	
U20			■		
HT19	Gooli	■	■	■	■
HT9		■	■	■	■
HT20			■		
HT21			■		

ಕೃತಜ್ಞತೆಗಳು

ಇತಿಹಾಸ ದರ್ಪಣದ ವಿಶೇಷ ಸಂಚಿಕೆಗೆ ನನ್ನಿಂದ ಈ ಲೇಖನವನ್ನು ಆಹ್ವಾನಿಸಿದ ಹಂ.ಗು.ರಾಜೇಶ್ ಅವರಿಗೆ ನನ್ನ ವಂದನೆಗಳು. ಕನ್ನಡದಲ್ಲಿ ಬರೆಯುವ ಹವ್ಯಾಸವಿಲ್ಲದ ನನ್ನ ಲೇಖನದ ಕರಡು ಆವೃತ್ತಿಯನ್ನು ಶ್ರಮವಹಿಸಿ ಸಂಪಾದಿಸಿರುತ್ತಾರೆ. ಅದೇ ರೀತಿ ಬಿಲಮರಾಯನಗುಡ್ಡದಲ್ಲಿ ಕ್ಷೇತ್ರಕಾರ್ಯ ನಡೆಸುವ ಸಂದರ್ಭದಲ್ಲಿ ವ್ಯವಸ್ಥೆಗಳನ್ನು ಕಲ್ಪಿಸಿಕೊಟ್ಟ

ಲಿಂಗಸಗೂರಿನ ವಿ.ಸಿ.ಬಿ. ಕಾಲೇಜಿನ ಮುಖ್ಯಸ್ಥರಿಗೂ ಹಾಗೂ ಅಲ್ಲಿನ ಅಧ್ಯಾಪಕರಾದ ಡಾ.ಸುಜಾ ಅವರಿಗೂ ನನ್ನ ವಂದನೆಗಳು. ನನಗೆ ಜೆ.ಆರ್.ಎಫ್ ನೀಡುವ ಮೂಲಕ ಈ ಸಂಶೋಧನೆಯನ ಸಾಧ್ಯವಾಗಿಸಿದ ಐ.ಸಿ.ಎಚ್.ಆರ್.ಗೂ ಸಹ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಕೊನೆ ಟಿಪ್ಪಣಿಗಳು

1. Korisettar and Prassanna , 2014.
2. Allchin, 1960.
3. Korisettar and Prasanna 2014, Roberts et.al. 2015.
4. Thapar, 1949; Johansen and Bauer, 2015.
5. Paddayya, 1999.
6. Devaraj et.al. 1995.
7. Robert Bruce Foote, 1919: 173.
8. Foote 1919; Allchin and Allchin 1994-1995; Gordon and Allchi 1955; Sundar 1994.
9. Paddayya 1976; Boivin 2003 etc.
10. Boivin 2004; Korisettar and Prasanna 2014.
11. Korisettar & Prasanna, 2014; Boivin, et.al. 2007; Boivin 2004.
12. Fuller, et.al. 2007.
13. Roberts, et.al. 2015.
14. Ponton, et. al. 2012.
15. Ponton, et al. 2012.
16. Fuller, et. al. 2007.
17. Morrison, et. al. in Press; Bauer and Trivedi 2013; Robers, et. a 2015; Korisettar 2014.

ಆಧಾರ ಸೂಚಿ

1. Allchin, F.R and Allchin, B. 1994-95. 'Rock Art of North Karnataka *Bulletin of the Deccan College Research Institute 54/55, 313-339.*

2. Allchin, F.R. 1960. *Excavations at Piklihal.* Andhra Prades Government Archaeological Series no.1.Government of Andhr Pradesh: Hydrabad.

3. Allchin, F.R., Allchin, B., 2012. *From the Oxus to Mysore in 1951: Th Start of a Great Partnership in Indian Scholarship.* Hardinge Simpole Kilkerran.

4. Bauer, A. M. and Trivedi, T. M., 'Contextualizing megalithic places survey, mapping, and surface documentation in the environs of Hir

Benakal (Koppal District, Karnataka). *Man and Environment, 2013, 38, 46–61.*

5. Bauer, AM., Trivedi M., 2013. Contextualizing Megalithic Places: Survey, Mapping, and Surface Documentation in the Environs of Hire Benkal (Koppal district, Karnataka), *Man and Environment XXXVIII (2), 46-61.*

6. Boivin, N., 2004. 'Rock Art and Rock Music: Petroglyphs of the South Indian Neolithic'. *Antiquity 78 (299): 38-53.*

7. Boivin, N., Brumm,A., Lewis, H., Robinson, D and Korisettar,R. 2007. 'Sensual, material, and technological understanding: exploring prehistoric soundscapes in south India'. Journal of the Royal *Anthropological Institute (N.S.) 13, 267-294.*

8. Devaraj, D.V., Shaffer, J.G., Patil, C.S. &Balasubramanya. 1995. 'The Watgal excavations: an interim report'. *Man and Environment 20(2): 57-74.*

9. Foote, R.B. 1916. *The Foote Collection of Indian Prehistoric and Protohistoric Antiquities, and Notes on their Ages and Distribution* (Madras: Government Museum, 1916), p. 191.

10. Fuller, D.Q., Boivin, N. and Korisettar, R. 2007. 'Dating the Neolithic of South India: new radiometric evidence for key economic, social and ritual transformations', *Antiquity, 81(313)*, pp. 755–778.doi: 10.1017/S0003598X00095715.

11. Johansen, P. G. and Bauer, A. M., 'Beyond culture history at Maski: land use, settlement and social differences in Neolithic through medieval South India.' *Archaeological Research in Asia*, 2015, http://dx.doi.org/10.1016/j.ara.2014.12.001.

12. Korisettar, R., Prasanna, O., 2014. 'Sanganakallu.' In *History of India: Protohistoric Foundations* (D.K. Chakrabarti and M. Lal Ed.), pp. 824-842. Vivekananda International Foundation and Aryan Books International, New Delhi.

13. Morrison, K. D. 2009. *Daroji Valley: landscape history, place, and the making of a dryland reservoir system.* Manohar Publishers & Distributors, New Delhi

14. Morrison, K.D., Lycett, M.T and Trivedi, M. (in press). Megaliths and Memory: Kadebakele and the Megaliths of Northern Karnataka'. In the *South Asian Archaeology 2010, Proceedings of the European Association of South Asian Archaeology,* Vienna

15. Morrison, K.D., Sinopoli, C.M., Gopal, R., 2009. *Late Prehistoric an Early Historic Landscapes of the Tungabhanadra Valley:* Report o the 2009 Season, Report Submitted to the Archaeological Survey o India, Delhi.

16. Munn, L. 1934. 'Prehistoric and Protohistoric finds'. *The Journal o Hyderabad Geological Society Vol. II (1).*

17. Paddayya, K. 1976. 'Cup-Marks in the Shorapur Doab (South India) *Man, 11(1),* new series, 35-38.doi:10.2307/2800386.

18. Ponton C, Giosan L, Eglinton TI, Fuller DQ, Johnson JE, Kumar Collett TS (2012) 'Holocene aridification of India.' *Geophys Res Le 39.doi:10.1029/2011GL050722*

19. Roberts, P., Boivin, N., Petraglia, M., Masser, P., Meece, S., Weisskop A., Silva, V., Korisettar, R. and D, Q Fuller., 2015. 'Local diversity i settlement, demography and subsistence across the Souther Indian Neolithic-Iron Age transition: site growth and abandonmer at Sanganakallu-Kupgal'. *Archaeological Anthropological Sciences.*

20. Sugandhi, N.S., 2014. 'Tekkalakota through the ages: recent researc and perspectives'. *Man and Environment, 36, 61-79.*

21. Thapar, B. K., 1957. 'Maski: a Chalcolithic site of the Souther Deccan'. *Ancient India, 13, 4-142.*

22. ಸುಂದರ ಅ., 1994. **ಕರ್ನಾಟಕ ಪ್ರಾಗಿತಿಹಾಸಕಾಲದ ಕಲೆ,** ಲಲಿತ ಕಲಾ ಅಕಾಡೆ ಬೆಂಗಳೂರು

ಕೊಳ್ಳೇಗಾಲ ತಾಲ್ಲೂಕಿನ ಎರಡು ಅಪರೂಪದ ಬಂಡೆ ಚಿತ್ರಗಳು

ಶೋಭಾ ವಿ.
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ವಿಭಾಗ
ಮಾನಸಗಂಗೋತ್ರಿ
ಮೈಸೂರು

ಕರ್ನಾಟಕದಲ್ಲಿ ಶಿಲಾಚಿತ್ರಗಳ ಪರಂಪರೆ ಸೂಕ್ಷ್ಮಶಿಲಾಯುಗ ಕಾಲದಿಂದ ಆರಂಭಗೊಳ್ಳುತ್ತದೆ. ವರ್ಣಚಿತ್ರ, ಗೀರುಚಿತ್ರ ಮತ್ತು ಕುಟ್ಟುಚಿತ್ರಗಳೆಂಬ ಮೂರು ಪ್ರಕಾರಗಳಲ್ಲಿ ಕಂಡುಬರುವ ಇಂತಹ ಚಿತ್ರಗಳು ಕರ್ನಾಟಕದಲ್ಲಿ ವ್ಯಾಪಕವಾಗಿ ಕಾಣಸಿಗುವುದು ಬಾಗಲಕೋಟೆ, ಬಳ್ಳಾರಿ, ರಾಯಚೂರು, ಕೊಪ್ಪಳ, ಚಿತ್ರದುರ್ಗ, ಶಿವಮೊಗ್ಗ ಹಾಗೂ ಕರಾವಳಿಯ ಕೆಲವು ಭಾಗಗಳಲ್ಲಿ (ಸುಂದರ 1994). ವರ್ಣಚಿತ್ರಗಳು ಹೆಚ್ಚಾಗಿ ಕಲ್ಲಾಸರೆಗಳ ಗೋಡೆಗಳ ಮೇಲಿದ್ದರೆ ಗೀರು ಮತ್ತು ಕುಟ್ಟುಚಿತ್ರಗಳು ಗುಡ್ಡಗಳ ಮೇಲಿನ ಬಿಡಿಬಂಡೆಗಳಲ್ಲಿ ಮತ್ತು ಬಯಲು ಬಂಡೆಗಳಲ್ಲಿ ಪ್ರಧಾನವಾಗಿ ಕಂಡುಬರುತ್ತವೆ. ಕರ್ನಾಟಕದ ದಕ್ಷಿಣ ಭಾಗದಲ್ಲಿ ಇಂತಹ ಚಿತ್ರಗಳು ವಿರಳವಾಗಿ ವರದಿಯಾಗಿವೆ. ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು (ನಾಯಕ 2009), ಮಂಡ್ಯಜಿಲ್ಲೆಯ ತೂಬಿನಕೆರೆ/ವೇದಿಕ್ ನಗರ (ಜಯರಾಮಯ್ಯ ಮತ್ತು ಇತರರು 2000). ಚನ್ನಪಟ್ಟಣದ ದಾಬಾನುಗುಂಡು (ಜಯರಾಮಯ್ಯ ಮತ್ತು ಇತರರು 2000), ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕು (ಮುತ್ತುರಾಜು 1995) ಮತ್ತು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ (ಸುಬ್ರಹ್ಮಣ್ಯಂ 2011) ಕೆಲವು ಚಿತ್ರಿತ ಬಂಡೆ ನೆಲೆಗಳು ಬೆಳಕಿಗೆ ಬಂದಿವೆ. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯ




ಚಿತ್ರ 1: ನೆಕ್ಕುಂದಿ– ಗೀರುಚಿತ್ರಗಳು



ಚಿತ್ರ 2: ಕೋಣನಮಾರಿ ದೈವಸ್ಥಾನ



ಚಿತ್ರ 3: ಮಿಣ್ಯಂನಲ್ಲಿರುವ ಚಿತ್ರಿತ ಬಂಡೆ



ಚಿತ್ರ 4: ಮಿಣ್ಯಂನ ಕುಟ್ಟು ಚಿತ್ರಗಳು


ಕೊಳ್ಳೇಗಾಲ ತಾಲ್ಲೂಕಿನಲ್ಲಿ ನೆಕ್ಕುಂದಿ ಮತ್ತು ಮಿಣ್ಯಂ ಎಂಬ ಅಕ್ಕಪಕ್ಕದ ಹಳ್ಳಿಗಳಲ್ಲಿರುವ ಎರಡು ಬಂಡೆಚಿತ್ರಗಳು ಮಹತ್ವಪೂರ್ಣವಾಗಿವೆ.

ನೆಕ್ಕುಂದಿ ಅಥವಾ ಲಕ್ಕುಂದಿ ಹಾಗೂ ಮಿಣ್ಯಂ ಗ್ರಾಮಗಳು ಕೊಳ್ಳೇಗಾಲ ಪಟ್ಟಣದಿಂದ ಸುಮಾರು 70ಕಿಮೀ ಆಗ್ನೇಯದಲ್ಲಿ ತಮಿಳುನಾಡು-ಕರ್ನಾಟಕದ ಗಡಿಗೆ ಹೊಂದಿಕೊಂಡಂತೆ ಇವೆ. ಈ ಗ್ರಾಮಗಳು ಪೂರ್ವ ಪಶ್ಚಿಮಾಭಿಮುಖವಾಗಿ 15 ಕಿಮೀ ಹಾಗೂ ಉತ್ತರ-ದಕ್ಷಿಣಾಭಿಮುಖವಾಗಿ 1-3 ಕಿಮೀ ಅಗಲವಿರುವ ಪುಟ್ಟ ಕಣಿವೆಯಲ್ಲಿವೆ. ಮಲೆಮಹದೇಶ್ವರ ಬೆಟ್ಟಸಮೂಹಗಳಲ್ಲಿರುವ ಈ ಕಿರಿದಾದ ಕಣಿವೆ ಸಂಪೂರ್ಣವಾಗಿ ಬೆಟ್ಟಗಳಿಂದ ಆವೃತವಾಗಿದೆ. ಕಣಿವೆಯ ಪಶ್ಚಿಮ ತುದಿಯಲ್ಲಿ ಕೊಪ್ಪ ಗ್ರಾಮವೂ ಪೂರ್ವ ತುದಿಯಲ್ಲಿ ಹೂಗ್ಯ ಗ್ರಾಮವೂ ಇವೆ. ಹೂಗ್ಯ ಈ ಕಣಿವೆಯಲ್ಲಿರುವ ಪ್ರಮುಖ ಗ್ರಾಮ (ನಕ್ಷೆ 1 ಮತ್ತು 2). ಈಗ ಮಳೆಗಾಲದಲ್ಲಿ ಮಾತ್ರ ಹರಿಯುವ ಮಿನ್ನಾಟ್ಟು ಹಳ್ಳದ ಬದಿಯಲ್ಲಿ ಸಾಗಿರುವ ಈ ಕಣಿವೆಯ ಉದ್ದಗಲಕ್ಕೆ ಬೃಹತ್ ಶಿಲಾಯುಗ ಸಮಾಧಿಗಳು, ಮುಖ್ಯವಾಗಿ ಕಲ್ಲುಪ್ಪೆ ವೃತ್ತ ಮತ್ತು ಕಲ್ಲುವೃತ್ತಗಳು ಹರಡಿವೆ (ಇಂ.ಆ.ರಿ 1960-61, ಪು 34-35; ಕೃಷ್ಣಮೂರ್ತಿ 1978; ಶೋಭಾ 2014). ಗಾಜನೂರು ಮತ್ತು ನೆಕ್ಕುಂದಿ ಗ್ರಾಮಗಳಲ್ಲಿ ಆದಿ ಇತಿಹಾಸ ಕಾಲ/ಇತಿಹಾಸ ಕಾಲದ ವಸತಿ ನೆಲೆಗಳಿವೆ.

ನೆಕ್ಕುಂದಿ ಗ್ರಾಮದಿಂದ ಸುಮಾರು ಅರ್ಧ ಕಿಲೋಮೀಟರ್ ಪಶ್ಚಿಮದಲ್ಲಿ, ಗಾಜನೂರು-ಹೂಗ್ಯ ರಸ್ತೆಗೆ ಪಶ್ಚಿಮಕ್ಕೆ, ಸರ್ಕಾರಿ ಆಸ್ಪತ್ರೆಯ ಎದುರಿಗೆ, ಬೃಹತ್‌ಶಿಲಾಯುಗ ಸಮಾಧಿಗಳ ಸಮೂಹವಿದೆ. ಈಗ ಸುಮಾರು 48 ಕಲ್ಲುಪ್ಪೆ ವೃತ್ತ ಹಾಗೂ ಕಲ್ಲು ವೃತ್ತ ಸಮಾಧಿಗಳು ಇಲ್ಲಿ ಉಳಿದಿದ್ದು ಇವನ್ನು ಸ್ಥಳೀಯವಾಗಿ ಮೋರಿಯರ ಗುಡ್ಡೆಗಳೆಂದು ಕರೆಯುತ್ತಾರೆ. ಈ ಸಮೂಹಕ್ಕೆ ಸೇರಿದಂತಿರುವ ಉದ್ದವಾಗಿ ನಿಲ್ಲಿಸಿರುವ ನೈಸರ್ಗಿಕ ಬಂಡೆಯ (43"x30"x19/22") ಒಂದು ಪಾರ್ಶ್ವದ ಮೇಲೆ ಕೊರೆದ ಗೋಲಾಕಾರ ಮತ್ತು ಅಂಡಾಕಾರದ ಜ್ಯಾಮಿತೀಯ ರಚನೆಗಳಿವೆ (ಚಿತ್ರ 1). ಮಂದವಾದ ಆದರೆ ಹೆಚ್ಚು ಆಳವಿರದ ರೇಖೆಗಳಿಂದ ಇವನ್ನು ರಚಿಸಲಾಗಿದೆ.



ನಕ್ಷೆ 1



ನಕ್ಷೆ 2

ಈ ಬಂಡೆಗೆ ನೇರವಾಗಿ, ಸುಮಾರು 10 ಅಡಿ ಪಶ್ಚಿಮ ಮತ್ತು ದಕ್ಷಿಣದಲ್ಲಿ, ಮರ ದ್ವಾರಬಂಧದಂತಿರುವ ರಚನೆಗಳನ್ನು ನಿಲಿಸಿದ್ದು ಇದನ್ನು ಕೋಣನ ಮಾ ದೈವಸ್ಥಾನವೆಂದು ಸ್ಥಳೀಯರು ಗುರುತಿಸುತ್ತಾರೆ (ಚಿತ್ರ 2). ಗೀರುಚಿತ್ರವಿರುವ ಬಂಡೆಯ ಕೋಣನ ಮಾರಿ ದೇವಾಲಯದ ಭಾಗವಾಗಿದ್ದು, ಈ ಕಣಿವೆಯ ಅತಿದೊಡ್ಡ ಜಾತ್ರೆಯಾ ಮಾರಿ ಜಾತ್ರೆಯ ಸಮಯದಲ್ಲಿ ಪೂಜೆಗೆ ಒಳಪಡುತ್ತದೆ. ಜಾತ್ರೆಯ ಕೋಣದ ತಲೆಯನ

ಈ ಬಂಡೆಗೆ ತಗುಲಿಸಿ ಮೆರವಣಿಗೆ ಒಯ್ಯುವುದು ಪದ್ಧತಿ. ಹೀಗೆ ಈ ಬಂಡೆ ಸ್ಥಳೀಯ ಜನಮಾನಸದಲ್ಲಿ ಧಾರ್ಮಿಕ ಸ್ಥಾನವನ್ನು ಪಡೆದಿದೆ.

ಮಿಣ್ಯಾಂ ಗ್ರಾಮದ ನಡುಭಾಗದಲ್ಲಿ ಗಾಜನೂರು–ಹೂಗ್ಯ ರಸ್ತೆಗೆ ತಾಗಿದಂತೆ ನೈಸರ್ಗಿಕ ಬಂಡೆಗಳಿಂದಲೂ ಸೈಜುಗಲ್ಲುಗಳಿಂದಲೂ ಕಟ್ಟಿದ ಕಟ್ಟೆಯಿದೆ. ಕಟ್ಟೆಯ ಅಕ್ಕಪಕ್ಕದಲ್ಲಿ ನಂದಿ, ಲಿಂಗ, ಭಗ್ನಗೊಂಡ ಶಿಲ್ಪವೊಂದರ ಪಾದಗಳು, ಸೂರ್ಯ ಮುಂತಾದ ಬಿಡಿ ಶಿಲ್ಪಗಳಿವೆ. ಕಟ್ಟೆಗೆ ಬಳಸಲಾಗಿರುವ ಒಂದು ನೈಸರ್ಗಿಕ ದುಂಡುಬಂಡೆಯ ಮೇಲೆ ಕುಟ್ಟಮಾಡಿದಂತೆ ತೋರುವ ಎರಡು ಚಿತ್ರಗಳಿವೆ (ಚಿತ್ರ 3). ಈ ಸಣ್ಣಬಂಡೆ ಕಲ್ಲುವೃತ್ತ ಸಮಾಧಿಗಳಲ್ಲಿ ಬಳಕೆಯಾಗಿರುವ ಬಂಡೆಗಳಂತೆಯೇ ಇದೆ. ಇದರ ಮೇಲಿರುವ ಒಂದು ಚಿತ್ರ ಕುದುರೆಯದು; ಮತ್ತೊಂದು ನಾಲ್ಕುಗಂಟಿನ ಮಂಡಲದ್ದು (ಚಿತ್ರ 4). ಬಾಗಿದ ತಲೆಯ, ಎತ್ತಿದ ಬಾಲದ ಕುದುರೆಯ ಶರೀರದ ರೇಖೆಗಳು ನೈಜ ನಿಲುವನ್ನು ಪ್ರತಿಬಿಂಬಿಸುವಂತಿವೆ. ಕುತ್ತಿಗೆಯ ಮೇಲಿರುವ ಆರು ಗೆರೆಗಳು ಜುಟ್ಟನ್ನು ತೋರಿಸುತ್ತವೆ. ಬೆನ್ನಿನ ಮೇಲೆ ಬಟ್ಟೆಯನ್ನು ಹಾಸಿರುವಂತಿದೆ ಅಥವಾ ಇದು ಆಯತಾಕಾರದ ಚಿತ್ರದ ಭಾಗವಾಗಿದ್ದರೂ ಇರಬಹುದು. ಕುತ್ತಿಗೆ ಮತ್ತು ಪೃಷ್ಠ ಭಾಗದಲ್ಲಿ ಮಾಲಾಲಂಕಾರವಿರುವಂತೆ ತೋರುತ್ತದೆ. ಚಿತ್ರವನ್ನು ಕುಟ್ಟಿರಚಿಸಿರುವುದರಿಂದ ಸಮೀಪದಿಂದ ನೋಡಿದಾಗ ರೇಖೆಗಳು ಒಂದೇ ಸಮನಾಗಿರದೆ ಒಡಕಾಗಿರುವುದು ತೋರುತ್ತದೆ. ಉತ್ತರ ಕರ್ನಾಟಕದ ಬೃಹತ್ ಶಿಲಾಯುಗ ಮತ್ತು ಇತಿಹಾಸಕಾಲದ ವರ್ಣಚಿತ್ರಗಳಲ್ಲಿ ತೋರಿಸಿರುವ ಕುದುರೆಯ ಶಾರೀರಿಕ ಚಿತ್ರಣಕ್ಕಿಂತ ಇದು ಭಿನ್ನವಾಗಿದೆ.

ಕುದುರೆಯ ಮೇಲ್ಭಾಗದಲ್ಲಿ ರಚಿಸಿರುವ ನಾಲ್ಕು ಗಂಟಿನ ಮಂಡಲದ ಚಿತ್ರವು ವಿಶೇಷವಾದ್ದು. ಮಂಡಲದ ಮೇಲ್ಭಾಗದಲ್ಲಿ ಸೂರ್ಯನ ಕಿರಣಗಳಂತೆ ಗೆರೆಗಳನ್ನು ತೋರಲಾಗಿದೆ. ಈ ಗೆರೆಗಳನ್ನೆಲ್ಲ ಬಂಧಿಸಿದಂತೆ ಅವುಗಳ ಮೇಲೆ ಮಂಡಲದ ನಡುಮಧ್ಯದಿಂದ ಮತ್ತೊಂದು ಅರ್ಧವೃತ್ತಾಕಾರವನ್ನು ರಚಿಸಿ ಮತ್ತೆ ಅದರ ಮೇಲೆ ಕಿರಣಗಳಂತೆ ಗೆರೆಗಳನ್ನು ಮೂಡಿಸಲಾಗಿದೆ. ಈ ಅರ್ಧವೃತ್ತವು ಮಂಡಲದ ಕೆಳಗಿನ ಅರ್ಧವೃತ್ತವನ್ನು ಕೂಡಿಕೊಳ್ಳುತ್ತದೆ. ಕುದುರೆ ಹಾಗೂ ಮಂಡಲದ ಚಿತ್ರ ರಚನೆಯ ವಿಧಾನದಲ್ಲಿ ಸಾಮ್ಯತೆ ಇರುವುದರಿಂದ ಇವು ಸಮಕಾಲೀನವೆಂದು ತಿಳಿಯಬಹುದು. ಈ ಕುಟ್ಟುಚಿತ್ರಗಳು ಮಧ್ಯಯುಗೀನ ಕಾಲದ್ದಾಗಿರುವ ಸಾಧ್ಯತೆ ಹೆಚ್ಚು.

ಕರ್ನಾಟಕದಲ್ಲಿ ನಾಲ್ಕು ಮತ್ತು ಆರು ಗಂಟಿನ ಮಂಡಲದ ಚಿತ್ರಗಳು ಹಲವೆಡೆ ಕಂಡುಬಂದಿವೆ (ಸುಂದರ 1994: ಪು. 47–49). ನಾಲ್ಕುಗಂಟಿನ ಗೀರು ಚಿತ್ರಗಳು ಹೊಳಲೂರು (ಶಿವಮೊಗ್ಗ ಜಿಲ್ಲೆ), ಚಿತ್ರದುರ್ಗ ಮತ್ತು ಗುಡ್ನಾಪುರ (ಉತ್ತರಕನ್ನಡ ಜಿಲ್ಲೆ) ಗಳಲ್ಲಿ ಬಂಡೆಗಳ ಮೇಲೆ ತೋರಿಬಂದಿವೆ (ಸುಂದರ 1996, 2002,). ಹೊಳಲೂರಿನ ಚಿತ್ರವು ಕ್ರಿ.ಪೂ.ಸು. 600–300ರ ಅವಧಿಯದೆಂದೂ ಚಿತ್ರದುರ್ಗದ ಚಿತ್ರವು ಇತಿಹಾಸ ಕಾಲದ್ದಾಗಿರಬಹುದೆಂದೂ ಅಂದಾಜಿಸಲಾಗಿದೆ. ಗುಡ್ನಾಪುರದಲ್ಲಿರುವ ಚಿತ್ರವು ಶಂಖ, ಚಕ್ರ, ನಕ್ಷತ್ರ, ವಜ್ರ ಮುಂತಾದ ಇತರ ಚಿತ್ರಗಳೊಂದಿಗಿದ್ದು ಇದರ ಕಾಲಮಾನ ಕ್ರಿ.ಶ.ಸು. 17–18ನೆಯ ಶತಮಾನ. ನಾಲ್ಕುಗಂಟಿನ ಮಂಡಲವು ಸಂದರ್ಭಕ್ಕನುಸಾರವಾಗಿ ಮಂಗಳ ಸೂಚಕ ಚಿಹ್ನೆಯೋ ಧಾರ್ಮಿಕ ಸಂಕೇತವೋ ಆಗಿರಬೇಕೆಂಬುದಾಗಿ ವಿದ್ವಾಂಸರಾದ ಸುಂದರ ಅವರು ಅಭಿಪ್ರಾಯಪಡುತ್ತಾರೆ (ಸುಂದರ 2002: 418–419).

ಆಧಾರ ಸೂಚಿ

1. ಜಯರಾಮಯ್ಯ, ಜೆ.ಟಿ., ಎಂ. ಲೋಕೇಶ ಮತ್ತು ಬಿ.ಎಸ್. ರಾಜೇಶಬಾಬು. 2000. 'ಬಯಲು ಬಂಡೆಚಿತ್ರ ಮತ್ತು ಶಿಲಾಯುಗದ ನೆಲೆ ವೇದಿಕ್ ನಗರ ಮತ್ತು ಬಯಲುಬಂಡೆಚಿತ್ರದ ನೆಲೆ ದಾಬಾನುಗುಂಡು', **ಇತಿಹಾಸ ದರ್ಶನ 15: 19–20**.
2. ನಾಯಕ, ಹನುಮ. 2009. 'ಅರಸೀಕೆರೆ ತಾಲ್ಲೂಕಿನ ಪ್ರಾಗೈತಿಹಾಸಿಕ ಬಂಡೆಚಿತ್ರಗಳು?, **ಇತಿಹಾಸ ದರ್ಶನ 24: 9–11**.
3. ಮುತ್ತುರಾಜು 1995. 'ಸೂಳೆಕಲ್ ಮಠದ ಗುಹಾಚಿತ್ರಗಳು', **ಇತಿಹಾಸ ದರ್ಶನ 10: 71–73**
4. ಸುಂದರ, ಅ. 1994 **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ**. ಬೆಂಗಳೂರು: ಕರ್ನಾಟಕ ಲಲಿತ ಕಲಾ ಅಕಾಡೆಮಿ.
5. **ಇಂಡಿಯನ್ ಆರ್ಕಿಯಾಲಜಿ: ಎ ರಿವ್ಯೂ 1960–61**: 34–35. ನವದೆಹಲಿ: ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆ.
6. Krishna Murthy, C. 1978. 'Recent Discoveries in South Karnataka', in *Archaeology of Karnataka* (A.V. Narasimha Murthy Ed.), pp. 80-89. Mysore: Prasaranga (University of Mysore).
7. Shobha, V. 2014. 'Megalithic-Early Historical Landscape of the Hoogya Valley, Kollega Taluk, Chamarajanagar district, Karnataka'. An unpublished report submitted to Nehru Trust for the Indian Collection at the Victoria and Albert Museum, New Delhi.
8. Subrahmanyam, K.V. 2011. *Power of Primitive Aestheticism: Rock Paintings of Tekal-Ghattamadhamangala- Kangudi*. Bengaluru: Chitrakavya Prakashana.
9. Sundara, A. 1996. 'The Harappan Endless Four Knot Design: Its Survival in the Historical Times in Karnataka and Interpretation', in *Gauravam: Recent Researches in Indology (B.K. Gururaja Rao Felicitation Volume)* (Eds. K.V. Ramesh, M.D. Sampath, V. Shivanand and L.N. Swamy), pp. 416-420. New Delhi: Harman Publishing House.
10. Sundara, A. 2002. 'Rock Art in Karnataka: Certain Geometrical Designs', *Purakala 13 (1-2): 51-56*.

■

ಬೆಂಗಳೂರು ಸಮೀಪ (ಬಂಕರಸನಗುಂಡು) ಕೈಗುರುತು ವರ್ಣಚಿತ್ರಗಳ ಶೋಧನೆ

ಮೋಹನ ಆರ್.

ಸಹಾಯಕ ಪ್ರಾಧ್ಯಾಪಕ
ಇತಿಹಾಸ ಮತ್ತು ಪುರಾತತ್ತ್ವ ವಿಭಾಗ
ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ
ಹಾಗೂ ಪೋಸ್ಟ್ ಡಾಕ್ಟರಲ್ ಫೆಲೋ
ಡೆಕ್ಕನ್ ಕಾಲೇಜ್, ಪುಣೆ
ಕಲಬುರಗಿ
mohangulya@gmail.com

ಹಂ.ಗು. ರಾಜೇಶ್

#33/ಎ, ಐ.ಟಿ.ಐ. ಕಾಲೇಜು ಹತ್ತಿರ
ಕೆಂಪೇಗೌಡನಗರ, ವಿಶ್ವನೀಡಂ ಅಂಚೆ
ಬೆಂಗಳೂರು– 560091.

ಬಂಕರಸನಗುಂಡು ನೆಲೆಯು ಬೆಂಗಳೂರು ದಕ್ಷಿಣ ತಾಲ್ಲೂಕಿನ ಚಿಕ್ಕನಹಳ್ಳಿ-ಅಂಚೆ, ಮಾದಾಪಟ್ನ ಗ್ರಾಮದ ಪಶ್ಚಿಮಕ್ಕೆ 2 ಕಿ.ಮೀ. ದೂರದಲ್ಲಿರುವ ಬಸವನ ತಾರ್ ಅರಣ್ಯ ಪ್ರದೇಶದ ಗುಡ್ಡ ಸಾಲಿನಲ್ಲಿದೆ. ಇದನ್ನು ಸ್ಥಳಿಯವಾಗಿ ಬಂಕರಸನಗುಂಡು ಎಂದು ಕರೆಯಲಾಗುತ್ತದೆ. ಸ್ವಾಭಾವಿಕ ಕಲ್ಲಾಸರೆ(ಚಿತ್ರ 1)ಯಲ್ಲಿ ಇತಿಹಾಸ ಆರಂಭ ಕಾಲದ ಹಸ್ತಮುದ್ರೆಗಳು ಅಥವಾ ಕೈಗುರುತುಗಳು ಮತ್ತು ಸಾಂಕೇತಿಕ ಹಸ್ತಪ್ರತಿ (ಚಿತ್ರ 2-4)ಗಳನ್ನು ಪ್ರಸ್ತುತ ಲೇಖಕರು ಅರ್ಕಾವತಿ ಕಣಿವೆ ಪ್ರದೇಶದಲ್ಲಿ ಇತ್ತೀಚೆಗೆ ಕ್ಷೇತ್ರಕಾರ್ಯ' ಅನ್ವೇಷಣೆ ಕೈಗೊಂಡಾಗ ಉರುಮಂಜು ಬಣ್ಣ/ಕೆಂಪು ವರ್ಣಚಿತ್ರಗಳು ಬೆಳಕಿಗೆ ಬಂದವು. ಈ ನೆಲೆಯು ಮಾದಪಟ್ನ-ಅರ್ಕಾವತಿ ನದಿಗೆ ಸಂಪರ್ಕ ಕಲ್ಪಿಸಿರುವ ಪುರಾತನ ಹಾಸು ಕಲ್ಲಾದಿಯ ಎಡ ಭಾಗದಲ್ಲಿದೆ. ಬೆಂಗಳೂರಿನ ಪರಿಸರದಲ್ಲಿ ಬಂಡೆಚಿತ್ರಗಳು ದಾಖಲಾಗಿರುವುದು ಅಪರೂಪ ವಾಗಿರುವ ಹಿನ್ನೆಲೆಯಲ್ಲಿ ಇವು ಇತಿಹಾಸದ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುತ್ತವೆ.

ಕೈಗುರುತುಗಳ ವರ್ಣಚಿತ್ರಗಳು ಜಗತ್ತಿನ ಬಹುತೇಕ ಭಾಗಗಳಲ್ಲಿ ಕಂಡು ಬಂದಿದ್ದು ಅವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

1. ಬಣ್ಣವನ್ನು ಕೈಗೆ ಲೇಪಿಸಿ ಕೈಗುರುತುಗಳನ್ನು ಮೂಡಿಸಿರುವುದು.

2. ಬಣ್ಣದಲ್ಲಿ ಕೈಯನ್ನು ಅದ್ದಿ ಕೈಗುರುತನ್ನು ಮೂಡಿಸಿರುವುದು.
3. ಕೈಯನ್ನು ಮೊದಲೇ ಕಲ್ಲಿನ ಮೇಲೆ ಒತ್ತಿಹಿಡಿದು ನಂತರ ವರ್ಣವನ್ನು ಸಿಂಪಡಿಸುವುದು.
4. ಕೈಯನ್ನು ಮೊದಲೇ ಕಲ್ಲಿನ ಮೇಲೆ ಒತ್ತಿಹಿಡಿದು ಬಾಹ್ಯ ರೇಖೆಗಳಿಂದ ಹಸ್ತವನ್ನು ಮೂಡಿಸುವುದು.
5. ಕೇವಲ ಅಂಗೈ(ಬೆರಳು ರಹಿತ)ಯನ್ನು ಮೂಡಿಸಿರುವುದು.




ಚಿತ್ರ 1: ಬಂಕರಸನಗುಂಡು ನೈಸರ್ಗಿಕ ಕಲ್ಲಾಸರೆ



ಚಿತ್ರ 2: ಕೈಗುರುತುಗಳು



ಚಿತ್ರ 3: ಕೈಗುರುತುಗಳು ಮತ್ತು ಸಾಂಕೇತಿಕ ಕೈಗುರುತುಗಳು



ಚಿತ್ರ 4: ಕೈಗುರುತುಗಳು ಮತ್ತು ಸಾಂಕೇತಿಕ ಕೈಗುರುತುಗಳು

ಪ್ರಪಂಚದಲ್ಲಿ ಈವರೆಗೆ ಕಂಡುಬಂದ ವರ್ಣಚಿತ್ರಗಳಲ್ಲಿ ಬಹುತೇಕ ಹಸ್ತಪ್ರತಿಗಳು ಎಡಗೈದಾಗಿದ್ದು, ಬಹುಶಃ ಬಲಗೈಯನ್ನೂ ಕೈಯೊತ್ತು ಮೂಡಿಸಲು ಬಳಸಲಾಗುತಿತ್ತು. ಹಾಗೆಯೇ ಈ ಪ್ರತಿಗಳು ತನ್ನ ಕೈ ಮುದ್ರೆಯನ್ನು ತಾನೇ ಮೂಡಿಸಿರುವುದಕ್ಕೆ ಆಧಾರವನ್ನು ಒದಗಿಸುತ್ತದೆ. ಇವುಗಳಲ್ಲಿ ಪುರುಷರು, ಮಹಿಳೆಯರು, ಮಕ್ಕಳ ಕೈಗುರುತುಗಳು ಕಂಡು ಬಂದಿರುವುದು ಹೆಚ್ಚು ವಿಶೇಷವಾಗಿದ್ದು ಲಿಂಗ ಮತ್ತು ವಯಸ್ಸನ್ನು ಈ ಕೈಗುರುತುಗಳ ಆಧಾರದ ಮೇಲೆ ನಿರ್ಧರಿಸಬಹುದು. ಪ್ರಾಗೈತಿಹಾಸ ಕಾಲದ ವರ್ಣ ಮತ್ತು ರೇಖಾಚಿತ್ರಗಳನ್ನು ಯಾವ ಲಿಂಗದವರು ಬಿಡಿಸಿದರೆಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಆದರೆ ಈ ಕೈಗುರುತುಗಳ ಅಧ್ಯಯನದಿಂದ ಅದರಲ್ಲಿ ಎಲ್ಲ ವರ್ಗದ ಮನುಷ್ಯರ ಪಾತ್ರ ಇತ್ತೆಂಬುದನ್ನು ಅರ್ಥೈಯಸಬಹುದು.

ಕೈಗುರುತುಗಳು ಪ್ರಪಂಚದ ಎಲ್ಲ ಭಾಗಗಳಲ್ಲಿ ಕಂಡು ಬಂದಿರುವುದರಿಂದ ಪ್ರಾಯಶಃ ಚಿತ್ರಕಾರನ ಸಹಿ ಇರಬಹುದೆಂಬುದು ಕೆಲ ವಿದ್ವಾಂಸರ ಅಭಿಪ್ರಾಯ. ಹಾಗೇಯೆ ಫ್ರೆಂಚ್ ಮತ್ತು ಸ್ಪೇನ್ ಭಾಗಗಳಲ್ಲಿ ಮಾನವಶಾಸ್ತ್ರಜ್ಞ ಡೀನ್ ಸ್ನೌ[2] ಅವರು ನಡೆಸಿದ ಸಂಶೋಧನೆಯಲ್ಲಿ ಕಂಡು ಬಂದ ಕೈಗುರುತುಗಳು ಹೆಚ್ಚು ಮಹಿಳೆಯರದ್ದಾಗಿವೆ ಎಂಬುದು ದೃಢಪಟ್ಟಿದೆ. ಈ ಆಧಾರದ ಮೇಲೆ ಶಿಲಾಯುಗದ ವೇಳೆಯಲ್ಲಿ ಮಹಿಳೆಯರ ಪಾತ್ರವೂ ಮುಖ್ಯವಾಗಿತ್ತು ಎಂಬುದು ತಿಳಿದು ಬರುತ್ತದೆ.

ಬಂಕರಸನಗುಂಡು ನೆಲೆಯಲ್ಲಿನ ವರ್ಣಚಿತ್ರಗಳು ಅದರಲ್ಲಿಯೂ ಕೈಗುರುತು ವರ್ಣಚಿತ್ರಗಳು ಅಧ್ಯಯನದ ದೃಷ್ಟಿಯಿಂದ ಕರ್ನಾಟಕವಲ್ಲದೆ ದಕ್ಷಿಣ ಭಾರತದಲ್ಲಿಯೇ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿವೆ. ಏಕೆಂದರೆ ಇಲ್ಲಿನ ವರ್ಣಚಿತ್ರಗಳು ಆದಿ ಇತಿಹಾಸ ಕಾಲಘಟ್ಟಕ್ಕೆ ಸೇರಿದ್ದು, ಈ ಭಾಗದಲ್ಲಿ ದಾಖಲಾಗಿರುವ ವರ್ಣಚಿತ್ರಗಳು ಬಹಳ ವಿರಳ. ಕೈಗುರುತುಗಳು ಭಾರತ ಉಪಖಂಡದಲ್ಲಿ ಮಾತ್ರವಲ್ಲದೆ ಪ್ರಪಂಚದ ಹಲವಾರು ದೇಶಗಳ ಪ್ರಾಗಿತಿಹಾಸ ನೆಲೆಗಳಲ್ಲಿಯೂ ಕಂಡುಬಂದಿವೆ. ಉದಾಹರಣೆಗೆ ಕ್ಯಾಲಿಫೋರ್ನಿಯಾದ ಸ್ಮಿತ್ ನದಿ ಕಣಿವೆ[3], ಅರ್ಜೆಂಟೀನಾ (ಚಿತ್ರ 5), ಆಸ್ಟ್ರೇಲಿಯಾ, ಬೋರ್ನಿಯೊ, ಫ್ರಾನ್ಸ್, ಸ್ಪೇನ್, ದಕ್ಷಿಣ ಆಫ್ರಿಕಾ[4], ಕ್ವಿನ್‌ಲ್ಯಾಂಡ್‌ನ ಕಾರ್‌ನಾರ್‌ವನ್ ಗರ್ಜ್ (ಚಿತ್ರ 6) ಮುಂತಾದ ಕಡೆಗಳಲ್ಲಿ ಕಂಡುಬಂದಿವೆ. ಯುರೋಪಿನ ಕೆಲವು ನೆಲೆಗಳಲ್ಲಿನ ಕೈಗುರುತು ವರ್ಣಚಿತ್ರಗಳು ಸಾಪೇಕ್ಷ ಕಾಲನಿರ್ಣಯದ ಪ್ರಕಾರ ಸುಮಾರು 37 ಸಾವಿರ ವರ್ಷಗಳ ಪ್ರಾಚೀನತೆಯನ್ನು ಹೊಂದಿದೆ. ಅದರಲ್ಲಿ ಫ್ರಾನ್ಸ್‌ನ ಚೌವೆತ್[5] (ಚಿತ್ರ 7) ಹಾಗೂ ಸ್ಪೇನ್‌ನ ಯೆಲ್ ಕ್ಯಾಸ್ಟಿಲೋ[6] (ಚಿತ್ರ 8) ಪ್ರಮುಖವಾಗಿವೆ.

ಇದರಲ್ಲಿ ಪ್ರಮುಖವಾಗಿ ದಕ್ಷಿಣ ಭಾರತವನ್ನು ಗಣನೆಗೆ ತೆಗೆದುಕೊಂಡಗ ಕರ್ನಾಟಕದ ಕೃಷ್ಣ ನದಿತೀರದ ಬಲಚಕ್ರ ನೆಲೆಯ ಒಂದು ಕಲ್ಲಾಸರೆಯಲ್ಲಿ ದೊರೆತ ಪೂರ್ವ ಇತಿಹಾಸ ಕಾಲಕ್ಕೆ ಸೇರಿದ ಕೈಗುರುತು ವರ್ಣಚಿತ್ರವನ್ನು ಅ. ಸುಂದರ[7] ಅವರ **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ** ಹೊತ್ತಿಗೆಯ ಚಿತ್ರ 27 ರಲ್ಲಿ ಕಾಣಬಹುದು. ಹಾಗೆಯೇ ಆಂಧ್ರ ಪ್ರದೇಶದ ಕೇತವಾರಂ, ಬುದಗಾವಿ, ರಾಂಚಂದ್ರಪುರಂ[8] ಹಾಗೂ ಉತ್ತರ ಪ್ರದೇಶದ ಮುಖದೇರಿ, ಮಧ್ಯ ಪ್ರದೇಶದ ಭೀಂಬೆಟ್ಕ್[9] ಮತ್ತು ಇದೊಟ್ಟಿ, ಚಾತುರ್ಭುಜನಾಥ ನಾಲ[10] ನಿವರ್ಣಚಿತ್ರ ನೆಲೆಗಳಲ್ಲಿ ದೊರೆತಿವೆ.

ಹಸ್ತ ವರ್ಣ/ ರೇಖಾ ಚಿತ್ರಗಳು ಪ್ರಾಗಿತಿಹಾಸ ನೆಲೆಗಳಲ್ಲಿ ವಿರಳವಾದರೂ ಸಾಂಸ್ಕೃತಿಕವಾಗಿ ಕೈಗುರುತುಗಳ ಆಚರಣೆ ಇಂದಿಗೂ ಉಳಿದು ಬಂದಿದೆ. ಮದುವೆ, ಗೃಹ ಪ್ರವೇಶ, ಆಯುಧ ಪೂಜೆ ಮೊದಲಾದ ಶುಭಸಮಾರಂಭಗಳು ಮತ್ತು ಕೆಲವು ಪೂಜಾ

ಕಾರ್ಯಗಳ ಸಂದರ್ಭಗಳಲ್ಲಿ ನಡುಮನೆ(ಹಾಲ್), ಬಾಗಿಲು, ಗೋಡೆ, ಮರ, ಜಾನುವಾರುಗಳ ಮೇಲೆ ಕೈಗುರುತುಗಳನ್ನು ಒತ್ತುವ ಆಚರಣೆ ಕೆಲವು ಕಡೆ ಇದೆ. ಗೃಹಪ್ರವೇಶಗಳಲ್ಲಿ ಮನೆಯ ಯಜಮಾನ ಮತ್ತು ಮದುವೆಯಾದ ದಿನ ವಧು/ವರನ ಮನೆಯಲ್ಲಿ ನವದಂಪತಿಗಳು ಸುಣ್ಣ ಮತ್ತು ಅರಿಶಿಣ ಮಿಶ್ರಿತ ಬಣ್ಣದಲ್ಲಿ ಹಸ್ತವನ್ನು ಹದ್ದಿ ಗೋಡೆಯ ಮೇಲೆ ಮುದ್ರೆಯನ್ನು ಮೂಡಿಸುತ್ತಾರೆ. ಜೀನ್ ಕ್ಲಾಟ್ಸ್ ಮತ್ತು ಮೀನಾಕ್ಷಿ[10] ದುಬೆ ರವರು ಮಧ್ಯ ಪ್ರದೇಶದ ಕೆಲವು ಭಾಗಗಳಲ್ಲಿ ನಡೆಸಿದ ಸಂಶೋಧನೆಗಳಿಂದ ತಿಳಿದುಬಂದಿರುವುದೇನೆಂದರೆ ಮದುವೆಯಾದ ಹೆಣ್ಣು ಮಗಳು ಇದ್ದ ಹಾಗೂ ಕೊಟ್ಟ ಮನೆಗೆ ಸುಖ ಮತ್ತು ಸಮೃದ್ಧಿಯನ್ನು ತರುವ ಸೂಚಕವಾಗಿ (ಚಿತ್ರ 9) ಮೂಡಿಸುತ್ತಾರೆ ಎಂಬುದಾಗಿದೆ.

ಮಾಲೀಕರಾದವರು ಆಯುಧ ಪೂಜೆ (ಚಿತ್ರ 10) ಯಂತಹ ವಿಶೇಷ ಸಂದರ್ಭಗಳಲ್ಲಿ ತಮ್ಮ ಕಾರ್ಖಾನೆ, ಅಂಗಡಿ, ಮುಂತಾದವುಗಳ ಮುಂಭಾಗದಲ್ಲಿ ಹಸ್ತಮುದ್ರೆಯನ್ನು ಒತ್ತುವುದುಂಟು. ಬಹುಶಃ ಇವು ಅಭಯ ಹಸ್ತದ ಪ್ರತೀಕದಂತೆ ಪರಿಭಾವಿಸಬಹುದಾದ ಮುದ್ರೆಗಳಾಗಿವೆ. ಮೇಲೆ ಹೇಳಿರುವಂತೆ ಸಮೃದ್ಧಿಯ ಸೂಚಕವೂ ಇರಬಹುದು. ಆಸ್ಟ್ರೇಲಿಯನ್ ಮೂಲನಿವಾಸಿ ಶಾಲೆಯ ಗೋಡೆಯ ಮೇಲೆ ಮಕ್ಕಳ ಕೈಗುರುತು(ಚಿತ್ರ 11)ಗಳನ್ನು ಕಾಣಬಹುದು[10]. ಕೆಲವು ವಿದ್ವಾಂಸರ ಪ್ರಕಾರ ಇವು ಮನುಷ್ಯನ ಹುಟ್ಟು ಮತ್ತು ಅಳಿವಿನ ಅಂಚಿನ ಸೂಚಕ ಚಿಹ್ನೆಗಳೆಂದಿದ್ದಾರೆ[11].

ಪಾಂಡಿಚೇರಿಯಲ್ಲಿ ನಡೆದ ರಾಕ್ ಆರ್ಟ್ ಸೊಸೈಟಿ ಆಫ್ ಇಂಡಿಯಾದ 19ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಿದ್ದಾಗ ಅಲ್ಲಿನ ಒಂದು ಮಳಿಗೆಯ (ಚಿತ್ರ 12) ಹೊರ ಪಾರ್ಶ್ವಭಾಗದಲ್ಲಿ ಕೈಗುರುತುಗಳನ್ನು ಮೂಡಿಸಿರುವುದು ಗಮನಕ್ಕೆ ಬಂದಿತ್ತು. ಹಾಗೇಯೆ ಡೆಕ್ಕನ್ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವಾಗ ವಿಶ್ವ ವಿದ್ಯಾಲಯದ ವಾರ್ಷಿಕ ಸಮಾರಂಭದ ಸಂದರ್ಭದಲ್ಲಿ ವಿದ್ಯಾರ್ಥಿಗಳೆಲ್ಲ ಬಹು ಬಣ್ಣ ಮಿಶ್ರಿತ ಕೈಗುರುತುಗಳನ್ನು (ಚಿತ್ರ 13) ಮೂಡಿಸಿದ್ದುಂಟು. ಅದರ ಕೆಳಗೆ ಮೂಡಿಸಿದವರ ಸಹಿ ಪಡೆದು ಕಾಲೇಜಿನ ಜಿಮ್ನಾನಾದಲ್ಲಿ ಕೆಲವು ಕಾಲ ಭಿತ್ತರಿಸಲಾಗಿತ್ತು. ಇತ್ತೀಚೆಗೆ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯಕ್ಕೆ ನ್ಯಾಕ್ ತಂಡ ಭೇಟಿ ನೀಡಿದ ಶುಭ ಸಂದರ್ಭದಲ್ಲಿ ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿ ವೃಂದವು ಮರದ ಚಿತ್ರವನ್ನು ಬಿಡಿಸಿ ಅದರ ಎಲೆಗಳ ಬದಲು ಎಲ್ಲ ಟೊಂಗೆಗಳಲ್ಲಿ ಕೈಗುರುತುಗಳ ಜೊತೆಗೆ 'ಹಸ್ತ ವೃಕ್ಷ'ವೆಂಬ ಶೀರ್ಷಿಕೆಯನ್ನು ಹೊಂದಿತ್ತು. ಇದರಾರ್ಥ ನಾವೆಲ್ಲ ಸೌಹಾರ್ದ ಬಾಳ್ವೆಯ ಜೊತೆಗೆ ಒಬ್ಬರಿಗೊಬ್ಬರು ಸಹಾಯ ಹಸ್ತ (ಚಿತ್ರ 14) ಚಾಚೋಣವೆಂಬುದು. ಈ ಮುದ್ರೆಗಳ ಪ್ರವೃತ್ತಿ ಪ್ರಾಗಿತಿಹಾಸ ಕಾಲಘಟ್ಟದಿಂದ ಹಿಡಿದು ಇಂದಿಗೂ ಮುಂದುವರೆದುಕೊಂಡು ಬಂದಿರುವುದು ಹೆಚ್ಚಿನ ಕೌತುಕಕ್ಕೆ ಕಾರಣವಾಗಿದೆ.

ಹಾಗೆಯೇ ಪೆರುವಿನಲ್ಲಿ ನಡೆಯಲಿರುವ 2ನೇ ಅಂತರರಾಷ್ಟ್ರೀಯ 'ರಾಕ್ ಆರ್ಟ್ ಆ್ಯಂಡ್ ಎಥ್‌ನೊಗ್ರಾಫಿ' ಸಮ್ಮೇಳನದ ಮುಖಪುಟದ ಚಿಹ್ನೆ ಈ ಕೈಗುರುತಾಗಿದೆ (ಚಿತ್ರ 14). 'ಇಂಟರ್‌ನ್ಯಾಷನಲ್ ಫೇಡರೇಶನ್ ಆಫ್ ರಾಕ್ ಆರ್ಟ್ ಆರ್ಗನೈಜೆಶನ್' ಸಂಸ್ಥೆಯು ಆಸ್ಟ್ರೇಲಿಯಾದ ಡಾರ್ವಿನ್‌ನಲ್ಲಿದ್ದು ಪ್ರಾಗಿತಿಹಾಸ ಕಲೆಯ ಬಗ್ಗೆ ಜಾಗತಿಕ ಮಟ್ಟದಲ್ಲಿ ಸಾಕಷ್ಟು ಸಂಶೋಧನೆಗಳನ್ನು ಕೈಗೊಳ್ಳುತ್ತಿದೆ. ವಿಶೇಷವೆನೆಂದರೆ ಈ ಸಂಸ್ಥೆಯ ಲೋಗೋ (ಚಿತ್ರ 15) ಇದೇ ಕೈಗುರುತಾಗಿದೆ. ಇವೆಲ್ಲಾ ಅಂಶಗಳನ್ನು ಗಮನಿಸಿದರೆ ಹೇಗೆ ಇದು ಮನುಷ್ಯನ ಸ್ಮೃತಿ ಪಟಲದಲ್ಲಿ ಒಕ್ಕಾಗಿ ಪಾರಂಪರಿಕವಾಗಿ ಪೀಳಿಗೆಯಿಂದ ಪೀಳಿಗೆಗೆ ಕಲೆಯ ಮೂಲಕ ಅಭಿವ್ಯಕ್ತವಾಗುತಿರುವುದು ನಿಜಕ್ಕೂ ಹೆಚ್ಚಿನ ಅಧ್ಯಯನಕ್ಕೆ ದಾರಿ ಮಾಡಿಕೊಟ್ಟಿದೆ.



ಚಿತ್ರ 5: ಕೈಗುರುತುಗಳು ಮತ್ತು ಕಾಡು ಪ್ರಾಣಿಗಳು–ಪಾಟಗೊನಿಯಾ (ಅರ್ಜೆಂಟೀನಾ)



ಚಿತ್ರ 6: ಕೈಗುರುತುಗಳು– ಕ್ವಿನ್ಸ್‌ಲ್ಯಾಂಡ್‌ನ ಕಾರ್ನಾರ್ವನ್ ಗರ್ಜ್




ಚಿತ್ರ 7: ಕೈಗುರುತುಗಳು– ಫ್ರಾನ್ಸ್‌ನ ಚೌವೆತ್ ವರ್ಣಚಿತ್ರ ನೆಲೆ



ಚಿತ್ರ 8: ಕೈಗುರುತುಗಳು– ಸ್ಪೇನ್‌ನ ಯೆಲ್ ಕ್ಯಾಸ್ಟಿಲೋ ವರ್ಣಚಿತ್ರ ನೆಲೆ



ಚಿತ್ರ 9: ಜಾಬುಯ (ಮಧ್ಯ ಪ್ರದೇಶ): ತರುಣಿ ಮನೆಯ ಬಾಗಿಲಿನ ಎರಡು ಬದಿಯಲ್ಲಿ
ಕೈಗುರುತುಗಳನ್ನು ಮೂಡಿಸಿರುವುದು (ಸಂಗ್ರಹ ಜೀನ್ ಕ್ಲಾಟ್ಸ್)



ಚಿತ್ರ 10: ಆಯುಧ ಪೂಜೆಯ ದಿನ ಕಾರ್ಖಾನೆಯ ಮಾಲೀಕರು
ಬಾಗಿಲ ಬದಿಯಲ್ಲಿ ಕೈಗಳಿಂದ ಮುದ್ರೆಗಳನ್ನು ಮೂಡಿಸುತ್ತಿರುವುದು.



ಚಿತ್ರ 11: ಆಸ್ಟ್ರೇಲಿಯನ್ ಮೂಲನಿವಾಸಿ ಶಾಲೆಯ ಗೋಡೆಯ ಮೇಲೆ ಮಕ್ಕಳ ಕೈಗುರುತುಗಳು
(ಸಂಗ್ರಹ ಜೇನ್ ಕ್ಲಾಟ್ಸ್)




ಚಿತ್ರ 12: ಪಾಂಡಿಚೇರಿ: ಮಳಿಗೆಯ ಗೋಡೆಯ ಬಾಗಿಲಿನ ಪಾರ್ಶ್ವದಲ್ಲಿ ಕೈಗುರುತುಗಳನ್ನು ಮೂಡಿಸಿರುವುದು



ಚಿತ್ರ 13: ಪುಣೆ: ಡೆಕ್ಕನ್ ಕಾಲೇಜ್‌ನಲ್ಲಿ ವಿದ್ಯಾರ್ಥಿಗಳು ಕೈಗುರುತುಗಳನ್ನು ಮೂಡಿಸಿ ಸಹಿ ಮಾಡಿರುವುದು.



ಚಿತ್ರ 13: ಕಲಬುರಗಿ (ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ): ಹಸ್ತ ವೃಕ್ಷ.



ಚಿತ್ರ 14:
ಪೆರು: ಅಂತಾರಾಷ್ಟ್ರೀಯ
ಸಮ್ಮೇಳನದ ಬ್ಯಾಲೆಟ್



ಚಿತ್ರ 15: ಇಂಟರ್‌ನ್ಯಾಷನಲ್ ಫೇಡರೇಶನ್ ಆಫ್ ರಾಕ್ ಆರ್ಟ್ ಆರ್ಗನಿಜೈಶನ್ ಲೋಗೋ

ಅನಾದಿ ಕಾಲದಿಂದಲೂ ಮನುಷ್ಯನ ಮನಸ್ಸಿನ ವರ್ತನೆಯನ್ನು ಪ್ರತಿನಿಧಿಸುವ ಕ ಚಿತ್ರವು ಇಂದಿಗೂ ಸಹಜವಾದ ಪ್ರವೃತ್ತಿಯಂತೆ ತೋರುತ್ತದೆ. ಮಗುವೊಂದರ ಕೈಗೆ ಬ ಸಿಕ್ಕರೆ ಅದು ಕೈಯನ್ನು ಗೋಡೆಗಳ ಮೇಲೆ ಮುದ್ರೆಒತ್ತುವುದು ಸಹಜವಾದ ಮಾನವ ವರ್ತನೆಯಾಗಿದೆ. ಈ ವರ್ತನೆಯು ಮಾನವನ ಉಗಮದ ಕಾಲದಿಂದಲೂ ಸುಪ್ತವಾಗಿರು ಪ್ರವೃತ್ತಿಯೊಂದರ ಅಭಿವ್ಯಕ್ತಿಗೆ ಕೈಗುರುತುಗಳನ್ನು ಮೂಡಿಸುವುದು ಉತ್ತಮ ಉದಾಹರಣೆಯಾಗಿದೆ. ಆದ್ದರಿಂದ, ಹಸ್ತ ಮುದ್ರೆ ಒತ್ತುವುದು ದೇಶಾತೀತ ಮತ ಕಾಲಾತೀತವಾದ ಪ್ರವೃತ್ತಿಯೆಂದು ತಿಳಿಯಬಹುದು.

ಈ ನೆಲೆಯ ವ್ಯಾಪ್ತಿಯೊಳಗೆ ಹಲವಾರು ಬೃಹತ್ ಶಿಲಾಯುಗ ಸಂಸ್ಕೃತಿಯ ಕಲ್ಲ ನೆಲಕೋಣೆ ಗೋರಿಗಳು ಹಾಗೂ ಚಕ್ರವ್ಯೂಹ ವಿನ್ಯಾಸವನ್ನು ಹೋಲುವ ಚೌಕಾಕಾರ ರೂಪ ಕಲ್ಲು ಸಾಲುಗಳು[12] ವರದಿಯಾಗಿತ್ತು. ಆದರೆ ಭಾರಿ ಪ್ರಮಾಣದಲ್ಲಿ ನಡೆಯುತ್ತಿರು ಕಲ್ಲುಗಣಿಗಾರಿಕೆಯಿಂದ ಎಲ್ಲಾ ಕುರುಹುಗಳು ಮರೆಯಾಗಿರುವುದು ಖೇದಕರ.

ಕೃತಜ್ಞತೆಗಳು

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೆರವಾದ ಮಾದಾಪಟ್ನ ಗ್ರಾಮದ ದೊಡ್ಡನರಸಿಂಹಯ ಎಂಬುವವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇವೆ ಹಾಗೂ ಈ ಲೇಖನಕ್ಕೆ ಛಾಯಚಿತ್ರಗಳನ ದೊರಕಿಸಿಕೊಟ್ಟ ಸ್ನೇಹಿತರಾದ ಕಿಮ್, ಐಶ್ವರ್ಯ ಫಾನ್ಸೆ, ಮಕಂಟನ್, ಸ್ವಪ್ನ ಜೋಶಿ, ಎಸ್. ವಿ. ಭಾಗ್ಯಶ್ರೀ ಮತ್ತು ಕವಿತ ಹರಿಹರ್ ರವರಿಗೂ ಹೃದಯ ಪೂರ್ವಕ ಕೃತಜ್ಞತೆಗಳು.

ಆಧಾರ ಸೂಚಿ

1. ಮೋಹನ ಆರ್ ಮತ್ತು ಹಂ.ಗು ರಾಜೇಶ್. 2016. 'ಬೆಂಗಳೂರು ಬಳಿ ಇತಿಹಾಸ ಆರಂ ಕಾಲದ ವರ್ಣಚಿತ್ರ ಪತ್ತೆ', **ಪ್ರಜಾ ವಾಣಿ (ಸಹಪಾಠಿ)**, 28 ಜುಲೈ, 2016.
2. Philip Ross 2013. http://www.ibtimes.com/prehistoric-cave-artists-europe were-mostly-women-ancient-handprints-suggest-1427398
3. Marvis Jreer and Jhon Jreer. 1999. 'Handprints in Montana Rock Art', *Plai Anthropologist 44 (167): 59-71.*
4. Anthony Manhire, 1998. 'The Role of Hand Prints in the Rock Art of the South Western Cape'. *The South African Archaeological Bulletin* 53 (168): 98-108.
5. Clottes J. (ed.) 2003. *Chauvet Cave. The Art of Earliest Times.* The University c Utah Press, Salt Lake City.
6. Pike A.W.G., Hoffmann D.L., Garcia Diez M., Pettitt P.B., Alcolea J., De Balbin R Gonzalez Sainz C., De Las Heras C., Lasheras J A., Montes R., Zilhao J. 2012 'U-Series Dating of Paleolithic Art in 11 Caves in Spain'. *Science 336, 1409.*
7. ಸುಂದರ ಅ., 1994, **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ**, ಕರ್ನಾಟಕ ಲಲಿತ ಕಲಾ ಅಕಾಡೆಮಿ ಬೆಂಗಳೂರು.
8. Chandramouli, N. 2002. *Rock Art of South India with Special Reference t Andhra Pradesh.* Delhi India: Bharatiya kala prakasana.
9. Mathpal Y. 1984. *Prehistoric Rock Paintings of Bhimbetka, Central India.* Indir Gandhi National Centre for the Arts, New-Delhi.
10. Meenakshi Dubey-Pathak and Jean Clottes. 2013. 'Handprints in the Rock Ar andTribal Art of Central India'. *IFRAO 2013 Proceedings, American Indian Roc Art, Volume 40.* American Rock Art Research Association.
11. ACHRATI, AHMED. 2008. 'Handprints, Footprints and the Imprints of Evolution *Rock Art Research 25(1): 23-33.*
12. ವಿಶ್ವನಾಥ್ ಸಾಸಲು. ಜೆ. 2003. 'ಬೃಹತ್ ಶಿಲಾ ಸಂಸ್ಕೃತಿ ಕೆಲವು ಹೊಸ ನೆಲೆಗಳು'. **ಇತಿಹಾಸ ದರ್ಶನ 18**: 7–8.

ಮಾಗಡಿ ಪರಿಸರದ ಪುರಾತತ್ತ್ವ ಅನ್ವೇಷಣೆ

ಪ್ರವೀಣ್ ಕುಮಾರ್ ಕೆ.
ಎಂ.ಫಿಲ್ ವಿದ್ಯಾರ್ಥಿ
ಪುರಾತತ್ವ ವಿಭಾಗ
ಡೆಕ್ಕನ್ ಕಾಲೇಜು, ಸ್ನಾತಕೋತ್ತರ ಮತ್ತು ಸಂಶೋಧನ ಸಂಸ್ಥೆ
ಪುಣೆ, ಮಹಾರಾಷ್ಟ್ರ –411006
praveenkagh1990@gmail.com

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ವೈವಿಧ್ಯಮಯ ಪುರಾತತ್ತ್ವ ಮತ್ತು ಚಾರಿತ್ರಿಕ ಅಂಶಗಳನ್ನು ಹೊಂದಿರುವ ಪ್ರದೇಶವಾಗಿದೆ. ಮತ್ತು ಇಲ್ಲಿನ ಭೌಗೋಳಿಕ ಪರಿಸರದಲ್ಲಿ ಪೂರ್ವ ಇತಿಹಾಸ ಕಾಲದಲ್ಲಿನ ನವಶಿಲಾಯುಗ ಸಂಸ್ಕೃತಿ ಮತ್ತು ಬೃಹತ್ ಶಿಲಾಯುಗ ಕಾಲದಿಂದ ಇತಿಹಾಸ ಕಾಲದ ಗಂಗ, ಚೋಳ, ಹೊಯ್ಸಳ, ವಿಜಯನಗರ, ಯಲಹಂಕ ನಾಡಪ್ರಭುಗಳು, ಮೈಸೂರು ಒಡೆಯರು, ಹೈದರಾಲಿ ಮತ್ತು ಟಿಪ್ಪುವಿನ ಇತಿಹಾಸದ ಕಾಲದವರೆಗಿನ ಕುರುಹುಗಳು ಈ ತಾಲ್ಲೂಕಿನ ಮಹತ್ವವನ್ನು ಹೆಚ್ಚಿಸುತ್ತಿವೆ. ಈಗಾಗಲೇ ಈ ಪರಿಸರದ ಕೆಲವು ನೆಲೆಗಳಲ್ಲಿ ಪುರಾತತ್ತ್ವ ಶಾಸ್ತ್ರಜ್ಞರು ಮತ್ತು ಸಂಶೋಧಕರು ಕೆಲವು ನೆಲೆಗಳನ್ನು ಶೋಧಿಸಿ ವರದಿ ಮಾಡಿರುತ್ತಾರೆ. 1879–1881ರ ಕಾಲಘಟ್ಟದಲ್ಲಿ ಭಾರತೀಯ ಪುರಾತತ್ತ್ವ ಸರ್ವೇಕ್ಷಣಾ ಇಲಾಖೆಯ ಉಪ – ಅಧೀಕ್ಷಕರಾಗಿದ್ದ ಬಿ.ಆರ್. ಬ್ರಾನ್‌ಫಿಲ್‌ರವರು ಸಾವನದುರ್ಗದ ಬಳಿ ಇಟ್ಟಿಗೆ ಬೈಲು ಅರಣ್ಯ ಪ್ರದೇಶದಲ್ಲಿ ಬೃಹತ್ ಶಿಲಾಯುಗ ಕಾಲಕ್ಕೆ ಸೇರಿದ Dolmen and Dolmenoid cist with circle ಸಮಾಧಿಗಳನ್ನು ಉತ್ಖನನ (Branfill 1881:1–12) ನಡೆಸಿ ಕೆಲವು ಮಹತ್ವವಾದ ಅವಶೇಷಗಳನ್ನು ಶೋಧಿಸಿದ್ದಾರೆ.

ಉತ್ಖನನದಲ್ಲಿ ದೊರೆತ ಮಣ್‌ಪಾತ್ರೆಯ ಅವಶೇಷಗಳಲ್ಲಿ ಕಪ್ಪು ಬಣ್ಣದ ವೃತ್ತಾಕಾರದ ಒತ್ತೊಟ್ಟಿಗೆ (Ring stands pots), ಹೊಳಪುಳ್ಳ ಗೋಳಾಕಾರದ ಮಣ್‌ಪಾತ್ರೆ (Hig polished globular vases); ಕೆಂಪು ಬಣ್ಣದ ಬೋಗುಣಿ (Basins), ಉದ್ದ ಕತ್ತಿನ ಸಣ್ಣ ಗೋಳಾಕಾರದ ಮಣ್‌ಪಾತ್ರೆ (High necked small globular vessels), ಕೆಂಪು ವರ್ಣದ ಹಾಲಿನ ಪಾತ್ರೆಯಂತಿರುವ ಬಟ್ಟಲು (Pipkin Bowl), ಮೂರು ಕಾಲಿನ ವಿವಿಧ ಆಕಾರದ ಜಾಡಿಗಳು (Three legged jars), ಹಸುವಿನ ಕೊಂಬುಗಳ ಮಾದರಿಯ ಹೂಜಿಗಳು (Horn shaped vessels); ಕಪ್ಪು-ಮತ್ತು-ಕೆಂಪು ದ್ವಿವರ್ಣದ ಬಟ್ಟಲುಗಳು (Black and-Red ware bowls) ಹಾಗೂ ಗೀರು ರೇಖೆಗಳಿರುವ (Graffiti Marks) ಮಡಕೆ ಚೂರುಗಳು. ಕಬ್ಬಿಣದ ಉಪಕರಣಗಳಲ್ಲಿ ಬಾಣಗಳು (Arrow heads), ಚಾಕುಗಳು (Knife) ಕಠಾರಿಗಳು (Dagger), ಅಲಗು (Blades) ಮತ್ತು ಉಳಿ (Chisels) ಇತ್ಯಾದಿಗಳನ್ನು ಶೋಧಿಸಲಾಗಿದೆ. ಈ ನೆಲೆಯು ದಕ್ಷಿಣ ಕರ್ನಾಟಕ ಭಾಗದಲ್ಲಿ ಮೈಸೂರು ಜಿಲ್ಲೆಯ ಕೊಪ್ಪ ನೆಲೆಯಲ್ಲಿ ನಡೆದ ಉತ್ಖನನದ (Capt. Cole 1869) ನಂತರ ಎರಡನೆಯ ಉತ್ಖನನ ನೆಲೆ ಇದಾಗಿದ್ದು ಈ ಪ್ರದೇಶದ ಪ್ರಾಗೈತಿಹಾಸಿಕ ಸಂಸ್ಕೃತಿಯ ಮುಖ್ಯ ನೆಲೆಯಾಗಿದೆ.

ಮಾಗಡಿ ತಾಲ್ಲೂಕಿನಲ್ಲಿ ವರದಿಯಾಗಿರುವ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳು

ಕ್ರಸಂ.	ನೆಲೆಯ ಹೆಸರು	ಸಂಶೋಧಕರು	ವರ್ಷ	ಬೃಹತ್ ಶಿಲಾಯುಗ ಸಮಾಧಿಯ ವಿಧಗಳು	ಆಧಾರ
1.	ಸಾವನದುರ್ಗ	ಬ್ರಾನ್‌ಫಿಲ್	1881	ಡಾಲ್ಮೆನ್, ಡಾಲ್ಮೆನ್ ಹೊಂದಿದ ನೆಲಕೋಣೆ ಸಮಾಧಿಗಳು (ಡಾಲ್ಮೆನಾಯಿಡ್ ಸಿಸ್ಟ್ ವೃತ್ತಗಳು)	Indian antiquary, ಸಂ - 10, 1881: 1-12
2.	ಕೋರಮಂಗಲ	ಶೇಷಾದ್ರಿ ಎಂ	1956	ನೆಲಕೋಣೆ ಸಮಾಧಿಗಳು (ಸಿಸ್ಟ್)	ಶೇಷಾದ್ರಿ ಎಂ 1956: 61
3.	ಹೂಜಿಗಲ್ಲು	ಗೋಪಾಲರಾವ್ ಹೆಚ್.ಎಸ್	1994	ನೆಲಕೋಣೆ ಸಮಾಧಿಗಳು (ಸಿಸ್ಟ್)	ಇ.ದ. 1994, ಸಂ - 09: 3-5
4.	ಹೊಸಪಾಳ್ಯ	ಜಗದೀಶ ಆರ್	1996	ಡಾಲ್ಮೆನ್ ಹೊಂದಿದ ನೆಲಕೋಣೆ ಸಮಾಧಿಗಳು (ಡಾಲ್ಮೆನಾಯಿಡ್ ಸಿಸ್ಟ್ ವೃತ್ತಗಳು)	ಇ.ದ. 1996, ಸಂ - 11: 30-31
5.	ಕಲ್ಯಾಣಪುರ	ಮಂಜುನಾಥ	1997	ನೆಲಕೋಣೆ ಸಮಾಧಿಗಳು (ಸಿಸ್ಟ್)	ಇ.ದ. 1997, ಸಂ - 10: 18-20
6.	ಅಂಕನಪಾಳ್ಯ	ಲೋಕೇಶ್ ಮತ್ತಿತರರು.	1998	ಡಾಲ್ಮೆನ್ ಹೊಂದಿದ ನೆಲಕೋಣೆ ಸಮಾಧಿಗಳು (ಡಾಲ್ಮೆನಾಯಿಡ್ ಸಿಸ್ಟ್ ವೃತ್ತಗಳು)	ಇ.ದ. 1998, ಸಂ - 13 9-10
7.	ಭೈರನಹಳ್ಳಿ	ಹಂ.ಗು. ರಾಜೇಶ್	2009	ನೆಲಕೋಣೆ ಸಮಾಧಿಗಳು (ಸಿಸ್ಟ್)	ಇ.ದರ್ಶನ ಪುಸ್ತಕ ಸಂಚಿಕೆ 2 ಜುಲೈ-ಡಿ 2009
8.	ಅಳಲುಕುಪ್ಪೆ	ಹಂ.ಗು ರಾಜೇಶ್	2016	ನೆಲಕೋಣೆ ಸಮಾಧಿಗಳು (ಸಿಸ್ಟ್)	ಇ.ದ. 2016, ಸಂ - 31: 7-9

ಭೌಗೋಳಿಕ ಹಿನ್ನೆಲೆ

ಕರ್ನಾಟಕದ ದಕ್ಷಿಣ ಭೂಭಾಗದ ಭೌಗೋಳಿಕ ಪರಿಸರದಲ್ಲಿ ಸ್ಥಿರವಾಗಿರುವ ರಾಮನಗರ ಜಿಲ್ಲೆಯು ತನ್ನದೇ ಆದ ವಿಶಿಷ್ಟ ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ರಾಮನಗರ ಜಿಲ್ಲೆಯ ಪರಿಸರದಲ್ಲಿ ಅನೇಕ ಪುರಾತತ್ವ, ಐತಿಹಾಸಿಕ ಮತ್ತು ಪ್ರವಾಸಿ ನೆಲೆಗಳನ್ನು ಕಾಣಬಹುದು. ಶಿಲಾಸಮುಚ್ಚಯವನ್ನೇ ಕೇಂದ್ರೀಕರಿಸಿಕೊಂಡಿರುವ ರಾಮನಗರ ಜಿಲ್ಲೆಯ ಭೂಭಾಗವು ಪ್ರಾಚೀನ ಕಾಲದಿಂದಲೂ ಮಾನವನ ನಾಗರೀಕತೆಯ ವಿಕಾಸಕ್ಕೆ ಉತ್ತಮ ಸ್ಥಾನವೆಂದು ಪರಿಗಣಿಸಲ್ಪಟ್ಟಿದೆ. ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಈ ಪ್ರದೇಶದಲ್ಲಿ ಅನೇಕ ಚಾರಿತ್ರಿಕ ಘಟನೆಗಳು ನಡೆಯಲು ಇಲ್ಲಿನ ಭೌಗೋಳಿಕ ಪರಿಸರ ಕಾರಣವಾಗಿವೆ. ಅರ್ಕಾವತಿ ಮತ್ತು ಅದರ ಉಪನದಿ, ಹಳ್ಳಗಳು ಈ ಭಾಗದಲ್ಲಿ ಹರಿಯುತ್ತಿದ್ದು ಇಲ್ಲಿನ ಜನ ಜೀವನದ ಮೇಲೆ ಪ್ರಭಾವ ಬೀರಿರುವ ನದಿಗಳಾಗಿವೆ. ಶಿಲಾಸಮುಚ್ಚಯಗಳು, ಅರಣ್ಯ ಪ್ರದೇಶ, ಬಯಲು ಪ್ರದೇಶ, ಪ್ರಾಣಿ ಸಂಪತ್ತು, ವಾಸಿಸಲು ಯೋಗ್ಯವಾದ ಗುಹೆಗಳು, ಶಿಲಾಯುಧಗಳನ್ನು ತಯಾರು ಮಾಡಲು ಅವಶ್ಯಕವಿರುವ ವಿವಿಧ ಬಗೆಯ ಕಲ್ಲುಗಳು ಮುಂತಾದ ಪ್ರಾಕೃತಿಕ ಸಂಪತ್ತುಗಳಿಂದ ಈ ಜಿಲ್ಲೆ ಕೂಡಿದೆ.

ಈ ಜಿಲ್ಲೆಯ ಒಂದು ಭಾಗವಾದ ಮಾಗಡಿ ತಾಲ್ಲೂಕು ಭೌಗೋಳಿಕವಾಗಿ ಶಿಲಾಸಮುಚ್ಚಯಗಳು ಗ್ರಾನೈಟ್, ಕ್ವಾರ್ಟ್ಜೈಟ್‌ನಂತಹ ಶಿಲೆಗಳಿಂದ ಕೂಡಿದ್ದು ಬೃಹದಾಕಾರದ ಬೆಟ್ಟಗಳನ್ನು ಹೊಂದಿದ ಪ್ರದೇಶವಾಗಿದೆ. ಸಾವನದುರ್ಗ ಬೆಟ್ಟವು ಸಮುದ್ರ ಮಟ್ಟದಿಂದ 1207 ಮೀಟರ್ ಎತ್ತರದಲ್ಲಿದ್ದು ಈ ಬೆಟ್ಟವು ಏಷ್ಯಾ ಖಂಡದ ಅತಿದೊಡ್ಡ ಏಕಶಿಲಾ ಬೆಟ್ಟಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಕಾವೇರಿ ನದಿಯ ಉಪನದಿಗಳಲ್ಲಿ ಒಂದಾದ ಅರ್ಕಾವತಿ ನದಿಯು ಈ ಪ್ರದೇಶದ ಪ್ರಮುಖ ನದಿಯಾಗಿದ್ದು, ಈ ನದಿಯು ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಬೆಟ್ಟದ ಸಮೀಪ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ನೆಲಮಂಗಲ ತಾಲೂಕಿನಲ್ಲಿ ಪಶ್ಚಿಮಕ್ಕೆ ಸಾಗಿ, ಮಾಗಡಿ ತಾಲ್ಲೂಕು ತಿಪ್ಪಗೊಂಡನಹಳ್ಳಿ ಬಳಿ ಕುಮುದ್ವತಿ ನದಿಯನ್ನು, ವೀರಾಪುರದ ಬಳಿ ಚಿಕ್ಕತೊರೆಹಳ್ಳ, (ಬೆಳಗುಂಬ ತೊರೆ) ಕೂಡಿಕೊಂಡು ದಕ್ಷಿಣಕ್ಕೆ ಹರಿಯುತ್ತದೆ. ರಾಮಗಿರಿ ಮತ್ತು ಶಿವನಗಿರಿ ಮಧ್ಯದಲ್ಲಿ ಹರಿದು ಕನಕಪುರ ತಾಲ್ಲೂಕಿನಲ್ಲಿ ವೃಷಾಭಾವತಿ ನದಿಯನ್ನು ಕೂಡಿಕೊಂಡು ಅಂತಿಮವಾಗಿ ಕನಕಪುರದ ಬಳಿ ಕಾವೇರಿ ನದಿಯಲ್ಲಿ ಸಂಗಮವಾಗುವ ಈ ನದಿಯು ಒಟ್ಟು 190 ಕಿ. ಮೀ ಉದ್ದ ಹರಿಯುತ್ತದೆ. ಮಾಗಡಿ ಪರಿಸರದಲ್ಲಿ ಅರ್ಕಾವತಿ ನದಿ ಒಂದೇ ಅಲ್ಲದೇ ಇದರ ಉಪನದಿ ಮತ್ತು ಸಣ್ಣ ನಾಲೆಗಳಾದ ಕುಮುದ್ವತಿ, ಕಣ್ವ, ಭರ್ಗಾವತಿ ಹೊಳೆ, ಸೀತಲ್ ತೊರೆ ಹಾಗೂ ಬೆಳಗುಂಬ ತೊರೆಗಳು ಹರಿಯುತ್ತವೆ.

ಪ್ರಸ್ತುತ ಲೇಖನವು ಮಾಗಡಿ ತಾಲ್ಲೂಕಿನ ಪುರಾತತ್ತ್ವ ಸರ್ವೇಕ್ಷಣೆಯಲ್ಲಿ ಕಂಡು ಬಂದಿರುವ ಹೊಸ ಪುರಾತತ್ವ ನೆಲೆಗಳನ್ನು ಬೆಳಕಿಗೆ ತರುವುದು ಮತ್ತು ಅವುಗಳನ್ನು ಅಧ್ಯಯನಕ್ಕೊಳಪಡಿಸಿ ಈ ಪ್ರದೇಶದ ಪ್ರಾಗೈತಿಹಾಸಿಕ ಸಂಸ್ಕೃತಿಯನ್ನು ಅರ್ಥೈಸುವ ಪ್ರಯತ್ನ ಮಾಡಲಾಗಿದೆ (Kumar 2016). ಈ ತಾಲ್ಲೂಕಿನ ಸಾವನದುರ್ಗ, ಬೆಳಗುಂಬ, ಗುಡೆಮಾರನಹಳ್ಳಿ, ವಳಗೆರೆ ಪಾಳ್ಯ, ಅಕ್ಕಿನಾಳು ಕಾಲೋನಿ, ನಾಗಮಂಗಲ, ವೀರೇಗೌಡನದೊಡ್ಡಿ ನೆಲೆಗಳಲ್ಲಿ ಸೂಕ್ಷ್ಮ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳನ್ನು ಅನ್ವೇಷಿಸಲಾಗಿದ್ದು ಅವುಗಳ ವಿವರಣೆಯನ್ನು ಕೆಳಗೆ ನೀಡಲಾಗಿದೆ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಗಳು

ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಮಾಗಡಿ ಪರಿಸರದಲ್ಲಿ ಸಾವನದುರ್ಗ ಮತ್ತು ವಳಗೆರೆಪಾಳ್ಯ ನೆಲೆಗಳಲ್ಲಿ ಸೂಕ್ಷ್ಮ ಶಿಲೋಪಕರಣಗಳು ಬೆಳಕಿಗೆ ಬಂದಿವೆ.

1 ಸಾವನದುರ್ಗ

ಸಾವನದುರ್ಗ ನೆಲೆಯು ಮಾಗಡಿ ತಾಲ್ಲೂಕು ಕೇಂದ್ರದಿಂದ ಆಗ್ನೇಯಕ್ಕೆ ಸು. 12ಕಿ. ಮೀ ದೂರದಲ್ಲಿದೆ. ಈ ನೆಲೆಯು ಅಗಾಧವಾದ ಗ್ರಾನೈಟ್ ಶಿಲಾಸಮುಚ್ಚಯವನ್ನು ಕೇಂದ್ರೀಕರಿಸಿಕೊಂಡಿರುವ ಪ್ರಮುಖ ನೆಲೆಯಾಗಿದೆ. ಬ್ರಾನ್‌ಫಿಲ್‌ರವರು 1879–1881ರಲ್ಲಿ ಈ ನೆಲೆಯಲ್ಲಿ ಬೃಹತ್ ಶಿಲಾಯುಗ ಸಮಾಧಿಗಳನ್ನು ಉತ್ಖನನ ನಡೆಸಿದ್ದು, ಕೆಲವು ವಿಶೇಷವೆನಿಸುವ ಅವಶೇಷಗಳನ್ನು ಶೋಧಿಸಿದ್ದಾರೆ. ಪ್ರಸ್ತುತ ಪುರಾತತ್ತ್ವ ಅನ್ವೇಷಣೆಯಲ್ಲಿ ಸಾವನದುರ್ಗದ ಇಟ್ಟಿಗೆಬೈಲು ಪ್ರದೇಶದಲ್ಲಿ ಸೂಕ್ಷ್ಮ ಶಿಲೋಪಕರಣಗಳನ್ನು ಶೋಧಿಸಲಾಗಿದೆ.

ಸೂಕ್ಷ್ಮ ಶಿಲೋಪಕರಣಗಳು ದೊರೆತಿರುವ ನೆಲೆಯು ಸಾವನದುರ್ಗ ಅರಣ್ಯ ಪ್ರದೇಶದ ಕಾವಲು ಗೋಪುರದಿಂದ ಸು. 550 ಮೀಟರ್ ಪೂರ್ವಕ್ಕೆ ಬೆಟ್ಟದ ತಪ್ಪಲಿನ ಸಮತಟ್ಟಾದ ಪ್ರದೇಶದಲ್ಲಿದೆ. ಈ ನೆಲೆಯು ಸಮುದ್ರ ಮಟ್ಟದಿಂದ 872 ಮೀ ಎತ್ತರದಲ್ಲಿದೆ. ಪ್ರಸ್ತುತ ಕಂಡು ಬಂದಿರುವ ಶಿಲೋಪಕರಣಗಳು 782.68 ಚದರ ಮೀ. ಸುತ್ತಳತೆಯ ಸಮತಟ್ಟಾದ ಭೂಭಾಗದಲ್ಲಿ (N-12° 55.298 ^'E-77° 16.736')ಕಂಡುಬಂದಿವೆ. ಈ ಉಪಕರಣಗಳು ಸ್ಫಟಿಕ (Quartz) ಹಾಗೂ ಚಾಲ್ಸಿಡೋನಿ ಶಿಲೆಗಳಿಂದ ತಯಾರಿಸಲಾಗಿರುವ ಅನಿರ್ದಿಷ್ಟ ಆಕಾರದ ಚಕ್ಕೆ (Flakes), ಅಲಗು (Blade) ಮತ್ತು ಕೋರ್(Core) ಸೂಕ್ಷ್ಮ ಶಿಲೋಪಕರಣಗಳಾಗಿವೆ (ಚಿತ್ರ–1).

2 ವಳಗೆರೆಪಾಳ್ಯ

ವಳಗೆರೆಪಾಳ್ಯ ನೆಲೆಯು ಮಾಗಡಿ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಸು.6 ಕಿ. ಮೀ ದೂರದಲ್ಲಿದ್ದು ಸಾತನೂರು ಗ್ರಾಮಕ್ಕೆ ಹೋಗುವ ರಸ್ತೆಯ ಪೂರ್ವ ದಿಕ್ಕಿಗಿದೆ. ಗ್ರಾಮದ ಈಶಾನ್ಯಕ್ಕಿರುವ ಬೆಟ್ಟದ ತಪ್ಪಲಿನಲ್ಲಿ ಚೆರ್ಟ್ ಶಿಲೆಯಿಂದ ಮಾಡಿದ ಒಂದು ಅಲಗು ಮಾದರಿಯ (Blade) ಸೂಕ್ಷ್ಮ ಶಿಲೋಪಕರಣ (ಚಿತ್ರ–2) ದೊರೆತಿದ್ದು, ಈ ಪ್ರದೇಶದಲ್ಲಿ ದೊರಕಿರುವ ಒಂದು ಮುಖ್ಯ ಕುರುಹು ಇದಾಗಿದೆ. ಹಾಗೂ ಇದೇ ನೆಲೆಯಲ್ಲಿ ಬೃಹತ್ ಶಿಲಾಯುಗ ಸಮಾಧಿಗಳು ಕಂಡುಬಂದಿದ್ದು ಅವುಗಳನ್ನು ಮುಂದಿನ ಭಾಗದಲ್ಲಿ ವಿವರಿಸಲಾಗಿದೆ. ಈ ಪ್ರದೇಶದಲ್ಲಿ ಹೆಚ್ಚಿನ ಕ್ಷೇತ್ರಕಾರ್ಯ ಮಾಡಿದರೆ ಈ ಸಂಸ್ಕೃತಿಯ ಕುರುಹುಗಳನ್ನು ಬೆಳಕಿಗೆ ತರಬಹುದಾಗಿದೆ.

ಬೃಹತ್ ಶಿಲಾಯುಗ ಸಮಾಧಿ ನೆಲೆಗಳು

ಪ್ರಸ್ತುತ ಮಾಗಡಿ ಪರಿಸರದ ಪುರಾತತ್ತ್ವ ಅನ್ವೇಷಣೆಯಲ್ಲಿ ವಿವಿಧ ನೆಲೆಗಳಲ್ಲಿ ನಾಲ್ಕು ವಿಧದ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು ಕಂಡು ಬಂದಿವೆ. ಅವುಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.

1. ಡಾಲ್ಮೆನ್ ಮಾದರಿಯ ನೆಲಕೋಣೆ ವೃತ್ತ ಸಮಾಧಿಗಳು (Dolmenoid cist enclosed by stone circle with port-hole)
2. ನೆಲಕೋಣೆ (Cist circle) ಸಮಾಧಿಗಳು
3. ಡಾಲ್ಮೆನ್(Dolmen)
4. ನಿಲುಸುಗಲ್ಲು (Menhir)

1. ಉಡುಕುಂಟೆ.

ಉಡುಕುಂಟೆ ಗ್ರಾಮವು 19 ಕಿ.ಮೀ ಉತ್ತರಕ್ಕೆ ಮಾಗಡಿ ತಾಲ್ಲೂಕು ಕೇಂದ್ರದಿಂದ ಶಿವಗಂಗಾ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿದ್ದು, ಅರ್ಕಾವತಿ ನದಿಯ ಉಪನದಿಯಾದ ಕುಮುದ್ವ ನದಿಯಿಂದ ಪಶ್ಚಿಮಕ್ಕೆ 12 ಕಿ. ಮೀ ದೂರದಲ್ಲಿದೆ. ಈ ಪ್ರದೇಶವು ಗ್ರಾನೈಟ್ ಶಿಲಾಸಮುಚ್ಚಯದಿಂದ ಕೂಡಿದ್ದು, ಸಮುದ್ರ ಮಟ್ಟದಿಂದ 953-965 ಮೀ ಎತ್ತರ ಪ್ರದೇಶದಲ್ಲಿದೆ. ಉಡುಕುಂಟೆ ಗ್ರಾಮದಿಂದ ಪಶ್ಚಿಮಕ್ಕೆ 1 ಕಿ.ಮೀ ದೂರದಲ್ಲಿರುವ ಅದರಂಗಿ ಅರಣ್ಯ ಪ್ರದೇಶದಲ್ಲಿ ಮೂರು ನೆಲೆಗಳಲ್ಲಿ (3 Localities) ಸುಮಾರು 30ಕ್ಕೂ ಹೆಚ್ಚು ನೆಲಕೋಣೆ (Cist) ಶಿಲಾ ಸಮಾಧಿಗಳು ಕಂಡುಬಂದಿರುತ್ತವೆ.

ನೆಲೆ-1 ದೊಣೆ ಅರೆ

ಮುನೇಶ್ವರ ದೇವಾಲಯದ ನೈರುತ್ಯಕ್ಕೆ ಸು.450 ಮೀಟರ್ ದೂರದಲ್ಲಿ ಸ್ಥಳೀಯವಾಗಿ 'ದೊಣೆ ಅರೆ' ಎಂದು ಕರೆಯಲಾಗುವ ಪ್ರದೇಶದಲ್ಲಿ ಸು 30ಕ್ಕೂ ಹೆಚ್ಚು ಶಿಲಾವೃತ್ತ ಸಮಾಧಿಗಳು ಕಂಡುಬಂದಿವೆ. ಈ ನೆಲೆಯು ಬೆಟ್ಟದ ತಪ್ಪಲು ಪ್ರದೇಶದಲ್ಲಿದ್ದು ಸಮುದ್ರ ಮಟ್ಟದಿಂದ 965 ಮೀ ಎತ್ತರ ಪ್ರದೇಶದಲ್ಲಿದೆ. ಈ ನೆಲೆಯಲ್ಲಿ ಕಂಡು ಬಂದಿರುವ ಶಿಲಾ ಸಮಾಧಿಗಳು ವೃತ್ತಕಾರವಾದ ನೆಲಕೋಣೆ ಶಿಲಾ ಸಮಾಧಿಗಳಾಗಿವೆ. ಸಾಮಾನ್ಯವಾಗಿ ವೃತ್ತಗಳ ವ್ಯಾಸವು 6.80-7.80 ಮೀಟರ್‌ಗಳಿದ್ದು ಮಧ್ಯಭಾಗದಲ್ಲಿ ನೆಲಕೋಣೆ (Cist chamber)ಯಿದ್ದು, ಇದನ್ನು ಬೃಹತ್ ಚಪ್ಪಡಿಯಿಂದ ಮುಚ್ಚಲಾಗಿದೆ (ಚಿತ್ರ-3).

ಇಲ್ಲಿನ ನಿಧಿಶೋಧಕರಿಂದ ಅಪರಿಪೂರ್ಣವಾಗಿ ನಾಶ ಹೊಂದಿರುವ ಸಮಾಧಿಗಳ ನೆಲಕೋಣೆಯ ಒಳಗೆ ಮೂರು ಕಾಲಿನ ಜಾಡಿ, ಗೋಳಾಕೃತಿಯ ಮಡಕೆಗಳನ್ನು ಕಾಣಬಹುದು ಹಾಗೂ ಕ್ಷೇತ್ರಕಾರ್ಯದಲ್ಲಿ ಕೆಂಪು, ತೆಳುಗೆಂಪು ಹಾಗೂ ಕೆಂಪು, ಕಪ್ಪು ಹಾಗೂ ಕಪ್ಪು-ಮತ್ತು-ಕೆಂಪು ದ್ವಿವರ್ಣದ ಮಣ್‌ಪಾತ್ರೆ ಚೂರುಗಳು, ಗೀರುರೇಖೆಗಳನ್ನು ಹೊಂದಿದ ಚೂರುಗಳು, ಹೊರಮೇಲ್ಮೈಯಲ್ಲಿ ಅಂಕು ಡೊಂಕಾದ (Zigzag lines) ಮತ್ತು ಸಮತಲವಾಗಿ ಕೊರೆದ ಸಾಲುಗಳ (Horizontal incised lines) ಅಲಂಕಾರವುಳ್ಳ ಮಣ್‌ಪಾತ್ರೆ ಚೂರುಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಲಾದ ಮಣ್‌ಪಾತ್ರೆಯ ಈ ಚೂರುಗಳು ಕಪ್ಪು-ಮತ್ತು-ಕೆಂಪು ದ್ವಿವರ್ಣದ ಬಟ್ಟಲು, ಕಪ್ಪು ಬಣ್ಣದ ಬಟ್ಟಲು, ಕೆಂಪು ಬಣ್ಣದ ಸಣ್ಣ ಮತ್ತು ಮಧ್ಯಮ ಗಾತ್ರದ ಗೋಳಾಕಾರದ ಮಡಕೆ, ನಿಮ್ನ ಕುತ್ತಿಗೆಯ ಸಣ್ಣಮಣ್‌ಪಾತ್ರೆ ಆಕಾರದವುಗಳಾಗಿವೆ (ಚಿತ್ರ-8).

ವಿಶೇಷವಾಗಿ ಮಣ್‌ಪಾತ್ರೆಯ ಬಾಯಿಯ ಹೊರ ಮೈಯಲ್ಲಿ (Exterior Rim portion) ಎರಡರಿಂದ ಮೂರು ಸಾಲುಗಳಲ್ಲಿ ಗೀರು ವಿನ್ಯಾಸ(Grooves) ಗಳನ್ನು ರೂಪಿಸಿ ಮತ್ತು ಅವುಗಳ ಮೇಲೆ ಓರೆ-ರೇಖೆ (Criss cross lines) ಗಳಿಂದ ಅಲಂಕರಿಸಲಾಗಿದೆ. ಹಾಗೂ ಗೋಳಾಕಾರದ ಮಧ್ಯಭಾಗದಲ್ಲಿ ತೆಳು ಗೀರು ವಿನ್ಯಾಸಗಳ (Grooves) ಸಾಲುಗಳನ್ನು ಕೊರೆಯಲಾಗಿದೆ. ಈ ಲಕ್ಷಣವುಳ್ಳ ಮಣ್‌ಪಾತ್ರೆಗಳು ಕೆಂಪು ಬಣ್ಣದ ಗೋಳಾಕಾರ (Globular vessels) ಮಾದರಿಯ ಮಣ್‌ಪಾತ್ರೆಗಳಲ್ಲಿ ಹೆಚ್ಚು ಕಂಡು ಬಂದಿವೆ. ಬೃಹತ್ ಶಿಲಾಯುಗ ಕಾಲಕ್ಕೆ ಸೇರಿದ ಇಂತಹ ಗೀರು ವಿನ್ಯಾಸಗಳು ಹಾಗೂ ಓರೆ ರೇಖೆ ಅಲಂಕಾರವುಳ್ಳ ಮಣ್‌ಪಾತ್ರೆಗಳು ಮಾಗಡಿ ಪ್ರದೇಶದಲ್ಲಿ ಮಾತ್ರ ಕಂಡುಬಂದಿದ್ದು, ಇಂತಹ ಅಲಂಕಾರವುಳ್ಳ ಮಣ್‌ಪಾತ್ರೆಗಳು ಇದುವರೆಗೂ ನಡೆದಿರುವ ನೆರೆಯ ಉತ್ಖನನ ನೆಲೆಗಳಾದ ಜಡಿಗೇನಹಳ್ಳಿ, ಮನಗೊಂಡನಹಳ್ಳಿ, ಬನಹಳ್ಳಿ, ಟಿ. ನರಸಿಪುರ, ತಲಕಾಡು

ನೆಲೆಗಳಲ್ಲಿ ಕಂಡುಬಂದಿಲ್ಲದಿರುವುದನ್ನು ಸಂಶೋಧನೆಯಲ್ಲಿ ಗಮನಿಸಲಾಗಿದೆ. ಈ ಮೇಲೆ ಗುರುತಿಸಲಾಗಿರುವ ಮಡಕೆಯ ಬಾಯಿಯ ಹೊರ ಮೇಲ್ಮೈಯಲ್ಲಿ (Exterior Rim portion) ಅಲಂಕಾರವುಳ್ಳ ಮಣ್‌ಪಾತ್ರೆಗಳನ್ನು ಬ್ರಾನ್‌ಫಿಲ್‌ರವರು ಮಾಗಡಿ ತಾಲ್ಲೂಕಿನ ಸಾವನದುರ್ಗದ ಇಟ್ಟಿಗೆಬೈಲು ಉತ್ಖನನದ (Branfill 1881: 1-12 fig: 31) ಅವಶೇಷಗಳಲ್ಲಿ ಗುರುತಿಸಿದ್ದಾರೆ.

ನೆಲೆ–2 ತ್ಯಾಗ

ಈ ನೆಲೆಯು ನೆಲೆ–1ರಿಂದ ಸು 500 ಮೀಟರ್ ವಾಯುವ್ಯದಲ್ಲಿ ಬೆಟ್ಟದ ತಪ್ಪಲಿನಲ್ಲಿ ಕಂಡು ಬಂದಿದೆ. ಈ ನೆಲೆಯು 'ತ್ಯಾಗ' ಎಂದು ಕರೆಯಲ್ಪಡುವ ಅರಣ್ಯ ಪ್ರದೇಶದೊಳಗಿನ ಬೆಟ್ಟದ ತಪ್ಪಲಿನಲ್ಲಿದ್ದು, ಸಮುದ್ರ ಮಟ್ಟದಿಂದ 954 ಮೀಟರ್ ಎತ್ತರ ಪ್ರದೇಶದಲ್ಲಿದೆ. ಈ ನೆಲೆಯಲ್ಲಿ ಒಟ್ಟು 4 ನೆಲಕೋಣೆ ಸಮಾಧಿಗಳು ಕಂಡು ಬಂದಿವೆ. ನೆಲಕೋಣೆಯ ಸುತ್ತಲೂ ಚಪ್ಪಡಿ ಕಲ್ಲುಗಳಿಂದ ಜೋಡಿಸಲಾಗಿದ್ದು, ಈ ವೃತ್ತಗಳ ವ್ಯಾಸವು 6.50 – 8.55 ಮೀ ನಷ್ಟಿವೆ.

ನೆಲೆ–3 ಅಡ್ಡಗಲ ಜಮೀನು

ಈ ಶಿಲಾ ಸಮಾಧಿ ನೆಲೆಯು ನೆಲೆ–1 ರಿಂದ ಆಗ್ನೇಯ ದಿಕ್ಕಿಗೆ ಸು. 750 ಮೀಟರ್ ದೂರದಲ್ಲಿ 'ಅಡ್ಡಗಲ' ಎಂದು ಕರೆಯಲ್ಪಡುವ ಜಮೀನಿನಲ್ಲಿ ಕಂಡುಬಂದಿದೆ. ಈ ನೆಲೆಯು ಸಮುದ್ರ ಮಟ್ಟದಿಂದ 966 ಮೀಟರ್ ಎತ್ತರ ಪ್ರದೇಶದಲ್ಲಿದೆ. ಈ ನೆಲೆಯಲ್ಲಿ ಉತ್ತಮ ಸ್ಥಿತಿಯಲ್ಲಿರುವ ಮೂರು ನೆಲಕೋಣೆ ಸಮಾಧಿಗಳು ಕಂಡು ಬಂದಿವೆ. ಆದರೆ ಇವುಗಳು ದಟ್ಟವಾದ ಮುಳ್ಳಿನ ಸಸ್ಯಗಳಿಂದ ಆವೃತವಾಗಿದ್ದು ದಾಖಲೀಕರಣ ಮಾಡಲು ಸಾಧ್ಯವಾಗಿರುವುದಿಲ್ಲ.

2. ಗುಡೇಮಾರನಹಳ್ಳಿ

ಗುಡೇಮಾರನಹಳ್ಳಿ ಗ್ರಾಮವು ತಾಲ್ಲೂಕು ಕೇಂದ್ರದಿಂದ ಸು. 12 ಕಿ.ಮೀ ಈಶಾನ್ಯಕ್ಕೆ ಇದೆ. ಈ ಗ್ರಾಮದ ಪಶ್ಚಿಮಕ್ಕೆ ಉದ್ದಂಡಹಳ್ಳಿ ರಸ್ತೆಯ ಬಲಕ್ಕೆ ಕೃಷಿ ಭೂಮಿಯಲ್ಲಿ 15 ನೆಲಕೋಣೆ (Cist) ಶಿಲಾಸಮಾಧಿಗಳು ಕಂಡುಬಂದಿದ್ದು ಹೆಚ್ಚಿನವು ಸುಸ್ಥಿತಿಯಲ್ಲಿವೆ. ಈ ಸಮಾಧಿ ನೆಲೆಯು ಭೌಗೋಳಿಕವಾಗಿ ಎತ್ತರವಾದ ಪ್ರದೇಶ(Upland area)ದಲ್ಲಿದ್ದು ಸಮುದ್ರ ಮಟ್ಟದಿಂದ 938 ಮೀಟರ್ ಎತ್ತರದಲ್ಲಿದೆ.

ಸಾಮಾನ್ಯವಾಗಿ ಸಮಾಧಿಗಳ ವೃತ್ತಗಳ ವ್ಯಾಸವು 4.92 ಮೀ ನಿಂದ 8.20ಮೀ ಅಳತೆಯನ್ನು ಹೊಂದಿವೆ, ಶಿಲಾವೃತ್ತಗಳನ್ನು ನಿರ್ದಿಷ್ಟಾಕಾರವಿಲ್ಲದ ಮಧ್ಯಮ ಗಾತ್ರದ ಗ್ರಾನೈಟ್ ಬಂಡೆಗಳಿಂದ ಜೋಡಿಸಲಾಗಿದೆ. ವೃತ್ತದ ಮಧ್ಯಭಾಗದಲ್ಲಿ ನೆಲಕೋಣೆಗೆ ಮುಚ್ಚಲ್ಪಟ್ಟಿರುವ ಚಪ್ಪಡಿಕಲ್ಲನ್ನು ಗಮನಿಸಬಹುದು ಹಾಗೂ ನಿಧಿಶೋಧಕರಿಂದ ನಾಶಹೊಂದಿರುವ ಒಂದು ಸಮಾಧಿಯ ನೆಲಕೋಣೆಯು ಪೂರ್ವಾಭಿಮುಖವಾಗಿ ಆಯತಾಕಾರದಲ್ಲಿದ್ದು, ಪೂರ್ವದ ಚಪ್ಪಡಿಯಲ್ಲಿ ಆಯಾತಾಕಾರದ ರಂಧ್ರ (Port-hole)ವನ್ನು ಹೊಂದಿದೆ. ಈ ರಂಧ್ರವು ಚಪ್ಪಡಿಯ ಮೇಲ್ಭಾಗದ ಅಂಚಿನಲ್ಲಿ ಕೊರೆದು ಮಾಡಲಾದ ರಂಧ್ರವಾಗಿದೆ. ಈ ನೆಲಕೋಣೆಯ ಒಳ ವಿನ್ಯಾಸದ ಅಳತೆಯು ಪೂರ್ವ–ಪಶ್ಚಿಮಕ್ಕೆ 2.70 ಮೀ × ಉತ್ತರ – ದಕ್ಷಿಣಕ್ಕೆ 4.92 ಮೀ ಉದ್ದಗಲವನ್ನು ಹೊಂದಿದ್ದು, 1.96 ಮೀಟರ್ ಆಳದಿಂದ ಕೂಡಿದೆ. ನೆಲಕೋಣೆಯ ಮೇಲೆ ಮುಚ್ಚಲಾಗಿರುವ ಬೃಹತ್ ಚಪ್ಪಡಿಯು ಪೂರ್ವ – ಪಶ್ಚಿಮಕ್ಕೆ 6.24ಮೀ × ಉತ್ತರ – ದಕ್ಷಿಣಕ್ಕೆ 4.77 ಮೀ

ಉದ್ದಗಲವನ್ನು ಹಾಗೂ 15-20 ಇಂಚು ದಪ್ಪವಾಗಿದೆ. ಈ ಸಮಾಧಿಯ ವೃತ್ತವನ್ನು ಕೃಷಿ ಚಟುವಟಿಕೆಗಾಗಿ ತೆಗೆದು ಹಾಕಲಾಗಿದೆ. ಪ್ರಸ್ತುತ ಈ ನೆಲಕೋಣೆಯ ಒಳಗೆ ಉದ್ದನೆಯ ಜಾವಲಿನ್ ಮಾದರಿಯ ಚಪ್ಪಟೆಯ ಒಂದು ಕಬ್ಬಿಣದ ಆಯುಧ (Long flat tapering javelin point) ದೊರಕಿದ್ದು, ಈ ಆಯುಧದ ತುದಿಯ ಮತ್ತು ಹಿಡಿಕೆಯ ಭಾಗ ಮುರಿದು ಹೋಗಿದೆ, ಇನ್ನುಳಿದ ಭಾಗವು 35.5 ಸೆ.ಮೀ. ಉದ್ದವಿದೆ ಮತ್ತು ಇದೇ ನೆಲಕೋಣೆಯಲ್ಲಿ ಕೆಂಪು ವರ್ಣದ ಮೂರು ಕಾಲಿನ ಜಾಡಿಯ (Three legged jar) ಭಾಗಗಳನ್ನು ಸಂಗ್ರಹಿಸಲಾಗಿದೆ.

3 ಅಕ್ಕಿನಾಳು ಕಾಲೋನಿ

ಈ ಗ್ರಾಮವು ತಾಲ್ಲೂಕು ಕೇಂದ್ರದಿಂದ ಸು. 14 ಕಿ.ಮೀ ಈಶಾನ್ಯಕ್ಕಿದೆ. ಗ್ರಾಮದ ಪಶ್ಚಿಮಕ್ಕಿರುವ ಬೆಟ್ಟದ ಮೇಲಿನ ಸಮತಟ್ಟಿನಲ್ಲಿ ಒಂದು ಡಾಲ್ಮೆನ್ ಕಂಡುಬಂದಿದೆ. ಈ ಡಾಲ್ಮೆನ್ ನೆಲೆಯು ಸಮುದ್ರ ಮಟ್ಟದಿಂದ 912 ಮೀ ಎತ್ತರದಲ್ಲಿದೆ. ಇಲ್ಲಿ ಕಂಡು ಬಂದಿರುವ ಡಾಲ್ಮೆನ್ 'U' ಮಾದರಿಯ porthole ನ್ನು ಹೊಂದಿದ್ದು, ಡಾಲ್ಮೆನ್‌ನ ದಕ್ಷಿಣ ಮತ್ತು ಉತ್ತರ ಭಾಗದಲ್ಲಿ ಚಪ್ಪಡಿಗಳು ಕಂಡು ಬಂದಿರುವುದಿಲ್ಲ, ಹಾಗೂ ಪಶ್ಚಿಮಕ್ಕೆ ಸಣ್ಣ ಚಪ್ಪಡಿಗಳನ್ನು ಒಂದರ ಮೇಲೊಂದರಂತೆ ಜೋಡಿಸಲಾಗಿದೆ. ಪೂರ್ವದಲ್ಲಿ porthole ನಿಂದ ಕೂಡಿದ ಚಪ್ಪಡಿಯನ್ನು ನಿಲ್ಲಿಸಿ ಅಂತಿಮವಾಗಿ ಇವುಗಳ ಆಧಾರದ ಮೇಲೆ ಬೃಹತ್ ಚಪ್ಪಡಿಯನ್ನು ಹಾಸಲಾಗಿದೆ (ಚಿತ್ರ-4). ಈ ಹಾಸುಗಲ್ಲಿನ ಅಳತೆಯು ಪೂರ್ವ ಪಶ್ಚಿಮವಾಗಿ 3.96 ಮೀ ಮತ್ತು ಉತ್ತರ ದಕ್ಷಿಣಕ್ಕೆ 3.56 ಮೀ ಇದ್ದು 10 ಇಂಚು ದಪ್ಪವಾಗಿದೆ. ಮಾಗಡಿ ಪರಿಸರದಲ್ಲಿ porthole ಹೊಂದಿದ ಡಾಲ್ಮೆನ್ ಕಂಡುಬಂದಿರುವುದನ್ನು ಈ ನೆಲೆಯಲ್ಲಿ ಮಾತ್ರ ಗಮನಿಸಬಹುದು.

4 ಬೆಳಗುಂಬ

ಬೆಳಗುಂಬ ಗ್ರಾಮವು ತಾಲ್ಲೂಕು ಕೇಂದ್ರದಿಂದ ಗುಡೇಮಾರನ ಹಳ್ಳಿ ರಸ್ತೆಯಲ್ಲಿ 6 ಕಿ.ಮೀ ಈಶಾನ್ಯಕ್ಕಿದ್ದು, ಸಮಾಧಿನೆಲೆಯು ಗ್ರಾಮದ ದಕ್ಷಿಣಕ್ಕೆ ಮುನೇಶ್ವರ ದೇವಾಲಯದ ಬಳಿ ನಾರಾಯಣಪ್ಪನವರ ಜಮೀನಿನಲ್ಲಿ ಕಂಡುಬಂದಿದೆ. ಈ ನೆಲೆಯು ಚಿಕ್ಕತೊರೆ ಹಳ್ಳದ ಬಲದಂಡೆಯ ಮೇಲೆ ಎತ್ತರದ ಪ್ರದೇಶದಲ್ಲಿದೆ. ಈ ಪ್ರದೇಶವು ಸಮುದ್ರ ಮಟ್ಟದಿಂದ 857 ಮೀ ಎತ್ತರದಲ್ಲಿದೆ. ಈ ನೆಲೆಯಲ್ಲಿ 7 ನೆಲಕೋಣೆ ಸಮಾಧಿಗಳು ಕಂಡುಬಂದಿದ್ದು, ಕೆಲವನ್ನು ಜಮೀನಿನ ಅಗಲೀಕರಣದ ಸಮಯದಲ್ಲಿ ನಾಶಪಡಿಸಲಾಗಿದೆ. ಪ್ರಸ್ತುತ ಉತ್ತಮ ಸ್ಥಿತಿಯ ಸಮಾಧಿಗಳಲ್ಲಿ ವೃತ್ತಗಳು ಕಂಡುಬಂದಿದ್ದು ನೆಲಕೋಣೆಗೆ ಹಾಸಲಾಗಿರುವ ಚಪ್ಪಡಿಯನ್ನು ವೃತ್ತದ ಮಧ್ಯದಲ್ಲಿ ಕಾಣಬಹುದು. ಈ ವೃತ್ತಗಳನ್ನು ಅನಿರ್ದಿಷ್ಟಾಕಾರದ ಗ್ರಾನೈಟ್ ಉಂಡೆಕಲ್ಲುಗಳಿಂದ ಜೋಡಿಸಲಾಗಿದೆ. ಹೀಗೆ ಜೋಡಿಸಲಾಗಿರುವ ವೃತ್ತಗಳ ವ್ಯಾಸವು 5.90 ಮೀ ನಿಂದ 13 ಮೀ. ಈ ನೆಲೆಯಲ್ಲಿ ಯಾವುದೇ ರೀತಿಯ ಅವಶೇಷಗಳು ಕಂಡುಬಂದಿರುವುದಿಲ್ಲ (ಚಿತ್ರ-5).

5 ನಾಗಮಂಗಲ

ನಾಗಮಂಗಲ ಗ್ರಾಮವು ಮಾಗಡಿ ತಾಲ್ಲೂಕು ಕೇಂದ್ರದಿಂದ ಸು 20ಕಿ.ಮೀ. ದಕ್ಷಿಣಕ್ಕೆ ರಾಮನಗರಕ್ಕೆ ಹೋಗುವ ರಸ್ತೆಮಾರ್ಗದಲ್ಲಿ ಮತ್ತ ನಿಲ್ದಾಣದಿಂದ ಬಲಕ್ಕೆ 2 ಕಿ.ಮೀ. ಪಶ್ಚಿಮಕ್ಕೆ ಇದೆ. ಈ ಗ್ರಾಮದ ಭೂಮೇಲ್ಮೈ ಲಕ್ಷಣವು ಏರು ತಗ್ಗುಗಳಿಂದ ಕೂಡಿದ್ದು ದಟ್ಟವಾದ ಮಿಶ್ರ ಅರಣ್ಯ (Dense mixed jungle). ಮತ್ತು ರಾಕಿ ಪರ್ವತಗಳಿಂದ

ಸುತ್ತುವರಿದಿದೆ. ಮರಳು ಮಿಶ್ರಿತ ಕೆಂಪು ಮಣ್ಣಿನ ಭೂಮಿ ಹಾಗೂ ಪಶ್ಚಿಮಕ್ಕೆ 5 ಕಿ.ಮೀ ದೂರದಲ್ಲಿ ಭರ್ಗಾವತಿ ಹೊಳೆ ಮತ್ತು ಪೂರ್ವದಲ್ಲಿ 5.5 ಕಿ.ಮೀ ಅಂತರದಲ್ಲಿ ಮುಖ್ಯ ನದಿಯಾದ ಅರ್ಕಾವತಿ ನದಿ ಹರಿಯುತ್ತಿದ್ದು, ಉತ್ತಮ ನೈಸರ್ಗಿಕ ಸಂಪನ್ಮೂಲದಿಂದ ಕೂಡಿದ ಪ್ರದೇಶವಾಗಿದೆ. ಇತ್ತೀಚಿನ ನಮ್ಮ ಪುರಾತತ್ತ್ವ ಅನ್ವೇಷಣೆಯಲ್ಲಿ ಈ ಗ್ರಾಮದ ಸುತ್ತ ಒಟ್ಟು 5 ನೆಲೆಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಮೂರು ವಿಧದ ಶಿಲಾಸಮಾಧಿಗಳನ್ನು ಅನ್ವೇಷಿಸಲಾಗಿದ್ದು ಈ ನೆಲೆಗಳ ವಿವರಣೆಯನ್ನು ಕೆಳಗೆ ನೀಡಲಾಗಿದೆ.

ನೆಲೆ – 1 ಕಿವುಡನ ಸೆಣೆ

ಈ ನೆಲೆಯು ನಾಗಮಂಗಲ ಗ್ರಾಮದಿಂದ ದಕ್ಷಿಣಕ್ಕೆ ಸು.1 ಕಿ.ಮೀ ದೂರದಲ್ಲಿ ಸಿದ್ದೇಶ್ವರ ಮೀಸಲು ಅರಣ್ಯ ಪ್ರದೇಶದಲ್ಲಿ 'ಕಿವುಡನ ಸೆಣೆ' ಎಂಬ ಸ್ಥಳದಲ್ಲಿದೆ. ಈ ಪ್ರದೇಶವು ಗ್ರಾನೈಟ್ ಬೆಟ್ಟಗಳ ಕಣಿವೆ ಹಾಗೂ ನೈಸರ್ಗಿಕ ಅರಣ್ಯವನ್ನು ಕೇಂದ್ರೀಕರಿಸಿಕೊಂಡಿದ್ದು ಸಮುದ್ರ ಮಟ್ಟದಿಂದ 864 ಮೀ. ಎತ್ತರ ಪ್ರದೇಶದಲ್ಲಿದೆ. ಈ ನೆಲೆಯಲ್ಲಿ ಒಟ್ಟು 39 ಡಾಲ್ಮೆನ್ ಮಾದರಿಯ ನೆಲಕೋಣೆ ವೃತ್ತ ಹಾಗೂ ರಂಧ್ರವನ್ನು (Dolmenoid cist enclosed by stone circle with port-hole) ಹೊಂದಿರುವ ಶಿಲಾಸಮಾಧಿಗಳನ್ನು ಅನ್ವೇಷಣೆ ಮಾಡಲಾಗಿದ್ದು, ಹೆಚ್ಚಿನ ಸಮಾಧಿಗಳು ಬಿದಿರು ಹಾಗೂ ದಟ್ಟವಾದ ಮುಳ್ಳಿನ ಪೊದೆಗಳಿಂದ ಆವೃತವಾಗಿದೆ. ಮತ್ತು ನಿಧಿಶೋಧಕರ ದಾಳಿಯಿಂದ ಸಾಕಷ್ಟು ಹಾನಿಯಾಗಿವೆ.

ಸಾಮಾನ್ಯವಾಗಿ ಒಂದು ಸಮಾಧಿಯಿಂದ ಮತ್ತೊಂದು ಸಮಾಧಿಗೆ 3 ರಿಂದ 10 ಮೀ ಅಂತರದಲ್ಲಿ ಸಮಾಧಿಗಳು ಕಂಡು ಬಂದಿದ್ದು ಮಹತ್ವದ ನೆಲೆಯೆಂದು ಗುರುತಿಸಬಹುದು. ಶವಸಂಪುಟ ನೆಲಕೋಣೆಗಳನ್ನು ಆಯತಾಕಾರವಾಗಿ Orthostats ಮಾದರಿಯಲ್ಲಿ ಪೂರ್ವಾಭಿಮುಖವಾಗಿ ಕಟ್ಟಲಾಗಿದೆ. ಈ ನೆಲಕೋಣೆಯು ಭೂ ಮಟ್ಟದಿಂದ 0.4 ಮೀ ನಿಂದ 0.7 ಮೀ ಎತ್ತರವಾಗಿದ್ದು, ಮೇಲೆ ದೊಡ್ಡದಾದ ಹಾಸುಗಲ್ಲಿನಿಂದ ಮುಚ್ಚಲಾಗಿದೆ. ನೆಲಕೋಣೆಗಳು ಸಾಮಾನ್ಯವಾಗಿ ಪೂರ್ವ –ಪಶ್ಚಿಮವಾಗಿ 2.80 ಮೀ ಮತ್ತು 1. 70 ಮೀ ಉತ್ತರ ದಕ್ಷಿಣವಾಗಿ, ಹಾಗೂ ಚಪ್ಪಡಿಗಳು 3 ರಿಂದ 6 ಇಂಚು ದಪ್ಪವಾಗಿವೆ. ಕ್ಯಾಪ್ ಸ್ಟೋನ್ ಹೊಂದಿಲ್ಲದ ಒಂದು ಚಿಕ್ಕದಾದ ನೆಲಕೋಣೆಯನ್ನು ಪೂರ್ವ–ಪಶ್ಚಿಮವಾಗಿ 1.47 ಮೀ ಮತ್ತು 0.77 ಮೀ ಉತ್ತರ–ದಕ್ಷಿಣವಾಗಿ ಕಟ್ಟಲಾಗಿದೆ. ಬಹುಶಃ ಈ ನೆಲಕೋಣೆಯು ಚಿಕ್ಕ ವಯಸ್ಕರಿಗಾಗಿ (Child) ಕಟ್ಟಲಾಗಿರುವ ಸಮಾಧಿಯೆಂದು ಗುರುತಿಸಬಹುದು. ಇದೇ ತರಹದ ಸಣ್ಣ ನೆಲಕೋಣೆ ಸಮಾಧಿಗಳನ್ನು ಬ್ರಹ್ಮಗಿರಿ (Wheeler 1947) ನೆಲೆ ಮತ್ತು ಸಾವನದುರ್ಗ ನೆಲೆಯಲ್ಲಿ ಗಮನಿಸಬಹುದು. ಸಾಮಾನ್ಯವಾಗಿ ಈ ಕ್ಯಾಪ್ ಸ್ಟೋನ್‌ಗಳು ಆಯತಾಕಾರವಾಗಿದ್ದು ಪೂರ್ವ– ಪಶ್ಚಿಮವಾಗಿ 3.50 ಮೀ ಮತ್ತು 2.57 ಮೀ ಉತ್ತರ–ದಕ್ಷಿಣವಾಗಿಯೂ, 6 ರಿಂದ 11 ಇಂಚು ದಪ್ಪವಾಗಿವೆ (ಚಿತ್ರ–6).

ಈ ನೆಲೆಯಲ್ಲಿ ವಿಶೇಷವಾಗಿ ಎರಡು ಮಾದರಿಯ porthole ಗಳನ್ನು ಕಾಣಬಹುದು. ಪೂರ್ವದ ಚಪ್ಪಡಿಯ ಅಂಚಿಗೆ ಹೊಂದಿಕೊಂಡಂತೆ ವೃತ್ತಾಕಾರ ಮತ್ತು ಕುದುರೆಯ ಲಾಳಾಕಾರದ ಮಾದರಿಯ porthole ಗಳನ್ನು ಕೊರೆಯಲಾಗಿದ್ದು ಈ ಎರಡು ಮಾದರಿಯ ರಂಧ್ರಗಳು ಒಂದೇ ನೆಲೆಯಲ್ಲಿ ಕಂಡುಬಂದಿರುವುದು ವಿಶೇಷವಾಗಿದೆ. ಈ porthole ಗಳ ವ್ಯಾಸವು 0.30 ಮೀ ನಿಂದ 0.60 ಮೀ ಅಳತೆಯಿಂದ ಕೂಡಿವೆ. ಈ ಡಾಲ್ಮೆನ್ ಮಾದರಿಯ ನೆಲಕೋಣೆ ಸಮಾಧಿಗಳ ಸುತ್ತ ಅನಿರ್ದಿಷ್ಟಾಕಾರದ ಚಪ್ಪಡಿಗಳನ್ನು ಓರೆಯಾಗಿಯೂ ಮತ್ತು ಕೆಲವು ಸಮಾಧಿಗಳ ಸುತ್ತಮಧ್ಯಮ ಗಾತ್ರದ ಗ್ರಾನೈಟ್ ಬಂಡೆಗಳಿಂದ ವೃತ್ತಾಕಾರವಾಗಿ

ಜೋಡಿಸಲಾಗಿದೆ. ಸಾಮಾನ್ಯವಾಗಿ ಈ ವೃತ್ತಗಳ ವ್ಯಾಸವು 4.63 ಮೀ ನಿಂದ 7.70 ಮೀ ಅಳತೆಯಿಂದ ಕೂಡಿವೆ.

ಇಲ್ಲಿನ ಸಮಾಧಿಗಳನ್ನು ನಿರ್ಮಿಸಲು ಸ್ಥಳೀಯವಾಗಿ ಲಭ್ಯವಿರುವ ಗ್ರಾನೈಟ್ ಕಲ್ಲನ್ನು ಬಳಸಲಾಗಿರುವುದನ್ನು ಗುರುತಿಸಲಾಗಿದ್ದು, ಇದೇ ನೆಲೆಯ ಬೃಹತ್ ಹಾಸುಗಲ್ಲಿನ (Bed rock) ಮೇಲೆ ಕಂಡುಬಂದಿರುವ ಚಪ್ಪಡಿಕಲ್ಲುಗಳು ಸಂಭವನೀಯ ಗಣಿಗಾರಿಕೆ (possible quarrying) ಯನ್ನು ಸೂಚಿಸುತ್ತವೆ. ಈ ಚಪ್ಪಡಿ ಕಲ್ಲುಗಳನ್ನು ಗ್ರಾನೈಟ್ ಶಿಲೆಯಿಂದ ಬೇರ್ಪಡಿಸುವ ಸಲುವಾಗಿ ಬಳಸಿರಬಹುದಾದ ಉಳಿಯ ಸಣ್ಣ ಗುರುತುಗಳನ್ನು ಇಲ್ಲಿ ಕಾಣಬಹುದು. ಬಹುಶಃ ಈ ಚಟುವಟಿಕೆಯನ್ನು ಗಮನಿಸಿದಾಗ ಪ್ರಾಗೈತಿಹಾಸಿಕ ಮಾನವರು ಸಮಾಧಿಗಳನ್ನು ನಿರ್ಮಿಸಲು ಸಮಾಧಿಗೆ ಬೇಕಾದ ಕಲ್ಲುಗಳನ್ನು ಪೂರ್ವ ಯೋಜಿತವಾಗಿ ಮೊದಲೇ ತಯಾರಿಸಿಕೊಳ್ಳುತ್ತಿದ್ದರು ಎಂಬುದನ್ನು ಇದರಿಂದ ಗುರುತಿಸಬಹುದು.

ಈ ನೆಲೆಯಲ್ಲಿ ಕೆಲವು ವಿವಿಧ ಮಾದರಿಯ ಪ್ರಾಚ್ಯಾವಶೇಷಗಳು ದೊರಕಿದ್ದು, ಇವುಗಳು ಈ ನೆಲೆಯಲ್ಲಿ ಎರಡನೇ ಬಾರಿ ಅನ್ವೇಷಣೆ (**ಮಾರ್ಚ್ 13, 2016**) ಕೈಗೊಳ್ಳುವ ಮೂರು ದಿನದ ಹಿಂದೆ (ದಿನಾಂಕ ಮಾರ್ಚ್ 09, 2016 ರಂದು ಮೊದಲ ಬಾರಿ ಬೇಟಿಕೊಟ್ಟಾಗ ಈ ಸಮಾಧಿಯು ಉತ್ತಮ ಸ್ಥಿತಿಯಲ್ಲಿತ್ತು) ನಿಧಿಶೋಧಕರ ದಾಳಿಯಿಂದ ಹಾನಿಯಾಗಿರುವ ಸಮಾಧಿಯಿಂದ ಸಂಗ್ರಹಿಸಲ್ಪಟ್ಟವುಗಳಾಗಿವೆ. ಸಂಗ್ರಹಿಸಲಾದ ಅವಶೇಷಗಳಲ್ಲಿ ಕಪ್ಪು–ಮತ್ತು–ಕೆಂಪು ದ್ವಿವರ್ಣದ ಚಿಕ್ಕ ಗಾತ್ರದ ಮಣ್‍ಪಾತ್ರೆ ಬಟ್ಟಲುಗಳು (Dish, Bowls); ಕೆಂಪು ವರ್ಣದ ಬೋಗುಣಿ (Basin), ಮಧ್ಯಮ ಗಾತ್ರದ ಗೋಳಾಕಾರದ ಮಣ್‍ಪಾತ್ರೆ (Globular vases) ಮತ್ತು ಗೀರು ರೇಖೆಗಳು (ಚಿತ್ರ 9); 17 ಸೆ.ಮೀ ಉದ್ದ ಮತ್ತು 5 ಸೆಂ.ಮೀ ಅಗಲದ ಕಬ್ಬಿಣದ ಕುಡುಗೋಲು; ಸುಟ್ಟ ಮಾನವನ ಹೆಗಲು (Humerus) ಮತ್ತು ಎಲುಬಿನ ಮೂಳೆ (Femur bone) ಚೂರುಗಳಾಗಿವೆ.

ನೆಲೆ – 2 ರಂಗಚಾರಿ ಪಾಳ್ಯ ಬೆಟ್ಟ

ಈ ಸಮಾಧಿ ನೆಲೆಯು ಕಿವುಡನ ಸೆಣೆ (ನೆಲೆ–1) ಸಮಾಧಿ ನೆಲೆಯಿಂದ ಸು. 900 ಮೀ ಈಶಾನ್ಯಕ್ಕೆ ರಂಗಚಾರಿ ಪಾಳ್ಯಬೆಟ್ಟದ ಮೇಲೆ ಕಂಡು ಬಂದಿದೆ. ಈ ನೆಲೆಯು ಸಮುದ್ರ ಮಟ್ಟದಿಂದ 883 ಮೀ ಎತ್ತರದ ಬೆಟ್ಟದ ಮೇಲೆ ಕಂಡುಬಂದಿದ್ದು ಇಲ್ಲಿ ಸುಮಾರು 10 ಕ್ಕೂ ಹೆಚ್ಚು ಹಾನಿಗೊಳಗಾದ ಡಾಲ್ಮೆನ್ ಸಮಾಧಿಗಳು ಕಂಡುಬಂದಿವೆ. ಈ ಡಾಲ್ಮೆನ್‍ಗಳನ್ನು ಗ್ರಾನೈಟ್ ಚಪ್ಪಡಿಗಳಿಂದ ನಿರ್ಮಿಸಲಾಗಿದ್ದು, ಆಯಾತಾಕಾರದ ಕೋಣೆಯ ಮೇಲೆ ಬೃಹತ್ ಕ್ಯಾಪ್‍ಸ್ಟೋನ್‍ನಿಂದ ಮುಚ್ಚಲಾಗಿದೆ. ಕೆಲವು ಅನಿರ್ಧಿಷ್ಟಾಕಾರದ ಡಾಲ್ಮೆನ್‍ಗಳಿದ್ದು ನಿಖರವಾದ ಧಿಕ್ಕನ್ನು ಗುರುತಿಸುವುದು ಕಷ್ಟವಾಗಿದೆ ಮತ್ತು ಹಾನಿಯಾಗಿರುವುದರಿಂದ ಅಳತೆಯನ್ನು ಮಾಡಲು ಇವು ಸುಸ್ಥಿತಿಯಲ್ಲಿರುವುದಿಲ್ಲ.

ನೆಲೆ – 3 ದೊಡ್ಡ ಆಲದ ಮರ

ಈ ನೆಲೆಯು ನಾಗಮಂಗಲ ಗ್ರಾಮದಿಂದ ನೈರುತ್ಯಕ್ಕೆ ಸು. 1 ಕಿ.ಮೀ. ದೊಡ್ಡ ಆಲದಮರ ಜಾಗ ಎಂದು ಕರೆಯುವ ನೆಲೆಯಲ್ಲಿದೆ. ಈ ನೆಲೆಯು ಸಮುದ್ರ ಮಟ್ಟದಿಂದ 880 ಮೀ ಎತ್ತರ ಪ್ರದೇಶದಲ್ಲಿದ್ದು ಈ ನೆಲೆಯಲ್ಲಿ ಎರಡು ಡಾಲ್ಮೆನ್ ಮಾದರಿಯ ನೆಲಕೋಣೆ ವೃತ್ತ ಸಮಾಧಿಗಳು ಕಂಡುಬಂದಿವೆ. ಈ ಎರಡು ಸಮಾಧಿಗಳಲ್ಲಿ ಶಿಲಾವೃತ್ತವನ್ನು ಕೃಷಿ ಚಟುವಟಿಕೆಗಳಿಗಾಗಿ ತೆಗೆದು ಹಾಕಲಾಗಿದೆ. ಈ ನೆಲಕೋಣೆಯ ಸಮಾಧಿಗಳು ಭೂ

ಮಟ್ಟದಿಂದ 0.5 ಮೀ ನಿಂದ 0.6 ಮೀ ಎತ್ತರವಾಗಿದ್ದು ಪೂರ್ವಾಭಿಮುಖವಾಗಿ ಕಟ್ಟಲ್ಪಟ್ಟಿವೆ. ಈ ನೆಲಕೋಣೆಗಳಲ್ಲಿ ಒಂದರ ಅಳತೆಯು ಪೂರ್ವ ಪಶ್ಚಿಮವಾಗಿ 2.60 ಮೀ ಮತ್ತು 1.70 ಮೀ ಉತ್ತರ ದಕ್ಷಿಣವಾಗಿ, ಹಾಗೂ ಚಪ್ಪಡಿಗಳು 3 ರಿಂದ 6 ಇಂಚು ದಪ್ಪವಾಗಿವೆ. ಮತ್ತೊಂದು ನೆಲಕೋಣೆಯ ಅಳತೆಯು ಪೂರ್ವ ಪಶ್ಚಿಮವಾಗಿ 2.60 ಮೀ ಮತ್ತು 1.20 ಮೀ ಉತ್ತರ ದಕ್ಷಿಣವಾಗಿ, ಹಾಗೂ ಚಪ್ಪಡಿಗಳು 3 ರಿಂದ 5 ಇಂಚು ದಪ್ಪವಾಗಿವೆ.

ನೆಲೆ – 4 ಶಿವಯ್ಯನ ಜಮೀನು

ಈ ಸಮಾಧಿ ನೆಲೆಯು ನಾಗಮಂಗಲ ಗ್ರಾಮದ ಪೂರ್ವಕ್ಕೆ ಅರಳೀ ಮರದ ಬಳಿಯಿಂದ ಸು. 100 ಮೀ. ದೂರದಲ್ಲಿರುವ ಶಿವಯ್ಯ ಎಂಬುವರ ಜಮೀನಿನಲ್ಲಿ ಕಂಡುಬಂದಿದೆ. ಈ ನೆಲೆಯು ಸಮುದ್ರ ಮಟ್ಟದಿಂದ 874 ಮೀ ಎತ್ತರದಲ್ಲಿದೆ. ಪ್ರಸ್ತುತ ಈ ನೆಲೆಯಲ್ಲಿ 4 ನೆಲಕೋಣೆ ವೃತ್ತ ಸಮಾಧಿಗಳು ಕಂಡು ಬಂದಿದ್ದು ಅವುಗಳ ದಾಖಲೀಕರಣಕ್ಕೆ ಜಮೀನಿನ ಮಾಲೀಕರು ಅವಕಾಶವನ್ನು ನೀಡಿರುವುದಿಲ್ಲ.

ನೆಲೆ – 5 ಮಠದ ಹೊಲ

ಈ ಸಮಾಧಿ ನೆಲೆಯು ನಾಗಮಂಗಲ ಗ್ರಾಮದಿಂದ 1 ಕಿ. ಮೀ ಈಶಾನ್ಯಕ್ಕೆ ಮಠದ ಹೊಲ ಎಂದು ಕರೆಯಲ್ಪಡುವ ಕೃಷಿ ಜಮೀನಿನಲ್ಲಿ ಕಂಡುಬಂದಿದೆ. ಈ ನೆಲೆಯು ಸಮುದ್ರ ಮಟ್ಟದಿಂದ 857 ಮೀ ಎತ್ತರದಲ್ಲಿದ್ದು, ಈ ನೆಲೆಯಲ್ಲಿ ಒಂಭತ್ತು ನೆಲಕೋಣೆ ವೃತ್ತ ಸಮಾಧಿಗಳು ಕಂಡು ಬಂದಿವೆ. ಈ ಸಮಾಧಿಗಳ ವೃತ್ತಗಳನ್ನು ಮಧ್ಯಮ ಗಾತ್ರದ ಅನಿರ್ಧಿಷ್ಟಾಕಾರದ ಗ್ರಾನೈಟ್ ಕಲ್ಲುಗಳಿಂದ ಜೋಡಿಸಲಾಗಿದೆ. ಸಾಮಾನ್ಯವಾಗಿ ಈ ವೃತ್ತಗಳ ವ್ಯಾಸವು 4.50 ಮೀ ನಿಂದ 6.60 ಮೀ ಅಳತೆಯಿಂದ ಕೂಡಿವೆ. ವೃತ್ತದ ಮಧ್ಯದಲ್ಲಿ ನೆಲಕೋಣೆ ನಿರ್ಮಿಸಿ ಅದರ ಮೇಲೆ ಚಪ್ಪಡಿಯಿಂದ ಮುಚ್ಚಿರುವುದನ್ನು ಗಮನಿಸಬಹುದು. ಹಾನಿಗೊಳಗಾದ ನೆಲಕೋಣೆಯೊಂದರ ಅಳತೆಯು ಪೂರ್ವ ಪಶ್ಚಿಮವಾಗಿ 2.50 ಮೀ ಮತ್ತು 1.80 ಮೀ ಉತ್ತರ ದಕ್ಷಿಣವಾಗಿ, ಹಾಗೂ ಚಪ್ಪಡಿಗಳು 4.5 ರಿಂದ 6 ಇಂಚು ದಪ್ಪವಾಗಿವೆ. ಈ ನೆಲೆಯ ಸುತ್ತಲ ಪ್ರದೇಶದಲ್ಲಿ ಕಬ್ಬಿಣದ ಅದಿರಿನ ಅವಶೇಷಗಳು ಕಂಡುಬಂದಿರುತ್ತವೆ.

6. ವೀರೇಗೌಡನದೊಡ್ಡಿ

ವೀರೇಗೌಡನದೊಡ್ಡಿ ನೆಲೆಯು ತಾಲ್ಲೂಕು ಕೇಂದ್ರದಿಂದ ನೈರುತ್ಯಕ್ಕೆ 13 ಕಿ. ಮೀ ರಾಮನಗರ ರಸ್ತೆ ಮಾರ್ಗದಲ್ಲಿದೆ. ಈ ನೆಲೆಯು ಸಾವನದುರ್ಗದ ಉತ್ಖನನ ನೆಲೆ ಇಟ್ಟಿಗೆಬೈಲಿನಿಂದ ಸು 2 ಕಿ. ಮೀ ದಕ್ಷಿಣಕ್ಕಿದ್ದು ಸಮುದ್ರ ಮಟ್ಟದಿಂದ 855 ಮೀ ಎತ್ತರದಲ್ಲಿದೆ. ಈ ನೆಲೆಯಲ್ಲಿ ಚಪ್ಪಡಿ ಮಾದರಿಯ ಒಂದು ನಿಲಸುಗಲ್ಲು ಕಂಡುಬಂದಿದ್ದು, ಉತ್ತರಕ್ಕೆ ಬಾಗಿದಂತೆ ನಿಲ್ಲಿಸಲಾಗಿದೆ. ಈ ನಿಲಸುಗಲ್ಲನ್ನು ನೆಲಕೋಣೆ ಹೊಂದಿದ ವೃತ್ತ ಸಮಾಧಿಯಲ್ಲಿ ನಿಲ್ಲಿಸಲಾಗಿದೆ (ಚಿತ್ರ–7). ವೃತ್ತದ ಕಲ್ಲುಗಳನ್ನು ಕೃಷಿ ಚಟುವಟಿಗೆಗಾಗಿ ತೆಗೆದು ಹಾಕಲಾಗಿದ್ದು, ಪ್ರಸ್ತುತ ನೆಲಕೋಣೆಯ ಕ್ಯಾಪ್‌ಸ್ಟೋನ್‌ನ್ನು ಕಾಣಬಹುದು. ಈ ನಿಲಸುಗಲ್ಲಿನ ಮಧ್ಯದ ಭಾಗವು ಒಳಚಾಚಿದಂತೆ ಹಾಗೂ ಇದರ ಮೇಲ್ಭಾಗ ಅರ್ಧ ವೃತ್ತಕಾರದಂತೆ ಹೊರಕ್ಕೆ ಉಬ್ಬಿದಂತೆ ಕೊರೆಯಲಾಗಿದೆ. ಈ ನಿಲಸುಗಲ್ಲಿನ ಅಳತೆಯು ಭೂಮಟ್ಟದಿಂದ 2.77 ಮೀ ಎತ್ತರ, ಕೆಳಗಿನ ಭಾಗ 1.09 ಮೀ ಮತ್ತು ಮಧ್ಯದ ಭಾಗ 1 ಮೀ. ಅಗಲವಾಗಿದ್ದು, 5 ರಿಂದ 7 ಇಂಚು ದಪ್ಪವಾಗಿದೆ.

7. ವಳಗೆರೆಪಾಳ್ಯ

ವಳಗೆರೆಗ್ರಾಮವು ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ 6 ಕಿ. ಮೀ ಸಾತನೂರು ರಸ್ತೆಯಲ್ಲಿ ಸು.1 ಕಿ. ಮೀ ಪೂರ್ವಕ್ಕಿದೆ. ಈ ಗ್ರಾಮದ ಪೂರ್ವ ಮತ್ತು ಪಶ್ಚಿಮದಲ್ಲಿ ನೆಲಕೋಣೆ ಸಮಾಧಿಗಳು ಮತ್ತು ಒಂದು ನಿಲಸುಗಲ್ಲು ಕಂಡು ಬಂದಿದೆ. ಗ್ರಾಮದ ಪೂರ್ವಕ್ಕೆ ಇರುವ ಬೆಟ್ಟದ ತಪ್ಪಲಿನಲ್ಲಿರುವ ನೆಲಕೋಣೆ ಸಮಾಧಿಗಳು ಎಲ್ಲವೂ ನಿಧಿಶೋಧಕರ ದಾಳಿಗೆ ಹಾನಿಯಾಗಿವೆ. ಹಾನಿಯಾಗಿರುವ ಸಮಾಧಿಗಳ ಮೇಲ್ಮೈಯಲ್ಲಿ ಕಪ್ಪು-ಮತ್ತು-ಕೆಂಪು ದ್ವಿವರ್ಣದ ಮತ್ತು ಕೆಂಪು ವರ್ಣದ ಮಣ್‌ಪಾತ್ರೆ ಚೂರುಗಳನ್ನು, ಹಾಗೂ ಮುರಿದ ಕಬ್ಬಿಣದ ಭಾಗಗಳನ್ನು ಸಂಗ್ರಹಿಸಲಾಗಿದೆ.

ಈ ಗ್ರಾಮದ ಪಶ್ಚಿಮಕ್ಕೆ ಬಸ್ ನಿಲ್ದಾಣದ ಬಳಿ ಎತ್ತರ ಪ್ರದೇಶದಲ್ಲಿರುವ(Upland area) ಕೃಷಿ ಜಮೀನಿನಲ್ಲಿ ಒಂದು ನೆಲಕೋಣೆ ಸಮಾಧಿಯ ಕುರುಹು ಕಂಡು ಬಂದಿದ್ದು ಇದೂ ಕೂಡ ಹಾನಿಯಾಗಿದೆ. ಇದೇ ನೆಲೆಯಲ್ಲಿ ಒಂದು ನಿಲಸುಗಲ್ಲು ಕಂಡು ಬಂದಿದ್ದು, ಇದನ್ನು ಗ್ರಾನೈಟ್ ಕಲ್ಲಿನಿಂದ ಅನಿಯಮಿತ ತ್ರಿಕೋನಾಕಾರದಲ್ಲಿ ಪೂರ್ವಕ್ಕೆ ವಾಲಿದಂತೆ ನಿಲ್ಲಿಸಲಾಗಿದೆ. ಈ ನಿಲಸುಗಲ್ಲಿನ ಅಳತೆಯು ಭೂ ಮಟ್ಟದಿಂದ 2.60 ಮೀ ಎತ್ತರ, ಕೆಳಗಿನ ಭಾಗ 1.40 ಮೀ ಅಗಲವಾಗಿದ್ದು, 8 ರಿಂದ 11 ಇಂಚು ದಪ್ಪವಾಗಿದೆ.

ವಿಶ್ಲೇಷಣೆ

ಈ ಪ್ರದೇಶದಲ್ಲಿ ಶಿಲಾಯುಗ ಸಂಸ್ಕೃತಿಯ ನೆಲೆಗಳ ಬಗೆಗಿನ ಅಧ್ಯಯನದ ಕೊರತೆ ಇದ್ದು, ಇತ್ತೀಚಿನ ಕ್ಷೇತ್ರಕಾರ್ಯದಲ್ಲಿ ದೊರೆತ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಉಪಕರಣಗಳ ಆಧಾರದಲ್ಲಿ ಈ ಪ್ರದೇಶದ ಮಾನವ ಸಂಸ್ಕೃತಿಯನ್ನು ಶಿಲಾಯುಗಕ್ಕೆ ಕೊಂಡೊಯ್ಯಬಹುದು. ಈ ಪ್ರದೇಶದ ನೆರೆಯ ಕಿಬ್ಬನಹಳ್ಳಿ, ಜಾಲಹಳ್ಳಿ ನೆಲೆಗಳು ಸೂಕ್ಷ್ಮ ಶಿಲೋಪಕರಣಗಳನ್ನು ತಯಾರಿಸುವ ಕೈಗಾರಿಕೆಗಳಾಗಿದ್ದವು ಎಂದು ಗುರುತಿಸಲಾಗಿದೆ. ಅಲ್ಲದೆ, ಇತ್ತೀಚೆಗೆ ಸಾವನದುರ್ಗ ಮತ್ತು ವಳಗೆರೆಯಲ್ಲಿ ದೊರೆತಿರುವ ಶಿಲೋಪಕರಣಗಳಿಂದ ಮಾಗಡಿ ಪರಿಸರವು ಕೂಡ ಶಿಲಾಯುಗ ಮಾನವನ ಚಟುವಟಿಕೆಯ ಭಾಗವಾಗಿತ್ತು ಎಂದು ಹೇಳಬಹುದು. ಆದರೆ ಅರ್ಕಾವತಿ ನದಿಬಯಲಿನಲ್ಲಿ ಪೂರ್ವ ಇತಿಹಾಸಕಾಲದ ಕುರುಹುಗಳ ಬಗ್ಗೆ ಶೋಧನೆಯನ್ನು ಮಾಡಿದರೆ ಇನ್ನೂ ಹೆಚ್ಚಿನ ನೆಲೆಗಳನ್ನು ಗುರುತಿಸಬಹುದು. ಮಾಗಡಿ ಪರಿಸರದಲ್ಲಿ ಹೆಚ್ಚಾಗಿ ಪ್ರಾಗೈತಿಹಾಸಿಕ ನೆಲೆಗಳು ಬೆಳಕಿಗೆ ಬಂದಿದ್ದು ಮತ್ತು ಇತ್ತೀಚಿನ ನಮ್ಮ ಅನ್ವೇಷಣೆಯಲ್ಲಿ ಕಂಡುಬಂದಿರುವ ಶಿಲಾ ಸಮಾಧಿಗಳು, ಅವಶೇಷಗಳು ಮತ್ತು ಈ ಹಿಂದೆ ವರದಿಯಾಗಿರುವ ಸಾಹಿತ್ಯಿಕ ಆಧಾರಗಳ ಮೇಲೆ ಮಾಗಡಿ ಪ್ರದೇಶದ ಪ್ರಾಗೈತಿಹಾಸಿಕ ಸಂಸ್ಕೃತಿಯನ್ನು ವಿಶ್ಲೇಷಣೆಗೆ ಒಳಪಡಿಸುವುದಾದರೆ:

ಮಾಗಡಿ ಪ್ರದೇಶದಲ್ಲಿ ಹರಿಯುವ ಅರ್ಕಾವತಿ ಮತ್ತು ಕುಮುದ್ವತಿ ನದಿಗಳು ಮತ್ತು ಈ ನದಿಗಳಿಗೆ ಸಂಗಮವಾಗುವ ಸಣ್ಣ ತೊರೆಗಳು ಪ್ರಾಗೈತಿಹಾಸಿಕ ಕಾಲದಲ್ಲಿ ಪ್ರಮುಖ ಪಾತ್ರವಹಿಸಿದ್ದು, ಈ ಜಲಾನಯನ ದಂಡೆಯ ಮೇಲೆ ಸು. 300 ಮೀ ನಿಂದ 20 ಕಿ.ಮೀ ದೂರದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳು ಕಂಡು ಬಂದಿವೆ. ಮಾಗಡಿ ಸೀಮೆಯಲ್ಲಿ ಇದುವರೆಪಿಗೂ 8 ಬೃಹತ್ ಶಿಲಾಸಮಾಧಿ ನೆಲೆಗಳು ವರದಿಯಾಗಿದ್ದು ಅವುಗಳಲ್ಲಿ ಸಾವನದುರ್ಗ ನೆಲೆಯು ಉತ್ಖನನಗೊಂಡಿದೆ ಮತ್ತು ನಮ್ಮ ಕ್ಷೇತ್ರಕಾರ್ಯದಲ್ಲಿ 7 ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳನ್ನು ಶೋಧಿಸಲಾಗಿದೆ (ನಕ್ಷೆ 1). ಈ ಪ್ರದೇಶವು **ಕ್ಲೋಸ್ ಪೆಟ್** ಗ್ರಾನೈಟ್ ಸರಣಿಯಲ್ಲಿದ್ದು ಹೆಚ್ಚಿನ ನೆಲೆಗಳು, ಬೆಟ್ಟದ ಮೇಲೆ, ಬೆಟ್ಟದ

ತಪ್ಪಲಿನಲ್ಲಿ, ಬೆಟ್ಟದ ಅನತಿ ದೂರದಲ್ಲಿ ಎತ್ತರದ ಪ್ರದೇಶದಲ್ಲಿ 300 ಮೀ ನಿಂದ 1 ಕಿ.ಮೀ ದೂರದ ಅಂತರದಲ್ಲಿ ಕಂಡುಬಂದಿವೆ. ಹೆಚ್ಚಾಗಿ ಮಾಗಡಿ ಪರಿಸರದಲ್ಲಿ ಡಾಲ್ಮೆನ್ ಹೊಂದಿದ ನೆಲಕೋಣೆ ಸಮಾಧಿಗಳು ಮತ್ತು ನೆಲಕೋಣೆ ವೃತ್ತಗಳು ಕಂಡುಬಂದಿವೆ. ವಿರಳವಾಗಿ ಡಾಲ್ಮೆನ್ ಮತ್ತು ನಿಲಸುಗಲ್ಲುಗಳು ಕಂಡು ಬಂದಿರುತ್ತವೆ. ಪ್ರಾದೇಶಿಕವಾಗಿ ಬೆಂಗಳೂರು ಪೂರ್ವ ವಲಯದಲ್ಲಿ ಕಂಡು ಬರುವ ದಕ್ಷಿಣ ಪಿನಾಕಿನಿ ನದಿ ಜಲಾನಯನ ಪ್ರದೇಶದಲ್ಲಿ (ಜಡಿಗೆನಹಳ್ಳಿ, ಬನಹಳ್ಳಿ/ ಕೋಲಾರ ಪ್ರದೇಶ) ನೆಲಕೋಣೆ ಶಿಲಾವೃತ್ತ ಸಮಾಧಿಗಳು ಹೇರಳವಾಗಿದ್ದು, ಬೆಂಗಳೂರು ಪಶ್ಚಿಮ ವಲಯದಲ್ಲಿ ಕಂಡು ಬರುವ ಅರ್ಕಾವತಿ ಜಲಾನಯನ ಪ್ರದೇಶದಲ್ಲಿ (ಮಾಗಡಿ ಬೆಂಗಳೂರು ಪಶ್ಚಿಮ, ರಾಮನಗರ, ಕನಕಪುರ, ಚನ್ನಪಟ್ಟಣ ಪ್ರದೇಶ) ಡಾಲ್ಮೆನ್ ಹೊಂದಿದ ನೆಲಕೋಣೆ ಸಮಾಧಿಗಳು ಹೆಚ್ಚಾಗಿ ಕಂಡುಬಂದಿವೆ. ಮತ್ತು ಈ ಸಮಾಧಿಗಳಲ್ಲಿ ವಿಶೇಷವಾಗಿ ಮೂರು ರೀತಿಯ porthole ಗಳನ್ನು ಕಾಣಬಹುದು. ಪೂರ್ವ ಭಾಗದ ಚಪ್ಪಡಿಯಲ್ಲಿ ವೃತ್ತಾಕಾರವಾಗಿ, ಕುದುರೆಯ ಲಾಳಾಕಾರವಾಗಿ ಮತ್ತು 'U' ಮಾದರಿಯ ರಂಧ್ರಗಳು ಕಂಡುಬಂದಿದ್ದು ಒಂದೇ ಸಮಾಧಿನೆಲೆಯಲ್ಲಿ ಎರಡು ಬಗೆಯ ರಂಧ್ರಗಳನ್ನು ಗಮನಿಸಬಹುದು. ನಾಗಮಂಗಲ ನೆಲೆಯಲ್ಲಿ ಈ ಬಗೆಯ ಸಮಾಧಿಗಳು ಕಂಡು ಬಂದಿದ್ದು ಹೆಚ್ಚಿನ ಸಮಾಧಿಗಳಲ್ಲಿ ವೃತ್ತಾಕಾರದ ರಂಧ್ರಗಳನ್ನು ಹಾಗೂ ವಿರಳವಾಗಿ ಕುದುರೆ ಲಾಳಾಕಾರದಂತೆ ಕೊರೆದ ರಂಧ್ರಗಳನ್ನು ಗಮನಿಸಬಹುದು. ಸಾವನದುರ್ಗದಲ್ಲಿಯೂ ಕೂಡ ಇದೇ ಮಾದರಿಯ porthole ಗಳು ಕಂಡುಬಂದಿರುವುದು ವರದಿಯಾಗಿವೆ (ಬ್ರಾನ್‌ಫಿಲ್ 1881: 1–2, ಗುರುರಾಜ ರಾವ್ 1994). ಉಡುಕುಂಟೆಯಲ್ಲಿ 500 ರಿಂದ 900 ಮೀ ಅಂತರದಲ್ಲಿ ಒಂದೇ ಬಗೆಯ ಮೂರು ಸಮಾಧಿನೆಲೆಗಳು ಪ್ರತ್ಯೇಕವಾಗಿ ಕಂಡು ಬಂದಿವೆ. ಆದರೆ ನಾಗಮಂಗಲ ಗ್ರಾಮದ ಸುತ್ತಲ ಪರಿಸರದಲ್ಲಿ 500 ಮೀ ನಿಂದ 1.5 ಕಿ.ಮೀ ಅಂತರದಲ್ಲಿ ಮೂರು ಬಗೆಯ ಸಮಾಧಿಗಳು 5 ನೆಲೆಗಳಲ್ಲಿ ಕಂಡುಬಂದಿದ್ದು ಇವು ಪ್ರತ್ಯೇಕ ಗುಂಪುಗಳಿಂದ ನಿರ್ಮಿಸಲ್ಪಟ್ಟಿರುವಂತೆ ತೋರುತ್ತವೆ. ಹಾಗೂ ನಾಗಮಂಗಲ ಗ್ರಾಮವು ಬೃಹತ್ ಶಿಲಾಯುಗಕಾಲದಲ್ಲಿ ವಾಸ್ತವ್ಯದ ನೆಲೆಯಾಗಿದ್ದಿರಬಹುದು ಎಂದು ಗ್ರಾಮದ ಸುತ್ತ ಸಿಕ್ಕ ಕೆಂಪು ವರ್ಣದ, ಕಪ್ಪು ಮತ್ತು ಕೆಂಪು ವರ್ಣದ ಮಣ್‌ಪಾತ್ರೆಯ ಅವಶೇಷಗಳಿಂದ ಊಹಿಸಬಹುದಾಗಿದೆ.

ಈ ಪ್ರದೇಶದ ಅಂದಿನ ಮಾನವ ಸಂಸ್ಕೃತಿಯನ್ನು ಅರಿಯಲು ಸಮಾಧಿಗಳು, ಮಡಕೆಗಳು, ಕಬ್ಬಿಣದ ಉಪಕರಣಗಳು ಹಾಗೂ ಇತರೆ ಅವಶೇಷಗಳು ಬಹಳ ಪ್ರಮುಖವಾಗಿದ್ದು, ಕೆಲವು ಅನ್ವೇಷಣಾಕಾರರು ಬೃಹತ್ ಶಿಲಾಯುಗ ಕಾಲದ ಮಣ್ಣಿನ ಪಾತ್ರೆಗಳನ್ನು ಶೋಧಿಸಿ ವರದಿ ಮಾಡಿದ್ದಾರೆ ಮತ್ತು ಮಾಗಡಿ ಪ್ರದೇಶದ ಬೃಹತ್ ಶಿಲಾಯುಗ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಸಾವನದುರ್ಗ ಉತ್ಖನನದ ಅವಶೇಷಗಳು ಪ್ರಮುಖ ಪಾತ್ರವಹಿಸುತ್ತವೆ. ಸಾವನದುರ್ಗ ಉತ್ಖನನದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲಘಟ್ಟದಲ್ಲಿ ವಿಶಿಷ್ಟವೆನ್ನಬಹುದಾದ ಹಸುವಿನ ಕೊಂಬುಗಳ ಆಕಾರವಲ್ಲಿರುವ ಕೆಂಪು ವರ್ಣದ (ಸಣ್ಣ)ಹೂಜಿಗಳು, ಸಣ್ಣ ಹಾಲಿನ ಪಾತ್ರೆಯನ್ನು ಹೋಲುವ ಮತ್ತು ಹಿಡಿಕೆಯಲ್ಲಿ ಸುರುಳಿಯಾಕಾರದ ಅಲಂಕಾರ ಹೊಂದಿರುವ ಕೆಂಪು ವರ್ಣದ ಬಟ್ಟಲು, ಮೂರು ಕಾಲಿನ ಸಿಲಿಂಡರ್ ಆಕಾರದ ಜಾಡಿಗಳು ದೊರಕಿವೆ. ಈ ವಿಧದ ಮಡಿಕೆಗಳು ನೆರೆಯ ಉತ್ಖನನ ಪ್ರದೇಶಗಳಲ್ಲಿ ದೊರಕಿಲ್ಲದಿರುವುದನ್ನು ಅರುಣಿ ಎಸ್. ಕೆ ಅವರು ಗುರುತಿಸಿ ವಿಶ್ಲೇಷಿಸಿದ್ದಾರೆ (ಅರುಣಿ 2013:25–28).

ಪ್ರಸ್ತುತ ಸಂಶೋಧನೆಯಲ್ಲಿ ಗುರುತಿಸಲಾದ ವಿಶೇಷವಾಗಿ ಮಡಕೆಯ ಬಾಯಿಯ ಹೊರ ಮೈಯಲ್ಲಿ (Rim portion) ಎರಡರಿಂದ ಮೂರು ಸಾಲುಗಳಲ್ಲಿ ಗೀರು ವಿನ್ಯಾಸ (Grooves) ಗಳನ್ನು ರೂಪಿಸಿ ಈ ಗೀರು ವಿನ್ಯಾಸಗಳ ಮೇಲೆ ಓರೆ-ರೇಖೆ (Criss cross lines) ಗಳಿಂದ ಅಲಂಕರಿಸಲಾಗಿರುವ ಮಡಕೆಗಳು ಸಾವನದುರ್ಗ, ಗುಡೇಮಾರನಹಳ್ಳಿ, ಉಡುಕುಂಟೆ ನೆಲೆಗಳಲ್ಲಿ ಕಂಡುಬಂದಿರುವುದು ವಿಶೇಷವಾಗಿದೆ. ಈ ಮಾದರಿಯ ಅಲಂಕಾರಿಕ ಮಣ್‌ಪಾತ್ರೆಗಳು ನೆರೆಯ ಉತ್ಖನನ ನೆಲೆಗಳಲ್ಲಿ ಕಂಡುಬಂದಿರುವುದಿಲ್ಲ. ಹಾಗಾಗಿ ಈ ಮಾದರಿಯ ಮಣ್‌ಪಾತ್ರೆಗಳು ಅರ್ಕಾವತಿ ನದಿ ಬಯಲಿನಲ್ಲಿ ವಿಶೇಷವಾಗಿ ಕಂಡು ಬಂದಿರುವುದನ್ನು ಗುರುತಿಸಬಹುದು. ಹಾಗೂ ಈ ಪ್ರದೇಶದ ಸಾವನದುರ್ಗ (ಬ್ರಾನ್‌ಫಿಲ್ 1881), ಅಳಲಕುಪ್ಪೆ (ರಾಜೇಶ್ 2016) ಮತ್ತು ಇತ್ತೀಚಿನ ಕ್ಷೇತ್ರಕಾರ್ಯದಲ್ಲಿ ಸಾವನದುರ್ಗ (ಮರು ಅನ್ವೇಷಣೆ), ನಾಗಮಂಗಲ, ಉಡುಕುಂಟೆ ನೆಲೆಗಳಲ್ಲಿ ಗೀರು ರೇಖೆಗಳು ಕಂಡುಬಂದಿದ್ದು ಇವುಗಳಲ್ಲಿ ಸಾವನದುರ್ಗದ ಗೀರುರೇಖೆಗಳು (ಚಿತ್ರ- 10) ಟಿ. ನರಸಿಪುರ ಮತ್ತು ತಮಿಳುನಾಡಿನ ಸಾನೂರು (ಚಿತ್ರ-11) ನೆಲೆಗಳಲ್ಲಿ ವರದಿಯಾಗಿರುವ ಗೀರು ರೇಖೆಗಳಿಗೆ ಸಾಮಿಪ್ಯವಿರುವುದನ್ನು ಗಮನಿಸಬಹುದು.

ಉದಯ ರವಿ ಮೂರ್ತಿ (1994) ಅವರು ಕಬ್ಬಿಣದ ಪ್ರಾಚ್ಯಾವಶೇಷಗಳನ್ನು Technomic artifacts ಮತ್ತು Sociotechnic artifacts ಗಳಾಗಿ ವಿಂಗಡಿಸಿ ವಿಶ್ಲೇಷಿಸಿದ್ದಾರೆ. ಸಾವನದುರ್ಗ ನೆಲೆಯಲ್ಲಿ ದೊರಕಿರುವ ಕಬ್ಬಿಣ ಮತ್ತು ತಾಮ್ರದ ಪ್ರಾಚ್ಯಾವಶೇಷಗಳನ್ನು ಎರಡು ಭಾಗವಾಗಿ ವಿಂಗಡಿಸಿದ್ದಾರೆ. ಅವುಗಳಲ್ಲಿ ಪ್ರಾಯೋಗಿಕ ಉದ್ದೇಶ ನಿಭಾಯಿಸಲು ಬಳಸುವ ಸಾಧನಗಳಾಗಿ (Technomic artifacts) ಕಬ್ಬಿಣದ ಉಳಿ (Chisel), ಚೂಪಾದ ಅಂಚು ಹೊಂದಿದ ಕತ್ತರಿಗಳು, ಸಣ್ಣ ಸ್ಫಟಿಕ ಶಿಲೆಯ (Scraper of small crystal stone) ಉಜ್ಜಲು ಬಳಸುವ ಸಾಧನಗಳು; ಸಾಮಾಜಿಕ ಪಾತ್ರದಲ್ಲಿ ಬಳಸುವ ಸಾಧನಗಳಾಗಿ (Sociotechnic artifacts) ಕಬ್ಬಿಣದ ಭರ್ಜಿ, ಕಠಾರಿ (Dagger spear head) ಬಾಣಗಳು (Arrow heads) ಹಾಗೂ ತಾಮ್ರದ ತಲೆ ಹೊದಿಕೆಯ ರಕ್ಷಾ ಕವಚ (Dagger with a copper fillet on the guard) ಎಂತಲೂ ವಿಂಗಡಿಸಿದ್ದಾರೆ. ಇದರ ಆಧಾರದಮೇಲೆ ಇತ್ತೀಚಿನ ನಮ್ಮ ಅನ್ವೇಷಣೆಯಲ್ಲಿ ನಾಗಮಂಗಲದಲ್ಲಿ ದೊರಕಿರುವ ಕಬ್ಬಿಣದ ಮಚ್ಚು ಅಥವಾ ಕುಡುಗೋಲು (Sickle) ಇದು ಬಹುಶಃ ಕೃಷಿ ಚಟುವಟಿಕೆಯಲ್ಲಿ ಬಳಸುವ ಪ್ರಾಯೋಗಿಕ ಸಾಧನವೆಂದು ಮತ್ತು ಗುಡೇಮಾರನ ಹಳ್ಳಿಯಲ್ಲಿ ದೊರಕಿರುವ ಉದ್ದನೆಯ ಜಾವಲಿನ್ ಮಾದರಿಯ ಚಪ್ಪಟೆಯ (Long flat tapering javelin point) ಸಾಧನವು ಯುದ್ಧ ಕ್ರಿಯೆಯಲ್ಲಿ ಬಳಸಿರುವ ಸಾಮಾಜಿಕ ಪಾತ್ರದ ಸಾಧನವೆಂದು ಗುರುತಿಸಬಹುದು.

ಹೂಜಿಗಲ್ಲು ನೆಲೆಯ ಮುನೇಶ್ವರ ದೇವಾಲಯದ ಬಳಿ ಹಾಗೂ ಸುತ್ತ ಮೂರು ನೆಲೆಗಳಲ್ಲಿ ಎಪ್ಪತ್ತೈದಕ್ಕೂ ಹೆಚ್ಚು ನೆಲಕೋಣೆ ಸಮಾಧಿ ಮತ್ತು ಡಾಲ್ಮೆನ್ ಹೊಂದಿದ ನೆಲಕೋಣೆ ವೃತ್ತ ಸಮಾಧಿಗಳು ವರದಿಯಾಗಿವೆ (ಗೋಪಾಲ ರಾವ್ 1994: 3-5). ಈ ನೆಲೆಯಲ್ಲಿ ಸ್ಥಳೀಯರು ನಿಧಿಗಾಗಿ ನಡೆಸಿದ ಶೋಧನೆಯಲ್ಲಿ ನೆಲಕೋಣೆ ಸಮಾಧಿಯೊಂದರಲ್ಲಿ ಬಾಣಗಳು ಮತ್ತು ಅನನ್ಯವೆನ್ನಬಹುದಾದ ಒಂದು ಕಬ್ಬಿಣದ ಚೂರಿ ದೊರೆತಿರುವುದು ವರದಿಯಾಗಿದೆ. ಪ್ರಸ್ತುತ ಇವುಗಳನ್ನು ಹೊರತೆಗೆದ ಸಮಾಧಿಯ ಮೇಲೆ ಚಿಕ್ಕ ಗುಡಿಯನ್ನು ನಿರ್ಮಿಸಿ ಮತ್ತು ಈ ಕಬ್ಬಿಣದ ಆಯುಧಗಳನ್ನು ಈ ಗುಡಿಯಲ್ಲಿ ಇಟ್ಟು

ಪೂಜಿಸಲಾಗುತ್ತಿದೆ. ಇವುಗಳಲ್ಲಿ 25 ಸೆಂ.ಮೀ ಅಳತೆಯ ಕಬ್ಬಿಣದ ಚೂರಿಯು ವಿಶೇಷವಾಗಿದ್ದು ಅಲಂಕಾರದಿಂದ ಕೂಡಿದೆ. ಈ ಸಾಧನದ ತುದಿಯಿಂದ ಅರ್ಧಭಾಗ ಮೊಳೆಯ ಮಾದರಿಯಲ್ಲಿದ್ದು ಉಳಿದ ಭಾಗವನ್ನು ದೇವಾಲಯಗಳ ವೃತ್ತ ಕಂಭಗಳ ಮಾದರಿಯಲ್ಲಿ ಅಥವಾ ಮಣಿಗಳ ರೀತಿಯಲ್ಲಿ ವಿನ್ಯಾಸ ಮಾಡಿದ್ದು ಒಂದು ಮತ್ತೊಂದರ ನಡುವೆ ಹರಿತವಾದ ಮತ್ತೊಂದು ವಿನ್ಯಾಸವನ್ನು ಮಾಡಲಾಗಿದೆ. ಬಹುಶಃ ಈ ಸಾಧನವನ್ನು ಕೊಲ್ಲುವ ಉದ್ದೇಶಕ್ಕಾಗಿ ಬಳಸಿರುವ ಸಾಧ್ಯತೆಗಳು ಹೆಚ್ಚಿವೆ. ಆದರೆ ಈ ಸಾಧನವು ಇತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ಮೇಲ್ನೋಟಕ್ಕೆ ಕಂಡುಬಂದರು ಕೂಡ, ಇದನ್ನು ಬೃಹತ್ ಶಿಲಾಯುಗ ಸಮಾಧಿಯಿಂದ ಹೊರತೆಗೆಯಲ್ಪಟ್ಟಿರುವ ಖಚಿತ ಮಾಹಿತಿ ಲಭ್ಯವಿರುವುದರಿಂದ ಇದು ಕಬ್ಬಿಣಯುಗಕ್ಕೆ ಸೇರಿದೆ ಎಂದು ಹೇಳಬಹುದು. ಒಟ್ಟಿನಲ್ಲಿ ಈ ಪ್ರದೇಶದ ಸಾಂಸ್ಕೃತಿಕ ಮಹತ್ವವನ್ನು ಹಾಗೂ ವಿವಿಧ ಕ್ಷೇತ್ರಗಳಿಗೆ ಪರಿಚಯಿಸುವ ಅವಶ್ಯಕತೆಯಿರುವುದರಿಂದ ಈ ಪ್ರದೇಶದಲ್ಲಿ ವೈಜ್ಞಾನಿಕ ಉತ್ಖನನ ಮತ್ತು ವ್ಯವಸ್ಥಿತ ಪುರಾತತ್ವ ಅನ್ವೇಷಣೆಯನ್ನು ಕೈಗೊಳ್ಳುವ ಮೂಲಕ ಇನ್ನೂ ಹೆಚ್ಚಿನ ಸಾಂಸ್ಕೃತಿಕ ಅಂಶಗಳನ್ನು ನಿರೀಕ್ಷಿಸಬಹುದು. ಈ ನಿಟ್ಟಿನಲ್ಲಿ ಒಟ್ಟಾರೆ ಅರ್ಕಾವತಿ ನದಿ ತೀರದ ಪ್ರಾಚೀನ ಮಾನವ ಸಂಸ್ಕೃತಿಯನ್ನು ಮರು ಸೃಷ್ಟಿಸಲು ಸಾಧ್ಯವಾಗುತ್ತದೆ.

ಕೃತಜ್ಞತೆಗಳು

ಈ ಲೇಖನವನ್ನು ಸಿದ್ದಪಡಿಸಲು ಮಾರ್ಗದರ್ಶನ ನೀಡಿದ ಆರತಿ ದೇಶಪಾಂಡೆ-ಮುಖರ್ಜಿ ಡೆಕ್ಕನ್ ಕಾಲೇಜು, ಪುಣೆ. ಎಸ್ ಕೆ. ಅರುಣಿ, ವಿ. ಶೋಭಾ, ಮೈಸೂರು ವಿಶ್ವ ವಿದ್ಯಾನಿಲಯ. ಮೋಹನ ಆರ್, ಹಂ.ಗು. ರಾಜೇಶ್, ಇವರೆಲ್ಲರಿಗೂ ಹೃದಯಪೂರ್ವಕ ಕೃತಜ್ಞತೆಗಳು. ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಎಸ್ ಶಶಿಕುಮಾರ್, ಅರಣ್ಯ ಇಲಾಖೆ ಮತ್ತು ನೀರಾವರಿ ಇಲಾಖೆಯ ಸಿಬ್ಬಂದಿಗಳು ಇವರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಆಧಾರ ಸೂಚಿ

ಕನ್ನಡ


1. ಅರುಣಿ, ಎಸ್.ಕೆ. 2013. 'ಬೆಂಗಳೂರು ಪರಿಸರದ ಪ್ರಾಗ್ಯೈತಿಹಾಸಿಕ ಸಂಸ್ಕೃತಿ' **ಇತಿಹಾಸ ದರ್ಪಣ** ಪುಸ್ತಕ 17-2013:7-38
2. ಗೋಪಾಲ್ ರಾವ್, ಹೆಚ್.ಎಸ್. 1994. 'ಬೃಹತ್ ಶಿಲಾಯುಗದಿಂದ 16 ನೆಯ ಶತಮಾನದವರೆಗೆ ಹೂಜಿಗಲ್ಲು ಒಂದುಶೋಧ' **ಇತಿಹಾಸ ದರ್ಶನ** 9: 3-5
3. ಜಗದೀಶ್, ಆರ್. 1996. 'ಮಾಗಡಿ ತಾಲ್ಲೂಕಿನ ಹೊಸಪಾಳ್ಯದ ಬೃಹತ್ ಶಿಲಾಯುಗದ ನಿವೇಶನ' **ಇತಿಹಾಸ ದರ್ಶನ** 11: 30 -31
4. ಪ್ರವೀಣ್ ಕುಮಾರ್. ಕೆ. 2015. **ರಾಮನಗರ ಜಿಲ್ಲೆಯ ಸಾವನದುರ್ಗದ ಐತಿಹಾಸಿಕ ಸ್ಮಾರಕಗಳು ಮತ್ತು ಪ್ರವಾಸೋದ್ಯಮದೊಡನೆ ಸಂಬಂಧಗಳು-ಒಂದು ಅಧ್ಯಯನ.** ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ಸ್ನಾತಕೋತ್ತರ ಡಿಪ್ಲೊಮಾ ಪದವಿಗಾಗಿ ಸಾದರಪಡಿಸಿದ ಸಂಶೋಧನ ಕಿರು ನಿಬಂಧ.
5. ಮಂಜುನಾಥ. ಎಂ.ಜಿ. 1996. 'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನವಶೋಧಿತ ಬೃಹತ್ ಶಿಲಾ ನಿವೇಶನಗಳು' **ಇತಿಹಾಸ ದರ್ಶನ** 10: 8-20
6. ಜೆ.ವಿಶ್ವನಾಥ್ ಮತ್ತು ಮಂಜುನಾಥ. ಎಂ.ಜಿ. 1996. 'ಸಾಸಲುವಿನ ಬೃಹತ್ ಶಿಲಾಯುಗದ ಸ್ಮಾರಕಗಳು ಮತ್ತು ರೇಖಾಚಿತ್ರಗಳು' **ಇತಿಹಾಸ ದರ್ಶನ** 11: 46-48
7. ಲೋಕೇಶ್. ಎಂ ಮತ್ತು ಎಂ.ಎಸ್. ಮರಿದೇವರು. 1998. 'ಬೃಹತ್ ಶಿಲಾಯುಗದ ಮೋಟಗಾನಹಳ್ಳಿ' **ಇತಿಹಾಸ ದರ್ಶನ** 13:9-10

8. ರಾಜೇಶ್, ಹೆಂ.ಗು. 2016 'ಮಾಗಡಿ ತಾಲ್ಲೂಕಿನ ಅಳಲಕುಪ್ಪೆಯ ಸಮೀಪ 'ಬೃಹತ್ ಶಿಲಾಯುಗ ಸಮಾಧಿಗಳ ಶೋಧ' ಇತಿಹಾಸ ದರ್ಶನ 31:7–9
9. ಶಿವತಾರಕ್, ಕೆ.ಬಿ. 2001. **ಕರ್ನಾಟಕದ ಪುರಾತತ್ವ ನೆಲೆಗಳು,** ಪ್ರಸಾರಾಂಗ ಕನ್ನಡ ವಿ. ವಿ. ಹಂಪಿ. 2001:553–561

ಇಂಗ್ಲಿಷ್


10. Branfill, B.R. 1881. 'On the Savanadurga Rude Stone Cemetery Central Mysore'. *Indian Antiquary* 10, Swati Publication Delhi Pp. 1-12.
11. Banerjee, N.R. & Soundara Rajan, K.V. 1959, 'Sanur 1950 & 1952: A Megalithic site in District Chingleput', *Ancient India* 15. Pot marks recorded from the site of Sanur in Tamil Nadu, pp. 32
12. Cole, R.A. 1868- 69. 'The megaliths', *ancient India 4*, pp. 4-13, 151-55 &243-45.
13. Cole, R.A. 1873. 'Cromlechs', *Indian Antiquary:* 86-8. Dharwar: Eastern Press.Pp. 137.
14. GururajaRao, B.K 1972. *Megalithic Culture in South India.* Mysore: University of Mysore.
15. Moorti, U.S. 1994. *Megalithic Culture of South India: Socio-Economic Perspectives.* Ganga Kaveri publishing house.
16. Moorti, U.S. 1990. 'Megalithic Karnataka-A Locational Analysis', *In Archaeology in Karnataka.*
17. Praveen Kumar, K. 2016. *Archeological investigations in the middle reaches of Arkavathi Basin* (Magadi Taluk, South Karnataka), M.Phil Dissertation Submitted to Deccan College Post Graduate and Research Institute, Pune.
18. Poonacha, 1990. *Archaeology of Malnad region, comprise the districts of Hassan, Chikkamagalur and Shivamogga; with special reference to pre and proto-history.* (Unpublished thesis) Karnataka University, Dharwad.
19. Sheshadri, M. 1956. *The Stone Use Culture of Prehistoric and Protohistoric Mysore.* Mysore: University Of Mysore.
20. Sheshadri, M. 1957. *Report of the Jadigenahalli Megalithic Excavations for the Year 1960.* Mysore: Directorate of Archaeology, Government of Mysore.
21. Sheshadri, M. 1971. *Report on the excavation At T. Narasipura.* Directorate of Archaeology, Government of Mysore.
22. Sundara, A. 1975. *The Early Chamber Tombs of South India,* Delhi.
23. Sundara, A. 1990. *Archaeology in Karnataka* (Ed.A. Sundara, 1985) directorate of archaeology and museum in Karnataka, Mysore. Pp.151-53
24. Suryanath, U. Kamath. 1989. *Karnataka state gazetteer Bangalore rural district.* Government of Karnataka.

25. Todd, K.R. U., 1948. 'A microlithic industry in eastern Mysore'. *Man vol.48:28-30*
26. Wheeler, R.E.M. 1948. 'Bramhagiri and Chandravalli Excavations', *Ancient India 4:181-3l0.*



ನಕ್ಷೆ 1– ಮಾಗಡಿ ಪರಿಸರದಲ್ಲಿ ಕಂಡುಬಂದಿರುವ ಪುರಾತತ್ವ ನೆಲೆಗಳು. ವರದಿಯಾಗಿರುವ ಮತ್ತು ಹೊಸ ನೆಲೆಗಳು

1 ಸಾವನದುರ್ಗ. 2 ವಳಗೆರೆಪಾಳ್ಯ. 3 ಉಡುಕುಂಟೆ. 4 ನಾಗಮಂಗಲ. 5 ವೀರೆಗೌಡನ ದೊಡ್ಡಿ, 6 ಗುಡೇಮಾರನಹಳ್ಳಿ. 7 ಅಕ್ಕಿನಾಳು ಕಾಲೊನಿ. 8 ಬಿಳಗುಂಬ. 9 ಕಲ್ಯಾಣಪುರ. 10 ಅಂಕನಪಾಳ್ಯ. 11 ಹೊಸಪಾಳ್ಯ. 12 ಅಳಲಕುಪ್ಪೆ. 13 ಭೈರನಹಳ್ಳಿ. 14 ಕೋರಮಂಗಲ. 15 ಹೂಜಿಗಲ್ಲು.





ಚಿತ್ರ- 1 ಸೂಕ್ಷ್ಮ ಶಿಲೋಪಕರಣಗಳು- ಸಾವನದುರ್ಗ ಚಿತ್ರ -2 ಚೆರ್ಟ್ ಶಿಲೆಯ ಬ್ಲೇಡ್- ವಳಗೆರೆಪಾಳ್ಯ



ಚಿತ್ರ-3 ಸೆಲಕೋಣೆ ಸಮಾಧಿ- ಉಡುಕುಂಟೆ



ಚಿತ್ರ–4 ಡಾಲ್ಮೆನ್ - ಅಕ್ಕಿನಾಳು ಕಾಲೋನಿ




ಚಿತ್ರ– 5 ನೆಲಕೋಣೆ ಸಮಾಧಿ– ಬೆಳಗುಂಬ




ಚಿತ್ರ– 6 ಡಾಲ್ಮೆನ್ ಹೊಂದಿದ ನೆಲಕೋಣೆ ಸಮಾಧಿ– ನಾಗಮಂಗಲ




ಚಿತ್ರ– 7 ನಿಲಸುಗಲ್ಲು –
ವೀರೇಗೌಡನದೊಡ್ಡಿ




ಚಿತ್ರ– 8 ಉಡುಕುಂಟೆಯಲ್ಲಿ ದೊರೆತ ಮಡಿಕೆಯ ಚಿತ್ರಗಳು



ಚಿತ್ರ– 9 ನಾಗಮಂಗಲದಲ್ಲಿ ದೊರೆತ ಮಡಿಕೆ ಭಾಗದ ಚಿತ್ರಗಳು



ಚಿತ್ರ– 10 ಸಾವನದುರ್ಗದಲ್ಲಿ ದೊರೆತಿರುವ ಗೀರು ರೇಖೆಗಳು



ಚಿತ್ರ–11 ಸಾನೂರು ನೆಲೆಯ ಗೀರು ಚಿತ್ರಗಳು (ಕೃಪೆ ಬ್ಯಾನರ್ಜೀ– 1959:32)

ಕಳಭ್ರರ ಮೂಲಸ್ಥಾನ ಕಳವಾರ ಬೆಟ್ಟವೇ (ಸ್ಕಂಧಗಿರಿಯೇ)?

ಹಂ.ಗು. ರಾಜೇಶ್
#33/ಎ, ಐ.ಟಿ.ಐ ಕಾಲೇಜು ಹತ್ತಿರ
ಕೆಂಪೇಗೌಡನಗರ, ವಿಶ್ವನೀಡಂ ಅಂಚೆ
ಬೆಂಗಳೂರು-560091
hangurajesh@gmail.com

ಜಿಲ್ಲಾ ಕೇಂದ್ರ ಚಿಕ್ಕಬಳ್ಳಾಪುರದಿಂದ ನೈರುತ್ಯಕ್ಕೆ ಐದು ಕಿ.ಮೀ. ದೂರದಲ್ಲಿ ಕಳವಾರ ಎಂಬ ಗ್ರಾಮವಿದೆ. ಈ ಗ್ರಾಮಕ್ಕೆ ಹೊಂದಿ ಕೊಂಡಂತೆ ಇರುವ ಬೆಟ್ಟವೇ 'ಸ್ಕಂದಗಿರಿ' ಅಥವಾ 'ಕಳವಾರ ಬೆಟ್ಟ'. ಸಮುದ್ರಮಟ್ಟದಿಂದ ಸುಮಾರು 4700 ಅಡಿಗಳ ಎತ್ತರದಲ್ಲಿರುವ ಈ ಬೆಟ್ಟವು ಪ್ರಸಿದ್ಧ ಗಿರಿಧಾಮವಾದ ನಂದಿದುರ್ಗದ ಸಮೀಪವಿದೆ. ಐತಿಹಾಸಿಕ ಮಹತ್ವವನ್ನು ಹೊಂದಿರುವ ಈ ಬೆಟ್ಟದ ಪರಿಸರದಲ್ಲಿ ಐ.ಸಿ.ಎಚ್.ಆರ್.ನ ದಕ್ಷಿಣ ಪ್ರಾದೇಶಿಕ ಕೇಂದ್ರದ ನಿರ್ದೇಶಕರಾಗಿದ್ದ ಎಸ್.ಕೆ.ಅರುಣಿ ಅವರೊಂದಿಗೆ ಈ ಲೇಖಕ 2014ರ ಜೂನ್ ಹಾಗೂ ಆಗಸ್ಟ್ ಮಾಹೆಯಲ್ಲಿ ನಡೆಸಿದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬೆಳಕಿಗೆ ಬಂದ ಅವಶೇಷಗಳನ್ನು ಮತ್ತು ಸ್ಥಳನಾಮ ವಿವೇಚನೆಯನ್ನು ಆಧರಿಸಿ ನೇಪತ್ಯಕ್ಕೆ ಸರಿದಿರುವ 'ಕಳಭ್ರ' ಎಂಬ ಕನ್ನಡ ಮನೆತನವೊಂದರ ಮೂಲಸ್ಥಾನವನ್ನು ಗುರುತಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಕಳವಾರ (ಸ್ಕಂದಗಿರಿ) ಬೆಟ್ಟದ ತಪ್ಪಲಿನಲ್ಲಿಯೇ ಪಾಪಾಗ್ನಿ ಮಠವಿದೆ. ಬೆಟ್ಟ ಮತ್ತು ಮಠದ ನಡುವಿನ ಇಳಿಜಾರು ಪ್ರದೇಶವನ್ನು ಕಡೆದು ಸಮತಟ್ಟು ಮಾಡುವ ಮೂಲಕ ಈಗ ಕೃಷಿಗೆ ಒಳಪಡಿಸಲಾಗಿದೆ. ಕುರುಚಲು ಗಿಡಗಂಟೆ ಮತ್ತು ಬಂಡೆಗಳೂ ಕೂಡ ಅಲ್ಲಲ್ಲಿ ಹಾಗೆ ಉಳಿದುಕೊಂಡಿವೆ. ಈ ಪ್ರದೇಶದಲ್ಲಿ ಹೆಚ್ಚು ಕದಡದಿರುವ ಸ್ಥಳಗಳನ್ನು ಮತ್ತು ಬಂಡೆಗಳ

ನಡುವಿನ ಕಿರಿದಾದ ಪ್ರದೇಶಗಳಲ್ಲಿ ಪ್ರಯೋಗಿಕವಾಗಿ ಮೇಲ್ಪದರದಲ್ಲಿ ಅಗೆತ ನಡೆಸಿದಾಗ ಆರಂಭಿಕ ಇತಿಹಾಸ ಕಾಲಕ್ಕೆ ಸೇರಿದ ವೈವಿಧ್ಯಮಯವಾದ ಮಡಕೆಗಳ ಚೂರುಗಳು ದೊರೆತವು (ಚಿತ್ರ 1). ಮುಖ್ಯವಾಗಿ ಕಪ್ಪು ಮತ್ತು ಕೆಂಪು ವರ್ಣದ ಮಡಕೆ (Black and Red Ware - B.R.W) ಚೂರುಗಳು, ಕಾವಿ ಲೇಪನದಡಿ ಬಿಳಿ ಚಿತ್ರವುಳ್ಳ ಮಡಕೆ (Russet-Coated Painted Ware - R.C.P.W) ಮತ್ತು ಕಪ್ಪುವರ್ಣದ ಮಡಕೆ ಚೂರುಗಳು ದೊರೆತಿವೆ (ಚಿತ್ರ 2 ಮತ್ತು 5). ಸಾಮಾನ್ಯವಾಗಿ B.R.Wಗಳು ಬೃಹತ್ ಶಿಲಾಯುಗದ ಅವಶೇಷಗಳಲ್ಲಿ ಕಂಡುಬರುತ್ತವೆ.[1] ಇವುಗಳ ಕಾಲವನ್ನು ವಿದ್ವಾಂಸರು ದಕ್ಷಿಣ ಕರ್ನಾಟಕದಲ್ಲಿ ಕ್ರಿ.ಪೂ. 1200–250ರ ವರೆಗೆ ಗುರುತಿಸುತ್ತಾರೆ.[2] R.C.P.W ಎಂಬ ವಿಶೇಷ ರೀತಿಯ ಆಕರ್ಷಕ ಮಡಕೆಗಳು ಕೂಡ ಬೃಹತ್ ಶಿಲಾಯುಗದ ಸಮಾಧಿಗಳೊಂದಿಗೆ ಸಂಬಂಧ ಹೊಂದಿವೆ.[3] ಇವು ಅತ್ಯುತ್ತಮ ಕಾವಿಬಣ್ಣದ ಮಡಕೆಯ ಮೇಲೆ ಬಿಳಿಬಣ್ಣದ ಕತ್ತರಿಗೆರೆ (Criss-cross), ಚುಕ್ಕೆಗಳಿಂದ ಅಲಂಕರಿಸಿದ ಮಡಕೆಗಳಾಗಿರುತ್ತವೆ (ಚಿತ್ರ 3). ಇವುಗಳ ಕಾಲವನ್ನು ವಿದ್ವಾಂಸರು ಕ್ರಿ.ಪೂ.ಮೂರನೇ ಶತಮಾನದಿಂದ ಕ್ರಿ.ಶ. ಮೂರು–ನಾಲ್ಕನೇ ಶತಮಾನವೆಂದು ಗುರುತಿಸುತ್ತಾರೆ.[4] ಈ ರೀತಿಯ ಮಡಕೆಗಳು ಮೊದಲ ಬಾರಿಗೆ ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ (1908) ದೊರೆತವು. ನಂತರ ಬ್ರಹ್ಮಗಿರಿಯಲ್ಲಿಯೂ ದೊರೆತವು.[5] ಎಂ.ಶೇಷಾದ್ರಿ ಅವರು ಬೆಂಗಳೂರು ಸಮೀಪದ ತರಬನಹಳ್ಳಿಯಲ್ಲಿಯೂ R.C.P.W ಪತ್ತೆಯಾಗಿರುವುದಾಗಿ ದಾಖಲಿಸುತ್ತಾರೆ.[6] ಇವಲ್ಲದೆ ಬೃಹತ್ ಶಿಲಾ ಸಮಾಧಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕಪ್ಪು ವರ್ಣದ ಸುಟ್ಟ ಮಡಕೆಗಳು ಮತ್ತು ಕೆಂಪುಬಣ್ಣದ ಮಡಕೆಗಳೂ ಇಲ್ಲಿ ದೊರಕಿದವು. ಇಲ್ಲಿನ ಮಡಕೆಗಳ ಚೂರಿನ ಮೇಲ್ಭಾಗವು ತುಂಬ ನಯವಾಗಿದ್ದು, ಸವೆದಿರುವಂತೆ ಕಾಣುತ್ತವೆ. ಇದರಿಂದ ಬೃಹತ್ ಶಿಲಾಯುಗದ ಜನರು ವಾಸಿಸುವ ನೆಲೆ ಇದಾಗಿತ್ತೆಂದು ಮತ್ತು ಅವರು ಮಡಕೆಗಳನ್ನು ಬಳಸಿರುವುದರಿಂದ ಸವೆದಿರಬಹುದೆಂದು ಅಂದಾಜಿಸ ಬಹುದು. ಆದರೆ ಸುತ್ತಲ ಪರಿಸರದಲ್ಲಿ ಎಲ್ಲಿಯೂ ಬೃಹತ್ ಶಿಲಾಯುಗದ ಸಮಾಧಿಗಳ ಮಾದರಿಗಳಾವುವು ಬೆಳಕಿಗೆ ಬಂದಿರುವುದಿಲ್ಲ.

ಸ್ಕಂದಗಿರಿಯು ಹಲವು ಸುತ್ತಿನ ಕೋಟೆಗಳಿಂದ ಆವೃತ್ತವಾಗಿದೆ. ಬೆಟ್ಟದ ಈಶಾನ್ಯ ದಿಕ್ಕಿನಲ್ಲಿ ಮೊದಲ ಮೂರು ಸುತ್ತಿನ ಕೋಟೆಯ ಅವಶೇಷಗಳನ್ನು ಏರಿದಾಗ ಕಟ್ಟಡದ ಭಗ್ನ ಅವಶೇಷಗಳು ದೊರೆತಿವೆ. ಮುಖ್ಯವಾಗಿ ಕಟ್ಟಡದ ಸೂರಿನ ಹೆಂಚುಗಳು (ಚಿತ್ರ 4), ಇಟ್ಟಿಗೆಗಳು ನಮಗೆ ಕಂಡುಬಂದವು. ಎಸ್.ಕೆ ಅರುಣಿ ಅವರ ಪ್ರಕಾರ ಈ ಅವಶೇಷಗಳು ಸುಮಾರು 1500 ವರ್ಷಗಳಷ್ಟು ಹಿಂದಕ್ಕೆ ಹೋಗುತ್ತವೆ.[7] ಇಲ್ಲಿನ ಕೋಟೆಯು ವಿವಿಧ ಕಾಲಘಟ್ಟದಲ್ಲಿ ಮರು ನಿರ್ಮಿಸಲ್ಪಟ್ಟಿರುವ ಸಾಧ್ಯತೆಗಳಿವೆ. ಪ್ರಸ್ತುತ ಕೋಟೆಯು ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಬೆಟ್ಟದ ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿಯೂ ಕೋಟೆಯ ಭಾಗಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ಅದು ಅಧುನಿಕ ಕಾಲಘಟ್ಟಕ್ಕೆ ಸೇರುತ್ತದೆ. ವಿಶೇಷವಾಗಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲಘಟ್ಟದಲ್ಲಿ ಕೊನೆಯಬಾರಿ ಈ ಗಿರಿದುರ್ಗವನ್ನು ಪುನರ್‌ರಚಿಸಿರುವಂತೆ ಕಾಣುತ್ತದೆ. ಆದರೆ ಆರಂಭಕಾಲದ ಕೋಟೆಯ ಅವಶೇಷಗಳನ್ನು ಇಂದು ಇಲ್ಲಿ ಗುರುತಿಸಲಾಗದು.


ಈ ಬೆಟ್ಟವನ್ನು 'ಸ್ಕಂಧಗಿರಿ' ಎಂದು ಕರೆಯುವುದನ್ನು ವಿಶೇಷವಾಗಿ ಗಮನಿಸಬೇಕಿದೆ. ಏಕೆಂದರೆ, ಕ್ರಿ.ಶ. 7ನೇ ಶತಮಾನದಲ್ಲಿ 'ಸ್ಕಂಧಾವಾರ'ಗಳೆಂದು ಕರೆಯುತ್ತಿದ್ದ ಸೇನಾನೆಲೆಗಳು ಅಧಿಕಾರ ಕೇಂದ್ರಗಳಾಗಿದ್ದವು.[8] 'ಸ್ಕಂಧಗಿರಿ' ಅಥವಾ 'ಕಳವಾರ' ಹೆಸರಿನ ನಿಷ್ಪತ್ತಿಯ ಬಗ್ಗೆ ಎರಡು ಅಭಿಪ್ರಾಯಗಳು ಮೂಡುತ್ತವೆ. ಒಂದು– ಆರಂಭಿಕ ಮಧ್ಯಕಾಲದಲ್ಲಿ ಸ್ಕಂಧಗಿರಿಯು ಈ ರೀತಿಯ ಒಂದು ಸೇನಾನೆಲೆಯಾಗಿದ್ದು, ಅಧಿಕಾರ ಕೇಂದ್ರವಾಗಿತ್ತು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ, ಸ್ಕಂಧಾವಾರವೇ ಜನಸಾಮಾನ್ಯರ ಬಾಯಲ್ಲಿ ಇಂದಿನ 'ಕಳವಾರ'ವಾಗಿ ಪರಿವರ್ತಿತವಾಗಿರಬಹುದು. ಶಿಷ್ಟ ಸಾಹಿತ್ಯದಲ್ಲಿ 'ಸ್ಕಂದಗಿರಿ' ಎಂಬುದೇ ಉಳಿದುಕೊಂಡುಬಂದಿರುವ ಸಾಧ್ಯತೆಯೂ ಇದೆ. ಎರಡು– 'ಕಳಭ್ರ'ರ ಮೂಲಸ್ಥಾನವಾದ್ದರಿಂದ ಈ ಊರಿಗೆ 'ಕಳವಾರ' ಎಂಬ ಹೆಸರು ಬಂದಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಹಾಗದರೆ ಈ ಕಳಭ್ರರು ಯಾರು?

ಕಳಭ್ರರು: ಮೂವೆಂದರ್ ಮನೆತನಗಳೆಂದೇ ಪ್ರಸಿದ್ಧವಾದ ಪ್ರಾಚೀನ ತಮಿಳುನಾಡಿನ ಚೋಳ, ಚೇರ ಮತ್ತು ಪಾಂಡ್ಯ ವಂಶಗಳನ್ನು ನಾಶಪಡಿಸಿದವರು 'ಕಳಭ್ರರು'.[9] ವೇಳ್ವಿಕುಡಿ ತಾಮ್ರಶಾಸನದಲ್ಲಿ ಕಳಭ್ರರನ್ನು ಕ್ರಿ.ಶ.6ನೇ ಶತಮಾನದ ಅಂತ್ಯದಲ್ಲಿ ಪಾಂಡ್ಯರು ಮತ್ತು ಪಲ್ಲವರು ಮೂಲೋತ್ಪಟನ ಮಾಡಿದರೆಂದು ತಿಳಿದು ಬರುತ್ತದೆ.[10] ಕಳಭ್ರರು ಬೌದ್ಧ ಅಥವಾ ಜೈನರಾಗಿದ್ದಿರಬಹುದೆಂದು ತಿಳಿದು ಬರುತ್ತದೆ.[11] ಮೌರ್ಯರಂತಹ ಸಾಮ್ರಾಟರಿಗೆ ಸವಾಲಾಗಿ ನಿಂತಿದ್ದ ತಮಿಳಗಂ ಶಕ್ತಿಗಳು ಇತಿಹಾಸದಿಂದ ಕಣ್ಮರೆಯಾಗತೊಡಗಿದವು. ಇದಕ್ಕೆ ಕಾರಣರಾದ ಕಳಭ್ರರು ಈ ಕಾರ್ಯವನ್ನು ಕ್ರಿ.ಶ.4ನೆಯ ಶತಮಾನದಲ್ಲಿ ಪೂರ್ತಿಗೊಳಿಸಿದವರು ಕಳಭ್ರರು – ಇವರೂ ಕನ್ನಡ ನೆಲದವರೆಂಬುದು ತಮಿಳು ವಿದ್ವಾಂಸರ ಅಭಿಮತವೆಂದು ಷ.ಶೆಟ್ಟರ್ ಅವರು ದಾಖಲಿಸಿದ್ದಾರೆ.[12] ಸಂಗಂ ಕಾಲದ ತಮಿಳು ಕವಿಗಳಾದ ಕಲಿಯದರ್ ಮತ್ತು ಸೆಕ್ಕಿಲರ್ ಕಳಭ್ರರನ್ನು 'ಕರುನಾಡರ್' ಎಂದು ಗುರುತಿಸಿರುವರು.[13] ಕಳಭ್ರ ವಂಶದ 'ಅಚ್ಯುತ ವಿಕ್ರಾಂತ' ಎಂಬ ಒಬ್ಬನೇ ಒಬ್ಬ ಅರಸನ ಬಗ್ಗೆ ಸಾಹಿತ್ಯಿಕ ಉಲ್ಲೇಖ ದೊರಕುತ್ತದೆ. ಬೌದ್ಧಮುನಿ ಬುಧದತ್ತನು **'ವಿನಯವಿನಿಚ್ಛಯ'** ಎಂಬ ಗ್ರಂಥವನ್ನು ಕಾವೇರಿ ದಡದ ಭೂತನಮಂಗಳ ಎಂಬಲ್ಲಿ ಕಳಭ್ರರು ಆಳುತ್ತಿದ್ದಾಗ ರಚಿಸಿದ್ದಾಗಿ ಹೇಳಿಕೊಂಡಿರುವನು. ತಮಿಳು ಟೀಕಾಗ್ರಂಥ **'ಯಪ್ಪರುಂಗಲಮ್'**ನಲ್ಲಿ ಅಚ್ಯುತನನ್ನು ನಂದಿಬೆಟ್ಟ ಪ್ರದೇಶದ ಅರಸನೆಂದು ಗುರುತಿಸಲಾಗಿದ್ದು ಇವನು ಮತ್ಸ್ಯ, ಧನಸ್ಸು ಮತ್ತು ವ್ಯಾಘ್ರ ಲಾಂಛನದ (ಪಾಂಡ್ಯ, ಚೇರ ಮತ್ತು ಚೋಳ) ಅರಸರನ್ನು ನಾಶ ಮಾಡಿದನೆನ್ನಲಾಗಿದೆ. ಈ ಅಚ್ಯುತನು ಸುಮಾರು ಕ್ರಿ.ಶ 6ನೆಯ ಶತಮಾನದಲ್ಲಿ ಆಳುತ್ತಿದ್ದನೆಂದು ಶೆಟ್ಟರ್ ಅವರು ದಾಖಲಿಸಿದ್ದಾರೆ.[14] ಇವೆಲ್ಲದರ ಜೊತೆಗೆ ಈ ಕಳಭ್ರರು ಕರ್ನಾಟಕದ ನಂದಿಬೆಟ್ಟದವರೆಂದೂ ಹೆಸರಾಂತ ಜಿನಸಂಘಗಳಲ್ಲಿ ಒಂದಾದ ನಂದಿಗಣಕ್ಕೆ ಸೇರಿದವರೆಂಬ ಅಭಿಪ್ರಾಯವೂ ಇದೆ.[15] ಕನ್ನಡದ ಮೊದಲ ಶಾಸನವಾದ ಹಲ್ಮಿಡಿ ಶಾಸನದಲ್ಲಿಯೂ ಸಹ ಕಳಭ್ರರ ಉಲ್ಲೇಖವಿರುವುದನ್ನು ಗಮನಿಸಬಹುದು.

ಉಪಸಂಹಾರ: ಕಳವಾರಬೆಟ್ಟ ಅಥವಾ ಸ್ಕಂಧಗಿರಿಯ ತಪ್ಪಲಿನಲ್ಲಿ ನಡೆಸಿದ ಕ್ಷೇತ್ರಕಾರ್ಯದಲ್ಲಿ ದೊರೆತ ಅವಶೇಷಗಳು ಮತ್ತು ಸ್ಥಳನಾಮ ಅಧ್ಯಯನದ ಜೊತೆಗೆ ಸಾಹಿತ್ಯಿಕ ಅಧ್ಯಯನಗಳನ್ನು ಸಮಷ್ಟಿಯಾಗಿಟ್ಟುಕೊಂಡು ನೋಡಿದಾಗ ಕೆಲವು ಅಂಶಗಳನ್ನು ಗುರುತಿಸಬಹುದಾಗಿದೆ. ಇಲ್ಲಿ ದೊರೆತ ಮಡಕೆಗಳ ಚೂರಿನ ಮೇಲ್ಭಾಗವು ತುಂಬ



ಚಿತ್ರ 1. ಕಳವಾರಬೆಟ್ಟದ ಉತ್ತರ ದಿಕ್ಕಿನ ನೋಟ: 1. ಬಿ.ಆರ್.ಡಬ್ಲ್ಯೂ. ಮತ್ತು ಆರ್.ಸಿ.ಪಿ.ಡಬ್ಲ್ಯೂ. ಮಡಕೆಗಳು ದೊರೆತ ಸ್ಥಳಗ
2. ಆರಂಭಿಕ ಮಧ್ಯಕಾಲೀನ ಕಟ್ಟಡದ ಅವಶೇಷಗಳು ದೊರೆತ ಸ್ಥಳ. 3. ಪಾಪಾಗ್ನಿ ಮಠ



ಚಿತ್ರ 2. ಕಳವಾರ ಬೆಟ್ಟದ ತಪ್ಪಲಿನಲ್ಲಿ ದೊರೆತ ಕಪ್ಪು ಮತ್ತು ಕೆಂಪು ವರ್ಣದ ಮಡಕೆ ಚೂರುಗಳು ಮತ್ತು ಕಾವಿ ಲೇಪನದಡಿ ಬಿಳಿ ಚಿತ್ರವುಳ್ಳ ಮಡಕೆ ಚೂರುಗಳು.





ಚಿತ್ರ 4. ಕಳವಾರ ಬೆಟ್ಟದ ತಪ್ಪಲಿನಲ್ಲಿ ದೊರೆತ ಮಧ್ಯಕಾಲೀನ (ಸೂರಿನ ಹೆಂಚು) ಅವಶೇಷಗಳು

ಚಿತ್ರ 3. ಕಳವಾರ ಬೆಟ್ಟದ ತಪ್ಪಲಿನಲ್ಲಿ ದೊರೆತ ಕಾವಿ ಲೇಪನದಡಿ ಬಿಳಿ ಚಿತ್ರವುಳ್ಳ ಮಡಕೆ ಚೂರುಗಳು



ಚಿತ್ರ: ಎಸ್.ಕೆ. ಅರುಣಿ

ಚಿತ್ರ 5. ಕಪ್ಪುವರ್ಣದ ಮಡಕೆಯ ಅವಶೇಷ

ನಯವಾಗಿದ್ದು, ಸವೆದಿರುವಂತೆ ಕಾಣುತ್ತವೆ. ಆದರೆ, ಬೃಹತ್ ಶಿಲಾಯುಗದ ಸಮಾಧಿಯಲ್ಲಿ ದೊರೆಯುವ ಮಡಕೆಗಳು ಸಾಮಾನ್ಯವಾಗಿ ಈ ರೀತಿ ಇರುವುದಿಲ್ಲ. ಇದು ಒಂದು ಬೃಹತ್ ಶಿಲಾಯುಗದ ಕಾಲದ ಜನವಸತಿಯ ಪ್ರದೇಶವಾಗಿತ್ತು ಎಂದು ಅರ್ಥೈಸಿಕೊಳ್ಳಬಹುದಾಗಿದೆ. B.R.W ಮತ್ತು R.C.P.W ಎರಡೂ ಒಂದೇ ಸ್ತರದಲ್ಲಿ ದೊರೆಕುವುದರಿಂದ ಮತ್ತು ಈ ರೀತಿಯ ಮಡಕೆಗಳ ಕಾಲವನ್ನು ಈಗಾಗಲೇ ತಜ್ಞರು ನಿರ್ಧರಿಸಿರುವುದರಿಂದ ಮೇಲಿನ ಕಾಲಮಾನವನ್ನು ಅನ್ವಯಿಸಿ ನೋಡಿದಾಗ ಕಳವಾರ ಬೆಟ್ಟದ ತಪ್ಪಲ ಪರಿಸರದಲ್ಲಿ ಕನಿಷ್ಠ ಕ್ರಿ.ಪೂ. ಮೂರು ಮತ್ತು ಎರಡನೇ ಶತಮಾನದ ಕಾಲಘಟ್ಟದಲ್ಲಿಯೇ ಇಲ್ಲಿ ಜನರು ನೆಲೆಸಿದ್ದಿರಬೇಕು. 'ಸ್ಕಂಧವಾರ' ಹೆಸರಿನ ಸ್ಥಳಗಳು ಕ್ರಿ.ಶ.6–7ನೇ ಶತಮಾನದಲ್ಲಿ ಸೈನಿಕಶಕ್ತಿಯ ಅಧಿಕಾರ ಕೇಂದ್ರಗಳಾಗಿದ್ದರಿಂದ ಮತ್ತು ಇಲ್ಲಿ ಕೋಟೆಯ ಅವಶೇಷಗಳೂ ಇರುವುದರಿಂದ ಇದೊಂದು ಸೈನಿಕ ಶಕ್ತಿಯ ಕೇಂದ್ರವಾಗಿತ್ತೆಂಬ ಖಚಿತ ಅಭಿಪ್ರಾಯಕ್ಕೆ ಬರಬಹುದು. ಹಾಗಾದರೆ ಯಾರು ಈ ಕೇಂದ್ರದ ಮೇಲೆ ನಿಯಂತ್ರಣ ಹೊಂದಿದ್ದರು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದಾದರೆ– ಶೆಟ್ಟರ್ ಅವರು ನಡೆಸಿರುವ ಸಂಗಂ ಸಾಹಿತ್ಯಗಳ ಮೇಲಿನ ಅಧ್ಯಯನದ ಹಿನ್ನೆಲೆಯಲ್ಲಿ ಕಳಭ್ರರು ನಂದಿಬೆಟ್ಟದವರೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ನಂದಿಬೆಟ್ಟ ಮತ್ತು ಕಳವಾರ ಬೆಟ್ಟಗಳು ಅಕ್ಕಪಕ್ಕದ ಬೆಟ್ಟಗಳೇ ಆಗಿರುವುದರಿಂದ ಕಳಭ್ರರು ಇದೇ ಕಳವಾರ ಬೆಟ್ಟದ ಪರಿಸರದಲ್ಲಿಯೇ ನೆಲೆಸಿದ್ದವರೆಂದು ಊಹಿಸಬಹುದಾಗಿದೆ. ಅಂತಿಮವಾಗಿ, ಈ ಕಳಭ್ರರಲ್ಲಿ ಪ್ರಸಿದ್ಧನಾದ ಅಚ್ಯುತನ ಆಳ್ವಿಕೆಯ ನಂತರ ಕಳಭ್ರರ ಶಕ್ತಿಕುಂದಿತೆಂಬುದನ್ನು ಪಲ್ಲವ ಸಿಂಹವಿಷ್ಣು ಮತ್ತು ನರಸಿಂಹವರ್ಮ, ಪಾಂಡ್ಯ ಕಡುಂಗೋನ್ ಮತ್ತು ಬಾದಾಮಿ ಚಾಳುಕ್ಯ ಇಮ್ಮಡಿ ವಿಕ್ರಮಾದಿತ್ಯನ ಶಾಸನಗಳಿಂದ ತಿಳಿಯಬಹುದಾಗಿದೆ.[16] ಬಹುಶಃ ಕಳವಾರ ಬೆಟ್ಟದ ತಪ್ಪಲಿನಲ್ಲಿ ದೊರೆತ ಮಡಕೆಯ ಅವಶೇಷಗಳಿಂದ ಕ್ರಿ.ಪೂ. ಮೂರನೆಯ ಶತಮಾನದಿಂದ ಕ್ರಿ.ಶ.ಆರನೆಯ ಶತಮಾನದವರೆಗೂ ಕಳವಾರ ಬೆಟ್ಟದ ಪರಿಸರವನ್ನೇ ಕಳಭ್ರರು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿದ್ದರೆಂದು ತರ್ಕಿಸಬಹುದು. ಅಲ್ಲದೆ, ಕಬ್ಬಿಣಯುಗದ (ಬೃಹತ್ ಶಿಲಾಯುಗದ) ಬುಡಕಟ್ಟು ಜನಸಮೂಹವೊಂದು ನಿಂತ ನೆಲೆಯಲ್ಲಿಯೇ ವಿಕಾಸವೊಂದುತ್ತಾ ಬಂದಿದ್ದು, ಕಬ್ಬಿಣದ ಮೇಲಿನ ನಿಯಂತ್ರಣ ಮತ್ತು ಬಳಕೆಯಿಂದ ಬಲಿಷ್ಠ ಶಕ್ತಿಯಾಗಿ ಬೆಳೆದಿರಬಹುದು. ಆದರೆ ಬುಡಕಟ್ಟು ಸಮುದಾಯದವರಾದ ಇವರಿಗೆ ಲಿಪಿಯ ಸರಿಯಾದ ಜ್ಞಾನ ಇಲ್ಲದಿರುವುದರಿಂದಲೇ ಇವರ ಬಗೆಗೆ ಸಮರ್ಪಕ ದಾಖಲೆಗಳು ದೊರಕುವುದಿಲ್ಲ. ಆದರೆ, ಕಳಭ್ರರು ಹೇಗೆ ಜೈನರಾದರು ಎಂಬ ಪ್ರಶ್ನೆ ಮೂಡಬಹುದು. ಇದಕ್ಕಿರುವ ಒಂದು ಸಾಧ್ಯತೆ ಎಂದರೆ, ಭದ್ರಬಾಹು ಮುನಿಯ ಜೊತೆಗೆ ಚಂದ್ರಗುಪ್ತಮೌರ್ಯ ಮತ್ತು ಜೈನ ಯತಿಗಳ ಗುಂಪೊಂದು ಶ್ರವಣಬೆಳಗೋಳಕ್ಕೆ ಬಂದಿತು. ಆ ಗುಂಪಿನಲ್ಲಿ ಒಂದಷ್ಟು ಮಂದಿ ಮುಂದೆ ತಮಿಳುನಾಡಿನ ಕಡೆಗೆ ಚಲಿಸಿದರು. ಹೀಗೆ ಚಲಿಸಿದ ಜೈನ ಯತಿಗಳ ತಂಡಕ್ಕೆ ಕಳಭ್ರರು ಆಶ್ರಯ ಕೊಟ್ಟಿರಬಹುದು. ಹೀಗೆ ಕಳಭ್ರರು ಜೈನಧರ್ಮವನ್ನು ಸ್ವೀಕಾರ ಮಾಡಿರಬಹುದು. ಈ ನಿಟ್ಟಿನಲ್ಲಿ ಕಳವಾರ ಬೆಟ್ಟದ ಪರಿಸರದಲ್ಲಿ ಉತ್ಖನನಗಳನ್ನು ನಡೆಸಿದಲ್ಲಿ ಮತ್ತಷ್ಟು ಸಂಗತಿಗಳು ದೊರೆಯುವ ಸಾಧ್ಯತೆಗಳಿವೆ. ಇವೆಲ್ಲದರ ನಡುವೆ ಕಾಡುವ ಮತ್ತೊಂದು ಪ್ರಶ್ನೆ ಎಂದರೆ ಇದೇ ಕಾಲ ಘಟ್ಟದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಗಂಗರು ಇದೇ (ಕೋಲಾರ) ಪರಿಸರದವರು. ಹಾಗಾದರೆ ಕಳಭ್ರರಿಗೂ ಗಂಗರಿಗೂ ಸಂಘರ್ಷ ಏರ್ಪಡಲಿಲ್ಲವೆ? ಈ ಮತ್ತಷ್ಟು ಅಧ್ಯಯನಗಳು ನಡೆಯಬೇಕಿದೆ.

ಕೃತಜ್ಞತೆಗಳು

ಈ ಪ್ರಬಂಧ ಸಿದ್ಧಪಡಿಸಲು ಕಾರಣರಾದ ಎಸ್.ಕೆ.ಅರುಣಿ, ನಿರ್ದೇಶಕರು, ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು, ನವದೆಹಲಿ ಇವರಿಗೆ ನನ್ನ ಕೃತಜ್ಞತೆಗಳು.

ಕೊನೆ ಟಿಪ್ಪಣಿಗಳು

1. Devaraj D.V & Gopal B.R (Ed.) 1995:230.
2. ಶಿವತಾರಕ್ ಕೆ.ಬಿ, 2001 : 20.
3. Devaraj D.V. & Gopal B.R. (Ed.) 1995:228.
4. Kumkum Roy, 2009:273.
5. Devaraj D.V. & Gopal B.R. (Ed.) 1995:228.
6. ಅದೇ : 229.
7. *Deccan Chronicle,* ದಿ: ಜನವರಿ 6, 2015.
8. Sharma R.S., 2008(2005):259.
9. Nilakanta Sastri K.A., 2000(1955): 102.
10. ಅದೇ : 101.
11. Karashima, 2014:85–86.
12. ಶೆಟ್ಟರ್, 2007:179.
13. ಅದೇ : 180.
14. ಅದೇ: 181.
15. ಅದೇ : 184, ಟಿಪ್ಪಣಿ: 44 ನೋಡಿ.
16. ಅದೇ : 181.

ಆಧಾರ ಸೂಚಿ

- ಶೆಟ್ಟರ್ ಷ., 2007, **ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ,** ಬೆಂಗಳೂರು: ಅಭಿನವ ಪ್ರಕಾಶನ.
- ಶಿವತಾರಕ್ ಕೆ.ಬಿ., 2001, **ಕರ್ನಾಟಕದ ಪುರಾತತ್ವ ನೆಲೆಗಳು,** ಹಂಪಿ: ಕನ್ನಡ ವಿಶ್ವವಿದ್ಯಾಲಯ.
- Nilakanta Sastri K.A., 2000 (1955), *Colas,* Chennai: University of Madras.
- Devaraj D.V. & Gopal B.R., (Ed.) 1995, *Seshachandrika*, Mysore: Directorate of Archeology and museums in Karnataka.
- Gururaja Rao B.K., 1972, *The Megalithic Culture in South India,* Mysore: University of Mysore.
- Kumkum Roy, 2009, *Historical Dictionary of ancient India,* USA: Scarecrow press.
- Sharma R.S., 2008(2005), *India's Ancient Past,* New Delhi: OUP.
- Karashima, Noboru, (Ed.) 2014, *A concise History of South India,* New Delhi: OUP.
- Upindar singh, 2014(2009), *A History of Ancient and Early Medieval India,* New Delhi: Pearson. ■

ಚಂದಾದಾರರಾಗ ಬಯಸುವಿರಾ?

'ಇತಿಹಾಸ ದರ್ಪಣ'ದ ಚಂದಾದಾರರಾಗ ಬಯಸುವವರು ನಿಮ್ಮ ಆಯ್ಕೆಯ ಚಂದಾ ಹಣವನ್ನು ಡಿ.ಡಿ /ಚೆಕ್/ ಎಂ.ಓ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು.

– ಡಿ.ಡಿ ಕಳುಹಿಸಿಕೊಡುವವರು "EDITOR, ITIHASA DARPANA" ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ತೆಗೆಸಿ, ಅದನ್ನು ನಿಮ್ಮ ವಿಳಾಸವುಳ್ಳ ಪತ್ರದೊಂದಿಗೆ ನಮಗೆ ಕಳುಹಿಸಿ ಕೊಡಿ.

– ಚೆಕ್ ಕಳುಹಿಸಿಕೊಡುವವರು ಚೆಕ್ಕನ್ನು "EDITOR, ITIHASA DARPANA" ಹೆಸರಿಗೆ ಬರೆದು, ಚೆಕ್ಕಿನ ಮೇಲ್ಭಾಗದ ಎಡಮೂಲೆಯಲ್ಲಿ "ಅಕೌಂಟ್ ಪೇ" ಎಂದು ನಮೂದಿಸಿ, ನಿಮ್ಮ ವಿಳಾಸದ ಪತ್ರದೊಂದಿಗೆ ಕಳುಹಿಸಿ. **ಬೆಂಗಳೂರಿನ ಹೊರಗಡೆಯ ಚೆಕ್ಕುಗಳಾಗಿದ್ದಲ್ಲಿ ಬ್ಯಾಂಕಿನ ಸೇವಾಶುಲ್ಕ ೩೦/- ರೂ.ಗಳನ್ನು** ಚಂದಾ ಹಣದ ಮೊತ್ತದಲ್ಲಿ ಸೇರಿಸಿ ಕಳುಹಿಸಿ ಕೊಡಬೇಕು.

– ಎಂ.ಓ ಮಾಡುವವರು ನಿಮ್ಮ ವಿಳಾಸವನ್ನು ಎಂ.ಓ ಅರ್ಜಿಯ ಮೇಲ್ಭಾಗದಲ್ಲಿರುವ ಸಂದೇಶ ಎಂಬ ಸ್ಥಳದಲ್ಲಿ ತಪ್ಪದೇ ನಿಮ್ಮ ವಿಳಾಸ ಬರೆಯಿರಿ. ಇ.ಎಂ.ಓ ಮಾಡಿದ್ದಲ್ಲಿ ಎರಡುದಿನಗಳ ನಂತರ ಕರೆಮಾಡಿ ನಿಮ್ಮ ವಿಳಾಸವನ್ನು ನಮಗೆ ತಿಳಿಸಿ.

– ಇಲ್ಲವಾದಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಅಪೆಕ್ಸ್ ಬ್ಯಾಂಕಿನ ಪ್ರಧಾನ ಶಾಖೆಯಲ್ಲಿರುವ "EDITOR, ITIHASA DARPANA" ಹೆಸರಿನ ಚಾಲ್ತಿಖಾತೆ **ಸಂ: 101 882 ಕ್ಕೆ** ಚಂದಾಹಣವನ್ನು ನಿಮ್ಮ ಹೆಸರಿನಲ್ಲಿ ಜಮಾ ಮಾಡಿ, ಸ್ವೀಕೃತಿಯ ನಕಲನ್ನು, ನಿಮ್ಮ ವಿಳಾಸದ ಪತ್ರದೊಂದಿಗೆ ನಮಗೆ ಕಳುಹಿಸಿಕೊಡಿ.

ಚಂದಾ ವಿವರ

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೩೦೦/- ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ** – ೫೦೦/-ರೂ.ಗಳು)

ದ್ವೈವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) – ೫೦೦/- ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ** – ೯೦೦/-ರೂ.ಗಳು).

ಚಂದಾ ಕಳುಹಿಸಿಕೊಡಬೇಕಾದ ವಿಳಾಸ:

ಸಂಪಾದಕರು, 'ಇತಿಹಾಸ ದರ್ಪಣ',
೩೩ ಎ, ಐ.ಟಿ.ಐ ಕಾಲೇಜು ಹತ್ತಿರ,
ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ,
ಬೆಂಗಳೂರು-೫೬೦೦೯೧.
ಮೊ- ೭೮೨೯೪೦೪೦೬೩.

The Editor, 'Itihasa Darpana'
33 A, Near I.T.I College,
Kempegowda Nagara,
Vishwaneedam-Post,
Bengaluru- 560091.
Mob- 7829404063

ಬೇಲೂರು ಅಪ್ಸರಾ ಶಿಲಾಬಾಲಿಕೆಯರ ಅಧ್ಯಯನಕ್ಕೆ ಸಾಹಿತ್ಯಿಕ ಆಧಾರ

ಬೇಲೂರಿನ ಚನ್ನಕೇಶವ ದೇವಾಲಯದ ಮೇಲೆ ಇರುವ ಗೋಡೆಗಳನ್ನು ಅಪ್ಸರೆಯರಿಂದ ಅಲಂಕರಿಸಿದ ಕ್ಷಣದಿಂದಲೇ ಕಲಾಪ್ರೇಮಿಗಳಿಗೆ ಆ ಅಪ್ಸರೆಯರು ಪ್ರೇರಕ ಶಕ್ತಿಗಳಾಗಿದ್ದಾರೆ. ಇಂದಿಗೂ ನರ್ತಕಿಯರು ಅಪ್ಸರೆಯರ ನೃತ್ಯಭಂಗಿಗಳನ್ನು ತಮ್ಮ ನೃತ್ಯ ಪ್ರದರ್ಶನಗಳಲ್ಲಿ ಅನುಕರಿಸಲು ಪ್ರಯತ್ನಿಸುತ್ತಾರೆ. ಶಿಲ್ಪಿಗಳು ಮರ, ಕಲ್ಲು, ಲೋಹಗಳಲ್ಲಿ ಅಪ್ಸರೆಯರ ಶಿಲ್ಪಗಳ ಪ್ರತಿಕೃತಿಗಳನ್ನೂ ಮತ್ತು ಕಲಾವಿದರು ಕಾಗದದ ಮೇಲೆ ಅಪ್ಸರೆಯರ ರೇಖಾ ಹಾಗೂ ವರ್ಣ ಚಿತ್ರಗಳನ್ನು ಚಿತ್ರಿಸುತ್ತಲೇ ಇದ್ದಾರೆ. ಕವಿಗಳು ತಮ್ಮ ಕಲ್ಪನೆಯ ಆಧಾರದಿಂದ ಅಪ್ಸರೆಯರ ಸೌಂದರ್ಯ ಮತ್ತು ಅವರ ಸಂಗೀತ ನೃತ್ಯಗಳ ಬಗ್ಗೆ ಅನೇಕ ಕವಿತೆಗಳನ್ನು ಹಾಗೂ ಲೇಖನಗಳನ್ನು ಪ್ರಕಟಿಸುತ್ತಲೇ ಇದ್ದಾರೆ. ಬೇಲೂರು ದೇವಾಲಯದ ಕಂಬಗಳ ತುದಿಭಾಗದಲ್ಲಿ – ಬೋಧಿಗೆಗಳ ಮುಂಭಾಗದಲ್ಲಿ ಇರುವುದರಿಂದ ಅವು ತುಂಬಾ ಎತ್ತರದ ನೆಲೆಯಲ್ಲಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ದೀರ್ಘ ವೃತ್ತಾಕಾರದ ಪದ್ಮಪೀಠದ ಮೇಲಿರುವ ದಿವ್ಯಾಂಗನೆಯರ ವಿಗ್ರಹಗಳು ಗಂಧರ್ವ ಕಲೆಗಳನ್ನು ಪ್ರದರ್ಶಿಸುತ್ತಿರುವುದರಿಂದ ಇವನ್ನು ಅಪ್ಸರಾ ಶಿಲ್ಪಗಳು ಎಂದು ಸಂಬೋಧಿಸಲಾಗಿದೆ. ಪದ್ಮಪೀಠದ ಮೇಲಿರುವ ಶಿಲಾಬಾಲಿಕೆಯನ್ನು ಅಪ್ಸರೆ, ಮದನಿಕೆ, ಶಿಲಾಪುತ್ಥಳಿ ಹೀಗೆ ಅನೇಕ ರೀತಿಗಳಲ್ಲಿ ಸಂಬೋಧಿಸುತ್ತಾರೆ.

ೇಖಾರಾವ್
ಇತಿಹಾಸ ಮತ್ತು ಪುರಾತತ್ತ್ವ
ಂಶೋಧಕರು
ekhasubbarao@gmail.com

ಅಪ್ಸರೆಯರ ರೂಪದಲ್ಲಿರುವ ಶಿಲಾಬಾಲಿಕೆಯರ ಪ್ರತಿಮೆಗಳು ಕೆಲವು ಶುದ್ಧ ನೃತ್ಯ ಮತ್ತು ಸಂಗೀತಕ್ಕೆ ಸಂಬಂಧ ಪಟ್ಟಿದ್ದರೆ, ಇನ್ನೂ ಕೆಲವು ಸಾಮಾಜಿಕ ಚಿತ್ರಣಗಳಿಗೆ ಸಂಬಂಧ ಪಟ್ಟಿವೆ. ಸಾಮಾಜಿಕ ಚಿತ್ರಣಗಳಿಗೆ ನೃತ್ಯಭಂಗಿಗಳನ್ನು ಆರಿಸಿಕೊಂಡಿರುವುದೇಕೆ ಎಂಬ ಸಮಸ್ಯೆ ನಮ್ಮ ಮುಂದೆ ಎದ್ದು ನಿಲ್ಲುತ್ತದೆ. ದೇವಾಲಯದ ನಿರ್ಮಾತೃ ಮತ್ತು ಶಿಲ್ಪಿ ಇಬ್ಬರೂ ನಾಟ್ಯಶಾಸ್ತ್ರದ ನಿಕಟ ಪರಿಚಯವನ್ನು ಹೊಂದಿದ್ದು ಸಂಗೀತ–ನೃತ್ಯಗಳ ಒಳಸುಳಿಗಳನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡಿದ್ದವರು ಎಂಬ ಅಂಶವು ಈ ಪ್ರಶ್ನೆಗೆ ಉತ್ತರವಾಗಿ ಕಾಣಿಸುತ್ತದೆ. ನಾಟ್ಯಶಾಸ್ತ್ರವನ್ನು ಸೂತ್ರವನ್ನಾಗಿ ಬಳಸಿಕೊಂಡು ಕಲಾಕ್ಷೇತ್ರದ ಮತ್ತು ಆಧ್ಯಾತ್ಮಿಕ ವಿವರಗಳನ್ನು ತಮ್ಮ ಯೋಚನಾ ಮೂಸೆಯಲ್ಲಿ ತುಂಬಿಕೊಂಡು ಅದಕ್ಕೆ ಅಭಿವ್ಯಕ್ತಿಯನ್ನು ಕೊಡುವ ಪ್ರಯತ್ನವನ್ನು ಶಿಲ್ಪಿಗಳು ಮಾಡಿದ್ದರ ಫಲವೇ ಈ ಅಮರ ಶಿಲ್ಪಗಳಾಗಿ ಅರಳಿ ಬಂದಂತೆ ಕಾಣುತ್ತದೆ. ಇದಕ್ಕೆ ಆಧಾರವಾಗಿ ನಿಂತಿದ್ದು ಅವರ ಶಾಸ್ತ್ರಜ್ಞಾನ. ಈ ಬುನಾದಿಯ ಮೇಲೆ ಅವರಲ್ಲಿ ಉದ್ಭವವಾದ ಸಾಮಾಜಿಕ, ಪೌರಾಣಿಕ ಮತ್ತು ತಾತ್ತ್ವಿಕ ವಿವರಗಳೇ ವಿನ್ಯಾಸಗಳಾಗಿ ರೂಪಿತಗೊಂಡಿವೆ. ನಾಟ್ಯಶಾಸ್ತ್ರದ ಪ್ರಭಾವವು ದೇವತೆಗಳನ್ನು, ಪೌರಾಣಿಕ ವ್ಯಕ್ತಿಗಳನ್ನು, ಅಪ್ಸರೆಯರನ್ನು ನೃತ್ಯಭಂಗಿಯಲ್ಲಿ ಬಿಂಬಿಸುವುದರಲ್ಲಿ ಕಾಣಬರುತ್ತದೆ. ನೃತ್ಯಭಂಗಿಗಳು ಆ ಪ್ರತಿಮೆಗಳ ಭಾವ ವಿನ್ಯಾಸಗಳಲ್ಲಿ ಕಾಣಿಸುತ್ತದೆ. ಶಿಲಾಬಾಲಿಕೆಯರ ಬಿಲ್ಲುಗಾರಿಕೆಯ ಆಸಕ್ತಿಯಂತಹ ಸಾಮಾಜಿಕ ಸಂಗತಿ, ಆಕೆಯ ಸಂತೋಷಾನುಭವದ ಕ್ಷಣ, ನೃತ್ಯ ಭಂಗಿಯ ಮೂಲಕವೇ ಬಿಂಬಿತವಾಗಿದೆ. ಆಕೆಯ ಪಾದದ ಒನಪು, ಕಾಲಿನ ಒಯ್ಯಾರ, ತೋಳಿನ ಭಂಗಿ, ಹಸ್ತದಲ್ಲಿರುವ ಮುದ್ರೆ, ಮುಖ ಮುದ್ರೆ, ಆಕೆಯ ವಸ್ತ್ರಧಾರಣೆ ಇವುಗಳೆಲ್ಲವೂ ನಾಟ್ಯಶಾಸ್ತ್ರದ ವಿವರಗಳ ಅನುಸಾರವಾಗಿಯೇ ವಿನ್ಯಾಸಗೊಂಡಿವೆ.

ಬೇಲೂರಿನ 42 ಶಿಲಾಬಾಲಿಕೆಯರ ಅಧ್ಯಯನವನ್ನು ಅದರ ಚಾರಿತ್ರಿಕ ಹಾಗೂ ಸಾಮಾಜಿಕ ವಿಶ್ಲೇಷಣೆ, ಹೊರ ನೋಟಕ್ಕೆ ಕಂಡು ಬರುವ ನೃತ್ಯಭಂಗಿಗಳು ಮತ್ತು ಒಳನೋಟಕ್ಕೆ ಕಂಡು ಬರುವ ಆಧ್ಯಾತ್ಮಿಕ ವಿಚಾರಗಳನ್ನು ಮೂರು ಗ್ರಂಥಗಳ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ. ಅವುಗಳು ಯಾವುವೆಂದರೆ: **ಮಾನಸೋಲ್ಲಾಸ, ನಾಟ್ಯಶಾಸ್ತ್ರ** ಮತ್ತು **ಶ್ರೀಮದ್ಭಗವದ್ಗೀತೆ**.

1. **ಮಾನಸೋಲ್ಲಾಸದ** ಗ್ರಂಥ ವಿವರಣೆಯನ್ನು ಆಧಾರವನ್ನಾಗಿರಿಸಿಕೊಂಡು ಅಪ್ಸರೆಯರನ್ನು ಪರಿಶೀಲಿಸಿದಾಗ ಚಾಲುಕ್ಯ ಮತ್ತು ಹೊಯ್ಸಳ ರಾಜರ ರಾಣಿಯರನ್ನು ಈ ಶಿಲ್ಪಗಳ ಮೂಲಕವಾಗಿ ರಾಣಿಯರ ಜೀವನ ಶೈಲಿಯನ್ನು ಚಿತ್ರಿಸುವ ಪ್ರಯತ್ನ ನಡೆದಿದೆ. ಅದಕ್ಕಾಗಿ ಅವರ ಅಂತಸ್ತು, ಕೌಶಲ್ಯ, ಲಲಿತಕಲೆಗಳಲ್ಲಿ ಅವರ ಆಸಕ್ತಿ ಅವರ ಹವ್ಯಾಸಗಳು ಮುಂತಾದವುಗಳನ್ನು ಈ ಚಿತ್ರಗಳಲ್ಲಿ ಚಿತ್ರಿಸಲಾಗಿದೆ.
2. **ನಾಟ್ಯಶಾಸ್ತ್ರದ** ಆಧಾರದಿಂದ ಅಪ್ಸರೆಯರನ್ನು ಪರಿಶೀಲಿಸಿದಾಗ ಅವರ ನೃತ್ಯಭಂಗಿಗಳು ಹಾಗೂ ಭಾವಗಳು ನಾಟ್ಯಶಾಸ್ತ್ರದಲ್ಲಿ ಹೇಳಿರುವ ವಿವರಗಳೊಂದಿಗೆ ತಾಳೆಯಾಗುತ್ತವೆ. ಅವರ ವಸ್ತ್ರಾಲಂಕಾರ ಆಭರಣಗಳು, ಅವರು ಬಳಸುತ್ತಿದ್ದ ವಸ್ತುಗಳು ಮತ್ತು ಅವರ ಅನುಚರರು ಇವೆಲ್ಲವೂ ಅವರ ಅಭಿನಯಕ್ಕೆ ಪೂರಕವಾಗಿವೆ ಎಂಬುದು ಖಚಿತವಾಗುತ್ತದೆ.
3. ಅಪ್ಸರೆಯರ ಅಂತರಂಗವನ್ನು ಪ್ರವೇಶಿಸಿ ಅವರ ಆಧ್ಯಾತ್ಮಿಕ ಜಗತ್ತನ್ನು ಅರಿಯಲು ಪ್ರಯತ್ನಿಸಿದಾಗ ಅವರ ಮನದ ಹಲವು ಸ್ತರಗಳನ್ನು ಹಾಗೂ ನಾದಯೋಗದಲ್ಲಿರುವ ಶಿಲ್ಪಗಳಾಗಿ ತೋರುವುದನ್ನು ನಾವು ಗುರುತಿಸುವುದು ಸಾಧ್ಯವಿದೆ.

ಈ ಲೇಖನದಲ್ಲಿ ಚಾರಿತ್ರಿಕ ಹಾಗೂ ಸಾಮಾಜಿಕ ವಿಚಾರಗಳ ವಿಶ್ಲೇಷಣೆಯನ್ನು **ಮಾನಸೋಲ್ಲಾಸದ** ಕೆಲವು ಭಾಗಗಳಲ್ಲಿರುವಂತೆ ಪ್ರಸ್ತುತ ಪಡಿಸಲಾಗಿದೆ.

ಸಾಹಿತ್ಯಿಕ ಆಧಾರ : ಮಾನಸೋಲ್ಲಾಸ

ಚಾಲುಕ್ಯರ ವಿಕ್ರಮಾದಿತ್ಯನ ಮಗನಾದ ಮೂರನೆಯ ಸೋಮೇಶ್ವರನು ಕ್ರಿ.ಶ. 1128 ರಿಂದ 1136ರ ಮಧ್ಯೆ ಸಂಪಾದಿಸಿರುವ **ಮಾನಸೋಲ್ಲಾಸವು** ಆ ಕಾಲದ ರಾಜಕೀಯ, ಸಾಮಾಜಿಕ ಮತ್ತು ಮತೀಯ ಆಚಾರಗಳ, ಪದ್ಧತಿಗಳ ಬಗ್ಗೆ ಸಂಕಲಿತವಾಗಿರುವ ಬೃಹತ್ ವಿಶ್ವಕೋಶ. ಈ ಸಂಕಲನಕ್ಕೆ **ಅಭಿಲಷಿತಾರ್ಥ ಚಿಂತಾಮಣಿ** ಎಂಬ ಇನ್ನೊಂದು ಹೆಸರೂ ಇದೆ. ಅಭಿಲಷಿತಾರ್ಥ ಎಂದರೆ ಬಯಸಿದ್ದನ್ನೆಲ್ಲಾ ನೀಡುವಂತಹ ಚಿಂತಾಮಣಿ ಎಂದರೆ ಅನರ್ಘ್ಯವಾದ ರತ್ನ ಎಂಬುದು ಇದರ ಅರ್ಥ. ಈ ವಿಶ್ವಕೋಶವು ಓದುಗ ಬಯಸುವ ಎಲ್ಲಾ ವಿಷಯಗಳ ಬಗ್ಗೆಯೂ ಸಕಲ ವಿವರಗಳನ್ನೂ ಕೊಡುತ್ತದೆ ಎಂಬುದನ್ನು ಸೂಚಿಸಲು ಸಂಪಾದಕನು ಈ ಶೀರ್ಷಿಕೆಯನ್ನು ಕೊಟ್ಟಿದ್ದಾನೆ. ಒಂದು ವಿಂಶತಿಯು ಇಪ್ಪತ್ತು ಅಧ್ಯಾಯಗಳಾಗಿ ವಿಭಜಿತವಾಗಿದ್ದು ಅಂತಹ ಐದು ವಿಂಶತಿಗಳನ್ನು ಹೊಂದಿರುವ ಬೃಹತ್ ಕೃತಿ. ಆ ಕಾಲದಲ್ಲಿ ರೂಢಿಯಲ್ಲಿದ್ದ ಮನರಂಜನೆಗಳು, ಆಟಗಳು ಮುಂತಾದವುಗಳ ವಿವರಗಳೊಂದಿಗೆ ಧಾರ್ಮಿಕ ಮತ್ತು ಸಾಮಾಜಿಕ ಪದ್ಧತಿಗಳು, ಉಡುಪುಗಳು, ಆಭರಣಗಳು ಇತ್ಯಾದಿಗಳ ಸಂಬಂಧದಲ್ಲಿ ಅನೇಕ ವಿವರಣೆಗಳು ಇಲ್ಲಿ ಲಭಿಸುತ್ತದೆ. ಈ ಸಂಗ್ರಹದಲ್ಲಿ ಚಾಲುಕ್ಯ, ಹೊಯ್ಸಳ, ಕಲಚೂರಿ, ಯಾದವ ವಂಶೀಯರಾಗಿದ್ದು ದಖ್ಖನ್ ಪ್ರಸ್ಥಭೂಮಿಯನ್ನು 11ನೆಯ ಶತಮಾನದಿಂದ 13ನೆಯ ಶತಮಾನದವರೆವಿಗೂ ಆಳಿದವರ ಜೀವನ ಪದ್ಧತಿಯ ಚಿತ್ರಣವನ್ನು ಇಲ್ಲಿ ದಾಖಲಿಸಿದೆ ಎಂಬುದನ್ನೂ ನಾವು ಗಮನಿಸಬೇಕು. ಆದ್ದರಿಂದ ಈ ಕೃತಿಯ ಸಂಗ್ರಹ ಕಾಲವಾಗಿರುವ ಕ್ರಿ.ಶ. 1126–1138 ಮತ್ತು ಅದರ ಹಿಂದಿನ ಹಾಗೂ ಮುಂದಿನ ಒಂದು ಶತಮಾನದ ಸೂಚಿಯಾಗಿದೆ.

ಮಾನಸೋಲ್ಲಾಸದ ಐದನೆಯ ವಿಂಶತಿಯಲ್ಲಿ ರಾಜವಂಶದ ಸ್ತ್ರೀಯರು ತೊಡಗಿಸಿಕೊಳ್ಳುತ್ತಿದ್ದ ಮನರಂಜನೆಯ ಕ್ರೀಡೆಗಳು, ಅವರ ಉಡುಪುಗಳು, ಅಲಂಕರಣಗಳು, ಅವರ ವರ್ತನೆಗಳು, ಹಾವಭಾವಗಳು ಮುಂತಾದ ಹಲವಾರು ವಿವರಗಳು ಲಭಿಸುತ್ತವೆ. ಇದರ ದೃಶ್ಯರೂಪದ ವಿವರಣೆಯನ್ನು 11, 12, 13ನೆಯ ಶತಮಾನಗಳಲ್ಲಿ ನಿರ್ಮಿತವಾಗಿರುವ ಅಸಂಖ್ಯಾತ ದೇವಾಲಯಗಳಲ್ಲಿ ವಿನ್ಯಾಸವಾಗಿರುವ ಅಪ್ಸರೆಯರ ಪ್ರತಿಮೆಗಳಲ್ಲಿ ನಾವು ಕಾಣಬಹುದು. ಈ ಪ್ರತಿಮೆಗಳಲ್ಲಿ ಕೆಲವು ಬಹು ಒರಟಾಗಿಯೂ, ಇನ್ನು ಕೆಲವು ಬಹು ನಾಜೂಕಾಗಿಯೂ ಇರುವುದು ನಿಜವೇ. **ಮಾನಸೋಲ್ಲಾಸದ** ರಚನಾ ಕಾಲಕ್ಕೆ ಅತ್ಯಂತ ಸಮೀಪ ಕಾಲದಲ್ಲಿ ನಿರ್ಮಿತವಾಗಿರುವ ಬೇಲೂರಿನ ಚೆನ್ನಕೇಶವ ದೇವಾಲಯದ ಅಪ್ಸರೆಯರು ಸಮಕಾಲೀನ ಸಾಮಾಜಿಕ ಜೀವನ ಪದ್ಧತಿಗಳನ್ನು ಸಂಕೇತಿಸುವುದರಿಂದ ಅಪ್ಸರೆಯರಲ್ಲಿ ಆ ಕಾಲದ ಸಮಾಜವು ಹುದುಗಿರುವುದನ್ನು **ಮಾನಸೋಲ್ಲಾಸದ** ನಾಲ್ಕು ಮತ್ತು ಐದನೆಯ ವಿಂಶತಿಗಳ ಹಿನ್ನೆಲೆಗಳಲ್ಲಿ ನೋಡಲು ಪ್ರಯತ್ನಿಸುವವರಿಗೆ ಸುಲಭವಾಗಿ ತೆರೆದುಕೊಳ್ಳುತ್ತದೆ. ದೇವಾಲಯದ ಹೊರವಲಯದ ಭಿತ್ತಿಗಳಲ್ಲಿ ಶ್ರೀಸಾಮಾನ್ಯರ ಜೀವನಕ್ರಮಗಳು, ಅವುಗಳಲ್ಲಿಯ ಭಿನ್ನ ಸ್ತರಗಳು ಕಿರುಚಿತ್ರಗಳಾಗಿ ಚಿತ್ರವಾಗಿರುವುದು ಕಾಣಿಸುತ್ತದೆ. ಸೇವಕರೊಂದಿಗೆ ಮತ್ತು ಪ್ರತ್ಯೇಕ ವೈಯಕ್ತಿಕ ಶಿಲ್ಪಗಳಾಗಿ ಎದ್ದು ನಿಲ್ಲುವ ಅಪ್ಸರೆಯರು ಶ್ರೀಸಾಮಾನ್ಯರಿಗಿಂತಲೂ ಭಿನ್ನವಾಗಿ, ರಾಜಮನೆತನಕ್ಕೆ ಸೇರಿರುವ ಮತ್ತು ವಿಶೇಷವಾದ ಪೋಷಣಾಕ್ರಮವನ್ನು, ಬೌದ್ಧಿಕ ಹಿನ್ನೆಲೆಯನ್ನು ಈ ಅಪ್ಸರೆಯರು ಹೊಂದಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದ್ದರಿಂದಲೇ ಈ ಅಪ್ಸರೆಯರನ್ನು ಪ್ರತ್ಯೇಕವಾಗಿ ವಿಶೇಷವಾಗಿ ಸ್ತರದಲ್ಲಿ ರೂಪಿಸಿದ್ದಾರೆ ಎಂದು ಭಾಸವಾಗುತ್ತದೆ.



ಚಿತ್ರ 1. ಬಿಲ್ವಿದ್ಯಾ ಪ್ರವೀಣೆ



ಚಿತ್ರ 2. ದೀಪ ಮೃಗದೊಡನೆ ಬೇಟೆಯಲ್ಲಿ ತೊಡಗಿರುವ ಶಿಲಾ ಬಾಲಕೆ



ಚಿತ್ರ 3. ದೀಪ ಮೃಗವನ್ನು ಹಿಡಿದಿರುವ ಸಖಿ – ಶಿಲ್ಪಿನಿ



ಚಿತ್ರ 4. ಪಾನೀಯಜ – ಬೇಟೆಯಾಟ



ಚಿತ್ರ 5



ಚಿತ್ರ 6

ವನ ಕ್ರೀಡೆಯಲ್ಲಿ ತೊಡಗಿರುವ ಅಪ್ಸರೆಯರು



ಚಿತ್ರ 7. ವನ ಕ್ರೀಡೆಯಲ್ಲಿ ತೊಡಗಿರುವ ಅಪ್ಸರೆ



ಚಿತ್ರ 8. ಜಲ ಕ್ರೀಡೆಯಲ್ಲಿ ಅಪ್ಸರೆ



ಚಿತ್ರ 9. ಶಿಖಾಜಾಲದ ಸೊಬಗನ್ನು ಪ್ರದರ್ಶಿಸುತ್ತಿರುವ ಅಪ್ಸರೆ



ಚಿತ್ರ 10. ಸಂದೇಶ ವಾಹಕ ಪಕ್ಷಿಯೊಡನೆ ಅಪ್ಸರೆ



ಚಿತ್ರ 11. ತನ್ನ ಆಪ್ತ ಅರಗಿಳಿಯೊಂದಿಗೆ
ಸಂಭಾಷಿಸುತ್ತಿರುವ ಅಪ್ಸರೆ



ಚಿತ್ರ 12. ಅಪ್ಸರೆಯ ಕಂಠೀಹಾರದೊಡನೆ
ಆಟವಾಡುತ್ತಿರುವ ಆಪ್ತ ಪಕ್ಷಿ





ತ್ರ 13. ಸಾಕುಪ್ರಾಣಿ ವಾನರನನ್ನು ಎತ್ತಿಕೊಂಡಿರುವ ಸಖಿ (ಬಲಗಡೆಯ ಕುಬ್ಜ ವಿಗ್ರಹ)

ಚಿತ್ರ 14. ವಾನರನನ್ನು ಪ್ರತಿಭಟಿಸುತ್ತಿರುವ ಅಪ್ಸರೆ.



ಚಿತ್ರ 15.



ಚಿತ್ರ 16.

ಸಂಗೀತ ವಾದ್ಯಗಳನ್ನು ನುಡಿಸುತ್ತಿರುವ ಅಪ್ಸರೆ





ಚಿತ್ರ 17. ಚಿತ್ರ 18.

ಸಂಗೀತ ವಾದ್ಯಗಳನ್ನು ನುಡಿಸುತ್ತಿರುವ ಅಪ್ಸರೆ



ಚಿತ್ರ 19. ಭೈರವಿಯ ರೂಪದಲ್ಲಿರುವ ಅಪ್ಸರೆ



ಚಿತ್ರ 20. ಸ್ವಾಧ್ಯಾಯದಲ್ಲಿ ನಿರತಳಾಗಿರುವ ಅಪ್ಸರೆ

ಚಾಲುಕ್ಯ ಮತ್ತು ಹೊಯ್ಸಳ ರಾಜರು ಶ್ರೀಮಂತಿಕೆಯಲ್ಲಿ ಸಮೃದ್ಧರಾಗಿದ್ದರು. ಅವರ ರಾಣಿಯರೂ ಕೂಡ ಶ್ರೀಮಂತ ಮನೆತನಗಳಿಂದ ಬಂದವರಾಗಿದ್ದರು. ಆದ್ದರಿಂದ ಅವರು ಸಂಗೀತ, ನೃತ್ಯ, ಅಭಿನಯ, ಸಾಹಿತ್ಯ ಮುಂತಾದ ಲಲಿತಕಲೆಗಳಲ್ಲಿ ತರಬೇತಿಯನ್ನು ಹೊಂದಿರುತ್ತಿದ್ದರು. ಹೆಂಗಸರು ಗೋಷ್ಠಿಗಳಲ್ಲಿ, ಚರ್ಚೆಗಳಲ್ಲಿ ಭಾಗವಹಿಸುವುದರೊಂದಿಗೆ ಸಾಹಸ ಕ್ರೀಡೆಗಳಲ್ಲೂ ಭಾಗವಹಿಸುತ್ತಿದ್ದರು. ಚಾಲುಕ್ಯರ ಎರಡನೆಯ ಸೋಮೇಶ್ವರ ಮುಂತಾದ ರಾಜರು ಕಲಾ, ಸಾಹಿತ್ಯಗಳಲ್ಲಿ ವಿದ್ವಾಂಸರಾಗಿದ್ದಂತೆಯೇ ನಾಟ್ಯ–ಸಂಗೀತ, ಸಾಹಿತ್ಯಗಳಲ್ಲಿ ಪರಿಣತಿಯನ್ನು ಗಳಿಸಿದ್ದು, ಇವುಗಳ ಅಂತರಂಗ ರಹಸ್ಯಗಳನ್ನೂ ಅರಿತಿದ್ದರು. ಬೇಲೂರು ಚೆನ್ನಕೇಶವ ದೇವಾಲಯವು ಕ್ರಿ.ಶ. 1117ರಲ್ಲಿ ನಿರ್ಮಿತವಾದರೆ, ಎರಡನೆಯ ಸೋಮೇಶ್ವರನು **ಮಾನಸೋಲ್ಲಾಸ**ವನ್ನು ಸಂಗ್ರಹಿಸಿದ್ದು ಕ್ರಿ.ಶ. 1126ರಲ್ಲಿ. ಒಂಬತ್ತು ವರ್ಷಗಳ ಅಂತರವು ಬಹಳ ದೊಡ್ಡದೆಂದು ಭಾವಿಸಬಹುದಾದಂತಹುದಲ್ಲ. ಅದೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಪರಿಗಣಿಸುವಾಗ ಎರಡರ ಕಾಲವೂ ಒಂದೇ ಎಂದು ಪರಿಭಾವಿಸುವುದರಲ್ಲಿ ತಪ್ಪೇನೂ ಇಲ್ಲ. ಆದ್ದರಿಂದ ಇವೆರಡನ್ನೂ ಎರಡು ರಾಜವಂಶಗಳಲ್ಲಿ ಸಮಾನಾಂತರವಾಗಿ ಹೊಮ್ಮಿರುವ ಸಾಮಾಜಿಕ ಮತ್ತು ಕಲಾರಂಗದ ಚಿಂತನಾಭಿವ್ಯಕ್ತಿಯ ಫಲಗಳು ಎಂಬುದಾಗಿ ನಾವು ಪರಿಗಣಿಸಬಹುದು. ಹೊಯ್ಸಳರು ಚಾಲುಕ್ಯರ ಸಾಮಂತರಾಗಿದ್ದರು ಎಂಬುದನ್ನೂ ನಾವು ಪರಿಗಣಿಸಿದರೆ ಇವರ ಮಧ್ಯೆ ಪರಸ್ಪರ ಸಂಬಂಧದ ಕೊಂಡಿಗಳನ್ನು ನಾವು ಗುರ್ತಿಸಬಹುದು.

ಹೊಯ್ಸಳರ ರಾಣಿಯರು ಋತುಮಾನವನ್ನು ವಾತಾವರಣವನ್ನು ಅನುಸರಿಸಿ ಅರಮನೆಯ ಒಳಾಂಗಣ ಅಥವಾ ಹೊರಾಂಗಣ ಕ್ರೀಡಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಳ್ಳುತ್ತಿದ್ದರು. ಅಪ್ಸರೆಯರ ಚಟುವಟಿಕೆಗಳು ತದನುಸಾರವಾಗಿಯೇ ವಿನ್ಯಾಸಗೊಂಡಿವೆ.

1. **ಬಿಲ್ಲುವಿದ್ಯೆ:** ಹೊರಾಂಗಣ ಕ್ರೀಡೆಯಾದ ಬಿಲ್ಲುಗಾರಿಕೆಯಲ್ಲಿ ಸ್ತ್ರೀಯರು ಬಹುವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಈ ಕ್ರೀಡೆಯ ಬಗ್ಗೆ **ಮಾನಸೋಲ್ಲಾಸ** ಅನೇಕ ವಿವರಗಳನ್ನು ಹೇಳಿದೆ. ವೀರ ಭಾವವನ್ನು ತುಂಬುವ ಮತ್ತು ವೀರರ ಕ್ರೀಡೆ ಎಂದು ಪರಿಗಣಿತವಾಗಿರುವ ಬಿಲ್ಲಿನ ಕ್ರೀಡೆಯಲ್ಲಿ ಸ್ತ್ರೀಯರು ವಿಶೇಷ ಪರಿಣತಿಯನ್ನು ಪಡೆದಿರುತ್ತಿದ್ದರು. ಯುದ್ಧದಲ್ಲಿ ಭಾಗವಹಿಸುವವರಿಗೆ ಬಿಲ್ಲುವಿದ್ಯೆಯ ಪರಿಣತಿಯು ಇರಬೇಕಾದದ್ದು ಅನಿವಾರ್ಯವಾಗಿತ್ತು. ರಾಜಮನೆತನಗಳಿಗೆ ಸೇರಿದ ಮಹಿಳೆಯರು ಧನುರ್ ವಿದ್ಯಾ ಪ್ರದರ್ಶನ ಮತ್ತು ಸ್ಪರ್ಧೆಗಳಲ್ಲಿ ರಾಜ ಅಥವಾ ರಾಜಕುಮಾರರೊಂದಿಗೆ ಭಾಗವಹಿಸುತ್ತಿದ್ದರು. ಆದ್ದರಿಂದ ಮಹಿಳೆಯರೂ ಬಿಲ್ಲುವಿದ್ಯೆಯಲ್ಲಿ ಪರಿಣತಿಯನ್ನು ಗಳಿಸಲು ಅಭ್ಯಾಸವನ್ನು ನಿರಂತರವಾಗಿ ಮಾಡುತ್ತಿದ್ದರು. ಚಾಲುಕ್ಯ ಮತ್ತು ಹೊಯ್ಸಳರ ಕಾಲದ ಶಿಲ್ಪಿಗಳು ಬಿಲ್ಲು ಹಿಡಿದಿರುವ ಅಥವಾ ಬಾಣವನ್ನು ಹೂಡಿರುವ ಮಹಿಳೆಯನ್ನು ಶಿಲ್ಪದಲ್ಲಿ ರೂಪಿಸಿರುವುದು ತೀರಾ ಸಾಮಾನ್ಯವಾಗಿ ಕಾಣಬರುತ್ತದೆ. ಗುರಿಯತ್ತ ಬಾಣ ಹೂಡಿರುವುದು, ಎತ್ತರದಿಂದ ಬಾಣ ಬಿಡಲು ಸಿದ್ಧವಾಗಿರುವುದು ಮುಂತಾದ ಸ್ತ್ರೀ ಶಿಲ್ಪಗಳ ನಿರ್ಮಾಣಕ್ಕೆ ಕಾರಣವಾಗಿರುವುದು ಆ ಕಾಲದಲ್ಲಿ ವ್ಯಾಪಕವಾಗಿದ್ದ ರೂಢಿಯೇ ಬೇಲೂರಿನ ದೇವಾಲಯದಲ್ಲಿರುವ ಅಪ್ಸರೆಯೊಬ್ಬಳು ಬಾಣವನ್ನು ಹಕ್ಕಿಯತ್ತ ಹೂಡಿ ಗುರಿ ಇರಿಸಿರುವುದು ಸ್ತ್ರೀಯರಿಗೆ ಬಿಲ್ಲುವಿದ್ಯೆಯಲ್ಲಿದ್ದ ಆಸಕ್ತಿಯ ದ್ಯೋತಕವಾಗಿದೆ. ಈ ಹೆಣ್ಣಿಗೆ ಬಾಣಗಳನ್ನು ಒದಗಿಸಲು ನೆರವಿನ ಆಳೂ ಇರುವುದರ ಚಿತ್ರಣವಿದೆ (ಚಿತ್ರ 1).

2. ಬೇಟೆ: ಮಳೆಗಾಲದಲ್ಲಿ ಅರಮನೆಯವರು 21 ಬಗೆಯ ಬೇಟೆಯ ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ವಿವರಣೆಯು **ಮಾನಸೋಲ್ಲಾಸ**ದ 5ನೆಯ ವಿಂಶತಿಯಲ್ಲಿ 292 ಶ್ಲೋಕಗಳಲ್ಲಿ ವರ್ಣಿತವಾಗಿದೆ. ರಾಜಧಾನಿಗೆ ಅಥವಾ ನಗರಕ್ಕೆ ಹತ್ತಿರವಾಗಿರುವ ರಕ್ಷಿತ ಅರಣ್ಯದಲ್ಲಿ ಅರಮನೆಯ ಜನರು ಬೇಟೆಯನ್ನು ನಡೆಸುತ್ತಿದ್ದರು. ಈ ಅರಣ್ಯದಲ್ಲಿ ಕ್ರೂರ ಮೃಗಗಳು ಇಲ್ಲದೆ ಜಿಂಕೆ, ಸಾಂಬ, ಮೊಲ, ನವಿಲು ಮುಂತಾದ ಪ್ರಾಣಿಗಳು ಮಾತ್ರವೇ ಇರುತ್ತಿದ್ದವು.

ಅರಮನೆಯ ಸ್ತ್ರೀಯರು ಹಸಿರು ಬಣ್ಣದ ಒಳ ಉಡುಪಾದ ದ್ವಿಪದಿ ವಸ್ತ್ರಗಳಲ್ಲಿ ಅಲಂಕೃತರಾಗಿ ರಕ್ಷಿತ ಅರಣ್ಯಗಳಲ್ಲಿ ಬೇಟೆಯಾಟವನ್ನು ನಡೆಸುತ್ತಿದ್ದರು. ಇದನ್ನು **ಮಾನಸೋಲ್ಲಾಸವು** 'ದೀಪ ಮೃಗಯಾ' ಎಂದು ವಿವರಿಸಿದೆ. ಆರೋಗ್ಯದಿಂದಿರುವ ತಾರುಣ್ಯದಲ್ಲಿರುವ ಹೆಣ್ಣು ಜಿಂಕೆಯೊಂದನ್ನು ಬೇಟೆಯನ್ನು ಆಕರ್ಷಿಸುವ ಜೀವಿಯನ್ನಾಗಿ ತರಬೇತಿ ನೀಡಿ ಸಿದ್ಧಪಡಿಸುತ್ತಿದ್ದರು. ಇದನ್ನು ದೀಪ ಮೃಗ ಎಂದು ಕರೆಯುತ್ತಿದ್ದರು. ಸಂಸ್ಕೃತದಲ್ಲಿ ದೀಪಕ ಎಂದರೆ ಯಾವ ಪ್ರಾಣಿಯ ನೆರವಿನಿಂದ ಇತರ ಪ್ರಾಣಿಗಳನ್ನು ಹಿಡಿಯುತ್ತಾರೆಯೋ ಅದು. ಜಿಂಕೆ, ಹಕ್ಕಿ ಮುಂತಾದವನ್ನು ಮೊದಲೇ ಪಳಗಿಸಿದ್ದು ಅದು ಇತರ ಕಾಡುಪ್ರಾಣಿಗಳ ಗುಂಪಿನಲ್ಲಿ ಬೆರೆಯುವಂತೆ ಮಾಡಿ ಗುಂಪಿನಲ್ಲಿ ಅದು ಮಿಳಿತಗೊಂಡ ನಂತರ ಸೂಕ್ತ ಸಮಯದಲ್ಲಿ ಸಂಕೇತ ಶಬ್ದ ನೀಡಿ ಗುಂಪಿನಿಂದ ಪ್ರತ್ಯೇಕವಾಗಿ ಕರೆತಂದ ನಂತರ ಕಾಡುಜಿಂಕೆಗಳ ಬೇಟೆಯಾಡುವುದು ಒಂದು ಪದ್ಧತಿ.

ಅಪ್ಸರೆಯು ಬಾಣವನ್ನು ಪ್ರಯೋಗಿಸಲು ಸಜ್ಜಾಗಿದ್ದಾಳೆ (ಚಿತ್ರ 2). ದೀಪಾ ಮೃಗವನ್ನು ಹಗ್ಗದಲ್ಲಿ ಬಂಧಿಸಿ ಹಿಡಿದಿರುವುದರ ಚಿತ್ರಣವಿದೆ (ಚಿತ್ರ 3). ಅದನ್ನು ಹಿಡಿದಿರುವ ಸಹ ಬೇಟೆಗಾರ್ತಿಯೂ ಚಿತ್ರಿತವಾಗಿದ್ದಾಳೆ. ಬಲಗೈಯಲ್ಲಿ ಬಾಣಗಳನ್ನು ಹಿಡಿದಿದ್ದಾಳೆ. ಕಿರಿಯದಾದ ಹಸಿರು ಬಣ್ಣದ ಪತ್ರಾಕಾರದ ಅಲಂಕಾರದ ದ್ವಿಪದಿಯನ್ನು ಆಕೆ ಧರಿಸಿದ್ದಾಳೆ. ರಾಣಿಯು ಇತರ ಅಲಂಕಾರಗಳೊಂದಿಗೆ ಬ್ರಹ್ಮಸೂತ್ರವನ್ನೂ ಧರಿಸಿದ್ದು, ತನ್ನ ಉತ್ತಮ ಕುಲವನ್ನು ವ್ಯಕ್ತಪಡಿಸುತ್ತಿದ್ದಾಳೆ. ಆದರೆ ಸಹ ಬೇಟೆಗಾರ್ತಿಯು ಈ ರೀತಿಯ ಬ್ರಹ್ಮಸೂತ್ರವನ್ನು ಧರಿಸಿಲ್ಲ ಎಂಬುದನ್ನೂ ಗಮನಿಸಬೇಕು. ಇದರಿಂದ ಆಕೆಯು ರಾಣೀವಾಸದ ಚೇಟಿ ಇರಬಹುದು ಎಂಬ ಊಹೆಗೆ ಅವಕಾಶವಿದೆ.

ಮಾನಸೋಲ್ಲಾಸವು ಪಾನೀಯಜ ಎಂಬ ಇನ್ನೊಂದು ಮೃಗಯಾ ಕ್ರೀಡೆಯನ್ನು ವಿವರಿಸಿದೆ. ಬೆಳದಿಂಗಳ ರಾತ್ರಿಗಳಲ್ಲಿ ರಾಣಿಯು ತನ್ನ ನೆರವಿನವರೊಂದಿಗೆ ಜಲಸಂಗ್ರಹಗಳ ಬಳಿಯ ಮರಗಳ ಗುಂಪುಗಳ ಮಧ್ಯೆ ಅಡಗಿ ಕಾಯುತ್ತಿದ್ದು, ನೀರಿನ ಸಮೀಪದಲ್ಲಿ ನೆನೆಸಿದ ಕಡಲೆ, ಸಸ್ಯಗಳು, ತರಕಾರಿ ಇತ್ಯಾದಿಗಳನ್ನು ಜಿಂಕೆಗಳನ್ನು ಆಕರ್ಷಿಸಲು ಹರಡಿರುತ್ತಾರೆ. ನೀರು ಕುಡಿಯಲೆಂದು ಅಥವಾ ಕಾಳು-ಸೊಪ್ಪು ತಿನ್ನಲೆಂದು ಬಂದ ಜಿಂಕೆಗಳನ್ನು ಬೇಟೆಯಾಡುತ್ತಿದ್ದರು.

ಬಿಲ್ಲು ಮತ್ತು ಬಾಣಗಳೊಂದಿಗೆ ಕಾಯುತ್ತಿರುವ ಅಪ್ಸರೆಯ ಶಿಲ್ಪದಲ್ಲಿ ಬೇಟೆಯ ಬಗ್ಗೆ ಇನ್ನೂ ಕೆಲವು ಹೆಚ್ಚಿನ ವಿವರಗಳನ್ನು ಚಿತ್ರಿಸಲಾಗಿದೆ (ಚಿತ್ರ 4). ಬೇಟೆಯು ತುಂಬಾ ಕಠಿಣವಾದ ಕ್ರೀಡೆ. ಈ ಕ್ರೀಡೆಯಲ್ಲಿ ತೊಡಗಿರುವ ಹೆಂಗಸರಿಗೆ ದೈಹಿಕವಾಗಿ ಆಗುವ ಬಳಲಿಕೆಯೊಂದಿಗೆ ಪೆಟ್ಟುಗಳೂ ಉಂಟಾಗುವುದು ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ ಅವರಿಗೆ ಚಿಕಿತ್ಸೆ ನೀಡುತ್ತಿದ್ದದ್ದೂ ಉಂಟು. ಈ ಅಪ್ಸರೆಯ ಬಲಪಾರ್ಶ್ವದಲ್ಲಿ ಗಾಯಗೊಂಡಿರುವ ಪಾದಕ್ಕೆ ಉಪಚಾರ ಮಾಡುತ್ತಿರುವುದನ್ನು ನಾವು ಕಾಣಬಹುದು. ಬೇಟೆಗೆ ತುತ್ತಾದ ಪ್ರಾಣಿಗಳನ್ನು ಕೊಂಡೊಯ್ಯುವುದೂ ಶ್ರಮದಾಯಕ ಕಾರ್ಯವೇ. ಎಡಪಾರ್ಶ್ವದಲ್ಲಿ ಬೇಟೆಗೆ ಸಿಕ್ಕಿದ ಪ್ರಾಣಿಗಳನ್ನು ಕೊಂಡೊಯ್ಯುತ್ತಿರುವ ದೃಶ್ಯವಿದೆ.

3. ವನಕ್ರೀಡೆ: ಉದ್ಯಾನವನಗಳಲ್ಲಿ ಆಡುವ ಆಟಗಳನ್ನು ವನಕ್ರೀಡೆ ಎಂದು ಹೇಳುತ್ತಾರೆ. ಅರಮನೆಯಿಂದ ಸೂಕ್ತವಾದ ದೂರದಲ್ಲಿರುವ ತೋಟದಲ್ಲಿ ರಾಣೀವಾಸದವರು ಹೇಗೆ ತಮ್ಮ ಆಟಗಳ ಮೂಲಕವಾಗಿ ಸಂತೋಷವಾಗಿರುತ್ತಿದ್ದರು ಎಂಬುದನ್ನು ಸೋಮೇಶ್ವರನು ತನ್ನ ಕೃತಿಯಲ್ಲಿ ವಿವರಿಸಿದ್ದಾನೆ. ತೋಟ(ವನ)ದಲ್ಲಿ ಮಾವು, ಹಲಸು, ದಾಳಿಂಬೆ, ಬಾಳೆ ಮುಂತಾದ ಹಣ್ಣುಗಳನ್ನು ಸುಗಂಧ ಹೊಮ್ಮಿಸುವ ಮಲ್ಲಿಗೆ, ಸಂಪಿಗೆ, ಜಾಜಿ ಮುಂತಾದ ಪುಷ್ಪಗಳ ಗಿಡಗಳನ್ನು ನೆಟ್ಟು ಪೋಷಿಸುತ್ತಿದ್ದರು. ರಾಜನು ತನ್ನ ರಾಣಿವಾಸದಿಂದ ಆಯ್ಕೆಯಾದವರೊಂದಿಗೆ ಬಗೆಬಗೆಯ ಆಟಗಳನ್ನು ಆಡುತ್ತಾ ವಿಹರಿಸುತ್ತಿದ್ದನು. ರಾಣಿವಾಸದವರು ತಮಗೆ ಇಷ್ಟವಾದ ಹಣ್ಣುಗಳನ್ನು ಆಯ್ದು ತಿನ್ನುತ್ತಿದ್ದರು.

ಅಪ್ಸರೆಯೊಬ್ಬಳು ಹಣ್ಣನ್ನು ಕೀಳುತ್ತಿರುವ ಚಿತ್ರಣವಿದೆ (ಚಿತ್ರ 5). ಬರಿಗಾಲಿನಲ್ಲಿ ತೋಟದಲ್ಲಿ ಓಡಾಡುವಾಗ ಅಥವಾ ಕಣ್ಣಾಮುಚ್ಚಾಲೆಯ ಆಟವನ್ನು ಆಡುವಾಗ ಪಾದಗಳಿಗೆ ಗಾಯವಾಗುತ್ತಿತ್ತು. ಅಂತಹವರಿಗೆ ಚಿಕಿತ್ಸೆಯನ್ನು ಅಲ್ಲಿರುತ್ತಿದ್ದ ನೆರವಿನ ಹೆಂಗಸರು ನೀಡುತ್ತಿದ್ದರು. ಕೈಯಲ್ಲಿ ಹರಳು ಕಲ್ಲು ಹಿಡಿದಿರುವ ಅಪ್ಸರೆಯ ಪಾದದಲ್ಲಿ ಆಗಿರುವ ಗಾಯವನ್ನು ಪರೀಕ್ಷಿಸುತ್ತಿರುವ ದೃಶ್ಯವಿದೆ (ಚಿತ್ರ 6). ಈಕೆಯು ಬಳ್ಳಿಯೊಂದನ್ನು ಆಸರೆಯನ್ನಾಗಿ ಮಾಡಿಕೊಂಡು ನಿಂತಿದ್ದಾಳೆ. ವನಗಳಲ್ಲಿ ಈ ರೀತಿಯಾಗಿ ಬಳ್ಳಿಗಳನ್ನೇ ಪಡೆದುಕೊಂಡಿದ್ದ ಲತಾಗೃಹಗಳಿದ್ದವು. ಬಗೆಬಗೆಯ ಪರಿಮಳಗಳನ್ನು ಚೆಲ್ಲುತ್ತಿದ್ದ ಹೂ ಬಳ್ಳಿಗಳನ್ನು ಇಂತಹ ಪರಿಸರಗಳಲ್ಲಿ ಬೆಳೆಯುತ್ತಿದ್ದರು. ವಸಂತಕಾಲದಲ್ಲಿ ರಾಣಿವಾಸದ ಹೆಂಗಳೆಯರು ಹೂಗಳನ್ನು ಮೊಗ್ಗುಗಳನ್ನು ಸಂಗ್ರಹಿಸಿ ಮಾಲೆಗಳನ್ನಾಗಿ ಅಥವಾ ಹೂಗೊಂಚಲುಗಳನ್ನಾಗಿ ಪೋಣಿಸಿ ತಾವೇ ಅಲಂಕರಿಸಿಕೊಳ್ಳುವುದರೊಂದಿಗೆ ರಾಜನನ್ನು ಅಲಂಕರಿಸುತ್ತಿದ್ದರು. ಹೂಗಳಿಂದ ಬಗೆಬಗೆಯ ವಿನ್ಯಾಸಗಳನ್ನು ರೂಪಿಸಿ ಕಿವಿ, ತುರುಬು, ಮುಂಗೈ ಮತ್ತು ಕೊರಳುಗಳಲ್ಲಿ ಅಲಂಕರಿಸಿಕೊಳ್ಳುತ್ತಿದ್ದರು.

ಅಪ್ಸರೆಯೊಬ್ಬಳು ತನ್ನನ್ನು ಹೂಗಳಿಂದ ಅಲಂಕರಿಸಿಕೊಂಡು ಅದು ತನಗೆ ಹೇಗೆ ಹೊಂದಿಕೊಂಡು ತನ್ನ ಸೌಂದರ್ಯವೃದ್ಧಿಗೆ ಕಾರಣವಾಗಿದೆ ಎಂಬುದನ್ನು ಪರಿಶೀಲಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಳೆ. ಕೇಶಾಂತದ ಮಧ್ಯಭಾಗದಲ್ಲೂ ಒಂದು ಹೂ ಮುಡಿದಿದ್ದಾಳೆ. ಬಲಪಾರ್ಶ್ವದ ಚೇಟಿಯು ಇದನ್ನು ಕಂಚಿನ ಕನ್ನಡಿಯಲ್ಲಿ ತೋರಿಸುತ್ತಿದ್ದಾಳೆ. ಎಡಪಾರ್ಶ್ವದಲ್ಲಿರುವಾಕೆಯು ಹೂ ಪೋಣಿಸಿ ಸಿದ್ಧಪಡಿಸಿರುವ ಮಾಲೆಯನ್ನು ಅಪ್ಸರೆಯ ಅಲಂಕರಣಕ್ಕಾಗಿ ಒದಗಿಸುತ್ತಿದ್ದಾಳೆ (ಚಿತ್ರ 7).

ಅಪ್ಸರೆಯು ಹೂವನ್ನು ಕರ್ಣಾಭರಣದೊಂದಿಗೆ ಅಲಂಕರಿಸಿಕೊಳ್ಳುತ್ತಿರುವ ಚಿತ್ರಣವಿದೆ. ಇದರಲ್ಲಿ ಇತರ ವಿವರಗಳು ಸ್ಪಷ್ಟವಾಗಿಲ್ಲವಾದರೂ, ಅಲಂಕರಿಸಿಕೊಳ್ಳುತ್ತಿರುವಾಗ ಅಪ್ಸರೆಯ ಮುಖದಲ್ಲಿರುವ ಗಾಂಭೀರ್ಯ ಭಾವವು ನೋಟಕರನ್ನು ಸೆಳೆದಿರಿಸುವಷ್ಟು ಪ್ರಭಾವಶಾಲಿಯಾಗಿದೆ.

4. ಜಲಕ್ರೀಡೆ: ಬೇಸಿಗೆಯ ಕಾಲದಲ್ಲಿ ಸೂರ್ಯನ ತಾಪವನ್ನು ಪರಿಹರಿಸಲು ಕೃತಕವಾದ ಜಲಾಶಯವನ್ನು ನಿರ್ಮಿಸಿ ಅದರಲ್ಲಿ ಧಾರಾಗೃಹವನ್ನು ನಿರ್ಮಿಸುತ್ತಿದ್ದರು ಅಥವಾ ವಿಶ್ರಾಂತ ಗೃಹದಲ್ಲಿ ಬಗೆಬಗೆಯ ತೆರದಲ್ಲಿ ನೀರಿನ ಧಾರೆಗಳನ್ನು ವಿನ್ಯಾಸ ಮಾಡಿ ಅಲ್ಲಿ ತಂಪು ವಾತಾವರಣವನ್ನು ಸೃಷ್ಟಿ ಮಾಡಿ ಅಲ್ಲಿ ಬೇಸಿಗೆಯಲ್ಲಿ ವಾಸಿಸುತ್ತಿದ್ದರು. ಇಂತಹ ಗೃಹಗಳಲ್ಲಿ ಕೃತಕವಾಗಿ ನಿರ್ಮಿತವಾದ ಯಾಂತ್ರಿಕ ಸಲಕರಣೆಗಳು, ಜಲಪಾತಗಳು, ಬಗೆಬಗೆಯಾದ ಪ್ರಾಣಿಗಳ ಮಾದರಿಗಳಿಂದ ಚಿಮ್ಮುವ ನೀರಿನ ಬುಗ್ಗೆಗಳು, ವಿವಿಧ ಬಗೆಯ ನೀರಿನ ಹರಿವುಗಳನ್ನು ರಾಣೀವಾಸದವರ ವಿನೋದಾರ್ಥವಾಗಿ ಸೃಷ್ಟಿಸಲಾಗುತ್ತಿತ್ತು. ಧಾರಾಗೃಹಕ್ಕೆ

ಬೇಕಾಗಿರುವ ನೀರನ್ನು ಒದಗಿಸಲು ಅವಶ್ಯಕವಾಗಿರುವ ನೀರನ್ನು ಸಂಗ್ರಹಿಸಿಡಲು ಅವಶ್ಯಕವಾದ ಸೋಪಾನಯುಕ್ತ ಜಲಕೂಪಗಳು ಇರುತ್ತಿದ್ದವು. ಜಲಕ್ರೀಡೆ ನಡೆಯುವ ಸ್ಥಳವು ಏಕಾಂತ ಸ್ಥಳವಾಗಿರಲು ಆ ಪ್ರದೇಶವನ್ನು ಮರೆಯಾಗಿರಿಸಲು ಬಳಸುತ್ತಿದ್ದ ವಿವಿಧ ಪರದೆಗಳ ವರ್ಣನೆಯನ್ನು ಸೋಮೇಶ್ವರನು ವಿವರವಾಗಿ ಹೇಳಿದ್ದಾನೆ. ಇಂತಹ ಬಿಸಿಲುಗಾಲದ ಒಂದು ಆಟವು ಸೇಚನಾ ಕ್ರೀಡೆ. ಇದರಲ್ಲಿ ಭಾಗವಹಿಸುತ್ತಿದ್ದ ಹೆಣ್ಣು-ಗಂಡುಗಳಿಬ್ಬರೂ ಪರಸ್ಪರವಾಗಿ ನೀರನ್ನು ಎರಚಿಕೊಳ್ಳುತ್ತಿದ್ದರು. ರಾಜನು ಈ ಕ್ರೀಡೆಯಲ್ಲಿ ಭಾಗವಹಿಸಲು ವಿವಿಧ ರಂಗಗಳ ಗಣ್ಯರನ್ನು ಆಹ್ವಾನಿಸುತ್ತಿದ್ದ ದೊಡ್ಡ ದೊಡ್ಡ ಚಿನ್ನ ಹಾಗೂ ಬೆಳ್ಳಿಯ ಪಾತ್ರೆಗಳಲ್ಲಿ ತಣ್ಣೀರು ಮತ್ತು ಸುಗಂಧಗಳನ್ನು ಸಂಗ್ರಹಿಸಿರುತ್ತಿದ್ದರು. ಹಸುವಿನ ಕೊಂಬಿನಿಂದ ಅಥವಾ ಚಿನ್ನ, ಬೆಳ್ಳಿಗಳಿಂದ ತಯಾರಿಸಿದ ಪಿಚಕಾರಿಗಳಿಂದ ನೀರನ್ನು ಪರಸ್ಪರ ಎರಚಾಡುತ್ತಿದ್ದರು. ಸುಂದರಿಯರು ಯೌವನವತಿಯರು ಆದ ಶ್ವೇತವರ್ಣ ವಸ್ತ್ರ ಧರಿಸಿರುತ್ತಿದ್ದ ತರುಣಿಯರು ಕೆಂಪು, ಹಳದಿ, ಚಂದನ ಮುಂತಾದ ಬಣ್ಣಗಳ ನೀರನ್ನು ರಾಜನಿಗೆ ಎರಚುವುದರಿಂದ ಈ ಆಟವು ಪ್ರಾರಂಭವಾಗುತ್ತಿತ್ತು. ತರುವಾಯ ಆಹ್ವಾನಿತ ಪ್ರೇಕ್ಷಕರು ಭಾಗವಹಿಸುತ್ತಿದ್ದರು.

ಅಪ್ಸರೆಯೊಬ್ಬಳು ನೀರನ್ನು ಎರಚುತ್ತಿರುವ ಚಿತ್ರಣವೊಂದಿದೆ (ಚಿತ್ರ 8). ಆಕೆಯ ಎಡಪಾರ್ಶ್ವದಲ್ಲಿ ಒಬ್ಬ ಗಂಡು ಪಿಚಕಾರಿಯಲ್ಲಿ ಬಣ್ಣವನ್ನು ದೊಡ್ಡ ಪಾತ್ರೆಯಿಂದ ತುಂಬಿಸಿಕೊಳ್ಳುತ್ತಿದ್ದಾನೆ. ಇನ್ನೊಬ್ಬ, ಬಲಪಾರ್ಶ್ವದಿಂದ ಆಕೆಯ ಮೇಲೆ ಪಾತ್ರೆಯಿಂದ ನೀರನ್ನು ಎರಚುತ್ತಿದ್ದಾನೆ. ಈ ಆಟದಲ್ಲಿ ಹೆಂಗಸರು ಗಂಡಸರು ಇಬ್ಬರೂ ಯಾವ ತೆರನಾದ ಸಂಕೋಚವೂ ಇಲ್ಲದೆ ಭಾಗವಹಿಸುತ್ತಿದ್ದರು ಎಂಬುದು ಗಮನಾರ್ಹವಾದ ಅಂಶವಾಗಿದೆ. ಸಾಹಿತ್ಯಿಕ ಕೃತಿಗಳಾದ **ಯಶಸ್ತಿಲಕ** ಮತ್ತು **ಆಖ್ಯಾನಕ ಮಣಿಕೋಶ**ಗಳೆರಡೂ ಧಾರಾಗೃಹಗಳಲ್ಲಿ ರಾಣೀವಾಸದವರೊಂದಿಗೆ ರಾಜನು ಜಲಕ್ರೀಡೆಗಳಿಂದ ಹೇಗೆ ಬೇಸಿಗೆಯನ್ನು ತಪ್ಪಿಸಿಕೊಳ್ಳುತ್ತಿದ್ದ ಎಂಬುದರ ಬಗ್ಗೆ ವಿವರಗಳಿವೆ.

ಜಲಕ್ರೀಡೆಯಲ್ಲಿ ಭಾಗವಹಿಸಿ ಸಂತೋಷಿಸಿದ ತರುವಾಯ ಅಪ್ಸರೆಯು ತನ್ನ ತಲೆಗೂದಲಿನಿಂದ ನೀರನ್ನು ಹಿಂಡುತ್ತಿರುವ ದೃಶ್ಯವಿದೆ (ಚಿತ್ರ 9). ಚೇಟಿಯರು ಆಕೆಯ ಅಲಂಕಾರಕ್ಕೆ ಅವಶ್ಯಕವಾಗಿರುವ ಕನ್ನಡಿಯನ್ನು ವೇಣೀಗುಚ್ಛವನ್ನು ಹಿಡಿದಿದ್ದಾರೆ.

ವ್ಯವಸ್ಥಿತ ರೂಪದಲ್ಲಿ ನಡೆಯುತ್ತಿದ್ದ ಕ್ರೀಡೆಗಳೊಂದಿಗೆ ಅರಮನೆಯವರು ಮತ್ತು ಶ್ರೀಸಾಮಾನ್ಯರು ಒಟ್ಟಾಗಿ ಸೇರಿ ಆಡುತ್ತಿದ್ದ ಮನರಂಜನಾ ಕ್ರೀಡೆಗಳು ಪ್ರತ್ಯೇಕವಾಗಿದ್ದವು. ಪ್ರಾಣಿಗಳನ್ನು ಬಳಸಿಕೊಂಡು ನಡೆಸುತ್ತಿದ್ದ ಸ್ಪರ್ಧೆಗಳು– ಟಗರು, ಹುಂಜ ಮತ್ತು ಕೋಣಗಳ ಕಾದಾಟಗಳು. ಈ ಸ್ಪರ್ಧೆಗಳಿಂದ ರಾಜಮನೆತನದವರಿಗೆ ಶ್ರೀಸಾಮಾನ್ಯರ ಸಂಪರ್ಕದ ವೃದ್ಧಿಗೆ ಅವಕಾಶವಿದ್ದು, ಅವರುಗಳ ಜೀವನ ಸಂತೋಷದ ವೃದ್ಧಿಗೆ ಅವಕಾಶ ಕಲ್ಪಿತವಾಗುತ್ತಿತ್ತು.

ಮಾನಸೋಲ್ಲಾಸದಲ್ಲಿ ಹಲವು ಒಳಾಂಗಣ ಕ್ರೀಡೆಗಳ ಬಗ್ಗೆ ವಿವರಗಳಿವೆ–ಚದುರಂಗ, ವರತಿಕ ಕ್ರೀಡೆ (ಕವಡೆಯ ಆಟ), ಪಣಿಡ (ಪಗಡೆ ಆಟ), ಒಗಟುಗಳ ಪ್ರಹೇಳಿಕಾ ಇತ್ಯಾದಿಗಳು. ಬಿಡುವಿನ ವೇಳೆಗಳಲ್ಲಿ ಹೆಂಗಸರು ಈ ಆಟಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಕೋಲಾಟ ಈ ರೀತಿಯ ಒಂದು ಕ್ರೀಡೆಯಾಗಿತ್ತು. ಇದರಲ್ಲಿ ಬಣ್ಣದ ಕೋಲುಗಳನ್ನು ಬಳಸಿಕೊಂಡು ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ, ರಾಗಬದ್ಧವಾಗಿ ಹಾಡಿಕೊಂಡು, ಹೆಂಗಸರು ಜೋಡಿಗಳು ಗುಂಪುಗಳಲ್ಲಿ ಕೋಲಾಟ ಆಡುತ್ತಿದ್ದರು. ಇವರು ವೃತ್ತಾಕಾರವಾಗಿ ಅಥವಾ ಹಲವು ವಿನ್ಯಾಸಗಳ ಆಕಾರದಲ್ಲಿ ಲಯಬದ್ಧವಾಗಿ ಹೆಜ್ಜೆಹಾಕುತ್ತಾ

ಚಲಿಸುತ್ತಿದ್ದರು. ಉತ್ಸವಗಳಲ್ಲಿ ಮತ್ತು ಬಹಿರಂಗ ಪ್ರದರ್ಶನಗಳಲ್ಲಿ ಈ ಆಟದಲ್ಲಿ ಗಂಡಸರೂ ಸೇರಿಕೊಳ್ಳುತ್ತಿದ್ದರು. ಆಗ ಪ್ರೇಕ್ಷಕರನ್ನೂ ಸಂತೋಷಗೊಳಿಸಲು ಅನೇಕ ಬಗೆಯ ಅಂಗಸಾಧನೆಗಳನ್ನು ಪ್ರದರ್ಶಿಸುತ್ತಿದ್ದರು. ಅನೇಕ ದೇವಾಲಯಗಳಲ್ಲಿ ಕೋಲಾಟದ ದೃಶ್ಯಗಳನ್ನು ಸ್ತಂಭಗಳ ಮೇಲೆ ಮತ್ತು ದೇವಾಲಯದ ಹೊರಗೋಡೆಗಳ ಮೇಲೆ ಕೆತ್ತಿರುವುದು ಇಂದೂ ಕಾಣಿಸುತ್ತದೆ. ಉಪವನಗಳಲ್ಲಿ ಉಯ್ಯಾಲೆಯ ಆಟ ಇನ್ನೊಂದು ಜನಪ್ರಿಯವಾದ ಆಟವಾಗಿತ್ತು.

5. **ಸಾಕುಪ್ರಾಣಿಗಳು:** ರಾಣಿವಾಸದವರಿಗೆ ಪಾರಿವಾಳ, ಗಿಣಿ, ಕೋತಿ ಮುಂತಾದವನ್ನು ಸಾಕುವ ಹವ್ಯಾಸವು ಪ್ರಿಯವಾಗಿತ್ತು. ಈ ಸಾಕುಪ್ರಾಣಿಗಳಿಗೆ ಹಣ್ಣುಗಳನ್ನು, ಕಾಳುಗಳನ್ನು ಕೊಡುವುದರ ಚಿತ್ರಣ ಅಪ್ಸರೆಯರ ಶಿಲ್ಪಗಳಲ್ಲಿವೆ.

ಚಾಲುಕ್ಯರ ಕಾಲದಲ್ಲಿ ಪಾರಿವಾಳಗಳನ್ನು ಪತ್ರಗಳನ್ನು ತಲುಪಿಸಲು ಬಳಸುತ್ತಿದ್ದರು. ಗಂಡು ಪಾರಿವಾಳದ ಕೊರಳಿಗೆ ಪತ್ರವನ್ನು ಕಟ್ಟಿ ಅದನ್ನು ಹಾರಿಬಿಟ್ಟರೆ ಅದು ಅದರ ಸಂಗಾತಿಯನ್ನು ಇರಿಸಿದ್ದ ಸ್ಥಳಕ್ಕೆ ಹಾರಿ ಹೋಗುತ್ತಿತ್ತು.

ಅಪ್ಸರೆಯ ಬಲ ಮುಂಗೈ ಮೇಲೆ ಇಂತಹ ಹಕ್ಕಿಯೊಂದು ಕುಳಿತಿದೆ. ಅದರ ಕೊರಳಿಗೆ ಕಟ್ಟಬೇಕಾಗಿರುವ ಪತ್ರವು ಆಕೆಯ ಎಡಹಸ್ತದಲ್ಲಿದೆ. ಬಿಗಿಯಾಗಿರುವ ತುಂಡು ವಸ್ತ್ರಾಲಂಕಾರದಲ್ಲಿರುವ ಯುವತಿಯೊಬ್ಬಳು ಆ ಪತ್ರದ ದಾರವನ್ನು ಬಿಚ್ಚಲು ಪ್ರಯತ್ನಿಸುತ್ತಿದ್ದಾಳೆ (ಚಿತ್ರ 10).

ಸಾಕು ಹಕ್ಕಿಗಳಲ್ಲಿ ಗಿಣಿಯು ಮುಖ್ಯವಾಗಿತ್ತು. ತನ್ನ ಸಾಕು ಗಿಣಿಯೊಂದಿಗೆ ಮಾತನಾಡುತ್ತಿರುವ ಅಪ್ಸರೆಯನ್ನು ನಾವು ನೋಡಬಹುದು. ಆಕೆಯ ಚೇಟಿಯರು ಅದಕ್ಕೆ ತಿನಿಸಾಗಿ ಹಣ್ಣುಗಳನ್ನು ಕಾಳುಗಳನ್ನು ಹಿಡಿದಿದ್ದಾರೆ (ಚಿತ್ರ 11).

ಇನ್ನೊಂದು ಶಿಲ್ಪದಲ್ಲಿ ಅಪ್ಸರೆಯ ಎಡ ಮೊಣಕ್ಕೆ ಮೇಲೆ ಕುಳಿತಿರುವ ಹಕ್ಕಿಯು ಆಕೆಯ ಕೊರಳ ಸರದೊಂದಿಗೆ ಆಡುತ್ತಿದೆ (ಚಿತ್ರ 12).

ರಾಣಿವಾಸದವರು ಆ ಕಾಲದಲ್ಲಿ ಕೋತಿಗಳನ್ನೂ ಸಾಕುತ್ತಿದ್ದರು ಎಂಬುದು ಒಂದು ಶಿಲ್ಪವು ಸ್ಪಷ್ಟಪಡಿಸುತ್ತದೆ. ಅಪ್ಸರೆಯು ಅಲಂಕರಿಸಿಕೊಳ್ಳುತ್ತಿದ್ದ ಸ್ಥೂಲಕಾಯಳಾದ ಕುಳ್ಳಗಿರುವ ಚೇಟಿಯು ಸಾಕು ಕೋತಿಯನ್ನು ಎತ್ತಿಕೊಂಡಿದ್ದಾಳೆ (ಚಿತ್ರ 13).

ಇನ್ನೊಂದು ಶಿಲ್ಪದಲ್ಲಿ ಸಾಕು ಕೋತಿಯು ವಸ್ತ್ರವನ್ನು ಎಳೆಯುತ್ತಾ ಅಪ್ಸರೆಯನ್ನು ಕೀಟಲೆ ಮಾಡುತ್ತಿದ್ದರೆ, ಆಕೆ ಅದನ್ನು ಹೆದರಿಸಿ ಓಡಿಸಲು ಪ್ರಯತ್ನಿಸುತ್ತಿದ್ದಾಳೆ (ಚಿತ್ರ 14).

6. **ಲಲಿತ ಕಲೆಗಳು: ಮಾನಸೋಲ್ಲಾಸದ** ಐದನೆಯ ವಿಂಶತಿಯ 10 ರಿಂದ 34 ಅಧ್ಯಾಯಗಳು ಗೀತ ವಿನೋದದ ಬಗ್ಗೆ ವಿವರಗಳನ್ನು ಹೇಳುತ್ತವೆ. ಇದರಲ್ಲಿ ಸಂಗೀತ, ಅದರಲ್ಲಿ ಬಳಸುವ ನಾಲ್ಕು ಬಗೆಯ ವಾದ್ಯಗಳು, ರಾಗವನ್ನು ಹಾಡುವ ಬಗೆ, ರಾಗ ವಿನ್ಯಾಸದ ಕ್ರಮಗಳು ಇತ್ಯಾದಿ ವಿವರಗಳಿವೆ. ಸಂಗೀತ, ನೃತ್ಯ, ನಾಟಕ, ಚರ್ಚೆಗಳು, ವಿಚಾರ-ವಿಶ್ಲೇಷಣೆಗಳು ವಿದ್ವಾಂಸರ ಆಸಕ್ತಿಯನ್ನು ಕೆರಳಿಸುತ್ತಿದ್ದವು. ಚಾಲುಕ್ಯ ಮತ್ತು ಹೊಯ್ಸಳರ ರಾಣಿಯರು ಕಲೆಗಳಲ್ಲಿ ಬಹುವಾದ ಪ್ರೀತಿಯನ್ನು ಬೆಳೆಸಿಕೊಂಡಿದ್ದವರು. ಸಂಗೀತ, ತಾಳವಾದ್ಯಗಳು, ಹಾಡುಗಾರಿಕೆ, ನೃತ್ಯ ಮುಂತಾದವುಗಳಲ್ಲಿ ಬಹುವಾಗಿ ಆಸಕ್ತರಾಗಿದ್ದವರು. **ಮಾನಸೋಲ್ಲಾಸದಲ್ಲಿ** ಸುಮಾರು 450 ಶ್ಲೋಕಗಳಲ್ಲಿ, ನೃತ್ಯದಲ್ಲಿರುವ ವಿಶೇಷಗಳ ಬಗ್ಗೆ ವಿವರಗಳನ್ನು ಹೇಳಿದೆ. ಕೆಲವು ಶಿಲ್ಪಗಳು ಅಪ್ಸರೆಯರು ಸಂಗೀತಗಾರರು ಮತ್ತು ನರ್ತಕಿಯರೂ ಆಗಿದ್ದರು ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ತಮ್ಮ ಈ ಕಲೆಯಿಂದ

ಅವರು ರಾಜನಿಗೆ ಮನೋಲ್ಲಾಸವನ್ನು ಉಂಟುಮಾಡುತ್ತಿದ್ದರು. ನರ್ತಕಿಯರು ಹಾಡುತ್ತಾ, ತಂತಿವಾದ್ಯಗಳನ್ನು, ತಾಳವಾದ್ಯಗಳನ್ನು ನುಡಿಸುತ್ತಾ ನರ್ತಿಸುವುದರಲ್ಲಿ ಪರಿಣತಿಯನ್ನು ಗಳಿಸಿದ್ದರು (ಚಿತ್ರ 15 ರಿಂದ 18).

ರಾಜ ಮತ್ತು ರಾಣೀವಾಸದವರು ನಾಟ್ಯಶಾಸ್ತ್ರದಲ್ಲಿ ಪರಿಣತರಾಗಿದ್ದರೆಂಬುದನ್ನು **ಮಾನಸೋಲ್ಲಾಸವು** ಸ್ಪಷ್ಟವಾಗಿ ಹೇಳಿದೆ. ನಾಟಕೀಯ ದೃಶ್ಯಗಳನ್ನು ನಟಿಸುವುದರಲ್ಲಿ ಅವರು ನಿಷ್ಣಾತರಾಗಿದ್ದರು. ಪುರಾಣ ಪ್ರಸಂಗಗಳನ್ನು ಕಥಾವಿನೋದದ ಮೂಲಕವಾಗಿ ಪ್ರಸ್ತುತಪಡಿಸುವುದನ್ನು ರಾಜರು ಬಹುವಾಗಿ ಬಯಸುತ್ತಿದ್ದರು. ಇದರಲ್ಲಿ ದ್ವಿವಕ್ತ್ರ ಮತ್ತು ಚತುರ್ವಕ್ತ್ರ ಎಂದು ಎರಡು ವಿಧಗಳು ಇರುವುದನ್ನು ಹೇಳಿದೆ. ದ್ವಿವಕ್ತ್ರ ಎಂದರೆ ಇಬ್ಬರು ಸೇರಿ ಪ್ರಸಂಗವನ್ನು ಅಭಿನಯಿಸುವುದು ಅಥವಾ ವಾಚಿಸುವುದು. ಚತುರ್ವಕ್ತ್ರ ಎಂದರೆ ನಾಲ್ವರು ಅಥವಾ ಇನ್ನೂ ಹೆಚ್ಚು ಮಂದಿ ಸೇರಿ ಆ ಪ್ರಸಂಗವನ್ನು ಅಭಿನಯಿಸುವುದು.

ಒಂದು ಶಿಲ್ಪದಲ್ಲಿ ಅಪ್ಸರೆಯೊಬ್ಬಳು ಭೈರವಿಯಾಗಿ ಅಲಂಕರಿಸಿಕೊಂಡು ತತ್ಸಂಬಂಧೀ ಪ್ರಸಂಗವನ್ನು ಅಭಿನಯಿಸುತ್ತಿರುವುದರ ಚಿತ್ರಣವಿದೆ (ಚಿತ್ರ 19). ಇದರಲ್ಲಿ ಚಿತ್ರಿತವಾಗಿರುವ ಸಂಗೀತಗಾರರೆಲ್ಲಾ ಪುರುಷರೇ. ಇವರು ವಾದ್ಯಸಂಗೀತದಲ್ಲಿ ವಿಶೇಷ ತಜ್ಞತೆಯನ್ನು ಪಡೆದಿದ್ದವರು. ಇವರನ್ನು ಕುಶೀಲವ ಎಂದು ಕರೆಯುತ್ತಿದ್ದರು.

ಇನ್ನೊಂದು ಶಿಲ್ಪದಲ್ಲಿ ಅಪ್ಸರೆಯು ಪುರಾಣದಿಂದ ಒಂದು ಪ್ರಸಂಗವನ್ನು ವಿವರಿಸುತ್ತಿರುವ ದೃಶ್ಯವಿದೆ. ಚಾಲುಕ್ಯರ ರಾಣಿಯರು ತರ್ಕಪಟುಗಳಾಗಿದ್ದು ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದುದರ ವಿವರವನ್ನು **ಮಾನಸೋಲ್ಲಾಸವು** ಹೇಳಿದೆ.

ಮಾನಸೋಲ್ಲಾಸದ ನಾಲ್ಕು ಮತ್ತು ಐದನೆಯ ವಿಂಶತಿಯಲ್ಲಿ ರಾಣೀವಾಸದವರಿಗೆ ಆಟಗಳಲ್ಲಿದ್ದ ಆಸಕ್ತಿಯನ್ನು ಅವರ ಚಟುವಟಿಕೆಗಳನ್ನು ಹೇಳಿದೆ. ಅಂತಹ ಸುಖ ಸನ್ನಿವೇಶಗಳು ಬಹು ಕಲಾತ್ಮಕವಾಗಿ ಚಾಲುಕ್ಯರ ಮತ್ತು ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಕಂಡುಬರುತ್ತವೆ. ಸಾಹಸಗಳ ಬಗ್ಗೆ ಇದ್ದ ಪ್ರೀತಿ, ಅವರ ಅಭಿರುಚಿಗಳಲ್ಲಿ ಇರುವ ಕುಲೀನತೆ, ಪ್ರಾಣಿ-ಪಕ್ಷಿ ಮತ್ತು ನಿಸರ್ಗದ ಬಗ್ಗೆ ಹಾಗೂ ಲಲಿತಕಲೆಗಳ ಬಗ್ಗೆ ಅವರಿಗೆ ಇದ್ದ ಅನಂತ ಅನುರಾಗವು ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ಅಲಂಕೃತವಾಗಿರುವ ಅಪ್ಸರೆಯ ಶಿಲ್ಪಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ರಾಣೀವಾಸಗಳಲ್ಲಿ ಇರುತ್ತಿದ್ದ ಹಲವು ಮಂದಿ ಪತ್ನಿಯರಲ್ಲಿ ಪ್ರತಿಯೊಬ್ಬರೂ ಒಂದೊಂದು ಕ್ಷೇತ್ರದಲ್ಲಿ ಪ್ರಾವೀಣ್ಯತೆಯನ್ನು ಸಾಧಿಸಿದವರಾಗಿದ್ದರು ಎಂಬುದಾಗಿಯೂ ನಾವು ಈ ಸಂದರ್ಭದಲ್ಲಿ ಅರ್ಥೈಸಬಹುದು. ಉದಾಹರಣೆಗೆ ಮೊದಲ ಹೆಂಡತಿಯು ನರ್ತಕಿಯಾಗಿದ್ದರೆ, ಎರಡನೆಯವಳು ಅಪ್ರತಿಮ ಬಿಲ್ಲುಗಾರ್ತಿಯಾಗಿರುತ್ತಿದ್ದಳು. ಮೂರನೆಯವಳು ಜಲಕ್ರೀಡೆಯಲ್ಲಿ ನಿಷ್ಣಾತಳಾಗಿರುತ್ತಿದ್ದಳು. ನಾಲ್ಕನೆಯವಳು ವನಕ್ರೀಡೆಯಲ್ಲಿ ನಿಸ್ಸೀಮಳಾಗಿರುತ್ತಿದ್ದಳು ಇತ್ಯಾದಿ.

ಹೊಯ್ಸಳ ಅಥವಾ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾಗಿರುವ ದೇವಾಲಯಗಳನ್ನು, ಶಿಲ್ಪಗಳನ್ನು ವಿಶ್ಲೇಷಿಸಲು **ಮಾನಸೋಲ್ಲಾಸವನ್ನು** ನಾವು ಮುಖ್ಯ ಆಕರ ಗ್ರಂಥವಾಗಿ ಪರಿಗಣಿಸಬಹುದು ಎಂಬುದನ್ನು ಈ ವಿಶ್ಲೇಷಣೆಯು ಖಚಿತಪಡಿಸುತ್ತದೆ.

ಕೃತಜ್ಞತೆಗಳು

ಈ ಲೇಖನದ ಕರಡು ಭಾಷಾ ತಿದ್ದಪಡಿ ಮಾಡಿಕೊಟ್ಟ ಸರಿತಾ ಜ್ಞಾನಾನಂದ ಅವರಿಗೆ ನನ್ನ ಕೃತಜ್ಞತೆಗಳು.

■

ಮಳೂರು ಪಟ್ಣ ಗ್ರಾಮದ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪದ ಸಾಂಸ್ಕೃತಿಕ ಅಧ್ಯಯನ

ಶಶಿಕುಮಾರ.ಎಸ್.
ಕ್ಯೂರೇಟರ್
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ

ಮಳೂರು ಪಟ್ಣ ಗ್ರಾಮವು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನಿಂದ ದಕ್ಷಿಣಕ್ಕೆ 9 ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪ್ರಾಚೀನತೆ ಗಮನಿಸಿದಾಗ ಗಂಗರಿಂದ ಪ್ರಾರಂಭವಾಗಿ ಚೋಳರು, ಹೊಯ್ಸಳರು ವಿಜಯನಗರ ಅರಸರು ಹಾಗೂ ಚನ್ನಪಟ್ಟಣದ ಪಾಳೆಗಾರರು, ಮೈಸೂರಿನ ಒಡೆಯರ ಆಳ್ವಿಕೆಗೆ ಒಳಪಟ್ಟಿರುವುದಕ್ಕೆ ಹಲವು ಶಾಸನಗಳು ಮತ್ತು ಸ್ಮಾರಕಗಳು ಆಧಾರವಾಗಿ ದೊರೆಯುತ್ತವೆ. ಈ ರೀತಿಯಲ್ಲಿ ನಮಗೆ ಇಲ್ಲಿ 21 ಶಾಸನಗಳು, 4 ವೀರಗಲ್ಲು ಶಾಸನಗಳು, ವೀರರ ಗುಡಿಗಳು ಹಾಗೂ ಪ್ರಾಚೀನ ದೇವಾಲಯಗಳಾದ ಅರ್ಕೇಶ್ವರ, ಅಮೃತೇಶ್ವರ ದೇವಾಲಯ, ನಾರಾಯಣ ದೇವಾಲಯ, ವರದರಾಜ ದೇವಾಲಯ ಮತ್ತು ಚೌಡೇಶ್ವರಿ ದೇವಾಲಯಗಳು ಪ್ರಮುಖವಾಗಿ ಕಂಡು ಬರುತ್ತವೆ.

ಈ ಅಧ್ಯಯನವು ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ ಆಧಾರದ ಮೇಲೆ ಗ್ರಾಮದ ಐತಿಹಾಸಿಕತೆಯ ಅಧ್ಯಯನ ಮಾಡುವುದಾಗಿದ್ದು, ನಮಗೆ ಇದರ ಪ್ರಾಚೀನ ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪದ ಬೆಳವಣಿಗೆ, ಅದರ ಮೇಲಿನ ಪ್ರಭಾವವನ್ನು ಗುರುತಿಸುವುದಾಗಿದೆ. ಇಲ್ಲಿನ ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದಂತೆ ಶಾಸನಗಳ ಪ್ರಕಾರ ಅಧ್ಯಯನ ಮಾಡಿದಾಗ 9ನೇ

ಶತಮಾನದ ಗಂಗರ ಕಾಲದಿಂದ ಪ್ರಾರಂಭವಾಗಿ ಆಗಿನ ದೊರೆಯಾದ ಮಹಾರಾಜಾಧಿರಾಜ ಕೋಳಾಳಪುರದ ಪರಮೇಶ್ವರ ನಂದಗಿರಿನಾಥ ಪೆರ್ಮಾಡಿ (2ನೇ ರಾಚಮಲ್ಲ)ಅಳ್ವಿಕೆ ಕಾಲದ ಶಾಸನ ದೊರೆಯುತ್ತದೆ. ಹಾಗೂ ಅರ್ಕೇಶ್ವರ ದೇವಾಲಯದ ಕಂಬದಲ್ಲಿನ ಶಾಸನವು ಗಂಗರ ಕಾಲದ್ದಾಗಿದ್ದು ನನ್ನಪ್ಪಯ್ಯ ಎಂಬಾತ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ಉಲ್ಲೇಖವಿದೆ. ನಂತರ ಚೋಳರ ಕಾಲದಲ್ಲಿ ಈ ಪ್ರದೇಶವು ಮುಡಿಗೊಂಡ ಚೋಳಮಂಡಲದ ಒಳಗಿನ ರಾಜೇಂದ್ರಚೋಳನಾಡೊಳಗಿನ ಕಿಲಲೈನಾಡಿನ ನಿಗರ್ಲಿಚೊಳಪುರಂ ಆಡಳಿತ ವಿಭಾಗಕ್ಕೆ ಸೇರಿದ್ದು ಮೊದಲನೇ ರಾಜರಾಜ ಚೋಳನ ಅಧಿಕಾರಿಯಾದ ಅಪ್ರಮೇಯ ಕರ್ನಾಟಕ ಪ್ರವೇಶಿಸಿ ಗೆದ್ದ ಬಗ್ಗೆ ಟಿ.ನರಸೀಪುರದ ಕ್ರಿ.ಶ.1006ರ ಕಲಿಯೂರು ಶಾಸನ ತಿಳಿಸುತ್ತದೆ. ಹಾಗೆಯೇ ಕ್ರಿ.ಶ.1007ರಲ್ಲಿ ನಾರಾಯಣಸ್ವಾಮಿ ದೇವರು ಅಲಿಯಾಸ್ ಜಯಗೊಂಡ ಚೋಳ ವಿಣ್ಣಾಗರ್ ಆಳ್ವಾರ್ ದೇವರ ಪ್ರತಿಷ್ಠಾಪಿಸಿ ದಾನ ನೀಡಿದ ಬಗ್ಗೆ ಮೂದಲನೇ ರಾಜರಾಜಚೋಳನ ಶಾಸನ ಉಲ್ಲೇಖಿಸಿದೆ. ಅಲ್ಲದೇ ಮೂದಲನೇ ರಾಜರಾಜ ಚೋಳನು ತನ್ನ ಮಡದಿ ತ್ರೈಲೋಕ್ಯ ಮಹಾದೇವಿಯ ಹೆಸರಿನಲ್ಲಿ ಹೊಂಗನೂರನ್ನು ಅಗ್ರಹಾರ ನಿರ್ಮಿಸಿದ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ನಂತರ ಕ್ರಿ.ಶ.1030ರ ರಾಜೇಂದ್ರ ಚೋಳನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ. ಕ್ರಿ.ಶ.1152ರ ಕಾಲದ ಶಾಸನವು ಮಲೈಯಾಡನ್ ಎಂಬ ತಮಿಳು ಮುಖಂಡನ ಬಗ್ಗೆ ಉಲ್ಲೇಖಿಸಿದ ಶಾಸನವಿದೆ ಇದೇ ರೀತಿ ಈ ಭಾಗದಲ್ಲಿ ಹಲವಾರು ತಮಿಳು ಅಧಿಕಾರಿ ಆಳ್ವಿಕೆಯ ಬಗ್ಗೆ ಶಾಸನಗಳು ದೊರೆಯತ್ತವೆ. ಹಾಗೂ ಹೊಯ್ಸಳರ ಕಾಲಕ್ಕೆ ಸಂಬಂಧಿಸಿದಂತೆ ಕ್ರಿಶ.1159ರಲ್ಲಿ ಒಂದನೇ ನರಸಿಂಹ ಆಳ್ವಿಕೆಯ ಬಗ್ಗೆ ಹಾಗೂ 1180ರಲ್ಲಿ ವೀರಬಲ್ಲಾಳನ ಕಾಲದಲ್ಲಿ ವರದರಾಜ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ಶಾಸನಗಳು ತಿಳಿಸುತ್ತವೆ. ಅಲ್ಲದೇ ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ನಮಗೆ ವೀರಗಲ್ಲು ಶಾಸನಗಳು ಪ್ರಮುಖವಾಗಿದ್ದು ಕ್ರಿ.ಶ.1369ರಲ್ಲಿ ವೀರಬುಕ್ಕಣರಾಯನ ಆಳ್ವಿಕೆಯ ಬಗ್ಗೆ ಹಾಗೂ ಕ್ರಿ.ಶ.1414ರ ಮತ್ತು 1432ರ ಕಾಲದ ವೀರಪ್ರತಾಪ ದೇವರಾಯ ಕಾಲದಲ್ಲಿನ ಶಾಸನಗಳು, ವೀರಗಲ್ಲುಗಳು ದೊರೆತಿದ್ದು ಹಾಗೂ 1534ರ ಅಚ್ಯುತರಾಯನ ಕಾಲದ ದಾನ ಶಾಸನಗಳು ಈ ಗ್ರಾಮದಲ್ಲಿ ದೊರೆತು ಇವರು ರಾಜಕೀಯವಾಗಿ ಆಡಳಿತ ನಡೆಸಿದ್ದರ ಬಗ್ಗೆ ಪ್ರಮುಖವಾದ ಶಾಸನ ಆಧಾರಗಳಾಗಿವೆ.

ಈ ಗ್ರಾಮದ ದೇವಾಲಯಗಳು ಕಲೆ ಮತ್ತು ವಾಸ್ತುಶಿಲ್ಪಕ್ಕೆ ತಮ್ಮದೇ ಆದಂತಹ ಕೊಡುಗೆ ನೀಡಿ ಹಲವು ರಾಜಮನೆತನಗಳ ಪ್ರೋತ್ಸಾಹವನ್ನು ಪಡೆದಿರುವುದಕ್ಕೆ ಶಾಸನಗಳು ಮತ್ತು ದೇವಾಲಯಗಳ ವಾಸ್ತುಲಕ್ಷಣಗಳು ಪ್ರಮುಖ ಸಾಕ್ಷಿಯಾಗಿವೆ. ಈ ಲೇಖನವೂ ಸಹ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ ಮತ್ತು ಅದರ ಜೊತೆ ರಾಜಕೀಯ ಇತಿಹಾಸ ಪ್ರಭಾವದ ಬಗ್ಗೆ ವಿವರಿಸುವುದಾಗಿದೆ. ಆದ್ದರಿಂದ ನನ್ನ ಅಧ್ಯಯನಕ್ಕೆ ಗ್ರಾಮದ ಅರ್ಕೇಶ್ವರ ಅಥವಾ ಅಮೃತೇಶ್ವರ ದೇವಾಲಯ, ನಾರಾಯಣಸ್ವಾಮಿ ದೇವಾಲಯ, ವರದರಾಜಸ್ವಾಮಿ ದೇವಾಲಯ ಹಾಗೂ ಚೌಡೇಶ್ವರಿ ದೇವಾಲಯಗಳನ್ನು ಒಳಪಡಿಸಲಾಗಿದೆ.

ಅರ್ಕೇಶ್ವರ ಅಥವಾ ಅಮೃತೇಶ್ವರ ದೇವಾಲಯ

ಈ ದೇವಾಲಯವು ಗ್ರಾಮದ ಕೇಂದ್ರ ಸ್ಥಳದಿಂದ ನೈರುತ್ಯಕ್ಕಿರುವ ಪ್ರಾಥಮಿಕ ಶಾಲೆಯ ಹಿಂಭಾಗದ ಅಳಿವಿನಂಚಿನಲ್ಲಿರುವ ದೇವಾಲಯವಾಗಿದೆ. ಇದನ್ನು 1935ರ ಮೈಸೂರು

ಆರ್ಕಿಯೊಲಾಜಿಕಲ್ ರಿಪೋರ್ಟ್‌ನಲ್ಲಿ ಚೋಳರ ಕಾಲದಲ್ಲಿ ನಿರ್ಮಾಣವಾಯಿತೆಂದು ಹೇಳಿದೆ. ಆದರೆ ನಮಗೆ ಆ ದೇವಾಲಯದ ಸ್ವಲ್ಪ ಮುಂದೆ ಹಾಕಿರುವ 9ನೇ ಶತಮಾನದ ಗಂಗರ ಆನೆಯ ಲಾಂಛನವಿರುವ ಶಾಸನವು 2ನೇ ರಾಚಮಲ್ಲನ (ಪೆರ್ಮಾಡಿಯು) ಬಗ್ಗೆ ಉಲ್ಲೇಖಿಸಿದೆ. ದೇವಾಲಯದ ಕಂಬದ ಮೇಲೆ ಗಂಗರ ಕಾಲದ ಶಾಸನವು ಕಂಡುಬರುವುದರಿಂದ ಇದು ಚೋಳರಿಗಿಂತ ಮೊದಲೇ ನಿರ್ಮಾಣವಾಯಿತು ಎನ್ನಬಹುದು. ನಂತರ ಚೋಳರ ದಾನ ಶಾಸನಗಳು ಭಿತ್ತಿಯಲ್ಲಿದ್ದು ಇವು ಅರ್ಕೇಶ್ವರ ದೇವರನ್ನು ಅರುಮೋಳಿಶ್ವರ (ಒಂದನೇ ರಾಜರಾಜ ಚೋಳನ ಬಿರುದು) ಎಂದು ಕರೆದು ದಾನದತ್ತಿ ನೀಡಿದವರ ಬಗ್ಗೆ ಉಲ್ಲೇಖಿಸಿದೆ. ಹೊಯ್ಸಳರ ಒಂದನೇ ನರಸಿಂಹನ ಕಾಲದಲ್ಲಿಯೂ ಸಹ ಈ ದೇವಾಲಯಕ್ಕೆ ದಾನ ನೀಡಿದ ಉಲ್ಲೇಖವಿದೆ. ಆದ್ದರಿಂದ ಈ ದೇವಾಲಯ ಶಾಸನದ ಪ್ರಕಾರ ಗಂಗರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಾಗಿದ್ದು ಚೋಳರ ಕಾಲದಲ್ಲಿ ಪ್ರೋತ್ಸಾಹ ಮತ್ತು ಹೊಯ್ಸಳರ ದಾನ ಮತ್ತು ಅದರ ಮುಂದಿನ ಮುಖಮಂಟಪ ನಿರ್ಮಿಸಿರಬಹುದಾಗಿದೆ.

ಈ ದೇವಾಲಯದ ಬಾಗಿಲು ಪೂರ್ವಕ್ಕೆ ಅಭಿಮುಖವಾಗಿದ್ದು ಗ್ರಾನೈಟ್ ಕಲ್ಲಿನಿಂದ ನಿರ್ಮಿಸಲಾಗಿದೆ. ಇದು ಗರ್ಭಗೃಹ, ನವರಂಗ, ಬಿದ್ದಿರುವ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಯಿರುವುದಿಲ್ಲ. ಇದರಲ್ಲಿ ನಾಭಿಚ್ಛಂದ ವಿತಾನವನ್ನು ಹೊಂದಿದೆ ಈ ತರಹದ ವಿತಾನಗಳು ಪ್ರಾಚೀನ ದೇವಾಲಯಗಳಲ್ಲಿ ಕಾಣಬಹುದು. ಈ ಗರ್ಭಗುಡಿಯ ದ್ವಾರಬಂಧವು ಸರಳವಾಗಿದ್ದು ಗರ್ಭಗುಡಿಯ ಮುಂದೆ ಸುಖನಾಸಿಯು ಕಂಡುಬರುವುದಿಲ್ಲ. ನವರಂಗವು ನಾಲ್ಕು ಪೂರ್ವಾಶ್ರ ಸ್ತಂಭಗಳಿಂದ 9 ಅಂಕಣವನ್ನು ಹೊಂದಿದೆ. ಈ ಸ್ತಂಭಗಳು ದಿಂಡಿನ ಕೆಳಭಾಗ ಚೌಕ, ಮೇಲೆ ಅಷ್ಟ 16 ಮುಖ ಮತ್ತು ಅದರ ಮೇಲೆ ವೃತ್ತಾಕಾರವಿದ್ದು, ತಾಟಿಕಾ, ಕಂಠ, ಮುಚ್ಚಳ ಕಂಠ ಮತ್ತು ಬೋದಿಗೆ ಹೊಂದಿದೆ. ಈ ರೀತಿಯ ಸ್ತಂಭಗಳ ಉಲ್ಲೇಖವನ್ನು ಮಯಮತದಲ್ಲಿ ಕಾಣಬಹುದು. ಇವು ಗಂಗರ ಕಾಲದ ದೇವಾಲಯಗಳಲ್ಲಿ ಹೇರಳವಾಗಿ ಸಹ ಕಾಣಬಹುದಾಗಿದೆ. ಈ ತರಹ ಬೇಗೂರಿನ ನಗರೇಶ್ವರ ದೇವಾಲಯ, ತಲಕಾಡಿನ ಮರುಳೇಶ್ವರ ಹಾಗೂ ಪಾತಾಳೇಶ್ವರ ದೇವಾಲಯಗಳಲ್ಲಿನ ಸ್ತಂಭಗಳು ಇದೇ ವಿನ್ಯಾಸವನ್ನು ಹೊಂದಿವೆ. ಈ ನವರಂಗದ ಮಧ್ಯದ ಅಂಕಣದಲ್ಲಿನ ಮೇಲ್ಛಾವಣಿಯು ಸರಳ ಪದ್ಮ ದಳದ ಕೆತ್ತನೆಯನ್ನು ಕಾಣಬಹುದು. ಈ ನವರಂಗದ ಬಲಭಾಗದ ಗೋಡೆ ಮತ್ತು ಮೇಲ್ಛಾವಣಿ ಬಿದ್ದು ಹೋಗಿದ್ದು ಅಲ್ಲಿಯೇ ಮರವೊಂದು ಬೆಳೆದಿರುವುದು ಈ ದುಸ್ಥಿತಿಗೆ ಕಾರಣವಾಗಿದೆ. ನವರಂಗದ ಮುಂದೆ ತೆರೆದ ಮುಖಮಂಟಪದ ಅವಶೇಷಗಳಿವೆ. ಅಲ್ಲಿನ ಸ್ತಂಭಗಳು 5 ಅಡಿ ಎತ್ತರವಾಗಿದ್ದು ಕೆಳಗಿನಿಂದ ಚೌಕಾಕಾರ, ಅಷ್ಟ, ಹದಿನಾರು ಕೋನ ಮತ್ತು ಪುನಃ ಚೌಕ ನಂತರ ಅಷ್ಟ ಮತ್ತು ವೃತ್ತಾಕಾರವಿದ್ದು ಅದರ ಮೇಲಿನ ಬೋದಿಗೆ ಹಾಗೂ ಮೇಲಿನ ಕಲ್ಲಿನ ತೊಲೆಗಳಿದ್ದು ಸಂಪೂರ್ಣವಾಗಿ ಬಿದ್ದುಹೋಗಿರುವುದನ್ನು ಕಾಣಬಹುದಾಗಿದೆ. ಈ ಮುಖಮಂಟಪವು ಗಂಗರ ಕಾಲದ್ದಾಗಿರದೇ ಇದೂ ಹೊಯ್ಸಳರ ಕಾಲಾದ್ದಾಗಿರುವುದು. ಇದಕ್ಕೆ ಪುಷ್ಟೀಕರಿಸಲು ಹೊಯ್ಸಳರ ದಾನ ಶಾಸನಗಳಿವೆ. ಈ ಸ್ತಂಭಗಳ ಮೇಲೆ ಪ್ರಾಣಿ, ಪಕ್ಷಿ, ಹೂಬಳ್ಳಿ ಮತ್ತು ಸ್ತ್ರೀಯರ ಉಬ್ಬುಶಿಲ್ಪಗಳಿಂದ ಅಲಂಕೃತವಾಗಿವೆ. ಹಾಗೂ ನವರಂಗದ ಬಾಗಿಲ ಬಳಿಯಲ್ಲಿ ದಕ್ಷಿಣಾಮೂರ್ತಿ, ಯೋಗನರಸಿಂಹ, ಕೀರ್ತಿಮುಖಗಳ ಬಿಡಿಶಿಲ್ಪಗಳನ್ನು ಸಹ ಕಾಣಬಹುದಾಗಿದೆ.

ಅಧಿಷ್ಠಾನ ಭಾಗವು ಮಣ್ಣಿನಿಂದ ಮತ್ತು ಗೋಡೆಯ ಕುಸಿತದಿಂದ ಮುಚ್ಚಿಹೋಗಿದೆ. ಯಾವ ರೀತಿಯದೆಂದು ಗುರುತಿಸಲಾಗುವುದಿಲ್ಲ. ದೇವಾಲಯ ಭಿತ್ತಿಯ ಬಹುಭಾಗ ಕುಸಿದಿದೆ. ಆದರೆ ಭಿತ್ತಿಯಲ್ಲಿ ಚೋಳರ ಮತ್ತು ಹೊಯ್ಸಳರ ಕಾಲದ ತಮಿಳು ಲಿಪಿ ಶಾಸನಗಳು ಕಂಡುಬರುತ್ತದೆ. ಗರ್ಭಗುಡಿಯ ಭಿತ್ತಿಯಲ್ಲಿ ಮಕರ ತೋರಣ ಕೋಷ್ಠಗಳಿವೆ. ಇದು ಬ್ರಹ್ಮಕಾಂತಶೈಲಿಯ ಅರೆಸ್ತಂಭಗಳು ಅದನ್ನು ಸೇರಿಸುವ ಕಮಾನಿನಾಕಾರದ ಮಕರ ತೋರಣವನ್ನು ಹೊಂದಿದೆ. ಈ ತೋರಣದ ಮಕರಗಳ ನಡುವೆ ಅರಳಿದ ಕಮಲ, ಅದರ ಮೇಲೆ ಕೀರ್ತಿಮುಖವನ್ನು ಅಲಂಕಾರಿಕವಾಗಿ ಕೆತ್ತಿರುವುದನ್ನು ಕಾಣಬಹುದು ಹಾಗೂ ಭಿತ್ತಿಯಲ್ಲಿ ಬ್ರಹ್ಮಕಾಂತ ಭಿತ್ತಿಪಾದ ಅರೆಸ್ತಂಭಗಳನ್ನು ಕಾಣಬಹುದು. ಭಿತ್ತಿಯು ನವರಂಗದ ಬಲಭಾಗವು ಪೂರ್ಣವಾಗಿ ಬಿದ್ದುಹೋಗಿದೆ. ಭಿತ್ತಿಯ ಮೇಲೆ ಪ್ರಸ್ತರ ಭಾಗವಿದ್ದು ಉತ್ತರಾ ವಲಭಿ, ಕಪೋತ ವಾಜನವಿದೆ. ಪ್ರಸ್ತರ ಅತ್ಯಂತ ಕೆಳಭಾಗವಾದ ಉತ್ತರಾದಲ್ಲಿ ತಮಿಳು ಶಾಸನ ಲಿಪಿಗಳಿವೆ. ಇದರ ಮೇಲೆ ವಲಭಿಯಿದ್ದು ಕಪೋತ ಉತ್ತರದ ಮಧ್ಯದಲ್ಲಿ ಸೇರಿಸಿದೆ. ವಲಭಿಯಲ್ಲಿ ಭೂತಾಮಾಲಾ ಆನೆ, ಶಿವಲಿಂಗಕ್ಕೆ ಪೂಜೆ ಮಾಡುತ್ತಿರುವ ಮತ್ತು ನೃತ್ಯಗಾತಿ ಇತರ ಅಸ್ಪಷ್ಟ ಉಬ್ಬುಕೆತ್ತನೆಗಳನ್ನು ಕಾಣಬಹುದಾಗಿದೆ. ಇದರ ಮೇಲೆ ಕಪೋತವಿದ್ದು ಭಿತ್ತಿಯ ಮೇಲೆ ನೀರು ಬೀಳದಂತೆ ತಡೆಯುವ ಸಲುವಾಗಿ ಎಲ್ಲಾ ಅಂಗಗಳಿಗಿಂತ ಹೆಚ್ಚು ಹೊರಚಾಚುವಂತೆ ನಿರ್ಮಿಸಿರುವುದನ್ನು ಕಾಣಬಹುದು. ಇದರಲ್ಲಿ ಅಲ್ಲಲ್ಲಿ ನಾಸಿಗಳ ಅಲಂಕರಣವಿದೆ. ನಂತರ ವಾಜನವು ಪ್ರಾಣಿಗಳ ಉಬ್ಬುಶಿಲ್ಪವನ್ನುಕಾಣಬಹುದು. ಪ್ರಸ್ತರ ನಂತರ ಪ್ರಾಸಾದ ಭಾಗವಿದ್ದು, ಇದು ಸಹ ಗ್ರಾನೈಟ್ ಕಲ್ಲಿನಿಂದ ನಿರ್ಮಿಸಲಾಗಿರುವುದು. ಇದರಲ್ಲಿ ಶ್ರೀಕರ ಶಿಖರವನ್ನು ಕಾಣಬಹುದು. ಪ್ರಾಸಾದ ಪೀಠವು ಚೌಕಾಕಾರವಿದ್ದು ಅದರ ಮೇಲೆ ಗ್ರೀವವನ್ನು ಹೊಂದಿದೆ. ಗ್ರೀವ ಕೋಷ್ಠಗಳು ಇದ್ದು ಅದರಲ್ಲಿ ಯಾವುದೇ ಗ್ರೀವ ದೇವತೆಗಳನ್ನು ಕಾಣಬರುವುದಿಲ್ಲ. ಮತ್ತು ಶಿಖರದ ಮುಂದೆ ಶುಕನಾಸವಿದ್ದು ಅದರಲ್ಲಿಯೂ ಪ್ರಧಾನ ದೇವತೆಯ ಶಿಲ್ಪವು ಕಾಣಬರುವುದಿಲ್ಲ. ನವರಂಗದ ಪ್ರಸ್ತರದ ಮೇಲೆ ದಿಂಡಿಗೋಡೆಯಿದ್ದು ಇದನ್ನು ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಈ ದೇವಾಲಯ ಶಾಸನದ ಪ್ರಕಾರ ಗಂಗರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಾಗಿದ್ದು ಚೋಳರ ಕಾಲದಲ್ಲಿ ಪ್ರೋತ್ಸಾಹ ಮತ್ತು ಹೊಯ್ಸಳರ ದಾನ ಮತ್ತು ಅದರ ಮುಂದಿನ ಮುಖಮಂಟಪ ನಿರ್ಮಿಸಿರಬಹುದಾಗಿದೆ. ಅವು ಹೊಯ್ಸಳರ ಕಾಲದ ಸ್ತಂಭಗಳ ಲಕ್ಷಣಗಳನ್ನು ಹೋಲುತ್ತವೆ. ಇದು ಈ ಭಾಗದ ಗಂಗರ ಕಾಲದ ಪ್ರಮುಖ ಮತ್ತು ಸುಂದರ ದೇವಾಲಯವಾಗಿದ್ದು ಕಲೆ ಮತ್ತು ವಾಸ್ತು ಶಿಲ್ಪದಲ್ಲಿ ಉನ್ನತವಾದ ಪ್ರಾಚೀನ ದೇವಾಲಯವಾಗಿದ್ದು ಈಗ ಪಾಳುಬಿದ್ದು ವಿನಾಶದ ಅಂಚಿನಲ್ಲಿದೆ. ಇದಕ್ಕೆ ಸೂಕ್ತ ರಕ್ಷಣೆಯ ಅವಶ್ಯಕತೆಯು ಸಹ ಕಂಡುಬರುತ್ತದೆ.

ನಾರಾಯಣಸ್ವಾಮಿ ದೇವಾಲಯ

ಅಮೃತೇಶ್ವರ ದೇವಾಲಯದ 300 ಮೀಟರ್ ದೂರದಲ್ಲಿದೆ. ಇದು ಚೋಳರ ದೊರೆ ರಾಜರಾಜ ಚೋಳನ 23ನೇ ವರ್ಷದ ಆಳ್ವಿಕೆಯಯಲ್ಲಿ ಕ್ರಿ.ಶ.1007ರಲ್ಲಿ ಜಯಗೊಂಡ ಚೋಳ ವೀಣ್ಣಾಗರ್ ಆಳ್ವಾರ್ ಅಲಿಯಾಸ್ ನಾರಾಯಣಸ್ವಾಮೀ ದೇವರ ಪ್ರತಿಷ್ಠಾಪಿಸಿದ ಬಗ್ಗೆ ಭಿತ್ತಿಯ ಶಾಸನದಲ್ಲಿ ಉಲ್ಲೇಖವಿದೆ ಹಾಗೂ ದೇವಾಲಯದ ಭಿತ್ತಿಯಲ್ಲಿ ಚೋಳರ ಕಾಲದ ತಮಿಳು ಶಾಸನಗಳು ದೊರೆಯುತ್ತವೆ. ಆದ್ದರಿಂದ ಇದು ಚೋಳರ ಕಾಲದಲ್ಲಿ

ನಿರ್ಮಾಣವಾದ ದೇವಾಲಯವೆನ್ನಲಾಗಿದೆ. ಆದರೆ ಈ ದೇವಾಲಯದ ವಾಸ್ತುಶಿಲ್ಪದ ಲಕ್ಷಣವನ್ನು ಗಮನಿಸಿದಾಗ ಇದು ಗಂಗರ ಕಾಲದಲ್ಲಿ ನಿರ್ಮಾಣವಾದಂತೆ ಕೆಲವು ಅಂಶಗಳು ಪುಷ್ಟೀಕರಿಸುತ್ತವೆ.

ಈ ದೇವಾಲಯಕ್ಕೆ ಗರ್ಭಗೃಹ, ಸುಖನಾಸಿ, ಮುಖಮಂಟಪವಿದ್ದು, ಪ್ರಾಸಾದ ಭಾಗವಿಲ್ಲ ಮತ್ತು ಮುಖಮಂಟಪ ಮುಂದೆ ಪ್ರಾಕಾರವಿದ್ದಂತೆ ಕಾಣಬಹುದು. ಗರ್ಭಗುಡಿಯಲ್ಲಿ ½ ಅಡಿ ಎತ್ತರದ ಸಿಮೆಂಟ್ ಮತ್ತು ಗಾರೆಯಿಂದ ನಿರ್ಮಿಸಿದ ಪೀಠ ಮತ್ತು ಅದರ ಮೇಲೆ ಒಂದು ಅಡಿ ಕಲ್ಲಿನ ಚೌಕಾಕಾರದ ಪೀಠದ ಮೇಲೆ 3½ ಅಡಿ ಎತ್ತದ ಸಮಭಂಗಿಯಲ್ಲಿ ನಿಂತಿರುವ ಜನಾರ್ಧನನ ವಿಗ್ರಹವಿದೆ. ವಿಗ್ರಹವನ್ನು ಇತ್ತೀಚಿಗೆ ಕೆಲವು ವರ್ಷಗಳ ಹಿಂದೆ ತಂದು ಇಡಲಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಗರ್ಭಗುಡಿಯ ಹಿಂದಿನ ಮೂಲೆಗಳಲ್ಲಿ ಭಿತ್ತಿಗೆ ಹೊಂದಿಕೊಂಡಂತೆ ಚೌಕಾಕಾರದ ಕಂಬ ಹಾಗೂ ಅದರ ಮೇಲೆ ತೊಲೆಯನ್ನು ಹಾಕಿರುವುದು ಕಂಡುಬರುತ್ತವೆ. ಬಹುಶಃ ಇದು ಗಂಗರ ಕಾಲದಲ್ಲಿ ನಿರ್ಮಾಣವಾಗಿರಬಹುದು. ನಂತರ ಚೋಳರ ಕಾಲದಲ್ಲಿ ಪುನರ್ನಿರ್ಮಿಸಿರಬಹುದು?, ಇದಕ್ಕೆ ಪೂರಕವಾಗಿ ದೇವಾಲಯದ ಮುಂಭಾಗದಲ್ಲಿ 3 ಅಡಿ ಎತ್ತರ ಬಲಿಪೀಠ, ಪಾಣಿಪೀಠ ಹಾಗೂ ಸೂರ್ಯ ವಿಗ್ರಹವನ್ನು ಕಾಣಬಹುದು. ಆದ್ದರಿಂದ ಮೊದಲು ಇದು ಶೈವ ದೇವಾಲಯವಾಗಿ ಕಾಣಬಹುದಾಗಿದ್ದು ನಂತರ ರಾಜರಾಜ ಚೋಳನ ನಾರಾಯಣಸ್ವಾಮಿಯನ್ನು ಪ್ರತಿಷ್ಠಾಪಿಸಿರಬಹುದಾಗಿದೆ. ಗರ್ಭಗೃಹ ಮುಂದಿನ ಸುಖನಾಸಿಯಲ್ಲಿ ಎಡಭಾಗದ ಗೋಡೆಗೆ ಸೇರಿಸಿದಂತೆ 2½ ಅಡಿ ಎತ್ತರದ ಜನಾರ್ಧನನ ಲಕ್ಷಣವಿರುವ ವಿಷ್ಣುಶಿಲ್ಪವಿದೆ. ಇದು ಚತುರ್ಭುಜ ಹೊಂದಿದ್ದು ಬಲಹಿಂಗೈಯಲ್ಲಿ ಚಕ್ರ, ಎಡಹಿಂಗೈಯಲ್ಲಿ ಶಂಖ, ಬಲಮುಂಗೈಯಲ್ಲಿ ಅಭಯ ಮುದ್ರೆ ಮತ್ತು ಎಡಮುಂಗೈಲಿ ಕಟ್ಯವಲಂಭಿತ ಮುದ್ರೆ ಹೊಂದಿದೆ. ಎಡಗಾಲ ಬಳಿ ಗಧೆಯನ್ನು, ತಲೆಯಲ್ಲಿ ಕಿರೀಟ ಮುಕುಟ ಕಿವಿಯಲ್ಲಿ ಮಕರಕುಂಡಲ ಮತ್ತು ಆಭರಣಗಳ ಅಲಂಕರಣವಿದೆ. ಕೆಳಭಾಗದಲ್ಲಿ ಶ್ರೀದೇವಿ ಮತ್ತು ಭೂದೇವಿಯರ ಉಬ್ಬುಶಿಲ್ಪವನ್ನು ಕಾಣಬಹುದಾಗಿದೆ. ಇದರ ದ್ವಾರ ಸರಳವಾಗಿದ್ದು ನಂತರ ತೆರೆದ 2 ಕಂಬಗಳ ಮುಖಮಂಟಪವಿದೆ.

ಈ ದೇವಾಲಯದ ಅಧಿಷ್ಠಾನವು ಸಹ ಮಣ್ಣಿನಿಂದ ಮುಚ್ಚಲ್ಪಟ್ಟಿದ್ದು, ಭಿತ್ತಿಯಲ್ಲಿ ಬ್ರಹ್ಮಕಾಂತ ಭಿತ್ತಿ ಪಾದ ಅರೆ ಸ್ತಂಭಗಳನ್ನು ಹೊಂದಿದೆ. ಹಾಗೂ ತಮಿಳು ಲಿಪಿ ಶಾಸನಗಳ ಸುತ್ತಲೂ ಹಾಕಿಸಲಾಗಿದೆ. ಪ್ರಸ್ತರ ಭಾಗದಲ್ಲಿ ಮೊದಲು ಉತ್ತರಾ ನಂತರ ಕಪೋತವಿದ್ದು ಅದರಲ್ಲಿ ನಾಸಿಯ ಅಲಂಕರಣವನ್ನು ಕಾಣಬಹುದು. ಗರ್ಭಗುಡಿಯ ಮೇಲೆ ಪ್ರಾಸಾದ ಭಾಗವು ಅವನತಿಯಾಗಿದ್ದು ಮೇಲ್ಛಾವಣಿಯನ್ನು ಗಾರೆಯಿಂದ ಸಮತಟ್ಟಾಗಿ ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯ ಐತಿಹಾಸಿಕವಾಗಿ ಮಹತ್ವವಾಗಿದ್ದು ಮೊದಲನೇ ರಾಜರಾಜಚೋಳನ ಅಧಿಕಾರಿ ಅಪ್ರಮೇಯನು ಕರ್ನಾಟಕದ ಮೇಲೆ ಗೆದ್ದ ಬಗ್ಗೆ ಕಲಿಯೂರು ಕ್ರಿ.ಶ.1006ರ ಶಾಸನ ತಿಳಿಸುತ್ತದೆ. ಕ್ರಿ.ಶ.1007ರಲ್ಲಿ ಈ ದೇವಾಲಯದಲ್ಲಿ ರಾಜರಾಜಚೋಳನ ಬಿರುದಾಗಿದ್ದ ಜಯಗೊಂಡ ಚೋಳ ವಿಣ್ಣಾಗರ್ ಹೆಸರಿನಲ್ಲಿ ದೇವರನ್ನು ಪ್ರತಿಷ್ಠಾಪಿಸಿದ್ದರಿಂದ ಇದು ಚೋಳರ ಮೊದಲ ದೇವಾಲಯವಾಗಿರಬಹುದು ಅಥವಾ ಗಂಗರ ಕಾಲದಲ್ಲಿ ನಿರ್ಮಾಣವಾದ ದೇವಾಲಯದಲ್ಲಿ ವಿಗ್ರಹ ಪ್ರತಿಷ್ಠಾಪಿಸಿರಬಹುದು. ಈ ದೇವಾಲಯದ ಭಿತ್ತಿಯು ಚೋಳರ ಮತ್ತು ತಮಿಳ್ ಅಧಿಕಾರಿಗಳ ಶಾಸನಗಳನ್ನು ಹೊಂದಿರುವುದು.

ವರದರಾಜ ದೇವಾಲಯ

ಈ ದೇವಾಲಯವು ಗ್ರಾಮದ ಮಧ್ಯದಲ್ಲಿದ್ದು ಕ್ರಿ.ಶ.1180ರ ಕಾಲಮಾನದ ಹೊಯ್ಸಳರ ದಾನ ಶಾಸನವು ಇದರ ಅಧಿಷ್ಠಾನದಲ್ಲಿ ದೊರೆತಿದೆ. ಆದ್ದರಿಂದ ಇದು ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿರಬಹುದು ಎಂದು ಹೇಳಬಹುದು. ಇದು ಆಧುನಿಕವಾಗಿ ಬದಲಾವಣೆಗೊಂಡಿವೆ. ಇದು ಗರ್ಭಗೃಹ, ನವರಂಗ, ಮುಖಮಂಟಪಗಳನ್ನು ಹೊಂದಿವೆ. ಹೊಸದಾಗಿ ನಿರ್ಮಿಸಿದ ಭಿತ್ತಿ ಪ್ರಾಸಾದ ಭಾಗವನ್ನು ಕಾಣಬಹುದು.

ಈ ದೇವಾಲಯದ ಗರ್ಭಗುಡಿಯಲ್ಲಿ ಪ್ರಧಾನ ದೇವತೆಯನ್ನು 4.5 ಅಡಿ ಎತ್ತರದ ವರದರಾಜ ಮೂರ್ತಿಯಿದೆ. ಇದು ಸುಂದರವಾಗಿದ್ದು ಬಲಹಿಂದಿನ ಕೈಯಲ್ಲಿ ಸ್ಥಿತಿ ಚಕ್ರ, ಎಡಹಿಂದಿನ ಕೈಯಲ್ಲಿ ಶಂಖ, ಬಲಮುಂಗೈಲ್ಲಿ ಕೈಯಲ್ಲಿ ಪದ್ಮ ಮತ್ತು ಎಡಮುಂಗೈಲಿ ಅಭಯಹಸ್ತವನ್ನು ಕಾಣಬಹುದಾಗಿದೆ. ತಲೆಯಲ್ಲಿ ಕಿರೀಟ ಮುಕುಟ, ಹಣೆಯಲ್ಲಿ ರತ್ನಪಟ್ಟಿ, ಕಿವಿಗಳಲ್ಲಿ ಮಕರಕುಂಡಲ, ಕತ್ತಿನಲ್ಲಿ ಹಾರ ಮತ್ತು ಯಜ್ಞೋಪವೀತವನ್ನು ಧರಿಸಲಾಗಿದೆ. ಹಾಗೆಯೇ ತೋಳ್ಬಂದಿ, ವಾಜೀಬಂಧ ಮತ್ತು ಕಂಕಣವನ್ನು ಕೈಯಲ್ಲಿ ಕಾಣಬಹುದು. ನಡುವಿನಲ್ಲಿ ಕಟಿಸೂತ್ರ ಮತ್ತು ಉತ್ತರೀಯ ಬಂಧವನ್ನು ಧರಿಸಿದ್ದು ಕಾಲಿನಲ್ಲಿ ಕಾಲ್ಕಡಗವನ್ನು ಕಾಣಬಹುದು. ಮತ್ತು ಎಡ ಮತ್ತು ಬಲದಲ್ಲಿ ಚಾಮರಧಾರಣಿಯರ ಉಬ್ಬುಶಿಲ್ಪವಿದೆ. ವಿಗ್ರಹದ ಹಿಂದೆ ಕಲ್ಲಿನ ಕೀರ್ತಿಮುಖವಿರುವ ಪ್ರಭಾವಳಿಯು ಕಂಡುಬರುತ್ತವೆ. ಇದರಲ್ಲಿ ಹೊಯ್ಸಳರ ಕಾಲದ ಶಿಲ್ಪಗಳ ಲಕ್ಷಣಗಳನ್ನು ಕಾಣಬಹುದು. ಗರ್ಭಗುಡಿಯ ಮುಂದೆ ನವರಂಗವಿದೆ. ಅಲ್ಲಿ ನಾಲ್ಕು ಸ್ತಂಭಗಳಿದ್ದು ಇದಕ್ಕೆ ಪೀಠವಿರುವುದಿಲ್ಲ. ಚೌಕಾ, ಅಷ್ಟ, ಚೌಕ, ಅಷ್ಟ ಮತ್ತು ಚೌಕಾಕಾರವಿದ್ದು ಅದರ ಮೇಲೆ ಆಧಾರ ಪೋತಿಕಾವನ್ನು ಹೊಂದಿವೆ. ನವರಂಗದಲ್ಲಿ ಯಾವುದೇ ಶಿಲ್ಪವಿಲ್ಲ. ಮತ್ತು ಇದರ ಮುಂದೆ ಮುಖಮಂಟಪವಿದ್ದು ಇದನ್ನು ಆಧುನಿಕವಾಗಿ ನಿರ್ಮಿಸಿದ್ದು ಮುಂದೆ ಗರುಡ ಸ್ತಂಭವನ್ನು ಹೊಂದಿದೆ. ಈ ದೇವಾಲಯವು ವಾಸ್ತುಶೈಲಿಯಲ್ಲಿ ಪ್ರಮುಖವಾಗದಿದ್ದರೂ, ಪ್ರಧಾನ ದೇವತೆಯಾದ ಪ್ರಾಚೀನ ವರದರಾಜನ ಶಿಲ್ಪದಿಂದ ಪ್ರಾಮುಖ್ಯತೆ ಪಡೆದಿದೆ.

ಚೌಡೇಶ್ವರಿ ದೇವಾಲಯ

ಈ ದೇವಾಲಯ ಕೆರೆಯ ಬಳಿಯಿದ್ದು ಪೂರ್ವಾಭಿಮುಖವಾಗಿ ಗ್ರಾನೈಟ್ ಕಲ್ಲಿನಿಂದ ನಿರ್ಮಾಣವಾದ ದೇವಾಲಯವಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಗಳು ಉಲ್ಲೇಖವಾಗದಿದ್ದರೂ ವಾಸ್ತುಶಿಲ್ಪದ ಆಧಾರದ ಮೇಲೆ ಗಂಗ-ಚೋಳರ ಕಾಲದಲ್ಲಿ ಗರ್ಭಗೃಹ ನಿರ್ಮಾಣವಾಗಿ ತದನಂತರ ವಿಜಯನಗರ ಕಾಲದಲ್ಲಿ ಮುಖಮಂಟಪ ಮತ್ತು ಪ್ರಾಕಾರ ಭಾಗಗಳು ಸೇರ್ಪಡೆಯಾಗಿರುವುದನ್ನು ಕಾಣಬಹುದು.

ಈ ದೇವಾಲಯ ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪ ಪ್ರಾಕಾರ ಹಾಗು ಮಹಾದ್ವಾರವನ್ನು ಮತ್ತು ಇತ್ತೀಚೆಗೆ ನಿರ್ಮಿಸಿದ ಪ್ರಾಸಾದ ಮತ್ತು ದಿಂಡು ಗೋಡೆ ಮತ್ತು ಅದರಲ್ಲಿ ಕೋಷ್ಠಗಳು ಕಾಣಬಹುದು. ಆಧುನಿಕವಾಗಿ ಜೀರ್ಣೋದ್ಧಾರವಾಗಿದ್ದರೂ ಸಹ ತನ್ನ ಕೆಲವು ಮೂಲ ಸ್ವರೂಪವನ್ನು ಉಳಿಸಿಕೊಂಡು ಬಂದಿದೆ. ಗರ್ಭಗೃಹದಲ್ಲಿ ಪ್ರಧಾನ ದೇವತೆಯಾದ ಚಾಮುಂಡಿಯ 3 ಅಡಿ ಎತ್ತರವಾದ ಉಬ್ಬುಶಿಲ್ಪವಿದೆ. ಈ ಶಿಲ್ಪಕ್ಕೆ ಬೆಳ್ಳಿಯ ಮತ್ತು ತಗಡಿನ ಮುಖವಾಡಗಳ ಮೂಲಕ ಅಲಂಕರಣ ಮಾಡಿದ್ದರಿಂದ ಮೂಲ ಸ್ವರೂಪ ತಿಳಿಯುವುದಿಲ್ಲ. ಮತ್ತು ಇದರ ಹಿಂದಿನ ಭಿತ್ತಿಯಲ್ಲಿ ಟೈಲ್ಸ್‌ಗಳನ್ನು ಹಾಕಲಾಗಿದೆ. ಮತ್ತು

ಗರ್ಭಗುಡಿಯ ಬಾಗಿಲಿನಂತೆ ಕಾಣುವ ಎರಡು ಸ್ವತಂತ್ರ ಸ್ತಂಭ ಮತ್ತು ಬೋಧಿಗೆ ಇದ್ದು ಅದರ ಮೇಲೆ ಕಲ್ಲಿನ ತೊಲೆಯನ್ನು ಸೇರಿಸಲಾಗಿದೆ. ಮೇಲ್ಛಾವಣಿಯಲ್ಲಿ ಒಳಗೆ ಸರಳವಾದ ಪದ್ಮದಳದ ರೀತಿಯ ವಿತಾನವಿದೆ. ಮತ್ತು ಮುಂದೆ ಸುಖನಾಸಿಯಿದ್ದು ಅದರ ದ್ವಾರಬಂಧವು ಗ್ರಾನೈಟ್ ಅಥವಾ ಮಾರ್ಬಲ್ ಶಿಲೆಯಿಂದ ಮುಚ್ಚಲಾಗಿದೆ. ಅದರ ಮುಂದಿನ ನವರಂಗವು ನಾಲ್ಕು ಸ್ತಂಭಗಳ 9 ಅಂಕಣವಿದೆ. ಈ ಸ್ತಂಭಗಳ ಲಕ್ಷಣವು ಕೆಳಗೆ ಪೀಠ ಅದರ ಮೇಲೆ ಚೌಕ, ಅಷ್ಟ, ಚೌಕ, ಚೌಕಾಕಾರವಿದ್ದು ಆಧಾರ ಪೋತಿಕಾವನ್ನು ಹೊಂದಿದೆ. ಇದರ ಭಿತ್ತಿಯಲ್ಲಿ ಕಲ್ಲಿನ ಆಕಾರವು ಚಿಕ್ಕದಾಗಿದ್ದು ಇತ್ತೀಚಿಗೆ ನಿರ್ಮಿಸಿರುವಂತೆ ಕಾಣಬಹುದು. ನವರಂಗದಲ್ಲಿ ಗಂಗರ ಕಾಲದ ಲಕ್ಷಣವಿರುವ ವಿಷ್ಣು, ದುರ್ಗಾ, ಮಹಿಷಮರ್ದಿನಿ, ದ್ವಿಬಾಹು ಗಣಪತಿ, ಕಾರ್ತಿಕೇಯ, ಕಾಲಭೈರವ, ನಾಗರಕಲ್ಲಿನ ಬಿಡಿಶಿಲ್ಪಗಳನ್ನು ಕಾಣಬಹುದಾಗಿದೆ. ಇದರ ದ್ವಾರಬಂಧವು ಅಲಂಕಾರಿಕವಾಗಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ದ್ವಾರ ಶಾಖೆಯಲ್ಲಿ ಇಬ್ಬರು ಯಕ್ಷದ್ವಾರಪಾಲಕ ಕುಬ್ಜರನ್ನು ಕೆತ್ತಲಾಗಿದೆ. ಆದ್ದರಿಂದ ಇದನ್ನು ಕುಬ್ಜ ಶಾಖೆಯೆನ್ನಬಹುದು. ಶಾಖಾವು ಸ್ತಂಭದ ರೀತಿಯಿದ್ದು ವೃತ್ತಾ ಪದ್ಮದಳ ಮತ್ತು ಅದರ ಮೇಲೆ ಆಧಾರ ಪೋತಿಕಾ ಹೊಂದಿದೆ. ಅದರೆ ನಂತರ ಪ್ರಸ್ತರವಿದ್ದು ಅದರಲ್ಲಿ ಉತ್ತರಾ ಮತ್ತು ಮುಂಚಾಚಿದ ಕಪೋತವಿದ್ದು ಅದರಲ್ಲಿ ನಾಸಿಗಳ ಅಲಂಕರಣವನ್ನು ಕಾಣಬಹುದು.ಇದಕ್ಕೆ ಆಧುನಿಕ ಬಣ್ಣದ ಅಲಂಕರಣವನ್ನು ಮಾಡಲಾಗಿದೆ. ಇದರ ಮುಂದೆ ಮುಖಮಂಟಪವಿದ್ದು 16 ಸ್ತಂಭಗಳನ್ನು ಹೊಂದಿದೆ. ಇದರ ಅರ್ಧಭಾಗದ ಭಿತ್ತಿ ಸಣ್ಣಕಲ್ಲಿನಿಂದ ಮತ್ತು ಉಳಿದ ಭಾಗ ಕಬ್ಬಿಣದ ಗ್ರಿಲ್‌ನಿಂದ ಮಾಡಲಾಗಿದೆ. ಈ ಮುಖಮಂಟಪದ ಸ್ತಂಭಗಳು ವಿಭಿನ್ನವಾಗಿದ್ದು ಅದರಲ್ಲಿನ ಮಧ್ಯದ ನಾಲ್ಕು ಸ್ತಂಭಗಳು ಚೌಕಾಕಾರದ ಪೀಠ, ಚೌಕಾಕಾರದ ಪಾದ, ಮೇಲೆ ಅಷ್ಟ, 16 ಮುಖ, ನಂತರ ವೃತ್ತಾಕಾರ ಅದರ ಮೇಲೆ ಆಧಾರ ಪೋತಿಕಾವನ್ನು ಹೊಂದಿದ್ದು ಮೇಲೆ ಕಲ್ಲಿನ ತೊಲೆಯನ್ನು ಹೊಂದಿದೆ. ಉಳಿದವು ಸಹ ಸರಳವಾದ ಕೆಳಗೆ ಚೌಕ ಮತ್ತು ಅಷ್ಟಕಾರ, ಚೌಕ, ಅಷ್ಟ ಮತ್ತು ಚೌಕ ಬೋದಿಗೆ ಹೊಂದಿದೆ. ಈ ರೀತಿಯ ಲಕ್ಷಣವು ವಿಜಯನಗರ ಕಾಲದ ದೇವಾಲಯಗಳಲ್ಲಿ ಕಾಣಬಹುದು.

ಈ ದೇವಾಲಯದ ಅಧಿಷ್ಠಾನವು ಮಣ್ಣಿನಲ್ಲಿ ಮುಚ್ಚಿದ್ದು, ಭಿತ್ತಿಯನ್ನು ಸರಳವಾಗಿ ಗ್ರಾನೈಟ್ ಕಲ್ಲಿನಿಂದ ನಿರ್ಮಿಸಲಾಗಿದೆ. ಭಿತ್ತಿಯು ಶಿಥಿಲವಾಗಿ ಬೀಳುವಂತೆ ಕಂಡುಬಂದಿದ್ದು ಅದನ್ನು ಬೀಳದಂತೆ ತಡೆಯಲು ತಡೆಗೋಡೆಯನ್ನು ನಿರ್ಮಿಸಿರುವುದನ್ನು ಕಾಣಬಹುದು. ಇದರ ಮೇಲಿನ ಪ್ರಾಸಾದವು ಇತ್ತೀಚೆಗೆ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಇದರ ಲಕ್ಷಣವು ಶ್ರೀ ವಿಶಾಲ ಪ್ರಾಸಾದ ಶಿಖರ ರೀತಿಯಲ್ಲಿ ನಿರ್ಮಿಸಲಾಗಿದೆ. ಈ ಶಿಖರವನ್ನು ಚೌಕಾಕಾರದ ವಿಮಾನ ವೇದಿ ಮಾಡಿ ಅದರ ನಾಲ್ಕು ಮೂಲೆಗಳನ್ನು ಬಸವನ ವಾಸ್ತುಶಿಲ್ಪ ಮತ್ತು ಅದರ ನಂತರ ಗ್ರೀವವಿದ್ದು ಅಲ್ಲಿ ಗ್ರೀವಕೋಷ್ಠಗಳಲ್ಲಿ ನಾಲ್ಕು ಗ್ರೀವದೇವತೆಗಳ ಶಿಲ್ಪಗಳಿರುವಂತೆ ಮಾಡಲಾಗಿದೆ. ನಂತರ ಶಿಖರ ಮತ್ತು ಅದರ ಮೇಲೆ ಸ್ತೂಪಿಯನ್ನು ಕಾಣಬಹುದು ಅಲ್ಲದೆ ಮುಖಮಂಟಪದ ಮೇಲೆ ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಿದ ದೇವಕೋಷ್ಠಕಗಳನ್ನು ಮತ್ತು ದೇವತೆಗಳ ಶಿಲ್ಪಗಳನ್ನು ಕಾಣಬಹುದು.

ದೇವಾಲಯದ ಒಂದೆ ಇತ್ತೀಚೆಗೆ ನಿರ್ಮಿಸಿದ ನಾಗರಕಲ್ಲಿನ ಮಂಟಪ ಮತ್ತು ಎಡಭಾಗದಲ್ಲಿ ಬಸವನ ಮಂಟಪವಿದೆ. ಈ ದೇವಾಲಯದ ಮುಂದೆ ಎರಡು ಕಂಬಗಳ ಉಯ್ಯಾಲೆ ಕಂಬ ಎಂದು ಕರೆಯುವ ಮಹಾದ್ವಾರವಿದೆ. ಇದು ಅಲಂಕಾರವಾಗಿದ್ದು ಈ

ದ್ವಾರದ ಶಾಖೆಗಳಲ್ಲಿ ಬಲಭಾಗದ ತಳದಲ್ಲಿ ಪ್ರಾಣಿ ಉಬ್ಬುಶಿಲ್ಪ ಅದರ ಮೇಲೆ ಕುಬ್ಜನ ಶಿಲ್ಪವಿದೆ. ಎಡಭಾಗದಲ್ಲಿ ಸಿಂಹಮುಖ ಮೇಲೆ ಕುಂಭದ ರೀತಿಯಲ್ಲಿದೆ. ಈ ಮಹಾದ್ವಾರದ ಮೇಲಿನ ತೊಲೆಯಲ್ಲಿ ವೈಷ್ಣವ ನಾಮದ ಉಬ್ಬುಶಿಲ್ಪ ಕೆತ್ತನೆಯಿದ್ದು, ಇದು ಶೈವ ದೇವಾಲಯವಾದರೂ ವೈಷ್ಣವ ನಾಮವನ್ನು ಗಮನಿಸಿದಾಗ ಇದನ್ನು ವೈಷ್ಣವ ಪಂಥದವರು ನಿರ್ಮಿಸಿಕೊಟ್ಟಿರಬಹುದೇ ಎಂದು ಊಹಿಸಬಹುದು. ಇದರ ಮಹಾದ್ವಾರ ಶಾಖೆಗಳ ಮೇಲೆ ಉತ್ತರಾ ಮತ್ತು ಕಪೋತವಿದ್ದು ನಾಸಿಗಳ ಅಲಂಕರಣ ಇದೆ. ಅದರೆ ಮೇಲೆ ಸ್ತೂಪಿಯಿದೆ. ಇದೇ ರೀತಿಯ ದ್ವಾರವನ್ನು ಕೂಡ್ಲೂರಿನ ಚೆಲ್ಲಮ್ಮ ದೇವಾಲಯದ ಮುಂಭಾಗದಲ್ಲಿ ಕಾಣಬಹುದು. ಈ ದೇವಾಲಯದ ಸ್ತಂಭಗಳು ಮತ್ತು ಸಪ್ತಮಾತೃಕೆ ಶಿಲ್ಪಗಳು ಗಂಗರ ಕಾಲದಾಗಿದ್ದು ಅದೇ ರೀತಿ ಇಲ್ಲೂ ಸಹ ಹೆಚ್ಚು ಅಲಂಕಾರಿಕವಾಗಿ ಮಹಾದ್ವಾರವನ್ನು ಕಾಣಬಹುದಾಗಿದ್ದು ಇದೂ ಸಹ ಗಂಗರ ಕಾಲದಲ್ಲಿ ನಿರ್ಮಾಣವಾದ ದೇವಾಲಯಕ್ಕೆ ಮುಖ್ಯ ಆಧಾರವಾಗಿದೆ. ಈ ಮಹಾದ್ವಾರದ ಮುಂದೆ ಎರಡು ವೃತ್ತಾಕಾರದ ಬಲಿಪೀಠ ಮತ್ತು ಒಂದು ಶಿವಲಿಂಗವನ್ನು ಕಾಣಬಹುದು. ಅಲ್ಲದೇ ಪಕ್ಕದಲ್ಲಿ ಬಲಿಫಲಕವಿದ್ದು ಈ ಫಲಕದ ಮಧ್ಯದಲ್ಲಿ ಪಾದಗಳ ಚಿತ್ರಣ ಬಲಬದಿಯಲ್ಲಿ ವ್ಯಕ್ತಿಯೊಬ್ಬ ಕತ್ತಿ ಹಿಡಿದು ನಿಂತಿರುವುದು ಮತ್ತು ಆತನ ಪಕ್ಕದಲ್ಲಿ ಕೋಣದ ರುಂಡ ಮುಂಡ ಬೇರೆ ಬೇರೆ ಆಗಿರುವುದು ಕಾಣಬಹುದಾಗಿದೆ. ಇದರಿಂದ ಈ ದೇವರಿಗೆ ಪ್ರಾಣಿಬಲಿ ನೀಡುತ್ತಿದ್ದರ ಸೂಚಕವಾಗಿದೆ. ಮತ್ತು ಇದರ ಜೊತೆ ನಂದಿ ಶಿಲ್ಪವನ್ನು ಕಾಣಬಹುದು.

ಈ ದೇವಾಲಯದ ಸುತ್ತಲೂ ಏಳು ಅಡಿ ಎತ್ತರದ ಪ್ರಾಕಾರವಿದೆ. ಈ ಪ್ರಾಕಾರಕ್ಕೆ ದಕ್ಷಿಣಕ್ಕೆ ಒಂದು ಸಾಮಾನ್ಯದ್ವಾರ ಮತ್ತು ಪೂರ್ವಕ್ಕೆ ಮಹಾದ್ವಾರವನ್ನು ಹೊಂದಿದೆ. ಈ ಮಹಾದ್ವಾರದ ಮೇಲೆ ಗೋಪುರವಿಲ್ಲದೇ, ದಕ್ಷಿಣ ಮುಖ ಮಾಡಿ ಕುಳಿತಿರುವ ಬಸವನ ಗಾರೆ ಶಿಲ್ಪವನ್ನು ಕಾಣಬಹುದು. ಈ ಮಹಾದ್ವಾರದ ಒಳಭಾಗದಲ್ಲಿ ಶಾಸನೋಕ್ತ ವೀರಗಲ್ಲು ಹಾಗೂ ಒಂದು ಅಸ್ಪಷ್ಟ ಶಿಲ್ಪವನ್ನು ಕಾಣಬಹುದು.

ಈ ದೇವಾಲಯ ಗಂಗ-ಚೋಳರ ಕಾಲದಲ್ಲಿ ನಿರ್ಮಾಣವಾಗಿದ್ದರೂ ಮುಂದೆ ವಿಜಯನಗರ ಕಾಲದಲ್ಲಿ ಮುಖಮಂಟಪ ನಿರ್ಮಿತವಾಗಿರುವ ಲಕ್ಷಣಗಳನ್ನು ಕಾಣಬಹುದು ಮತ್ತು ಇತ್ತೀಚೆಗೆ ಇದನ್ನು ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯ ಶೈವ ಪಂಥದ ಶಕ್ತಿದೇವತೆಯ ಪ್ರಧಾನ ದೇವಾಲಯವಾಗಿದೆ.

ಈ ರೀತಿಯಲ್ಲಿ ಮಳೂರು ಪಟ್ಣ ಗ್ರಾಮವು ಐತಿಹಾಸಿಕ ಹಿನ್ನೆಲೆ ಹೊಂದಿರುವ ಗ್ರಾಮವಾಗಿದ್ದು ಇದರ ಪ್ರಾಚೀನತೆ ಅಧ್ಯಯನಕ್ಕೆ ನಮಗೆ ಇಲ್ಲಿನ ಶಾಸನಗಳು ಮತ್ತು ದೇವಾಲಯಗಳು ಸಹಕಾರಿಯಾಗಿವೆ. ಈ ಗ್ರಾಮವು ಗಂಗರು, ಚೋಳರ ಕಾಲದಲ್ಲಿ ಉನ್ನತ ಮಟ್ಟದಲ್ಲಿತ್ತು ಎಂಬುದಾಗಿ ಶಾಸನ ಮತ್ತು ದೇವಾಲಯ ನಿರ್ಮಾಣದಿಂದ ತಿಳಿದುಬರುತ್ತದೆ. ಹೊಯ್ಸಳರ ಕಾಲದಲ್ಲಿಯೂ ಸಹ ತಮಿಳು ಅಧಿಕಾರಿಗಳು ಇಲ್ಲಿ ಆಳ್ವಿಕೆ ನಡೆಸಿ, ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿದ ಬಗ್ಗೆ ಶಾಸನಗಳು ಬೆಳಕು ಚೆಲ್ಲುತ್ತವೆ. ಹಾಗೆಯೇ ಮುಂದೆ ವಿಜಯನಗರ ಕಾಲದಲ್ಲಿ ದೇವಾಲಯಗಳ ಜೀರ್ಣೋದ್ಧಾರ ಮತ್ತು ಕೆಲವು ಭಾಗಗಳ ಸೇರ್ಪಡೆಯನ್ನು ದೇವಾಲಯಗಳ ವಾಸ್ತುಲಕ್ಷಣಗಳಲ್ಲಿ ಗುರುತಿಸಬಹುದಾಗಿದೆ. ಒಟ್ಟಾರೆ ಈ ಗ್ರಾಮದ ದೇವಾಲಯಗಳ ಮೂಲಸ್ವರೂಪವು ಗಂಗರ ಕಾಲದಿಂದ ಉಗಮಿಸಿ, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಪ್ರೋತ್ಸಾಹಿಸಿದ ಬಗ್ಗೆ ಶಾಸನ ಮತ್ತು ದೇವಾಲಯಗಳ ವಾಸ್ತು ಲಕ್ಷಣಗಳು ಪ್ರಮುಖ

ಸಾಕ್ಷಿಯಾಗಿವೆ. ಈ ರೀತಿಯ ಐತಿಹಾಸಿಕ ಸ್ಮಾರಕಗಳು ಇಂದು ನಿರ್ಲಕ್ಷ್ಯಕ್ಕೆ ಒಳಗಾಗಿ ನಶಿಸಿ ಹೋಗುತ್ತಿರುವುದನ್ನು ಸಹ ನಾವು ಕಾಣಬಹುದಾಗಿದೆ. ಈ ಸ್ಮಾರಕಗಳನ್ನು ಸಂರಕ್ಷಿಸಿ, ನಮ್ಮ ಐತಿಹಾಸಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಆಧಾರ ಸೂಚಿ

1. ಬಿ.ಎಲ್.ರೈಸ್, 1905, **ಎಪಿಗ್ರಾಫಿಯ ಕರ್ನಾಟಕ ಸಂಪುಟ 9, ಬೆಂಗಳೂರು ಜಿಲ್ಲೆ.**
2. **ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್–1935**
3. ಜಿ.ಮನೋಜ್, 2015, **ದೇವಾಲಯ ವಾಸ್ತುವಿಜ್ಞಾನ,** ಸುಬೋಧಿನಿ ಪಬ್ಲಿಕೇಷನ್ ಮತ್ತು ನಾಲೆಡ್ಜ್ ಅಕಾಡೆಮೆ, ಚಿತ್ರದುರ್ಗ.
4. ಸೂರ್ಯನಾಥ ಕಾಮತ್, 1989, **ಬೆಂಗಳೂರು ರೂರಲ್ ಜಿಲ್ಲಾ ಗ್ಯಾಸೆಟಿಯರ್,** ಬೆಂಗಳೂರು.
5. ಕೂ.ಸ.ಅಪರ್ಣ, 1999, **ದೇವಾಲಯ ವಾಸ್ತುಶಿಲ್ಪ ಪರಿಚಯ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಎಸ್.ಕೆ.ರಾಮಚಂದ್ರರಾವ್, 1975, ಮೂರ್ತಿಶಿಲ್ಪ ನೆಲೆ–ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
7. The Chola Temples, 2004, **Archaeological survey of India. New Dehli.**
8. ಸೂರ್ಯನಾಥಕಾಮತ್, 2015, **ಕರ್ನಾಟಕ ಸಂಕ್ಷಿಪ್ತ ಇತಿಹಾಸ,** ಎಂ.ಸಿ.ಸಿ ಪಬ್ಲಿಕೇಷನ್.
9. ಗೋಪಿನಾಥರಾವ್, ಡಿ.ಎ., 1997, **ಎಲಿಮೆಂಟ್ಸ್ ಅಫ್ ಹಿಂದೂ ಐಕೋನೂಗ್ರಫಿ, ಭಾಗ 1&2, ಮೋತಿಲಾಲ್** ಬನರಸೀದಾಸ್ ಪಬ್ಲಿಷರ್ಸ್, ಡೆಲ್ಲಿ,
10. ಶರ್ಮಾ.ಐ.ಕೆ, 1992, ದಿ **ಟೆಂಪಲ್ಸ್ ಆಫ್** ಗಂಗಾಸ್ **ಆಫ್ ಕರ್ನಾಟಕ,** ಆರ್ಕಿಯಾಲಜಿಕಲ್ ಸರ್ವೇ ಅಫ್ ಇಂಡಿಯಾ.
11. ಜ್ಞಾನಾನಂದ ಜಿ., 2004, **ಶಿಲ್ಪಾದರ್ಶ, ಸಂಪುಟ –2,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

■

ಇತಿಹಾಸ ದರ್ಪಣದ ಹಿಂದಿನ ಸಂಚಿಕೆಗಳ ದರ ಪಟ್ಟಿ

ಸಂಚಿಕೆಗಳು	ರೂ	✓	ಪುಸ್ತಕಗಳು	ರೂ	✓
ಇತಿಹಾಸ ದರ್ಪಣ ಪುಸ್ತಕ –1*	10		ಇತಿಹಾಸ ದರ್ಪಣ ಪುಸ್ತಕ –16	40	
ಇತಿಹಾಸ ದರ್ಪಣ ಪುಸ್ತಕ –2*	10		ಇತಿಹಾಸ ದರ್ಪಣ ಪುಸ್ತಕ –17	60	
ಇತಿಹಾಸ ದರ್ಪಣ ಪುಸ್ತಕ –3*	10		ಇತಿಹಾಸ ದರ್ಪಣ ಪುಸ್ತಕ –18	70	
ಇತಿಹಾಸ ದರ್ಪಣ ಪುಸ್ತಕ –4*[1]	90		ಇತಿಹಾಸ ದರ್ಪಣ ಪುಸ್ತಕ –19	75	
ಇತಿಹಾಸ ದರ್ಪಣ ಪುಸ್ತಕ –5	10		ಇತಿಹಾಸ ದರ್ಪಣ ಪುಸ್ತಕ –20	75	
ಇತಿಹಾಸ ದರ್ಪಣ ಪುಸ್ತಕ –6,7*	20		ಇತಿಹಾಸ ದರ್ಪಣ ಪುಸ್ತಕ –21,22	150	
ಇತಿಹಾಸ ದರ್ಪಣ ಪುಸ್ತಕ –8 [2]	100		ಇತಿಹಾಸ ದರ್ಪಣ ಪುಸ್ತಕ –23	80	
ಇತಿಹಾಸ ದರ್ಪಣ ಪುಸ್ತಕ –9	20		ಇತಿಹಾಸ ದರ್ಪಣ ಪುಸ್ತಕ –24	90	
ಇತಿಹಾಸ ದರ್ಪಣ ಪುಸ್ತಕ –10	30		ಇತಿಹಾಸ ದರ್ಪಣ ಪುಸ್ತಕ –25 [4]	180	
ಇತಿಹಾಸ ದರ್ಪಣ ಪುಸ್ತಕ –11	30		ಇತಿಹಾಸ ದರ್ಪಣ ಪುಸ್ತಕ –26	75	
ಇತಿಹಾಸ ದರ್ಪಣ ಪುಸ್ತಕ–12, 13[3]	110		ಇತಿಹಾಸ ದರ್ಪಣ ಪುಸ್ತಕ –27	100	
ಇತಿಹಾಸ ದರ್ಪಣ ಪುಸ್ತಕ –14	30		ಇತಿಹಾಸ ದರ್ಪಣ ಪುಸ್ತಕ –28	100	
ಇತಿಹಾಸ ದರ್ಪಣ ಪುಸ್ತಕ –15	40		ಇತಿಹಾಸ ದರ್ಪಣ ಪುಸ್ತಕ – 29	100	

ಒಟ್ಟು ಮೊತ್ತ ______________________

ಹಿಂದಿನ ಸಂಚಿಕೆಗಳು ಬೇಕಾಗಿರುವವರು ಅವಶ್ಯವಿರುವ ಸಂಚಿಕೆಗಳನ್ನು ಗುರುತು ಮಾಡಿ, ಅವುಗಳ ಒಟ್ಟು ಮೊಬಲಗನ್ನು **"Editor, Itihasa Darpana"** ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ತೆಗೆಸಿದ **ಚೆಕ್ / ಡಿ.ಡಿ** ಮೂಲಕ ಪಟ್ಟಿಯನ್ನು ನಮ್ಮ ವಿಳಾಸಕ್ಕೆ ಕಳುಹಿಸಿ. ಕಳುಹಿಸಿಕೊಟ್ಟಲ್ಲಿ ಸಾದಾ ಅಂಚೆಯ ಮೂಲಕ ಕಳುಹಿಸಿಕೊಡಲಾಗುವುದು.

ವಿಶೇಷ ಕೊಡುಗೆ: ಇತಿಹಾಸ ದರ್ಪಣ ನಿಯತಕಾಲಿಕೆಯ ಎಂಟನೇ ವಾರ್ಷಿಕೋತ್ಸವದ ಪ್ರಯುಕ್ತ ರೂ. 500/– ಮೇಲ್ಪಟ್ಟ ಮೊತ್ತದ ಸಂಚಿಕೆಗಳ ಖರೀದಿಯ ಮೇಲೆ ಶೇ 15% ರಷ್ಟು ಹಾಗೂ ರೂ. 1000/– ಮೇಲ್ಪಟ್ಟ ಮೊತ್ತದ ಪುಸ್ತಕ ಖರೀದಿಯ ಮೇಲೆ ಶೇ 20% ರಷ್ಟು ವಿಶೇಷ ರಿಯಾಯಿತಿಯನ್ನು ನೀಡಲಾಗುವುದು –ಸಂಪಾದಕರು.

ನಮ್ಮ ವಿಳಾಸ: ಸಂಪಾದಕರು, ಇತಿಹಾಸ ದರ್ಪಣ, #33 ಎ, [illegible] ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ, ಬೆಂಗಳೂರು – 560091. ಮೊ. 7829404063

1. ಕೃಷ್ಣದೇವರಾಯ ಮತ್ತು ವಿಜಯನಗರ ಸಾಮ್ರಾಜ್ಯ – ವಿಶೇಷ ಸಂಚಿಕೆ
2. ನಮ್ಮ ಬೆಂಗಳೂರು – ವಿಶೇಷ ಸಂಚಿಕೆ.
3. ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು – ವಿಶೇಷ ಸಂಚಿಕೆ.
4. ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಮೂಲ ದಾಖಲೆ– ವಿಶೇಷ ಸಂಚಿಕೆ

* ಸಂಚಿಕೆಗಳು ಲಭ್ಯವಿರುವುದಿಲ್ಲ

ವಿಜಯನಗರ ರಾಜಪ್ರಾಂಗಣದ ಪ್ರಾಚೀನತೆ

ಲ.ನ. ಸ್ವಾಮಿ
ಇತಿಹಾಸ ಪ್ರಾಧ್ಯಾಪಕ
ಟಿ.ಆರ್.ಎಂ.
ವಿಜಯ ಪ್ರಥಮದರ್ಜೆ ಕಾಲೇಜು.
ತಿ.ನರಸೀಪುರ, ಮೈಸೂರು ಜಿಲ್ಲೆ.

ಅಂದಿನ ವಿಜಯನಗರ ಇಂದಿನ ಹಂಪೆ ಅಥವಾ ಹಾಳುಹಂಪೆ ಭಾರತೀಯ ಇತಿಹಾಸದಲ್ಲಿ ಅಜರಾಮರವಾದ ಕರ್ನಾಟಕ ಸಾಮ್ರಾಜ್ಯದ ರಾಜಧಾನಿ ವಿಜಯನಗರ ಅಥವಾ ವಿದ್ಯಾನಗರವಾಗಿತ್ತು. ಅಂದಿನ ಹಂಪೆ ಇಂದಿನ ವಿರೂಪಾಕ್ಷ ಬಜಾರ್ ಅಥವಾ ವಿರೂಪಾಕ್ಷ ದೇವಾಲಯದ ಸುತ್ತಮುತ್ತಲಿನ ಪ್ರದೇಶಗಳನ್ನು ಮಾತ್ರ ಒಳಗೊಂಡಿತ್ತೆಂದರೆ ತಪ್ಪಾಗಲಿಕ್ಕಿಲ್ಲ. ಹಾಗಾದರೆ ವಿಜಯನಗರದ ಪ್ರಾಚೀನತೆ ಕರ್ನಾಟಕ ಸಾಮ್ರಾಜ್ಯದ ಸ್ಥಾಪನೆಗೆ ಹಿಂದಿನದ್ದೇ ಅಥವಾ ಈಚಿನದ್ದೆ ಎಂಬ ಜಿಜ್ಞಾಸೆಗಳು ಉಂಟಾಗುತ್ತವೆ. ಈ ಹಿನ್ನೆಲೆಯಲ್ಲಿ ಹಂಪೆಯ ಪರಿಸರದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಪೂರ್ವದ ನೆಲೆಗಳನ್ನು ಹುಡುಕುವ ಪ್ರಯತ್ನಗಳು ಬಹಳ ಹಿಂದಿನಿಂದಲೂ ನಡೆದುಬಂದಿವೆ. ಆದರೆ ಕೆಲವು ಇತಿಹಾಸ ಸಂಶೋಧಕರು ಇವುಗಳನ್ನು ಸಾರಾಸಗಟಾಗಿ ತಳ್ಳಿಹಾಕಿ ವಿಜಯನಗರ ರಾಜಧಾನಿ ಕರ್ನಾಟಕ ಸಾಮ್ರಾಜ್ಯದ ಪ್ರಾರಂಭದಿಂದಲೇ ಉದಯವಾಯಿತೆಂದು ವಾದಿಸುವವರೂ ಇದ್ದಾರೆ. ರಾಜಪ್ರಾಂಗಣದ ಪರಿಸರದಲ್ಲಿ ಕಂಡುಬರುವ ಪುರಾತತ್ವ ಕುರುಹುಗಳನ್ನು ಆಧರಿಸಿ ಮತ್ತು ಈವರೆಗೆ ನಡೆದಿರುವ ಉತ್ಖನನಗಳಲ್ಲಿ ಕಂಡುಬಂದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ರಾಜ ಪ್ರಾಂಗಣದ ಪ್ರಾಚೀನತೆಯನ್ನು ಅರಿಯಲು ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ಇಡೀ ಹಂಪಿ ಪರಿಸರವನ್ನು ಅಧ್ಯಯನ ಮಾಡಿದಾಗ ಪ್ರಮುಖವಾಗಿ ನಾಲ್ಕೈದು ವಸತಿನೆಲೆಗಳು ನಮಗೆ ಕಂಡುಬರುತ್ತವೆ. ಅವುಗಳೆಂದರೆ ಹಂಪಿಯ ವಿರೂಪಾಕ್ಷ ಬಜಾರ್ ಮತ್ತು ಸುತ್ತಮುತ್ತಲಿನ ಪ್ರದೇಶ, ವಿಠ್ಠಲ ದೇವಾಲಯದ ಸುತ್ತಮುತ್ತಲಿನ ಪ್ರದೇಶ, ಕೃಷ್ಣ ದೇವಾಲಯದ ಸುತ್ತಮುತ್ತಲಿನ ಪ್ರದೇಶ, ಹಾಗೆ ಕಮಲಾಪುರದ ಕಡೆಗೆ ಸರಿದುಬಂದರೆ ಕಂಡುಬರುವ ರಾಜಪ್ರಾಂಗಣ ಇವುಗಳನ್ನು ಅತಿ ಸೂಕ್ಷ್ಮವಾಗಿ ಗಮನಿಸಿದಾಗ ಎಲ್ಲೋ ಒಂದು ಕಡೆ ರಾಜ ಮತ್ತು ರಾಜನ ಪರಿವಾರ ಒಂದು ಪ್ರದೇಶದಲ್ಲಿ ಉಳಿದುಕೊಂಡಿದ್ದು ಇತರ ಪ್ರದೇಶಗಳಲ್ಲಿ ಸಾಮಾನ್ಯ ಜನರು ಜೀವಿಸುತ್ತಿದ್ದ ಸ್ಥಾನಿಕ ವ್ಯವಸ್ಥೆಯ ಅರಿವು ನಮಗಾಗುತ್ತದೆ.[2] ಆದರೂ ಈ ಎಲ್ಲ ಪ್ರದೇಶಗಳೂ ವಿವಿಧ ಕಾಲಘಟ್ಟಗಳಲ್ಲಿ ತನ್ನದೇ ಆದ ಬೆಳವಣಿಗೆಯನ್ನು ಗುರುತಿಸಿಕೊಂಡಿವೆ. ಉದಾಹರಣೆಗೆ: ಕೃಷ್ಣ ದೇವಾಲಯದ ಪ್ರದೇಶ, ಕೃಷ್ಣದೇವರಾಯನ ನಂತರದ ದಿನಗಳಲ್ಲಿ ಅತಿಹೆಚ್ಚು ಪ್ರವರ್ಧಮಾನಕ್ಕೆ ಬಂದಿತು.[3] ಆದರೆ ವಿಠ್ಠಲದೇವಾಲಯ ಕೃಷ್ಣದೇವರಾಯನ ಪೂರ್ವದಲ್ಲಿಯೇ ಅತ್ಯುತ್ತಮ ವಾಸದ ನೆಲೆಯಾಗಿತ್ತೆಂದು ಹೇಳಬಹುದು. ವಿರೂಪಾಕ್ಷನ ಸನ್ನಿಧಿಯ ಪರಿಸರವಂತೂ ರಾಷ್ಟ್ರಕೂಟರ ಕಾಲಘಟ್ಟದಿಂದಲೇ ಜನವಸತಿಯ ಕೇಂದ್ರವಾಗಿ ಸಾಮ್ರಾಜ್ಯದ ನಾಶದ ಅಂತ್ಯದವರೆಗೂ ತನ್ನ ಪ್ರಖರತೆಯನ್ನು ಮುಂದುವರೆಸಿಕೊಂಡು ಬಂದಿತು. ಹೀಗಾಗಿ ಹಂಪೆಯ ಪರಿಸರದಲ್ಲಿರುವ ವಸತಿ ನೆಲೆಗಳ ಅಥವಾ ನಗರ ಯೋಜನೆಯ ಅಧ್ಯಯನವೇ ಒಂದು ವಿಶೇಷ ಮತ್ತು ಮಹತ್ವದ ಅಧ್ಯಯನವಾಗಿ ಮಾರ್ಪಟ್ಟಿದೆ. ಇಡೀ ಹಂಪೆಯ ಪರಿಸರದಲ್ಲಿರುವ ವಸತಿ ನೆಲೆಗಳ ಅಧ್ಯಯನ ಈ ಲೇಖನದ ಉದ್ದೇಶವಲ್ಲದಿದ್ದರೂ ಕೇವಲ ಹಂಪಿಯ ರಾಜಪ್ರಾಂಗಣದ ಪ್ರದೇಶದಲ್ಲಿ ಕಂಡುಬಂದಿರುವ ಕೆಲವು ಪ್ರಾಚೀನ ಅವಶೇಷಗಳನ್ನು ಇಟ್ಟುಕೊಂಡು ಭೂ ಮೇಲ್ಮೈಲಕ್ಷಣವನ್ನು ಆಧರಿಸಿ ಈ ಪ್ರದೇಶದಲ್ಲಿ ನೆಲೆಸಿದ್ದ ಜನವಸತಿಯ ಬಗ್ಗೆ ಮತ್ತು ಅದರ ವಿಶೇಷತೆಗಳ ಬಗ್ಗೆ ಗಮನ ಹರಿಸುವುದು ಸೂಕ್ತವೆನಿಸುತ್ತದೆ.

ರಾಜಪ್ರಾಂಗಣದ ಭೌಗೋಳಿಕ ಪರಿಸರ

ರಾಜಪ್ರಾಂಗಣವು ಈ ಮೇಲೆ ಹೇಳಿದ ವಸತಿ ನೆಲೆಗಳಿಗಿಂತ ವಿಭಿನ್ನವಾದ ಭೌಗೋಳಿಕ ಮೇಲ್ಮೈ ಲಕ್ಷಣವನ್ನು ಹೊಂದಿದೆ. ಪಶ್ಚಿಮದಲ್ಲಿ ಪ್ರಸನ್ನ ವಿರೂಪಾಕ್ಷ ಮಂದಿರದಿಂದ ಪ್ರಾರಂಭವಾಗಿ ಪೂರ್ವದಲ್ಲಿ ಹಜಾರ ರಾಮಸ್ವಾಮಿ ದೇವಾಲಯ, ಪಟ್ಟಣದ ಎಲ್ಲಮ್ಮ ದೇವಾಲಯ, ಪಾನ್ ಸುಪಾರಿ ಬಜಾರ್, ಸಿಂಗಾರದ ಹೆಬ್ಬಾಗಿಲು ಇವುಗಳನ್ನು ದಾಟಿ ಪೂರ್ವದ ಪ್ರವೇಶದ್ವಾರವನ್ನು ಸೇರುವ ಒಂದು ನೀರ್ಗಾಲುವೆ ಇದರ ಉತ್ತರ ಮತ್ತು ದಕ್ಷಿಣಗಳಲ್ಲಿ ಎತ್ತರವಾದ ಭೂಮೇಲ್ಮೈಯನ್ನು ಹೊಂದಿದೆ. ದಕ್ಷಿಣದ ವಿಶಾಲವಾದ ತೆರೆದ ಬಯಲು ನಯವಾದ ಇಳಿಜಾರನ್ನು ಹೊಂದಿದ್ದು ರಾಣಿವಾಸದ ಸಮೀಪ ತನ್ನ ಉಚ್ಚತಮ ಎತ್ತರವನ್ನು ತಲುಪುತ್ತದೆ. ಆದರೆ ಈ ನೀರ್ಗಾಲುವೆಯ ಉತ್ತರಕ್ಕೆ ಸಿಂಗಾರದ ಹೆಬ್ಬಾಗಿಲಿನಿಂದ ನರಸಿಂಹಸ್ವಾಮಿ ದೇವಾಲಯದವರೆಗೆ ಅತಿ ಎತ್ತರವಾದ ಬೆಟ್ಟ ಪ್ರದೇಶವಿದ್ದು ಅದರ ಇಳಿಜಾರಿನಲ್ಲಿ ಅನೇಕ ಕಟ್ಟಡಗಳು ಮತ್ತು ದೇವಾಲಯಗಳು ಕಂಡುಬರುತ್ತವೆ. (ಚಿತ್ರ: 1) ಈ ನೀರ್ಗಾಲುವೆಯ ಎರಡೂ ಬದಿಗಳಲ್ಲಿ ನಗರ ಜೀವನದ ಹಲವಾರು ಅವಶೇಷಗಳು ಕಂಡುಬರುತ್ತವೆ.[4] ಮಹಾನವಮಿ ದಿಬ್ಬ ಸಹ ಈ ನೀರ್ಗಾಲುವೆಯ ದಕ್ಷಿಣಕ್ಕಿದೆ. ಈ ಹಿನ್ನೆಲೆಯಲ್ಲಿ ಈ ನೀರ್ಗಾಲುವೆಯ ಪ್ರದೇಶದಲ್ಲಿ

ಕಂಡುಬರುವ ಪ್ರಮುಖ ಪ್ರಾಚೀನ ಕಟ್ಟಡಗಳ ಸ್ಥಿತಿಗತಿಗಳನ್ನು ತಿಳಿಯುವ ಪ್ರಯತ್ನವನ್ನು ಈ ಮುಂದೆ ಮಾಡಲಾಗಿದೆ. ರಾಜಪ್ರಾಂಗಣವೆಂದು ಇಂದು ಕರೆಯುತ್ತಿರುವ ಅಥವಾ ರಾಜನ ವಾಸದ ಮತ್ತು ಆಡಳಿತಾತ್ಮಕ ಪ್ರದೇಶವಿದ್ದ ಈ ಕ್ಷೇತ್ರದಲ್ಲಿ ಹರಿಹರನ ಅರಮನೆ ಇತ್ಯಾದಿ ಕಟ್ಟಡಗಳು, ಹಜಾರ ರಾಮಸ್ವಾಮಿ ದೇವಾಲಯ, ಜಗನ್ಮೋಹನ ಮಂದಿರ, ಭೂಮ್ಯಾಂತರ್ಗತ ಪಿಸುಮಾತಿನ ಕೋಣೆ, ಮಹಾನವಮಿ ದಿಬ್ಬ ಮುಂತಾದ ಎಲ್ಲ ವಿಜಯನಗರ ಪ್ರಾರಂಭದ ನಂತರದ ಕಟ್ಟಡಗಳು ಎತ್ತರದ ಹಾಸುಗಲ್ಲಿನ ಮೇಲೆ ನಿರ್ಮಾಣವಾಗಿವೆ. ಆದರೆ ಈ ನೀರ್ಗಾಲುವೆಯ ಉತ್ತರ ದಿಕ್ಕಿನಲ್ಲಿರುವ ಜೈನ ದೇವಾಲಯಗಳ ಸಮೂಹ, ರಂಗನಾಥ ದೇವಾಲಯ, ಆನೆಲಾಯ, ಕುದುರೆಲಾಯ, ಝನಾನಪ್ರಾಂಗಣ, ನರಸಿಂಹಸ್ವಾಮಿ ದೇವಾಲಯ, ಮುಂತಾದ ಕಟ್ಟಡಗಳು ಕಂಡುಬರುತ್ತವೆ.[5] ಈ ಹಂತದಲ್ಲಿ ಇಲ್ಲಿನ ಕಟ್ಟಡಗಳ ಪ್ರಾಚೀನತೆಯನ್ನು ಗಮನಿಸುವುದು ಅತಿಮುಖ್ಯ. ಈ ಪ್ರದೇಶದಲ್ಲಿ ಅತೀಮುಖ್ಯವಾದ ಕಟ್ಟಡವೇ ಪಟ್ಟಣದ ಎಲ್ಲೆಯಮ್ಮನ ದೇವಾಲಯ.[6] ಅದು ಇಂದಿಗೆ ಸಂಪೂರ್ಣವಾಗಿ ಭೂಮಟ್ಟದಿಂದ ಕೆಳಗೆ ಸ್ಥಿತವಾಗಿದೆ (ಚಿತ್ರ:2). ಇದನ್ನು ಪಟ್ಟಣದ ಎಲ್ಲೆಯಮ್ಮನೆಂದು ಕರೆಯಲು ಕಾರಣಗಳನ್ನು ಕೊಡಬಹುದು. ಇದು ಶಾಸನೋಕ್ತವಾದ ಪಟ್ಟಣದ ಎಲ್ಲಮ್ಮನ ದೇವಾಲಯವಾದರೂ ಅಂದಿನ ಕಾಲದಲ್ಲಿ ಈ ದೇವತೆಯನ್ನು ಪಟ್ಟಣದ ಎಲ್ಲೆಯಮ್ಮನೆಂದು ಕರೆಯುತ್ತಿದ್ದುದು ಆಡುಭಾಷೆಯಲ್ಲಿ ಅಪಭ್ರಂಶವಾಗಿ ಎಲ್ಲಮ್ಮನಾಗಿರುವ ಎಲ್ಲ ಸಾಧ್ಯತೆಗಳಿವೆ. ಕಾರಣ ದೇವಾಲಯದಲ್ಲಿ ಪೂಜೆಗೊಳ್ಳುತ್ತಿರುವ ಮೂರ್ತಿ ಮಹಿಷಾಸುರ ಮರ್ಧಿನಿಯದ್ದು ಅಥವಾ ಶಕ್ತಿದೇವತೆಯದ್ದು. ಇದಲ್ಲದೆ ನೀರ್ಗಾಲುವೆಯ ಉತ್ತರ ದಿಕ್ಕಿಗಿರುವ ಜೈನ ದೇವಾಲಯಗಳ ಸಮೂಹ, ವಿಷ್ಣು ದೇವಾಲಯಗಳ ಸಮೂಹ ಈಗ ಉತ್ಖನನಗೊಂಡಿದ್ದು ಅವು ಬೆಟ್ಟದ ತಪ್ಪಲಿನ ಇಳಿಜಾರಿನಲ್ಲಿ ಕಾಲಕ್ರಮಕ್ಕನುಗುಣವಾಗಿ ಉಂಟಾದ ಪದರಗಳ ಮೇಲೆ ವಿವಿಧ ಹಂತಗಳಲ್ಲಿ ನಿರ್ಮಾಣವಾಗಿರುವುದನ್ನು ಇಲ್ಲಿ ನಡೆದಿರುವ ಉತ್ಖನನಗಳು ಇಂದಿಗೂ ಪ್ರತಿನಿಧಿಸುತ್ತಿವೆ (ಚಿತ್ರ:3). ಇಷ್ಟಲ್ಲದೆ ಪಶ್ಚಿಮದ ನೀರ್ಗಾಲುವೆಯ ತುದಿಯಲ್ಲಿರುವ ಪ್ರಸನ್ನ ವಿರೂಪಾಕ್ಷ ದೇವಾಲಯವನ್ನು ಇಂದಿಗೂ ಭೂಮ್ಯಾಂತರ್ಗತ ದೇವಾಲಯವೆಂದೇ ಕರೆಯುತ್ತಾರೆ. ಆದರೆ ಅದು ತನ್ನ ಉಚ್ಛ್ರಾಯ ಕಾಲಘಟ್ಟದಲ್ಲಿ ಅಂದಿನ ಭೂಮಟ್ಟದಲ್ಲಿತ್ತೆಂಬುದು ವಿಶೇಷ. ಈ ಎರಡು ಪ್ರಾಚೀನ ದೇವಾಲಯಗಳ ತಳಮಟ್ಟವನ್ನು ಗಮನದಲ್ಲಿರಿಸಿಕೊಂಡರೆ ಸುಮಾರು 300 ವರ್ಷಗಳ ಕಾಲಘಟ್ಟದಲ್ಲಿ ಈ ದೇವಾಲಯಗಳು ಅಂದಿನ ಭೂ ಮಟ್ಟದಿಂದ ಕೆಳಕ್ಕೆ ಸರಿದಿರುವುದು ಅಥವಾ ದಿನೇದಿನೇ ನಗರದ ಜೀವನದಿಂದ ಉಂಟಾದ ಭೂಮಟ್ಟದ ಏರಿಕೆಯಿಂದಾಗಿ ಇವು ಇಂದು ಭೂಮಿಯ ಕೆಳಮಟ್ಟದಲ್ಲಿ ಕಂಡುಬರುವುದು ನಗರೀಕರಣದ ಸಹಜ ಪ್ರಕ್ರಿಯೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗಲೂ ಈ ಎಲ್ಲ ಪ್ರದೇಶಗಳಲ್ಲಿ ಕಂಡುಬರುವ ಕೆಲವೊಂದು ಸ್ಮಾರಕಗಳು ನಮ್ಮನ್ನು ಈ ನಿಟ್ಟಿನಲ್ಲಿ ಚಿಂತಿಸುವಂತೆ ಮಾಡುತ್ತವೆ. ಈ ಹಂತದಲ್ಲಿ ನಾವು ರಾಜಪ್ರಾಂಗಣದ ಆಪ್ತಸಮಾಲೋಚನಾ ಗೃಹ ಮತ್ತು ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯದ ಭಾಗಗಳ ಅವಶೇಷಗಳು ರಾಜಪ್ರಾಂಗಣದ ಉತ್ಖನನ ವೇಳೆ ಕಂಡುಬಂದಿವೆ. ಇವುಗಳನ್ನು ಮತ್ತು ಈ ಆಪ್ತಸಮಾಲೋಚನ ಗೃಹದ ಮುಂಭಾಗದಲ್ಲಿ ಕಂಡುಬರುವ ಪುಷ್ಕರಣಿಯನ್ನು ಮತ್ತು ಅದಕ್ಕೆ ಬಳಸಿರುವ ಶಿಲೆಯನ್ನು ಸೂಕ್ಷ್ಮವಾಗಿ ಅಭ್ಯಸಿಸಬೇಕಾಗುತ್ತದೆ (ಚಿತ್ರ:4).



ಚಿತ್ರ -1 : ಹಂಪೆಯ ಎಲ್ಲಮ್ಮ ದೇವಾಲಯ ಪರಿಸರದ ಉಪಗ್ರಹದ ಛಾಯಾಚಿತ್ರ ಕೃಪೆ : ಗೂಗಲ್



ಚಿತ್ರ -2 : ಎಲ್ಲೆಯಮ್ಮ ದೇವಾಲಯ ಇಂದಿನ ಭೂಮಟ್ಟಕ್ಕಿಂತ ತಳಭಾಗದಲ್ಲಿರುವುದು



ಚಿತ್ರ -3 : ಮಾಧವ ದೇವಾಲಯ ಸಮೂಹದ ದೇವಾಲಯದ ಭೂಮಟ್ಟ ಉತ್ಖನನದಿಂದ ಕಂಡುಬಂದಂತೆ



ಚಿತ್ರ -4 : ರಾಜಪ್ರಾಂಗಣದ ಉತ್ಖನನದಲ್ಲಿ ಹೊರತೆಗೆಯಲಾದ
ಕಲ್ಯಾಣ ಚಾಲುಕ್ಯರ ದೇವಾಲಯವೊಂದರ ಪ್ರಣಾಳಿ

ಅ.ನ. ಸ್ವಾಮಿ



ಚಿತ್ರ –5 : ರಾಜಪ್ರಾಂಗಣದ ಉತ್ಖನನದಲ್ಲಿ ಹೊರತೆಗೆಯಲಾದ ರಾಷ್ಟ್ರಕೂಟರ ಕಾಲದ ದೇವಾಲಯದ ಬೋದಿಗೆ



ಚಿತ್ರ –6 : ರಾಜಪ್ರಾಂಗಣದ ಉತ್ಖನನದಲ್ಲಿ ಹೊರತೆಗೆಯಲಾದ ರಾಷ್ಟ್ರಕೂಟರ ಕಾಲದ ದೇವಾಲಯದ ಅರೆಗಂಬ








ಚಿತ್ರ-7-9: ರಾಜಪ್ರಾಂಗಣದ ಉತ್ಖನನದಲ್ಲಿ ಕಂಡುಹಿಡಿಯಲಾದ ರಾಷ್ಟ್ರಕೂಟರ
ಕಾಲದ ದೇವಾಲಯದ ಕೈಪಿಡಿ ಕಲ್ಲುಗಳು



ಚಿತ್ರ-10: ರಾಜಪ್ರಾಂಗಣದ ಉತ್ಖನನದಲ್ಲಿ ಹೊರತೆಗೆಯಲಾದ ಕಲ್ಯಾಣ ಚಾಲುಕ್ಯರ ದೇವಾಲಯವೊಂದರ ಭುವನೇಶ್ವರಿ



ಚಿತ್ರ -11 : ರಾಜಪ್ರಾಂಗಣದ ಉತ್ಖನನದಲ್ಲಿ ಹೊರತೆಗೆಯಲಾದ ಪುಷ್ಕರಣಿಯ ಪ್ರಥಮ ಹಂತ



ಚಿತ್ರ -12 : ರಾಜಪ್ರಾಂಗಣದ ಉತ್ಖನನದಲ್ಲಿ ಹೊರತೆಗೆಯಲಾದ ಪುಷ್ಕರಣಿ (ಪೂರ್ಣಗೊಂಡ ನಂತರ)



ಚಿತ್ರ -13 : ಮಹಾನವಮಿ ದಿಬ್ಬದ ಮುಂದಿರುವ ಪ್ರಾಚೀನ ಪ್ರವೇಶದ್ವಾರ



ಚಿತ್ರ -14: ರಾಜಪ್ರಾಂಗಣದ ಉತ್ಖನನದಲ್ಲಿ ಹೊರತೆಗೆಯಲಾದ
ಬುದ್ಧನ ಜಾತಕ ಕತೆಗಳಿರುವ ಸುಣ್ಣಕಲ್ಲಿನ ಫಲಕಗಳು



ಚಿತ್ರ -15 : ಕಲ್ಯಾಣದ ಚಾಲುಕ್ಯರ ಕಾಲದ ಕಾಳಿಯ ಶಿಲ್ಪದ ಶಿರಭಾಗ

ರಾಜಪ್ರಾಂಗಣದ ಪ್ರಾಚೀನತೆ

ಒಂದು ಗುಂಪಿನ ವಿದ್ವಾಂಸರ ಪ್ರಕಾರ ಕೃಷ್ಣದೇವರಾಯನ ಕಾಲಘಟ್ಟದಲ್ಲಿ ಮಹಾನವಮಿ ದಿಬ್ಬದ ಪಶ್ಚಿಮದ ಮುಖವನ್ನು ಪುನರ್‌ನಿರ್ಮಿಸಲು ನಾಶವಾಗಿದ್ದ ದೇವಾಲಯದ ಕಲ್ಲುಗಳನ್ನು ಹೊತ್ತುತಂದು ಅವುಗಳಿಂದ ಪುಷ್ಕರಣಿಯನ್ನು ಮತ್ತು ಮಹಾನವಮಿ ದಿಬ್ಬದ ಪಶ್ಚಿಮ ದಿಕ್ಕಿನ ಅಲಂಕರಣವನ್ನು ನಿರ್ಮಿಸಲಾಯಿತೆಂದು ಭಾವಿಸುವವರಿದ್ದಾರೆ. ಆದರೆ ಈ ಅಭಿಪ್ರಾಯ ಸರ್ವಸಮ್ಮತವೇ ಎಂಬ ಪ್ರಶ್ನೆ ಎದುರಾಗುತ್ತದೆ. ಕಾರಣ ದೇವಾಲಯದ ಪ್ರಣಾಲಿ, ಆರೆಕಂಭ, ಬೋದಿಗೆ, ಕೈಪಿಡಿಗಳು, ದೇವಾಲಯದ ಮತ್ತು ದೇವಾಲಯದ ಛತ್ತಿಯ ಹಲವಾರು ಅನುಪಯುಕ್ತ ಭಾಗಗಳನ್ನು ಇಲ್ಲಿ ಕಂಡುಕೊಳ್ಳಲಾಗಿದೆ (ಚಿತ್ರ:4–10). ಹಾಗೆಂದಾಗ ಅನುಪಯುಕ್ತವಾದ ಈ ಭಾಗಗಳನ್ನು ಎಲ್ಲಿಂದಲೋ ಹೊತ್ತುತಂದು ಅತ್ಯಂತ ಪ್ರಮುಖ ರಾಜಪ್ರಾಂಗಣದಲ್ಲಿ ತುಂಬಿ ಅದರಿಂದ ಈ ಪುಷ್ಕರಣಿಯನ್ನು ಮತ್ತು ಮಹಾನವಮಿ ದಿಬ್ಬದ ಪಶ್ಚಿಮದ ಅಲಂಕರಣವನ್ನು ನಿರ್ಮಿಸುವ ಅವಶ್ಯಕತೆ ಇತ್ತೇ? ಹಾಗಿದ್ದ ಪಕ್ಷದಲ್ಲೂ ಅನುಪಯುಕ್ತ ವಸ್ತುಗಳನ್ನು ಇದೇ ಪ್ರದೇಶದಲ್ಲಿ ಬೇಕಾಬಿಟ್ಟಿಯಾಗಿ ಮುಚ್ಚಿ ಹಾಕಿದ್ದಕ್ಕೆ ಸಕಾರಾತ್ಮಕವಾದ ಕಾರಣಗಳು ದೊರೆಯುವುದಿಲ್ಲ. ಆದರೆ ಇದಕ್ಕೆ ಪೂರಕವಾಗಿ ಮಹಾನವಮಿ ದಿಬ್ಬದ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲಘಟ್ಟಕ್ಕೆ ಪೂರ್ವದಿಂದಲೇ ಧಾರ್ಮಿಕ ಕೈಂಕರ್ಯಗಳು ನೆರವೇರುತ್ತಿದ್ದುದನ್ನು ಈಗಾಗಲೇ ಖಚಿತಪಡಿಸಲಾಗಿದೆ.[6] ಕ್ರಿ.ಶ. 1008ಕ್ಕೆ ಸರಿಹೊಂದುವ ಶಾಸನವೊಂದು ಮಹಾನವಮಿ ದಿಬ್ಬದ ಪ್ರದೇಶದಲ್ಲಿ ದೊರೆತಿದೆ.[7] ಇದಲ್ಲದೆ ಕ್ರಿ.ಶ. 1076ಕ್ಕೆ ಸೇರಿದ ಮತ್ತೊಂದು ಶಾಸನವು ಇದೇ ಪ್ರದೇಶದಲ್ಲಿ ದೊರೆತಿದೆ.[8] ಕ್ರಿ.ಶ. 1076ರ ಶಾಸನವು ಮಹಾಪ್ರಧಾನ ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯರು ಚಾಲುಕ್ಯ ವಿಕ್ರಮಶಕೆಯ ಪ್ರಥಮ ವರ್ಷದ ಭಾದ್ರಪದ

ಮಾಸ ಬಹುಳ ಭಾನುವಾರ ಪುರಾಣ ವ್ಯಾಖ್ಯಾನ ಮಾಡುವ ಉಪಾಧ್ಯಾಯಿನಿಗೆ ಒಂಭತ್ತು ಲೊಕ್ಕಿ ಗದ್ಯಾಣಗಳನ್ನು ದಾನನೀಡಿದ್ದನ್ನು ದಾಖಲಿಸುತ್ತದೆ. 1008ಕ್ಕೆ ಸರಿಹೊಂದುವ ಶಾಸನವು ಶ್ರೀ ಮಳದಾರಿ ಮುನಿಯು ಸ್ವರ್ಗಸ್ಥನಾದ ವಿವರಗಳನ್ನು ದಾಖಲಿಸುತ್ತದೆ. ಅಂದಮೇಲೆ ಈ ಮಹಾನವಮಿ ದಿಬ್ಬದ ಆಸುಪಾಸಿನಲ್ಲಿ ಕಲ್ಯಾಣದ ಚಾಲುಕ್ಯರ ಕಾಲಘಟ್ಟದಲ್ಲಿ ಜೈನ ಮತ್ತು ಶೈವ ಪರಂಪರೆಯ ದೇವಾಲಯಗಳು ಇದ್ದುದು ಖಚಿತವಾಗುತ್ತದೆ.[9] ಈ ಹಂತದಲ್ಲಿ ಮಹಾನವಮಿ ದಿಬ್ಬದ ಮುಂದಿನ ಪುಷ್ಕರಣಿಯ ರಚನೆಯ ವಿನ್ಯಾಸವನ್ನು ಕೊಂಚ ವಿವರವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಅಂದರೆ ಪುಷ್ಕರಣಿಗೆ ಅತಿ ಸಮೀಪದಲ್ಲಿರುವ ಆಪ್ತಸಮಾಲೋಚನ ಗೃಹದ ಭೂಮಟ್ಟದ ಕೆಳಭಾಗಕ್ಕೆ ಹೋದಂತೆ ಅಥವಾ ಪುಷ್ಕರಣಿಯ ಕೆಳಭಾಗ ಅತ್ಯಂತ ಸರಳವಾದ ರಚನೆಯನ್ನು ಹೊಂದಿದ್ದು ಆ ಕಲ್ಲುಗಳನ್ನು ಪುಷ್ಕರಣಿಗಾಗಿಯೇ ಹದಮಾಡಿ ನಿರ್ಮಿಸಿರುವುದು ಖಚಿತವಾಗುತ್ತದೆ (ಚಿತ್ರ;11–12). ಈ ಹಂತದಿಂದ ಮೇಲಕ್ಕೆ ಪುಷ್ಕರಣಿಯನ್ನು ದೇವಾಲಯದ ಭಿತ್ತಿಯ ಕಲ್ಲುಗಳಿಂದ ನಿರ್ಮಾಣ ಮಾಡಿರುವುದು ಇಂದಿಗೂ ಕಂಡುಬರುತ್ತದೆ. ಕಾರಣ ಈ ಕಲ್ಲುಗಳು ಹಲವು ಬಗೆಯ ಭಿತ್ತಿಯ ಅಲಂಕರಣಗಳನ್ನು ಒಳಗೊಂಡಿವೆ ಮತ್ತು ಪುಷ್ಕರಣಿಯ ನಿರ್ಮಾಣದ ಶೈಲಿ ಕೂಡ ಭಿನ್ನವಾಗಿದೆ.[10] ಪ್ರಾಯಶಃ ಜೈನರ ಪ್ರಾಬಲ್ಯ ಅಂತ್ಯವಾದ ನಂತರ ಇಲ್ಲಿ ಶೈವರು ಹೆಚ್ಚು ಪ್ರಖ್ಯಾತಿಗೆ ಬಂದರು. ಜೈನರು ನಡೆಸುತ್ತಿದ್ದ ದಶಲಕ್ಷಣ ಪರ್ವ ಶೈವರ ಕಾಲಘಟ್ಟದಲ್ಲಿ ದಸರಾ ಉತ್ಸವವಾಗಿ ಪರಿವರ್ತಿತವಾಗಿರುವ ಸಾಧ್ಯತೆಗಳಿವೆ. ಇವುಗಳನ್ನು ಮರೆತರೂ ಲಾಂಗ್‌ಹರ್ಸ್ಟ್ ದಾಖಲಿಸುವಂತೆ ಗುಪ್ತಸಮಾಲೋಚನಾ ಗೃಹವು ಪ್ರಾಚೀನ ಮಂದಿರವಾಗಿದ್ದು ಅದರ ಮುಂದಿನ ಪುಷ್ಕರಣಿ ದೇವಾಲಯದ ನೀರಿನ ಅವಶ್ಯಕತೆಗಳನ್ನು ಪೂರೈಸುವ ನೀರಿನ ಮೂಲವಾಗಿ ಮುಂದುವರಿದಿದ್ದಿತು.[11] ನಗರ ಬೆಳೆದಂತೆ ಮತ್ತು ಸಂಸ್ಕೃತಿ ಮುಂದುವರಿದಂತೆ ನಗರ ಮಧ್ಯದಲ್ಲಿನ ಈ ಪ್ರದೇಶದಲ್ಲಿ ಧಾರ್ಮಿಕ ಚಟುವಟಿಕೆಗಳು ಅಧಿಕವಾದಂತೆ ಈ ಪ್ರದೇಶವನ್ನು ವಿಜಯನಗರದ ನಂತರದ ದಿನಗಳಲ್ಲಿ ಪುನರ್‌ನಿರ್ಮಿಸಿರುವ ಸಾಧ್ಯತೆಗಳನ್ನು ತಳ್ಳಿಹಾಕಲಾಗುವುದಿಲ್ಲ. ಕಾರಣ ಈ ಪ್ರದೇಶದಲ್ಲಿ ನಡೆದಿರುವ ಉತ್ಖನನಗಳು ಅದರಲ್ಲೂ ವಿಶೇಷವಾಗಿ ಮಹಾನವಮಿ ದಿಬ್ಬದ ಪಶ್ಚಿಮದ ಮೆಟ್ಟಿಲುಗಳ ಪ್ರಾರಂಭದ ಸ್ಥಳದಲ್ಲಿ ನಡೆದ ಉತ್ಖನನ ಅದರ ಇಂದಿನ ಮಟ್ಟಕ್ಕಿಂತ ಹೆಚ್ಚು ಕೆಳಗಿಲ್ಲದಿರುವುದು ಖಚಿತವಾಗುತ್ತದೆ. ಅಲ್ಲದೆ ಈ ಪ್ರದೇಶದಲ್ಲಿ ಇದೇ ಮಟ್ಟದಲ್ಲಿ ಅಂದಿನ ಜನವಸತಿಯ ಪ್ರದೇಶಕ್ಕೆ ನೀರನ್ನು ಒದಗಿಸುತ್ತಿದ್ದ ಹಲವು ನೀರ್ಗಾಲುವೆಗಳು ಕಂಡುಬರುತ್ತವೆ. ಇವುಗಳೆರಡರ ಹಿನ್ನೆಲೆಯಲ್ಲಿ ಗಮನಿಸಿದಾಗ ಬೃಹದಾಗಿ ಬೆಳೆದ ದಸರೆಯ ಉತ್ಸವಕ್ಕೆ ಅವಶ್ಯಕ ಜಾಗವನ್ನು ನಿರ್ಮಿಸಿಕೊಳ್ಳಲು ಇಲ್ಲಿದ್ದ ದೇವಾಲಯವನ್ನು ತೆರವುಗೊಳಿಸಿ ಆ ದೇವಾಲಯದ ಭಾಗಗಳನ್ನು ಬಳಸಿಕೊಂಡು ಪಶ್ಚಿಮದ ಭಾಗವನ್ನು ಅಲಂಕರಿಸಿ ನೂತನ ವ್ಯವಸ್ಥೆಯನ್ನು ನಿರ್ಮಿಸಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಇದಕ್ಕೆ ಸಹಜವಾಗಿ ಅನುಮೋದಿಸುವಂತೆ ಕಮಲಾಪುರ ಕೈಫಿಯತ್ತು ಪಟ್ಟಣದ ಎಲ್ಲಮ್ಮ ದೇವಾಲಯವನ್ನು ವಿದ್ಯಾರಣ್ಯರು ನಿರ್ಮಿಸಿದರೆಂದು ತಿಳಿಸುತ್ತವೆ.[12] ದೇವಾಲಯದ ಸಮೀಪ ದೊರೆತ ಮತ್ತೊಂದು ಶಾಸನ ಈ ದೇವಾಲಯವನ್ನು ಉಲ್ಲೇಖಿಸುತ್ತದೆ. ಇದಲ್ಲದೆ ವಿದೇಶೀಯ ಪ್ರವಾಸಿಗರು ತಮ್ಮ ಬರವಣಿಗೆಗಳಲ್ಲಿ ಮಹಾನವಮಿ ದಿಬ್ಬದ ಹಿಂಭಾಗದಲ್ಲಿ ಇದ್ದ ದೇವಾಲಯದಿಂದ ಉತ್ಸವ ಮೂರ್ತಿಯು ಪೂಜೆಗೆ ಬರುತ್ತಿತ್ತೆಂಬ ವಿಷಯವನ್ನು ದಾಖಲಿಸಿದ್ದಾರೆ. ಇದೆಲ್ಲದಕ್ಕೂ ಮುಕುಟಪ್ರಾಯವಾಗಿ

ಎಲ್ಲಮ್ಮ ದೇವಾಲಯಕ್ಕೆ ಅಭಿಮುಖವಾಗಿರುವಂತೆ ರಾಜಪ್ರಾಂಗಣದ ಪ್ರದೇಶದಿಂದ ಸಂಪರ್ಕ ಸಾಧಿಸಲು ಉತ್ತರ ದಿಕ್ಕಿಗೆ ಮುಖಮಾಡಿರುವ ಮಹಾದ್ವಾರವೊಂದು ಮಹಾನವಮಿ ದಿಬ್ಬದ ಪೂರ್ವದಲ್ಲಿ ಇಂದಿಗೂ ಕಂಡುಬರುತ್ತದೆ (ಚಿತ್ರ:13). ಈ ಎಲ್ಲ ಪುರಾವೆಗಳನ್ನು ಗಮನಿಸಿದಾಗ ಈ ಪ್ರದೇಶವು ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿಯೇ ಪ್ರಮುಖ ವಸತಿ ಸ್ಥಳವಾಗಿತ್ತೆಂದು ಖಚಿತವಾಗುತ್ತದೆ ಮತ್ತು ಅದು ಹಂತಹಂತವಾಗಿ ಬೆಳೆದುಬಂದುದನ್ನು ಖಚಿತಪಡಿಸುತ್ತದೆ.

ಹಂಪೆಯ ಎಲ್ಲ ಸ್ಮಾರಕಗಳನ್ನೂ ಪುನರುತ್ಥಾನಗೊಳಿಸುವ ಯೋಜನೆ 1978ರಲ್ಲಿ ಪ್ರಾರಂಭವಾದ ನಂತರ ಈ ಪ್ರದೇಶದಲ್ಲಿ ಸಾಕಷ್ಟು ಉತ್ಖನನಗಳು ನಡೆದು ಹೊಸ ಹೊಸ ಕಟ್ಟಡಗಳನ್ನು ಗುರುತಿಸಲಾಯಿತು. 80 ರಿಂದ 90ರ ದಶಕದಲ್ಲಿ ರಾಜಪ್ರಾಂಗಣದಲ್ಲಿ ವಿಶೇಷವಾಗಿ ನಡೆಸಿದ ಉತ್ಖನನದಲ್ಲಿ ಅಮರಾವತಿ ಮತ್ತು ನಾಗಾರ್ಜುನ ಕೊಂಡಗಳಲ್ಲಿ ಕಂಡುಬರುವ ಸ್ಥೂಪದ ಫಲಕಗಳು (ಚಿತ್ರ:14) ಕಂಡುಬಂದಿವೆ.[13] ಈ ಸ್ಥೂಪದ ಫಲಕಗಳನ್ನು ಜೋಡಿಸಿಟ್ಟಿದ್ದ ಕ್ರಮವನ್ನು ಗಮನಿಸಿದರೆ ಪ್ರಾಯಶಃ ಈ ಪ್ರದೇಶದಲ್ಲಿಯೇ ಶಾತವಾಹನರ ಕಾಲಘಟ್ಟದಲ್ಲಿ ಬೌದ್ಧ ಸಂಸ್ಕೃತಿ ನೆಲೆಸಿತ್ತೆಂದು ಒಪ್ಪಬಹುದು. ಇದಕ್ಕೆ ಪೂರಕವಾಗಿ ಒಂದು ಮತ್ತು ಎರಡನೆಯ ಶತಮಾನಕ್ಕೆ ಸೇರಿದ ಶಾಸನವೊಂದು ದೊರೆತಿದೆ.[14] ಇವುಗಳೆಲ್ಲವೂ ರಾಜಪ್ರಾಂಗಣದಲ್ಲಿ ಅತೀ ಪ್ರಾಚೀನ ಕಾಲದಿಂದಲೂ ಸಾಂಸ್ಕೃತಿಕ ಚಟುವಟಿಕೆ ನಡೆಯುತ್ತಿದ್ದುದನ್ನು ಖಚಿತಪಡಿಸುತ್ತದೆ.

ಈ ಮೇಲೆ ಒದಗಿಸಿದ ಪುರಾವೆಗಳಲ್ಲಿ ಕ್ರಿ.ಶ. ಎರಡನೆಯ ಶತಮಾನದಿಂದ ಎಂಟನೆಯ ಶತಮಾನದವರೆಗಿನ ಪುರಾತತ್ವ ಆಕರಗಳು ನಮಗೆ ಲಭ್ಯವಾಗಿಲ್ಲ. ಅಂದರೆ ರಾಷ್ಟ್ರಕೂಟರ ಕಾಲದ ಮತ್ತು ಬಾದಾಮಿ ಚಾಲುಕ್ಯರ ಕಾಲದ ಅವಶೇಷಗಳು ಈ ಪ್ರದೇಶದಲ್ಲಿ ಕಂಡುಬಂದಿಲ್ಲವೆಂದು ಭಾಸವಾಗುತ್ತದೆ. ಆದರೆ ಆಪ್ತಸಮಾಲೋಚನಾ ಗೃಹದ ಕಂಬಗಳಲ್ಲಿ ನಮಗೆ ರಾಷ್ಟ್ರಕೂಟರ ಕಾಲದ ಕಂಬದ ಮಾದರಿಗಳು ಕಂಡುಬರುತ್ತವೆ (ಚಿತ್ರ:5–6). ಇಷ್ಟೇ ಅಲ್ಲದೆ ಹಜಾರರಾಮ ಮಂದಿರದ ಮುಂದಿರುವ ದೇವಾಲಯಗಳ ಸಮುಚ್ಚಯದಲ್ಲಿ ಕೂಡ ರಾಷ್ಟ್ರಕೂಟರ ಕಾಲದ ಕೆಲವೊಂದು ವಾಸ್ತು ಅಂಶಗಳು ಅನುಭವಕ್ಕೆ ಬರುತ್ತವೆ. ಕೆ.ಜಿ. ಗೋಪಾಲಕೃಷ್ಣರಾವ್ ಅವರು ಪ್ರಸನ್ನ ವಿರೂಪಾಕ್ಷ ದೇವಾಲಯದ ಕೆಲವೊಂದು ಭಾಗಗಳಲ್ಲಿ ರಾಷ್ಟ್ರಕೂಟರ ಕಾಲದ ಕುರುಹುಗಳನ್ನು ಗಮನಿಸಿದ್ದಾರೆ.[15]

ಹಜಾರರಾಮಸ್ವಾಮಿ ದೇವಾಲಯದ ಮುಂದಿನ ಸಣ್ಣ ದೇವಾಲಯಗಳ ಸಮೂಹವೊಂದರಲ್ಲಿ ಇದೇ ಕಾಲಘಟ್ಟಕ್ಕೆ ಸೇರಿದ ಶಕ್ತಿದೇವತೆಯ ಶಿಲ್ಪದ ಮೇಲ್ಭಾಗ ಕಂಡುಬಂದಿದೆ (ಚಿತ್ರ:15) ಈ ದೇವಾಲಯಗಳನ್ನು ಕಾಲಘಟ್ಟಗಳಲ್ಲಿ ಪುನರ್‌ನಿರ್ಮಿಸಿರುವ ಎಲ್ಲ ಕುರುಹುಗಳು ಕಂಡುಬಂದಿವೆ. ಇದೇ ಸಮುಚ್ಚಯದಲ್ಲಿ 13ನೆಯ ಶತಮಾನದ ಮಧ್ಯಭಾಗಕ್ಕೆ ಸೇರುವ ಬಸವನ ವಿಗ್ರಹವಿದ್ದು ಇದು ಶಾಸನವನ್ನು ಕೂಡ ಹೊಂದಿದೆ. ಈ ಎಲ್ಲ ಭೌತಿಕ ಕುರುಹುಗಳನ್ನು ಆಧರಿಸಿ ಹಜಾರರಾಮಸ್ವಾಮಿ ದೇವಾಲಯದ ಸುತ್ತಮುತ್ತಲಿನ ರಾಜ ಪ್ರಾಂಗಣ ಪ್ರದೇಶವು ಶಾತವಾಹನರ ಕಾಲಘಟ್ಟದಿಂದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಕಾಲಘಟ್ಟದವರೆಗೆ ಸಾಂಸ್ಕೃತಿಕ ನೆಲೆಯಾಗಿ ಒಂದು ಅಜ್ಞಾತ ಪ್ರದೇಶವಾಗಿ ವ್ಯಾಪಾರ ಮತ್ತು ವಹಿವಾಟಿನ ಕೇಂದ್ರವಾಗಿ ಇತರ ಎಲ್ಲ ಪ್ರದೇಶಗಳಂತೆ ಮುಂದುವರಿದದ್ದು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಅತ್ಯಂತ ಮಹತ್ವವನ್ನು ಪಡೆದುಕೊಂಡು ಹಂತಹಂತವಾಗಿ ಬೆಳೆದು ವಿಜಯನಗರ ಸಾಮ್ರಾಜ್ಯ ಕಾಲಘಟ್ಟದ ಅವಧಿಯಲ್ಲಿಯೂ

ನಿರ್ಮಾಣ ಮತ್ತು ಪುನರ್ನಿರ್ಮಾಣಗಳಿಗೆ ಈಡಾಗಿ ಅಂತಿಮವಾಗಿ 1565ರಲ್ಲಿ ಮುಸಲ್ಮಾನರ ದಾಳಿಯಿಂದ ಭಗ್ನಗೊಂಡು ಇಂದಿನ ಅವಸ್ಥೆಯನ್ನು ತಲುಪಿದವೆಂದು ಹೇಳಲೇಬೇಕಾಗುತ್ತದೆ. ಅಂದಮೇಲೆ ರಾಜಪ್ರಾಂಗಣ ಪ್ರದೇಶದ ಪ್ರಾಚೀನತೆಯನ್ನು ಕ್ರಿ.ಶ. 2ನೇ ಶತಮಾನಕ್ಕೆ ಯಾವ ಸಂಶಯವಿಲ್ಲದೆ ಕೊಂಡೊಯ್ಯಬಹುದು. ಈ ಪ್ರದೇಶದಲ್ಲಿ ಉತ್ಖನನದಲ್ಲಿ ಲಭ್ಯವಾಗಿರುವ ಪ್ರಾಚ್ಯವಸ್ತುಗಳ ಅಧ್ಯಯನವನ್ನಾಧರಿಸಿ ಇಲ್ಲಿ ಇತಿಹಾಸ ಯುಗದುದ್ದಕ್ಕೂ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿದ್ದವೆಂದು ದಾಖಲಿಸಬಹುದು.

ಆಧಾರ ಸೂಚಿ

1. **ಇಂಡಿಯನ್ ಆರ್ಕಿಯಾಲಜಿ ಎ ರಿವ್ಯೂ** ನಲ್ಲಿ 1979–80ನೇ ಸಾಲಿನಿಂದ ಪ್ರಾರಂಭಿಸಿ 1993–94 ರ ವರೆಗಿನ ವರದಿಗಳಲ್ಲಿ ಪ್ರಕಟವಾಗಿರುವ ಮಾಹಿತಿಯನ್ನು ಆಧರಿಸಿದ್ದಾಗಿದೆ. ಅಲ್ಲದೆ ಈ ಕಾಲದ ಉತ್ಖನನಗಳಲ್ಲಿ ಸ್ವತಃ ಭಾಗಿಯಾಗಿ ಆನಂತರದ ಸರ್ವೇಕ್ಷಣೆಯಿಂದ ಪಡೆದ ಮಾಹಿತಿಗಳ ಕ್ರೋಡೀಕರಣವಿದಾಗಿದೆ.
2. ಎನ್.ಎಸ್.ಶಿವರುದ್ರಸ್ವಾಮಿ 2005, ತಿಮ್ಮಾಪುರ **'ಎ ಸ್ಟಡಿ ಆಫ್ ವಿಜಯನಗರ ಟೆಂಪಲ್ ಕಾಂಪ್ಲೆಕ್ಸ್'** ಮೈಸೂರು, ಮೊದಲ ಅಧ್ಯಾಯ ಪೀಠಿಕೆ.
3. ಕೊಟ್ರಯ್ಯ.ಸಿ.ಟಿ.ಎಂ.2008, **ಆರ್ಕಿಯಾಲಜಿ ಆಫ್ ಹಂಪಿ– ವಿಜಯನಗರ,** ಭಾರತೀ ಕಲಾಪ್ರಕಾಶನ, ನ್ಯೂ ಡೆಲ್ಲಿ, ಪು. 47–59.
4. ನರಸಿಂಹಯ್ಯ.ಬಿ. 1992, **'ಮೆಟ್ರೋಪಲೀಸ್ ವಿಜಯನಗರ ಸಿಗ್ನಿಫಿಕೆನ್ಸ್ ಆಫ್ ರಿಮೈನ್ಸ್ ಆಫ್ ಸಿಟಡನ್,** ಬುಕ್ ಇಂಡಿಯಾ ಪಬ್ಲಿಷಿಂಗ್ ಕಂಪೆನಿ, ನ್ಯೂ ಡೆಲ್ಲಿ. ಪು. 26–38. 59–92.
5. ಅದೇ.
6. ಲ.ನ.ಸ್ವಾಮಿ, 2014, ಮಹಾನವಮಿ ದಿಬ್ಬದಿಂದ ಬನ್ನಿಮಂಟಪಕ್ಕೆ ಸಾಗಿಬಂದ ದಸರ. **ವಿಜಯನಗರ ಅಧ್ಯಯನ 18,** ರಾಜ್ಯಪುರಾತತ್ವ ಇಲಾಖೆ. ಮೈಸೂರು. ಪು. 32–43.
7. **ಎ.ಆರ್.ಎಸ್.ಐ.ಇ, 1993,** 585–1008 ಕ್ರಿ.ಶ. ಮತ್ತು **ಎಸ್.ಎಸ್.ಐ. ಸಂ. 5** ನಂ. 221–1008 ಕ್ರಿ.ಶ.
8. ದೇವರಕೊಂಡಾರೆಡ್ಡಿ, 2000, **ಹಂಪಿ ಶಾಸನಗಳು, ಕವಿಶಾಸಂ. 3,** ಶಾಸನ 255. 1076 ಕ್ರಿ.ಶ.
9. **ಐ.ಎ.ಆರ್. 1983–84ನೇ ವರ್ಷದ** (**ಪು 39–40**) ಮತ್ತು **1984–85ನೇ ವರ್ಷದ** (**ಪು 39–40**) ಸಂಪುಟಗಳಲ್ಲಿ ಪ್ರಕಟವಾಗಿರುವಂತೆ ಈ ಕಾಲಘಟ್ಟದಲ್ಲಿ ನಡೆದ ಹಂಪಿಯ ರಾಜಪ್ರಾಂಗಣದ ಉತ್ಖನನದಲ್ಲಿ ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದ ಹಲವು ಭಗ್ನ ಮೂರ್ತಿಗಳ ಶಿಲ್ಪಗಳು ದೊರೆತಿದ್ದು, ಅವು ಇಲ್ಲಿ ಆ ಕಾಲದ ದೇವಾಲಯವಿದ್ದುದನ್ನು ಖಚಿತಪಡಿಸುತ್ತವೆ.
10. ಲ.ನ.ಸ್ವಾಮಿ, ಪೂರ್ವೋಕ್ತ, 2014, ಪು. 32, 43
11. ಲಾಂಗಹರ್ಸ್ಟ್ 1917, **ಹಂಪಿ ರೂಯಿನ್ಸ್,** ಏಷಿಯಾ ಎಜುಕೇಷನ್ ಸಿರೀಸ್ ಮದ್ರಾಸ್. ಪುಟ. 68–70.
12. ಎಂ.ಎಂ. ಕಲಬುರ್ಗಿ, 1994 **ಕರ್ನಾಟಕ ಕೈಫಿಯತ್ತುಗಳು,** ಕನ್ನಡ ವಿಶ್ವವಿದ್ಯಾಲಯ. ಹಂಪಿ. ಕಮಲಾಪುರ ಕೈಫಿಯತ್ತು
13. **ಐ.ಎ.ಆರ್. 1984–85, 39–40**
14. **ಐ.ಎ.ಆರ್. 1975–76, ಪು. 20**
15. ಕೆ.ಜಿ. ಗೋಪಾಲಕೃಷ್ಣರಾವ್ ಅವರೊಂದಿಗೆ ನಡೆಸಿದ ಕ್ಷೇತ್ರಕಾರ್ಯಗಳ ಮಾಹಿತಿಯನ್ನಾಧರಿಸಿದೆ.

■

ತಾಳಗುಂದದಲ್ಲಿ ದೊರೆತಿರುವ ಕನ್ನಡಭಾಷೆಯ ಪ್ರಥಮ ಶಾಸನ, ಉತ್ಖನನ ಮತ್ತು ಇತರ ಅಂಶಗಳು

ಟಿ.ಎಂ. ಕೇಶವ
ಅಧೀಕ್ಷಕ ಪುರಾತತ್ತ್ವವಿದರು (ನಿವೃತ್ತ)
ಭಾರತೀಯ ಪುರಾತತ್ತ್ವ ಸರ್ವೇಕ್ಷಣ
ಬೆಂಗಳೂರು ವಲಯ
32, ಮಧುರಶ್ರೀ
ವೆಳ್ಳಿಯಮ್ಮ ಲೇಔಟ್, ಕಸವನಹಳ್ಳಿ
ಕಾರ್ಮೆಲ್ ರಾಂ ಅಂಚೆ
ಸರ್ಜಾಪುರ ಮುಖ್ಯರಸ್ತೆ
ಬೆಂಗಳೂರು–560035

ಎಸ್. ಕಾರ್ತಿಕ್
ಸಂಶೋಧಕರು
413, ಕರ್ನಾಟಕ 'ಡಿ' ಗ್ರೂಪ್
ಎಂಪ್ಲಾಯಿಸ್ ಲೇಔಟ್, 1 ನೆಯ ಬ್ಲಾಕ್
6 ನೆಯ ಮುಖ್ಯರಸ್ತೆ
ಲಿಂಗಧೀರನಹಳ್ಳಿ (ಹೇರೋಹಳ್ಳಿ)
ಅಂದ್ರಹಳ್ಳಿ ಮುಖ್ಯರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು–560091

ಇಂದಿಗೂ, ಮಯೂರಗಳ (ನವಿಲು) ಆಶ್ರಯ ತಾಣವಾಗಿರುವ ತಾಳಗುಂದ, ಬಳ್ಳಿಗಾವೆಯಿಂದ ಸುಮಾರು 5 ಕಿ.ಮೀ. ದೂರವಿದ್ದು ಶಿಕಾರಿಪುರ ತಾಲ್ಲೂಕಿನ (ಶಿವಮೊಗ್ಗ ಜಿಲ್ಲೆ) ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದು ಅಲ್ಲಿಂದ ಸುಮಾರು 19 ಕಿ.ಮೀ ವಾಯವ್ಯಕ್ಕಿದೆ. ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯ ಬೆಂಗಳೂರು ವಲಯದ ಅಧಿಕಾರಿಗಳು, ಅಂದಿನ ಪುರಾತತ್ತ್ವ ಅಧೀಕ್ಷಕ ಹುದ್ದೆಯಲ್ಲಿದ್ದ ಎಂ. ನಂಬಿರಾಜನ್ ಅವರ ನೇತೃತ್ವದಲ್ಲಿ ಶಿವಮೊಗ್ಗ ಜಿಲ್ಲೆಯ ಸ್ಮಾರಕಗಳಿಗೆ ಸಂಬಂಧಪಟ್ಟ, ಸಂರಕ್ಷಣಾ ಹಂತದ ಕಾಮಗಾರಿಗಳನ್ನು ವೀಕ್ಷಿಸಲು ಭೇಟಿ ನೀಡಿದ ಸಮಯದಲ್ಲಿ, ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ತಾಳಗುಂದದ ಪ್ರಣವೇಶ್ವರ ದೇವಾಲಯವನ್ನು ಸಹ ವಿವರವಾಗಿ ಪರಿಶೀಲಿಸಿ, ಇದನ್ನು ಆಮೂಲಾಗ್ರವಾಗಿ ಅಧಿಷ್ಠಾನದ ಮಟ್ಟದಿಂದ ಬಿಡಿಸಿ ಪುನರ್ ರೂಪಿಸಲು ಯೋಜನೆಯನ್ನು ಹಾಕಿಕೊಳ್ಳಲಾಯಿತು. ಇದೇ ದೇವಾಲಯದ ಪೂರ್ವದಿಕ್ಕಿನ ಆವರಣದ ಗೋಡೆಗೆ ಹೊಂದಿಕೊಂಡಂತೆ ಪ್ರಸಿದ್ಧವಾದ ಕದಂಬರ "ತಾಳಗುಂದದ ಸ್ತಂಭಶಾಸನ"ವೂ ಇದ್ದು, ಸಂರಕ್ಷಿತವಾಗಿದೆ. ದೇವಾಲಯದ, ಮಹಾಮಂಡಪದ ಆಗ್ನೇಯ ದಿಕ್ಕಿನ ಮೂಲೆಯಲ್ಲಿ ಅಧಿಷ್ಠಾನದ ಅಧ್ಯಯನದ ಸಲುವಾಗಿ ಪ್ರಾಯೋಗಿಕ ಉತ್ಖನನದ ಉದ್ದೇಶದಿಂದ, 1 ಮೀ.ಚೌಕದ ಕುಳಿಯನ್ನು ತೋಡಿದಾಗ ಕೇವಲ 15–20 ಸೆಂ.ಮೀ. ಆಳದಲ್ಲಿ ಕಳಚೂರ್ಯ ಎರಡನೆಯ ಸಂಕಮನನಂದಿನಾಗರೀ

ಲಿಪಿ, ಸಂಸ್ಕೃತ ಭಾಷೆಯಲ್ಲಿ ರಚಿತವಾದ ಕ್ರಿ.ಶ. 24-3-1180ರ ತಾಮ್ರಶಾಸನ ಮತ್ತು ಬಾದಾಮಿ ಚಲುಕ್ಯರ ವಿನಯಾದಿತ್ಯನ ತಾಮ್ರಶಾಸನಗಳು ದೊರೆತುದು ವಿಸ್ಮಯಕರವಾದುದು (ಚಿತ್ರ-1). ಈ ತಾಮ್ರಪಟಗಳು ಮೊದಲು ತಾಳಗುಂದದ ಗ್ರಾಮಸ್ಥರ ಬಳಿಯಲ್ಲಿ ಇದ್ದು, ಅನಂತರದ ಕಾಲದಲ್ಲಿ ದೇವಾಲಯಕ್ಕೆ ನೀಡಿರಬಹುದೆಂದು ತೋರುತ್ತದೆ. ಕಾಲಾನುಕಾಲಕ್ಕೆ ಆದ ಬದಲಾವಣೆಗಳಿಂದ ಇವು ಭೂಮಿಗತವಾಗಿರಬಹುದೆಂದು ಊಹಿಸಬಹುದು. ಕಳಚೂರ್ಯ ಎರಡನೆಯ ಸಂಕಮನ ಶಾಸನವು ಅವನು ಬನವಾಸಿಯಲ್ಲಿ ಬೀಡು ಬಿಟ್ಟಿದ್ದಾಗ ಪ್ರಣವೇಶ್ವರನ ಪೂಜೆಗೆಂದು ಕೆಲವು ಗ್ರಾಮಗಳನ್ನು ದಾನವಾಗಿ ಕೊಟ್ಟ ವಿವರವನ್ನು ಒಳಕೊಂಡಿದೆ. ಬಾದಾಮಿ ಚಲುಕ್ಯರ ವಿನಯಾದಿತ್ಯನ ಶಾಸನವು ವಿಷಯದ ದೃಷ್ಟಿಯಿಂದ ನಂಬಿಕಾರ್ಹವಾಗಿದ್ದರೂ ಲಿಪಿಯ ದೃಷ್ಟಿಯಿಂದ ಆಕ್ಷೇಪಾರ್ಹವಾಗಿದೆ. ಇದರಲ್ಲಿ ಬಳಕೆಯಾಗಿರುವ ಲಿಪಿ ಇಂದು ಮುದ್ರಣದಲ್ಲಿ ಬಳಕೆಯಾಗುತ್ತಿರುವ ದೇವನಾಗರೀ ಲಿಪಿಗೆ ಸ್ವಲ್ಪಮಟ್ಟಿಗೆ ಸಮೀಪವಾಗಿದ್ದು, ಅಕ್ಷರಗಳು ಆಳವಾಗಿ ಕಂಡರಣೆಗೊಂಡಿಲ್ಲ. ತಾಮ್ರದ ತಗಡಿನ ವಿನ್ಯಾಸವು ಒರಟಾದ ಅಂಚುಗಳಿಂದ ಕೂಡಿದ್ದು ಒಟ್ಟಾರೆಯಾಗಿ ಶಾಸನದ ಸೃಜತೆ ಪ್ರಶ್ನಾರ್ಹವಾಗಿದೆ. ಮೂಲ ಶಾಸನದ ನಕಲು ಪ್ರತಿ ಇದ್ದರೂ ಇರಬಹುದು. ಈ ಶಾಸನವು ಕೂಡ ಬಾದಾಮಿಯ ಚಲುಕ್ಯರು ಪ್ರಣವೇಶ್ವರನ ನಿತ್ಯ-ನೈಮಿತ್ತಿಕ ಪೂಜೆಗಾಗಿ ದಾನ ಕೊಟ್ಟ ಸಂಗತಿಯನ್ನು ತಿಳಿಸುತ್ತದೆ. ಈ ಎಲ್ಲ ಅಂಶಗಳಿಂದ ಉತ್ತೇಜನಗೊಂಡ ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಇಲಾಖೆಯು ಅದೇ ಕುಳಿಯನ್ನು ಸುಮಾರು 2.50 ಮೀ. ವರೆಗೂ ವಿಸ್ತರಿಸಿ ಉತ್ಖನನ ನಡೆಸಿದಾಗ, ತಲಕಾಡು ಗಂಗರ ಭೂವಿಕ್ರಮನ (ಕ್ರಿ.ಶ. ಸು 630-670) 13 ಚಿನ್ನದ ಆನೆ ವರಹಗಳು (ಚಿತ್ರ-2), ಒಂದು ವಿಜಯನಗರದ ಅಥವಾ ಕೆಳದಿ ಅರಸರಿಗೆ ಸಂಬಂಧಿಸಿದ ತಾಮ್ರನಾಣ್ಯ ಮತ್ತು ಇಟ್ಟಿಗೆಯ ಕಟ್ಟಡಗಳು ದೊರೆತವು. ಇದನ್ನು ಗಮನಿಸಿದ ಮೇಲೆ ಈ ಸಂಕೀರ್ಣದಲ್ಲಿ ಇನ್ನೂ ಭೂಮಿಗತವಾಗಿದ್ದಿರಬಹುದಾದ ಅನೇಕ ಅಮೂಲ್ಯ ಪುರಾವಸ್ತುಗಳ ಅಧ್ಯಯನದ ಸಾಧ್ಯತೆಯು ಒಂದು ವಿಸ್ತೃತ ಪ್ರಾಯೋಗಿಕ ಉತ್ಖನನಕ್ಕೆ ಎಡೆ ಮಾಡಿಕೊಟ್ಟಿತು.

ತಾಳಗುಂದ ಇತಿಹಾಸದ ಕಿರುಪರಿಚಯ

ಸ್ಥಳದಲ್ಲಿಯೇ ದೊರಕುವ ಶಾಸನಗಳ ಆಧಾರದಿಂದ ಕ್ರಿ.ಶ.ದ ಪ್ರಾರಂಭಿಕ ಕಾಲದಿಂದ ಇದು ಒಂದು ಪ್ರಮುಖ ಅಗ್ರಹಾರವಾಗಿದ್ದು ಬನವಾಸಿ (ವೈಜಯಂತಿ)ಯ ಕದಂಬರ ಮೂಲ ನೆಲೆಯಾಗಿದ್ದಿತು. ತಾಣಗುಂಡೂರ (ಕ್ರಿ.ಶ. 936), ಸ್ಥಾಣಕುಂದೂರ (ಕ್ರಿ.ಶ. 1028), ತಾಣಗುಂಡೂರ, ಸ್ಥಾಣಗುಂದಾಪುರ (ಕ್ರಿ.ಶ.1261)ಎಂದು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಈಗ ಉತ್ಖನನದಲ್ಲಿ ಸಿಕ್ಕಿರುವ ದಕ್ಷಿಣ ಸಿಂಹಕಟಾಂಜನದ ಶಾಸನದಲ್ಲಿ 'ಗುದ್ಗಲು ಮೂಲ್ಯ ಕ್ಷೇತ್ರಂ ಚನ್ದ್ರಾದಿತ್ಯ' ಎಂದಿರುವ ಭಾಗದಲ್ಲಿ ಗುದ್ಗಲು ಎಂಬುದರ ಹಿಂದೆ ಈಗ ತ್ರುಟಿತವಾಗಿರುವ ಭಾಗದಲ್ಲಿ ತಾಳ ಎಂಬ ಪದವಿದ್ದಿರಬಹುದಾದ ಸಾಧ್ಯತೆಯಿದ್ದು, ಇದನ್ನು ಒಪ್ಪುವ ಸಂಭಾವ್ಯತೆಯೇನೋ ಇದೆ. ಅಂದರೆ ತಾಳಗುಂದ ಕ್ಷೇತ್ರದ ಎಂಬ ಅರ್ಥವನ್ನು ಹೇಳಲು ಸಾಧ್ಯವಾಗುತ್ತದೆ. ಈ ದೇವಾಲಯ ಮತ್ತು ಇದರ ಸುತ್ತುಮುತ್ತಲಿನ ಪರಿಸರವನ್ನು ಅ. ಸುಂದರ, ಎಚ್. ಆರ್. ರಘುನಾಥ ಭಟ್ಟ ಮುಂತಾದ ಸಂಶೋಧಕರು ಪರಿವೀಕ್ಷಣೆಗೈದು ಅನೇಕ ಕದಂಬಕಾಲೀನ ಭಿನ್ನವಾಗಿರುವ ಯಕ್ಷನ ವಿಗ್ರಹ, ಚತುರ್ಭುಜ ನರಸಿಂಹ, ಕೋಣನ ತಲೆ, ಮಾಸ್ತಿಕಲ್ಲು ಇತ್ಯಾದಿ ಶಿಲ್ಪಗಳನ್ನಲ್ಲದೆ ಕ್ರಿ.ಶ. ಸು 9-11 ನೆಯ ಶತಮಾನಕ್ಕೆ ಸೇರುವ ಇತರ ಶಿಲ್ಪಗಳನ್ನೂ ಪತ್ತೆಹಚ್ಚಿ ಅಧ್ಯಯನ ನಡೆಸಿದ್ದಾರೆ. ಇವುಗಳೊಂದಿಗೆ ದೇವಾಲಯದ ಅಂಗಳ ಮತ್ತು ಸನಿಹದಲ್ಲಿಯೇ ಅನೇಕ ವೀರಗಲ್ಲುಗಳು, ಶಾಸನಗಳು ನೋಡಲು ಕಾಣಸಿಗುತ್ತವೆ.

ಪೂರ್ವಾಭಿಮುಖಿವಾಗಿರುವ ಈ ದೇವಾಲಯ, ತಲವಿನ್ಯಾಸದಲ್ಲಿ ಒಂದು ಗರ್ಭಗೃಹ, ಸ್ತಂಭರಹಿತ ಒಂದು ಸಾಮಾನ್ಯ ದ್ವಾರದ ಮಂಡಪವನ್ನು ಹೊಂದಿದೆ. ಇದೇ ಆವರಣದ ಪೂರ್ವ ದಿಕ್ಕಿನ ಅಂಚಿನಲ್ಲಿ, ಕದಂಬ ಕಾಕುಸ್ಥವರ್ಮ–ಶಾಂತಿವರ್ಮರ (ಕ್ರಿ.ಶ. ಸು 430) ಅತಿ ಸುಂದರ ಪೇಟಿಕಾಶಿರ ಲಿಪಿಯ ಸ್ತಂಭಶಾಸನವಿದೆ. ಕ್ರಿ.ಶ 3 ನೆಯ ಶತಮಾನದಿಂದ 15 ನೆಯ ಶತಮಾನದ ವರೆಗೆ ಪೂಜಿಸಲ್ಪಡುತ್ತಿದ್ದ ಶಾತವಾಹನರ ಈ ಮಹಾದೇವನು ಆನಂತರದ ಅರಸರಿಗೆ ಪ್ರಣವೇಶ್ವರನಾಗಿದ್ದಾನೆ. ದಕ್ಷಿಣ ಕಟಾಂಜನದಲ್ಲಿ ಸಿಕ್ಕಿರುವ ತ್ರುಟಿತ ಶಾಸನದಲ್ಲಿ ಮಹಾ [ದೇವ] ಎಂಬ ಪದ ದೊರೆತಿದ್ದು ಇದು ಶಾಸನಗಳಲ್ಲಿ ಬರುವ ಮಹಾದೇವ ಆಗಿರಲಿಕ್ಕೂ ಸಾಕು. ಈ ದೇವಾಲಯದ ಪ್ರಾಂಗಣದ ಉತ್ಖನನದಲ್ಲಿ ಕದಂಬಕಾಲೀನ ತ್ರುಟಿತ ಶಾಸನದ ತುಣುಕುಗಳು ಮತ್ತು ಗಂಗರ ನಾಣ್ಯಗಳು, ಬಾದಾಮಿ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯರ ಅವಶೇಷಗಳ ಕುರುಹುಗಳು, ಕಳಚೂರ್ಯರ, ಹೊಯ್ಸಳರ ಶಾಸನಗಳು ದೊರೆತಿದ್ದು ಒಂದು ಸತತವಾದ ದೀರ್ಘ ಇತಿಹಾಸವನ್ನು ಸಾರಿ ಹೇಳುತ್ತವೆ. ಸುಮಾರು ಕ್ರಿ.ಶ.340 ರಿಂದ 352ರ ಆಸುಪಾಸಿನಲ್ಲಿ, ಸ್ಥಾಣಕುಂದೂರ ವಾಸಿಯಾದ ಮಯೂರಶರ್ಮನು ಕಾಂಚೀಪುರದಲ್ಲಿ ವೇದಾಧ್ಯಯನ ಮಾಡಲು ತೆರಳಿದ್ದ ಸಮಯದಲ್ಲಿ ಪಲ್ಲವ ಶಿವಸ್ಕಂಧವರ್ಮ ರಾಜನ ಕಡೆಯವರಿಂದ ಅವಮಾನಿತನಾದ ಕಾರಣ, ತನ್ನ ತೀಕ್ಷ್ಣಮತಿಯಿಂದ, ಬಾಹುಬಲದಿಂದ ಪಲ್ಲವರನ್ನು ಸೋಲಿಸಿ ಕನ್ನಡ ನಾಡಿನ ಪ್ರ–ಪ್ರಥಮ ಸ್ವತಂತ್ರ ಸಾಮ್ರಾಜ್ಯಕ್ಕೆ, ಆದಿ ಕದಂಬರ ವಂಶಾಡಳಿತಕ್ಕೆ ಸಿಂಹಲಾಂಛನ ಅಂಕಿತವನ್ನು ಹಾಕಿದನು. ತನ್ನ ಹುಟ್ಟೂರಿಗೆ ಬಂದ ಮಯೂರವರ್ಮನು, ಅಲ್ಲಿದ್ದ ತನ್ನ ಕುಲದೈವ ಮಹಾದೇವನ ದೇವಾಲಯವನ್ನು ವೀಕ್ಷಿಸಿ, ಅದರ ದುಃಸ್ಥಿತಿಗೆ ಮರುಕಪಟ್ಟು, ಯಾವತ್ತೂ ನಿತ್ಯ ನೈಮಿತ್ತಿಕ ಪೂಜೆಯ ಸಲುವಾಗಿ 32,000 ಬ್ರಾಹ್ಮಣ ಮನೆತನದವರನ್ನು ಅಹಿಃಛತ್ರದಿಂದ ಕರೆತಂದು ಸ್ಥಾಣಕುಂದೂರ ಅಗ್ರಹಾರವನ್ನು ಪುನರುಜ್ಜೀವನ ಗೊಳಿಸಿದನೆಂದು ಹೇಳುತ್ತದೆ, ಕ್ರಿ.ಶ.1092 ರ ಸ್ಥಳದಲ್ಲಿಯೇ ದೊರೆತ ಶಾಸನ "ಹಿರಣ್ಯಗರ್ಭ ಬ್ರಹ್ಮ ಸಂಸ್ಥಾನಪಿತಶ್ರೀಮತ್ತ್ರೈಲೋಕ್ಯನಾಥಪ್ರಣವೇಶ್ವರ ದೇವಾಧಿಷ್ಟ ತವಿಸಿಷ್ಟಾಗ್ರಹಾರಾಧೀಶ್ವರರಹಿಚ್ಚತ್ರ ಸಮಾಗತದ್ಯಾರಶ್ಪಶಸ್ರಾಗ್ನಿ ಹೋತ್ರಪರಿವೃತದ್ವಾತ್ರಿಂಶತ್ಸಹಸ್ರಸಂಖ್ಯಾ ಸಮೇತಂ"ಎಂದು ಹೇಳುತ್ತದೆ.

ಆ ಸಂದರ್ಭದಲ್ಲಿ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ನಡೆಸಿ ದೇವಾಲಯದ ಆವರಣದಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಲಾಗಿದೆಯೆಂದು ಹೇಳಲು ಕೆಲವೊಂದು ಮಹತ್ತ್ವ ಪೂರ್ಣ ಮಾಹಿತಿಗಳು ಈ ಉತ್ಖನನದಿಂದ ದೊರೆತಿವೆ. ಇದರಿಂದಾಗಿ ಈ ಸ್ಥಳ ಪ್ರಸಿದ್ಧ ಘಟಿಕಾ ಸ್ಥಳವಾಗಿಯೂ ಬೆಳೆಯಿತು. ಅಂದಿನ ಕಾಲಕ್ಕೆ ಸ್ಥಾಣಕುಂದೂರು ವ್ಯಾಸಂಗಕ್ಕೆ ಪ್ರಸಿದ್ಧವಾದ ಒಂದು ಘಟಿಕಾ ಕೇಂದ್ರವಾಗಿತ್ತೆಂಬುದನ್ನು "ತಾಳಗುಂದದ ಪ್ರಣವೇಶ್ವರ ದೇವಾಲಯ" ಎಂಬ ತಮ್ಮ ಲೇಖನದಲ್ಲಿ ಎಚ್. ಆರ್. ರಘುನಾಥಭಟ್ಟರು ಸೋದಾಹರಣವಾಗಿ ಚಿತ್ರಿಸಿದ್ದಾರೆ. ಈ ದೇವಾಲಯದ ಆವರಣದಲ್ಲಿ ನಡೆದ ಉತ್ಖನನದಲ್ಲಿ, ಈ ದೇವಾಲಯದ ಮತ್ತು ಅಗ್ರಹಾರದ ಸ್ಥಿತಿಯನ್ನು ತಿಳಿಯಲು ಸಾಧ್ಯವಿರುವ ಪ್ರತ್ಯಕ್ಷವಾದ ಮತ್ತು ಪರೋಕ್ಷವಾದ ಅನೇಕ ಆಧಾರಗಳು ದೊರೆತಿವೆ. ಅವುಗಳಲ್ಲಿ ಹೋಮ–ಹವನ ಕಾಲದಲ್ಲಿ ಯಜ್ಞವೇದಿಕೆಯ ಬಳಿ ಬೆಂಕಿಯಿಂದ ತೊಂದರೆ ಆಗದಂತೆ ಕೆಂಡ ಸರಿಮಾಡಿಕೊಳ್ಳುವ, ಸುಟ್ಟ ಮಣ್ಣಿನ ಬೆರಳು ಗುರುತಿರುವ ಹಸ್ತರಕ್ಷಕಗಳು ಶಾತವಾಹನ–ಕದಂಬಕಾಲೀನ ಸ್ತರದಲ್ಲಿ ದೊರೆತಿವೆ. ಇವುಗಳನ್ನು ವಿಶೇಷವಾಗಿ ಮಣಿಕಟ್ಟಿನ ಅಳತೆಯಲ್ಲಿ ಕೈಗೆ ಕಟ್ಟಿಕೊಳ್ಳಲು ಅನುವಾಗುವಂತೆ ರಂಧ್ರಗಳನ್ನು ಕೊರೆಯಲಾಗಿದೆ.

ಉತ್ಖನನದ ಸಂಕ್ಷಿಪ್ತ ವರದಿ (ಚಿತ್ರ-3)

ಮೇಲೆ ತಿಳಿಸಿದಂತೆ, ತಾಳಗುಂದದ ಪ್ರಣವೇಶ್ವರ ದೇವಾಲಯದ ಆವರಣದಲ್ಲಿ ತಾಮ್ರ ಶಾಸನಗಳು, ಚಿನ್ನದ ನಾಣ್ಯಗಳು ದೊರೆತಾಗ ಸ್ಮಾರಕದ ಹಿತ ಕಾಪಾಡುವ ಸಲುವಾಗಿ, ನಿಧಿ ಹುಡುಕಾಟ ನಡೆಸುವವರು ಊರಾಚೆ ಇರುವ ಈ ದೇವಾಲಯ ಪರಿಸರವನ್ನು ಅಗೆದು ಹಾಳುಗೆಡವದಿರಲು ಮತ್ತು ದೇವಾಲಯದ ಪರಿಸರದ ಸಂರಕ್ಷಣಾರ್ಥವಾಗಿ ನಡೆಸುವ ಕೆಲಸದಲ್ಲಿ ಭೂಮಿಗತ ಪುರಾತತ್ತ್ವ ಕುರುಹುಗಳು ಹಾಳಾಗದಿರಲು ಮತ್ತು ಸ್ಥಳದ ಅಮೂಲ್ಯ ಐತಿಹಾಸಿಕ ಅಂಶಗಳನ್ನು ಬೆಳಕಿಗೆ ತರಲು ಆವರಣದ ಒಳಭಾಗ, ಹೊರಭಾಗದಲ್ಲಿ, ಪೂರ್ವದಿಕ್ಕಿನಲ್ಲಿ 20 ಮೀ. ದೂರದಲ್ಲಿರುವ ಶಾಸನಗಳ ನಡುವಿನ ಸ್ಥಳದಲ್ಲಿ ಚೌಕಾಕಾರದ ಪ್ರಾಯೋಗಿಕ ಕುಳಿಗಳನ್ನು ಆಯೋಜಿಸಿ ಉತ್ಖನನ ನಡೆಸಲಾಯಿತು. ಇದರ ಜೊತೆಜೊತೆಗೇ ಸ್ಥಳೀಯ ತಟಾಕದ ದಡದಲ್ಲಿ ಕಾಕುಸ್ಥವರ್ಮನ ಕಾಲದಲ್ಲಿ (ಕ್ರಿ.ಶ.ಸು 405–430) ನಿರ್ಮಿಸಲಾದ ತಟಾಕದ ಆವರಣ ಗೋಡೆಯ ಅವಶೇಷಗಳನ್ನೂ ಗುರುತಿಸಲಾಯಿತು. ಈ ನಿರ್ಮಾಣದ ಬಗೆಗಿನ ಮಾಹಿತಿ ಸ್ತಂಭಶಾಸನದಲ್ಲಿ ದೊರಕುತ್ತದೆ. ಇದು ಮಾತ್ರವಲ್ಲದೆ ಕಾಕುಸ್ಥವರ್ಮನು ಸ್ಥಾನಕುಣ್ಡೂರದ ಪ್ರಣವೇಶ್ವರ ದೇವರ ಗುಡಿಗೆ ಮಹಾದ್ವಾರವೊಂದನ್ನು ಸೇರಿಸಿದನೆಂಬ ಉಲ್ಲೇಖವಿದೆ.

ದೇವಾಲಯದ ಆವರಣದಲ್ಲಿ, ಪೂರ್ವದಿಕ್ಕಿಗೆ, ದೇವಾಲಯ ಮತ್ತು ಸ್ತಂಭಶಾಸನದ ನಡುವಿನ ಸ್ಥಳವನ್ನು ಉತ್ಖನನಕ್ಕೆ ಒಳಪಡಿಸಿದಾಗ ಮೊದಲಿನ ಎರಡು ಸ್ತರಗಳ ಆಳತೆಯಲ್ಲಿ ಅಂದರೆ ಸುಮಾರು 20–25 ಸೆಂ.ಮೀ ಆಳದಲ್ಲಿ, ಉತ್ತರದ ಭಾಗದಲ್ಲಿ ತ್ರುಟಿತ ಇಟ್ಟಿಗೆಗಳಿಂದ ಕಟ್ಟಲ್ಪಟ್ಟ, ಅಲ್ಲಲ್ಲಿ ಭಗ್ನಗೊಂಡ ನೆಲಹಾಸು (ಫ್ಲೋರ್) ದೊರೆತಿದ್ದು, ಅವುಗಳ ನಡುವೆ ಪೇಟಿಕಾಶಿರ ಅಕ್ಷರಗಳುಳ್ಳ ಕದಂಬಕಾಲೀನ ತ್ರುಟಿತ ಶಾಸನದ ಚಕ್ಕೆಗಳು ದೊರೆತಿವೆ.

ಈಗ ಉತ್ಖನನದಿಂದ ನಮಗೆ ದೊರಕುವ ಮಾಹಿತಿಯನ್ನು ಸಂಕ್ಷಿಪ್ತವಾಗಿ ಅವಲೋಕಿಸಿದಾಗ ನಮಗೆ ಸ್ಥೂಲವಾಗಿ 6 ಮಣ್ಣಿನ ಸ್ತರಗಳು ದೊರೆತಿದ್ದು ಅವುಗಳಲ್ಲಿ 6 ನೆಯದು ನೈಸರ್ಗಿಕ ಸ್ತರವಾಗಿದ್ದು ಸುಮಾರು 2.50 ಮೀ ಆಳದಲ್ಲಿ ದೊರೆತಿದೆ. ಇದಕ್ಕೂ ಹೆಚ್ಚು ಆಳ ತೋಡಲು ಕೆರೆ ಸನಿಹ ಇರುವ ಕಾರಣ ಉಕ್ಕಿ ಬಂದ ನೀರಿನ ಒರತೆ ಅಡ್ಡಿಯಾಯಿತು. ಉತ್ಖನನದಲ್ಲಿ ದೊರೆತ ಆಕರಗಳು, ಕಟ್ಟಡಗಳು, ಮಡಿಕೆ-ಕುಡಿಕೆ ಚೂರುಗಳಿಂದ, ತ್ರುಟಿತ ಶಾಸನಗಳ ತುಣುಕುಗಳಿಂದ ಮತ್ತು ನಾಣ್ಯಗಳಿಂದ ಮತ್ತು ಸ್ಥಳದಲ್ಲಿ ಇಂದಿಗೂ ಉಪಲಬ್ಧವಿರುವ ವಸ್ತುಗಳಿಂದ ಪ್ರಣವೇಶ್ವರ ದೇವಾಲಯದ ಪರಿಧಿಯಲ್ಲಿ ಕೆಳಕಂಡ ಕಾಲಮಾನವನ್ನು ಗುರುತಿಸಬಹುದು.

ಕಾಲ-1 : ಶಾತವಾಹನ, ಕ್ರಿ.ಶ. ಸು 3 ನೆಯ ಶತಮಾನ [=ಕ್ರಿ.ಶ. ಸು 280]. ಗಜಪೃಷ್ಠಾಕಾರದ ಇಟ್ಟಿಗೆ ಕಟ್ಟಡ. 43.00 ಸೆಂ.ಮೀ. ಉದ್ದ, 22.00 ಸೆಂ.ಮೀ ಅಗಲ, 07.00 ಸೆಂ.ಮೀ. ದಪ್ಪ ಅಳತೆಯನ್ನು ಉಳ್ಳ ಸುಟ್ಟ ಇಟ್ಟಿಗೆಯ ತಳಪಾಯ (ತಳಹದಿ). ಕಪ್ಪು-ಕೆಂಪು, ಕೆಂಪು ಮಡಿಕೆಯ ಚೂರುಗಳು ಮತ್ತು ಒಂದು ಸವೆದುಹೋದ ಪೋಟಿನ್ ನಾಣ್ಯ. ಈ ಗಜಪೃಷ್ಠಾಕಾರದ ಕಟ್ಟಡವನ್ನು ನೈಸರ್ಗಿಕ ಸ್ತರದ ಮೇಲೆ ನಿರ್ಮಿಸಲಾಗಿದ್ದು, ಒಟ್ಟು 8 ಸಾಲುಗಳಿಂದ (ಸ್ತರ) ಕೂಡಿದೆ. ಇದರ ಎತ್ತರ ಸುಮಾರು 60.00 ಸೆಂ.ಮೀ ಆಗಿದ್ದು, ಇದರ ಕಡೆಯ ಸಾಲಿನಲ್ಲಿ ಪೋಟಿನ್ ನಾಣ್ಯ ದೊರೆತಿದೆ (ಚಿತ್ರ-4).

ಕಾಲ-2 ಅ : ಕದಂಬ ಮಯೂರವರ್ಮ, ಕ್ರಿ.ಶ. ಸು 4 ನೆಯ ಶತಮಾನ [ಕ್ರಿ.ಶ. ಸು 340–360]ದಲ್ಲಿ ವಿಸ್ತರಿಸಿರಬಹುದಾದ ಗಜಪೃಷ್ಠಾಕಾರದ ದೇವಾಲಯ. ಗರ್ಭಗೃಹ, ಸ್ತಂಭರಹಿತ

ಅಂತರಾಳ/ಮಂಡಪ ಮತ್ತು ಸಿಂಹಕಟಾಂಜನದ ಸ್ತಂಭ ಸಹಿತವಾದ ಸಭಾಮಂಡಪ ಅಥವಾ ಮುಖಮಂಟಪ; ಉತ್ತರ ಮತ್ತು ಈಶಾನ್ಯ ದಿಕ್ಕಿನಲ್ಲಿ ನೆಲಹಾಸು, ಯಾಗಕ್ಕೆ ಬೇಕಾದ ಇನ್ನಿತರ ಕಟ್ಟಡಗಳು, ಕೆಂಪು ಮಡಿಕೆ, ಕಪ್ಪು ಮಡಿಕೆ ಚೂರುಗಳು, ಪ್ರಾಯಶಃ ಅಗ್ನಿಯನ್ನು ಸರಿಪಡಿಸುವ ಕಾಲದಲ್ಲಿ ಕೈ ಸುಡದಿರಲಿ ಎಂದು ಉಪಯೋಗಿಸಿರಬಹುದೆಂದು ಹೇಳಲು ಸಾಧ್ಯವಿರುವ ಹಸ್ತರಕ್ಷಕಗಳು ದೊರೆತಿವೆ. ಇಲ್ಲಿ ಮಯೂರವರ್ಮನು ಅಶ್ವಮೇಧ ಯಾಗವನ್ನು ಮಾಡಿರುವುದು ಶಾಸನಗಳಿಂದ ವಿದಿತವಾಗುತ್ತದೆ. ಗೋಪಾಸ ಸ್ತಂಭ ಅಥವಾ ಯೂಪಸ್ತಂಭ ಕೂಡ ಇಲ್ಲಿ ದೊರೆತಿದೆ. ಇದನ್ನು ಒಂದು ಕಲ್ಲಿನ ಚೌಕಾಕಾರದ ಕಲ್ಲಿನ ದ್ರೋಣದಲ್ಲಿ ಎರಡು ಸಾಲಿನ ಇಟ್ಟಿಗೆ ತಳಪದಿಯ ಮೇಲೆ ಕೂಡಿಸಲಾಗಿತ್ತು.

ಕಾಲ–2 ಆ : ಕಾಕುಸ್ಥವರ್ಮನ (ಕ್ರಿ.ಶ. ಸು 405–430) ಕಾಲದಲ್ಲಿ ಕುಸಿದು ಹೋಗಿದ್ದ ಮಹಾಮಂಡಪದ ಅವಶೇಷಗಳನ್ನು ಸರಿಪಡಿಸಿ ಮಹಾದ್ವಾರವನ್ನು ನಿರ್ಮಿಸಲಾಗಿತ್ತು. ಇದನ್ನು ಎತ್ತರಿಸಿ ಇಟ್ಟಿರುವ ಚಂದ್ರಶಿಲೆಯಿಂದ ಕಂಡುಕೊಳ್ಳಬಹುದು. ದ್ವಾರ ನಿರ್ಮಾಣದ ಬಗೆಗೆ ಶಾಸನವೊಂದರಿಂದ ಮಾಹಿತಿ ದೊರಕುತ್ತದೆ. ಈ ವೇಳೆಗೆ ಸಿಂಹಕಟಾಂಜನ ಶಾಸನ ಸಹಿತವಾಗಿ ಭಗ್ನಗೊಂಡು ಅದರ ಅವಶೇಷಗಳು ಕಟಾಂಜನದ ಉತ್ತರ ಮತ್ತು ದಕ್ಷಿಣ ಭಾಗಗಳ ನಡುವಿನ ಎಡೆಯಲ್ಲಿ ಸುಮಾರು 0.80 ಸೆಂ. ಮೀ ಆಳದಲ್ಲಿ, ತಲೆಕೆಳಕಾಗಿ ಬಿದ್ದಿದ್ದ ಸ್ಥಿತಿಯಲ್ಲಿ ಭಗ್ನಗೊಂಡ ಮಹಾದ್ವಾರದ ಅವಶೇಷಗಳ ಕೆಳಗೆ ದೊರೆಯಿತು. ಈ ಶಾಸನದ ತುಣುಕುಗಳ ಮೇಲೆ ಭಗ್ನಗೊಂಡ, ತ್ರುಟಿತ ಮಾಡಿನ ಹೆಂಚುಗಳು, ಇಟ್ಟಿಗೆ ಚೂರುಗಳು, ಮಣ್ಣಿನ ರಾಶಿ ಇತ್ಯಾದಿ ಅವಶೇಷಗಳು ಕೂಡ ಮಹಾದ್ವಾರ ಕುಸಿದ ಕಾರಣ ಬಿದ್ದಿದ್ದವು. ಕಾಕುಸ್ಥವರ್ಮನ ಕಾಲದಲ್ಲಿ, ಮುರಿದ, ತ್ರುಟಿತಗೊಂಡ ಕುಸಿದ ಶಾಸನ ಭಾಗವನ್ನು ಎತ್ತರಿಸದೆ, ಕೇವಲ ಚಂದ್ರಶಿಲೆಯನ್ನು ಎತ್ತರಿಸಿಟ್ಟು, ಮಹಾದ್ವಾರವನ್ನು ಪುನಃ ನಿರ್ಮಿಸಿ, ಮೇಲೆ ಸೂಚಿಸಿದ ಮಹಾದ್ವಾರ ಬಂಧವನ್ನು ಕೂಡಿಸಿದ್ದಾರೆ ಎಂಬುದಕ್ಕೆ, ಗಾತ್ರದಲ್ಲಿ ಅಥವಾ ಅಳತೆಯಲ್ಲಿ ವಿಸ್ತರಿಸಿದ ಮಹಾಮಂಡಪದ ಕಟ್ಟಡ, ಕಟ್ಟಡಕ್ಕೆ ಹೊಂದಿಕೊಂಡಂತೆ ಹಾಕಿದ್ದ ನೆಲಹಾಸು ಅದರ ಮೇಲೆ ದೊರಕಿದ ಕಾ ಅಕ್ಷರವುಳ್ಳ ಚಿನ್ನದ ನಾಣ್ಯ ಆಧಾರವಾಗುತ್ತವೆ. ಕದಂಬರ ನಾಣ್ಯ, ಅದರಲ್ಲಿಯೂ ಕಾಕುಸ್ಥವರ್ಮನ ನಾಣ್ಯ ದೊರೆತಿರುವುದು ಮಹತ್ತ್ವದ್ದಾಗಿದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಚಂದ್ರಶಿಲೆಯ ತಳಭಾಗದಲ್ಲೂ ಸುಮಾರು 5–10 ಸೆಂ.ಮೀ ಮಣ್ಣಿನ ಲೇಪನವಿದ್ದು ಅದಕ್ಕೆ ಹೊಂದಿಕೊಂಡಂತೆ ಮೊದಲು ತಿಳಿಸಿದ ನೆಲಹಾಸಿದ್ದ ಕಾರಣ ಭೂಗತವಾಗಿದ್ದ ಶಾಸನ ಕಾಕುಸ್ಥವರ್ಮನ ಪೂರ್ವಕಾಲದ ಶಾಸನವೆಂದು ನಿರ್ದಾಕ್ಷಿಣ್ಯವಾಗಿ, ಸ್ಪಷ್ಟವಾಗಿ ತಿಳಿಸಿ ಕೊಡುತ್ತದೆ. ಕುಸಿದು ಬಿದ್ದಿದ್ದ ಅವಶೇಷಗಳನ್ನು ತುಸು ಸರಿಪಡಿಸಿ, ನಸುದೂರ ಪೂರ್ವದಲ್ಲಿ ಮಹಾದ್ವಾರಕ್ಕೆ ಎದುರಾಗಿ ಕಾಕುಸ್ಥ–ಶಾಂತಿವರ್ಮರ ಸ್ತಂಭ ಶಾಸನ ನಿಲ್ಲಿಸಿದಂತೆ ಕಂಡು ಬರುತ್ತದೆ. ಅಷ್ಟೆತ್ತರದ ಶಾಸನ ನಿಲ್ಲಿಸಲು ಸ್ತಂಭಕ್ಕೆ ಆಸರೆ ಕೊಡಲು ಉಪಯೋಗಿಸಿರಬಹುದಾದ ಕಟ್ಟಿಕೆಗಳ ಗುರುತು ಕಾಲ–1 (ಅ) ದ ನೆಲಹಾಸಿನ ಮೇಲೆ ಇರುವುದನ್ನು ನೋಡಬಹುದು.

ಕಾಲ–2 ಇ : ರವಿವರ್ಮನು (ಕ್ರಿ.ಶ. 465–500) ವೈಜಯಂತಿ (ಬನವಾಸಿಯಲ್ಲಿ) ಆಳುತ್ತಿದ್ದಾಗ, ಪ್ರಾಯಶಃ ಗುಡ್ಡ ತಟಾಕದಲ್ಲಿ (ಗುಡ್ನಾಪುರ) ಅರಮನೆ, ಎರಡು ನರ್ತನ ಮಂಡಪ, ಅಂತಃಪುರ, ಮನ್ಮಥವೇಶ್ಮ ಇವುಗಳ ನಿರ್ಮಾಣ ಕಾಲಕ್ಕೆ ಅಥವಾ ಅದಕ್ಕೂ ಮೊದಲು ತಾಯಿ ಪ್ರಭಾವತಿಯೊಂದಿಗೆ ಸೇರಿ ಮತ್ತೊಮ್ಮೆ ಪ್ರಣವೇಶ್ವರ ದೇವಾಲಯವನ್ನು ತುಸು ಹಿಗ್ಗಿಸಿ ಕಟ್ಟಿಸಿದಂತೆ ಹೇಳಲು, ಗರ್ಭಗೃಹ ಭಾಗದಲ್ಲಿ ವಿಸ್ತೃತಗೊಂಡ ಗಜಪೃಷ್ಠಾಕಾರದ ಕಟ್ಟಡ, ಶಾಸನ ಇರುವ ಕಟಾಂಜನಗಳನ್ನು ಸಂಪೂರ್ಣ ಮುಚ್ಚಿ ಹಾಕಿ ವಿಸ್ತರಿಸಿರುವ ಮಹಾಮಂಡಪ ಕಂಡುಬರುತ್ತಿರುವುದು ಆಸ್ಪದವನ್ನು ನೀಡುತ್ತವೆ.

ಕಾಲ–2 ಈ : ಹರಿವರ್ಮ, ಮೇಲಿನ ಸ್ತರದಲ್ಲಿ ಚೂರಿಟ್ಟಿಗೆ ಮತ್ತು ತ್ರುಟಿತ ಶಿಲೆಗಳ ನೆಲಹಾಸಿನಲ್ಲಿ ಎರಡು ಕದಂಬ ಪೇಟಿಕಾಶಿರ ಲಿಪಿಯನ್ನು ಉಳ್ಳ ಪಾಟಿ ಕಲ್ಲಿನ ಚೂರುಗಳು ದೊರೆತಿದ್ದು ಪಾಠ ಇಂತಿದೆ (ಚಿತ್ರ–5).

ಒಂದನೆಯ ತುಂಡು :

1 ನಯ ವಿನಯ ಸತ್ವ ಸಮ್ಪನ್ನಃ

2 [ರಾಗಾ*]ನ್ತಃ ಜ್ಯೇಷ್ಠೋ ವರಿಷ್ಠಸುತಃ

ಎರಡನೆಯ ತುಂಡು :

1 . . . . [ಪು*]ತ್ರಾ ಹರಿವ[ರ್ಮ್ಮ] . . . .

2 . . . . [ನಿರ್ವ*]ಹಣಾರ್ತ್ಥಂ ಸ್ಥಾನೇಕ ~ . . . .

3 . . . . ವೇದಪಾರಗೇಭ್ಯಃ ಉತ್ತರಮಾ . . . .

4 . . . . ಲಯತಿಸಚಪುಣ್ಯ . . . .

5 . . . . ಹಾಪಾತಕ ಸ . . . .

ಇದರಲ್ಲಿ ಹರಿವರ್ಮನ ಉಲ್ಲೇಖ ಇರುವುದಲ್ಲದೆ ಹರಿವರ್ಮನು ರವಿವರ್ಮನ ಹಿರಿಯ ಮಗನೆಂದು ಹೇಳುವಂತಿದೆ. ಪ್ರಾಯಶಃ ಈ ಎರಡು ತುಣುಕುಗಳೂ ಒಂದೇ ಶಾಸನದ ಭಾಗವಾಗಿದ್ದು ಪ್ರಣವೇಶ್ವರನಿಗೆ ದಾನ ಕೊಟ್ಟ ಉಲ್ಲೇಖವಿರುವಂತಿದೆ. ಅದನ್ನು ಹಾಳು ಮಾಡಿದವರಿಗೆ ಪಂಚಮಹಾಪಾತಕಗಳುಂಟಾಗಲಿ ಎಂಬ ಶಾಪ ವಾಕ್ಯವನ್ನು ಹೊಂದಿದೆ. ಹೀಗಾಗಿ ಮೂಲ ಕದಂಬರ ಕಡೆಯ ದೊರೆಯಾದ ಹರಿವರ್ಮನೂ (ಕ್ರಿ.ಶ. 519–530) ದಾನ ನೀಡಿರುವುದಾಗಿ ತಿಳಿದುಬರುತ್ತದೆ.

ಕಾಲ–3 : ಈ ಸ್ಥಳದಲ್ಲಿ ಉತ್ಖನನದಿಂದ, ಮಹಾಮಂಡಪದ ನೈಋತ್ಯ ಮೂಲೆಯಲ್ಲಿ ತಲಕಾಡು ಗಂಗರ ಭೂ ವಿಕ್ರಮನ ಆನೆಯ ಚಿತ್ರವನ್ನುಳ್ಳ 13 ಚಿನ್ನದ ನಾಣ್ಯಗಳು ದೊರೆತಿವೆ. ತಲಕಾಡು ಗಂಗರ ನಾಣ್ಯಗಳು ಒಂದಿಬ್ಬರು ದೊರೆಗಳನ್ನು ಹೊರತುಪಡಿಸಿ ದೊರೆತೇ ಇಲ್ಲ. ಭೂವಿಕ್ರಮನ ಚಿನ್ನದ ನಾಣ್ಯಗಳು ದೊರೆತಿರುವುದು ಅತ್ಯಂತ ಮಹತ್ವದ ಶೋಧವೆಂದೇ ಹೇಳಬೇಕು. ಇದು ಕೃಷ್ಣವರ್ಮನ ನಂತರ ಬಂದ ಕದಂಬ ದೊರೆಗಳು ಶಕ್ತರಲ್ಲ ಎಂಬುನ್ನು ತಿಳಿದ ಗಂಗರು ದೊರಕಿದ ಅವಕಾಶವನ್ನು ಉಪಯೋಗಿಸಿಕೊಂಡು ತಾಳಗುಂದವನ್ನು ಆಕ್ರಮಿಸಿದ್ದರು ಎಂಬುದನ್ನು ಮತ್ತು ಅವರ ಕಾಲದಲ್ಲಿ ಪ್ರಣವೇಶ್ವರನಿಗೆ ಪೂಜಾ ಕೈಂಕರ್ಯಗಳು ನಡೆಯುತ್ತಿದ್ದುದರ ಕುರುಹಾಗಿ ದೊರೆತಿವೆ. ದುರ್ವಿನೀತ, ಕದಂಬ ಕೃಷ್ಣವರ್ಮನ ಮಗ ಅಜವರ್ಮ ಮತ್ತು ಮೊಮ್ಮಗ ಭೋಗವರ್ಮನನ್ನು ಸೋಲಿಸಿರುವುದು ನಲ್ಲಾಲ್ ತಾಮ್ರಶಾಸನದಿಂದ ತಿಳಿದು ಬರುತ್ತದೆ. ಕೃಷ್ಣವರ್ಮನ ಮಗಳನ್ನು (ಸಹೋದರಿಯನ್ನು–?) ತಡಂಗಾಲ ಮಾಧವನು ವಿವಾಹವಾಗಿದ್ದು ಅದು ರಾಜಕೀಯವಾಗಿ ಆಗ ಗಂಗ ಕದಂಬರ ನಡುವೆ ಬಾಂಧವ್ಯವನ್ನು ಬೆಸೆದಿತ್ತು ಎಂಬುದು ತಿಳಿದ ವಿಚಾರವೇ ಆಗಿದೆ. ಇನ್ನೂ, ಈ ಪರಿಸರದಲ್ಲಿ, ಉತ್ಖನನ ನಡೆಸಿದಲ್ಲಿ ಈ ನಾಣ್ಯಗಳ ಬಗ್ಗೆ ಬೆಳಕು ಚೆಲ್ಲುವ ಗಂಗರ ಕಾಲದ ಶಾಸನಗಳು ದೊರಕುವುದರ ಬಗ್ಗೆ ಸಂದೇಹವೇ ಇಲ್ಲ. ಇದರ ಜೊತೆ ಜೊತೆಗೆ ಅವರ ಕಾಲದಲ್ಲಿ ಪ್ರಣವೇಶ್ವರ ದೇವಾಲಯಕ್ಕೆ ನೀಡಿರುವ ವಾಸ್ತು ಪ್ರಾಕಾರಗಳನ್ನೂ ಗುರುತಿಸಲು ಅನುವಾಗುತ್ತದೆ.

ಕಾಲ–4 : ಗಂಗರ ಅನಂತರ, ನಮಗೆ ಆವರಣದ ಉತ್ತರಭಾಗದಲ್ಲಿ, ಒಂದು ತ್ರುಟಿತ ಕಲ್ಯಾಣಿ ಚಾಲುಕ್ಯರ ಕಾಲದ ಒಂದನೆಯ ಜಯಸಿಂಹನ ಸ್ತಂಭಶಾಸನವನ್ನು ಮರು

ಜೋಡಣೆಮಾಡಿ ಅರ್ಧ ಅಥವಾ ಚೂರಿಟ್ಟಿಕೆಗಳನ್ನು ಉಪಯೋಗಿಸಿ ನಿರ್ಮಿಸಿದ ಕೋಣೆಗಳು ಈ ಆವರಣದಲ್ಲಿ ಎಡೆಯಿಲ್ಲದೆ ಕಾಲ ಕಾಲಕ್ಕೆ ಅನೇಕ ಜೋಡಣೆ, ಮರು ಜೋಡಣೆ, ಹಳೆಯ ರಚನೆಯನ್ನು ಬದಲಿಸುವ ಕೆಲಸ ಹೇರಳವಾಗಿ ನಡೆಯುತ್ತಿತ್ತು ಎಂಬುದಕ್ಕೆ ಇಂಬು ಕೊಡುತ್ತವೆ. ಈ ಸ್ತಂಭಶಾಸನದ ಎರಡು ಮುಖಗಳ ಲಭ್ಯ ಪಾಠ ಇಂತಿದೆ (ಚಿತ್ರ–6).

1 . . . . . ಜನಿ . . . . . 2 . . . . . ಯಿಸೆ . . . . . 3 . ಬೀಕಿಳಾಮೋ[ದ*] 4 . ಚೋಳೆಕಾಳಾನಳ ಭ 5 ಯ ವೈಜಯನ್ತೀ ಪತಿ [ಶ್ರೀ*] 6 ಯನ್ತಿ ಚಾಳುಕ್ಯ ರಾಜ್ಯಾ 7 . ಶುಭಶ್ಯಾಚನಾನೇಕ 8 ಕ್ಷಿತಾಂಗಿ ರಾಯಸರ್ವ್ವಜ್ಞ 7 ಚಾಳುಕ್ಯ ರಾಮನೊರಂ	1 . . . . ಕಾಗ್ರ . . . . 2 ಮೇಶ್ವರದೇವ . . . . 3 ಬನ್ದಭವಂಗೆ ಚ . . . . 4 ಸೇಧಿನ್ತುಮ್ಯಾವ[ಕೃ*] . . . . 5 ಮಗೆಸನ್ತತ ವೃತ್ತಿಯಿಂ . . . . 6 ಬನ್ದಸಮಸ್ತ ಧಾಂನ್ಯ . . . .

ತದನಂತರ ಸ್ಥಳದಲ್ಲಿಯೇ ದೊರಕುವ ಅನೇಕ ಶಾಸನಗಳು ರಾಷ್ಟ್ರಕೂಟ ಕಂದರವಲ್ಲಭ (ಕೃಷ್ಣ–3) ಕ್ರಿ.ಶ. 950, ಕ್ರಿ.ಶ. 997 ಚಾಳುಕ್ಯ ಆಹವಮಲ್ಲ, ಕ್ರಿ.ಶ. 1180 ಕಳಚೂರ್ಯ ಸಂಕಮ, ಕ್ರಿ.ಶ. 1092 ಚಾಳುಕ್ಯ ತ್ರಿಭುವನಮಲ್ಲ, ಕ್ರಿ.ಶ. 1158 ಹೊಯ್ಸಳ ವೀರಬಲ್ಲಾಳ ದೇವ, ಕ್ರಿ.ಶ. 1261 ಹೊಯ್ಸಳ ವೀರಬಲ್ಲಾಳ ಇವರುಗಳ ಕಾಲದಲ್ಲಿ ನೀಡಿರುವ ದಾನ ಶಾಸನಗಳು ಅವಿಭಿನ್ನವಾಗಿ ಪ್ರಣವೇಶ್ವರ ಪೂಜೆಗೊಳ್ಳುತ್ತಿದ್ದ ಎಂಬುದನ್ನು ಸೂಚಿಸುತ್ತವೆ.


ಪ್ರಾಚೀನ ಶಾಸನ ದೊರೆತ ಸ್ಥಳ : ಚೌಕಾಕಾರದ, ಕುಮುದ ಅಲಂಕೃತ, ಇಟ್ಟಿಗೆ ನಿರ್ಮಿತ, ಚೌಕ ಸ್ತಂಭಗಳ, ತೆರೆದ ಮಹಾ ಮಂಡಪದ ಪೂರ್ವದಿಕ್ಕಿನ, ಉತ್ತರ ಸಿಂಹ–ಸುರುಳಿ ಕಟಾಂಜನ ಅಳತೆಯಲ್ಲಿ 1.33 ಮೀಟರ್ ಇದ್ದು ಹೊರ ಮತ್ತು ಒಳಗಿನ ಅಗಲ 0.85 ಮೀಟರ್ ಇದೆ. ಬೂದು ಮಿಶ್ರಿತ ಹಸಿರು ಬಣ್ಣದ ಪಾಟಿ ಕಲ್ಲಿನ ಕಟಾಂಜನದಲ್ಲಿ ಗಾಂಭೀರ್ಯ ಸೂಚಿಸುತ್ತಿರುವ ಎರಡು ಸಿಂಹಗಳ ಮುಂಗಾಲು ಪಂಜಗಳ ಸಹಿತ ಕಟಾಂಜನದ ಅಗಲ ಭಾಗದಲ್ಲಿ ಶಾಸನವನ್ನು ಕಡೆದಿರುವುದನ್ನು ಕಾಣಬಹುದು. ಕಟಾಂಜನಗಳು 1.60 X 1.00 ಮೀಟರ್ (ಉತ್ತರ) ಮತ್ತು 1.60 X 1.00 ಮೀಟರ್ (ದಕ್ಷಿಣ) ಅಳತೆಯಲ್ಲಿವೆ.

ಶಾಸನ ಓದಲು ಭಗೀರಥ ಪ್ರಯತ್ನ : ಈ ಶಾಸನವನ್ನು ಒಂದು ಕ್ರಮದಲ್ಲಿ ಕಂಡರಿಸದೇ ಇರುವುದರಿಂದ ಶಾಸನ ಓದಲು ವಿಶೇಷವಾಗಿ ಸಂಯುಕ್ತಾಕ್ಷರಗಳಿರುವ ಕಡೆ ಸಾಕಷ್ಟು ದ್ರಾವಿಡ ಪ್ರಾಣಾಯಾಮಕ್ಕೆ ತೊಡಗಿಸಿಕೊಳ್ಳಬೇಕಾಯಿತು. ಈ ಶಾಸನವನ್ನು ಆಳವಾಗಿ ಕೆತ್ತನೆ ಮಾಡದಿರುವುದರಿಂದ ಉಪಯೋಗಿಸಿರುವ ಪಾಟೀ ಕಲ್ಲು ಬಹಳವೇ ಚಕ್ಕೆ ಎದ್ದು ಹಾಳಾಗುತ್ತಿರುವುದರಿಂದ, ಕಪ್ಪು ಮಸಿಯನ್ನು ಬಳಸಿ ಪಡಿಯಚ್ಚು ತೆಗೆಯಲು, ಈ ಲೇಖನದ ಲೇಖಕರಲ್ಲಿ ಒಬ್ಬರಾದ ಟಿ. ಎಂ. ಕೇಶವ ಅವರು ವಿರೋಧವನ್ನು ವ್ಯಕ್ತಪಡಿಸಿದ ಕಾರಣ ಪಡಿಯಚ್ಚನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಡ್ಯಾಬರ್ ಉಪಯೋಗಿಸಿ ಪಡಿಯಚ್ಚಿನ ಪ್ರತಿ ತೆಗೆದಿದ್ದರೆ ಶಾಸನ ಈಗ ಓದಿದಷ್ಟೂ ಓದಲು ಉಳಿಯುತ್ತಿರಲಿಲ್ಲ. ಶಾಸನ ಕಂಡರಿಸಿದ ವ್ಯಕ್ತಿ ಕಲ್ಲನ್ನು ಬಲಭಾಗದಲ್ಲಿರಿಸಿ ಕೊಂಡದ್ದರಿಂದ ಸಾಲುಗಳು ಎಡಬದಿಯಿಂದ ಬಲಬದಿಗೆ



ಚಿತ್ರ -2
ಗಂಗ ಭೂವಿಕ್ರಮನ ಚಿನ್ನದ ನಾಣ್ಯ
(ಕ್ರಿ.ಶ.ಸು. 630)

ಕಳಚೂರಿ 2ನೆಯ ಸಂಕಮನ ತಾಮ್ರ ಶಾಸನ (ಕ್ರಿ.ಶ. 1180)




ಬಾದಾಮಿ ಚಾಲುಕ್ಯರ ವಿನಯಾದಿತ್ಯನ ತಾಮ್ರ ಶಾಸನ




ಚಿತ್ರ -1




ಚಿತ್ರ -3 ಕದಂಬರ ಕಾಲದ ದೇವಾಲಯದ ಮುಖಮಂಟಪ (ಉತ್ಖನನದ ಸಮಯದಲ್ಲಿ)



ಚಿತ್ರ -4 ಶಾತವಾಹನರ (ಕ್ರಿ.ಪೂ. 3ನೆಯ ಶತಮಾನ) ಪೋಟಿನ್ ನಾಣ್ಯ




ಚಿತ್ರ -5



ಚಿತ್ರ – 6




ಚಿತ್ರ – 7ಆ



ಚಿತ್ರ – 7 [illegible]





ಚಿತ್ರ – 8

ಓರೆಯಾಗಿ ಮೂಡಿ ಸಿಂಹ ಕಟಾಂಜನದ ಮುಖದ ಕೆತ್ತನೆ ಆದ ಮೇಲೆ ಈ ಶಾಸನ ಕಂಡರಿಸಿರಬೇಕೆಂದು ಊಹಿಸಲಾಗಿದೆ. ಇದನ್ನು ಸಿಂಹ ಮುಖದ ಕೆತ್ತನೆಗೆ ಅಡ್ಡಿಯಾಗದಂತೆ ಮೂಡಿಸಲಾಗಿದೆ.

ಶಾಸನವು ಬಿದ್ದ ರಭಸಕ್ಕೆ ತ್ರುಟಿತವಾಗಿ ಚಕ್ಕೆ ಎದ್ದಿದೆ. ಇಷ್ಟೇ ಅಲ್ಲದೆ ಬಿದ್ದ ರಭಸಕ್ಕೆ ಅಲ್ಲಲ್ಲಿ ಚುಕ್ಕೆಗಳೂ ಮೂಡಿ ಅನುಸ್ವಾರ ಚಿಹ್ನೆಯಂತೆ ಭಾಸವಾಗುವ ಕಾರಣ ಶಾಸನವನ್ನು ಪಠಿಸಲು ತೊಂದರೆಯಾಗುತ್ತಿದೆ. ಅಲ್ಲದೆ ಚಕ್ಕೆ ಎದ್ದಿರುವುದರಿಂದ ಕೆಲವೊಂದು ಅಕ್ಷರಗಳು ಓದಲು ಅಳಿಸಿ ಹೋಗಿವೆ. ಉದಾಹರಣೆಗೆ 'ಯ' ಅಕ್ಷರದ ಬಳಿ ಚಕ್ಕೆ ಎದ್ದಿರುವುದರಿಂದ ಅಥವಾ ಕಲ್ಲಿನಲ್ಲಿ ಚುಕ್ಕಿ ಮೂಡಿರುವುದರಿಂದ 'ಯ' ದ ಬಲಭಾಗ ಸುರುಳಿ ಆದಂತೆ ಭಾಸವಾಗುತ್ತದೆ. ಹೀಗಾಗಿ 2013–2014 ರಲ್ಲಿ ದೊರೆತ ಶಾಸನವನ್ನು 2017ರ ಫೆಬ್ರವರಿಯಲ್ಲೂ ಮತ್ತೆ ಮತ್ತೆ ಓದಲಾಯಿತು. ಈ ಶಾಸನವನ್ನು ಸನಿಹ ಕಾಲದ ಶಿವಸ್ಕಂದವರ್ಮನ (ಕ್ರಿ.ಶ. 3ನೆಯ ಶತಮಾನ) ಮಳವಳ್ಳಿಯ ಶಾಸನದೊಂದಿಗೆ ಹೋಲಿಸಿದಾಗ ಶಾಸನದಲ್ಲಿ 'ಯ' ಬಹಳವಾಗಿ ಬೆಳೆದಿದೆ ಎಂಬ ಭಾವನೆ ಮೂಡುತ್ತದೆ.

ಎಸ್.ವಿ.ಪಿ. ಹಳಕಟ್ಟಿ (ಪ್ರಾಂತೀಯ ನಿರ್ದೇಶಕರು (ನಿ). ಪಶ್ಚಿಮ ವಲಯ. ಭಾರತೀಯ ಪುರಾತತ್ತ್ವ ಇಲಾಖೆ) ಅವರು ಸಂಶೋಧಿಸಿದ ಧಾರವಾಡ ಜಿಲ್ಲೆಯ ನರಗುಂದ ತಾಲ್ಲೂಕಿನ

ಶಾಸನದ (ಹಳೆಯ ಶಾಸನ ಪ್ರಕಟನೆ. ಎಂ.ಜೆ.ಶರ್ಮಾ, ಎಪಿಗ್ರಾಫಿಯಾ ಇಂಡಿಕಾ–41, ಪುಟ 154–159) ಚಂಡಸಿರಿ ಸಾತಕರ್ಣಿಯ (ಕ್ರಿ.ಶ. 3 ನೆಯ ಶತಮಾನ) ಶಾಸನ, ಪಲ್ಲವ ಶಿವಸ್ಕಂದವರ್ಮನ (ಕ್ರಿ.ಶ. 3ನೆಯ ಶತಮಾನ) ಹಿರೇಹಡಗಲಿ ತಾಮ್ರಶಾಸನ (ಜಿ. ಬ್ಯೂಹ್ಲರ್, ಎ ಇಂ–1, ಪುಟ 2–10), ಟಿ. ರಾಜಾರಾವ್ ಅವರು ಕಂಡು ಹಿಡಿದು ವಿ.ಎಸ್. ಸುಕ್ಥಂಕರ್ ಅವರು ಪ್ರಕಟಿಸಿದ (ಎ ಇಂ–14, ಪುಟ 153–155) ಸಿರಿಪುಲುಮಾವಿಯ (ಕ್ರಿ.ಶ. 3 ನೆಯ ಶತಮಾನ) ಮ್ಯಾಕದೋಣಿ ಅಥವಾ ಚಿನ್ನುತುಂಬಲಂ ಶಾಸನ, ಸಂದರ್ಭಾನುಸಾರ ಚಿತ್ರದುರ್ಗದ ತಮಟಕಲ್ಲು ಶಾಸನಗಳೊಂದಿಗೆ ತುಲನಾತ್ಮಕವಾಗಿ ಹೋಲಿಸಿ ನೋಡಿ ಆನಂತರ ಕಾಲವನ್ನು ನಿರ್ಧರಿಸಲಾಗಿದೆ. ಈ ಶಾಸನದಲ್ಲಿನ [=ತಾಳಗುಂದದ ಶಾಸನದಲ್ಲಿ] ಲಿಪಿಯಲ್ಲಿ ಮತ್ತು ಮೇಲೆ ಹೇಳಿದ ಶಾಸನಗಳಲ್ಲಿ ಮೂಲ ಪರೀಕ್ಷಾ ಅಕ್ಷರಗಳು ಹೆಚ್ಚು ಕಡಿಮೆ ಒಂದೇ ತೆರನಾಗಿದ್ದು ಅವುಗಳಿಗಿಂತ ತುಸುವೇ ಬೆಳವಣಿಗೆಯನ್ನು ತೋರುತ್ತವೆ. ಹಲ್ಮಿಡಿ ಶಾಸನ (ಕ್ರಿ.ಶ. ಸು 450 ಅಥವಾ 420) ಮತ್ತು ಬಾದಾಮಿ ಚಲುಕ್ಯರ ಇಮ್ಮಡಿ ಪುಲಕೇಶಿಯ ಐಹೊಳೆ ಪ್ರಶಸ್ತಿಯೊಂದಿಗೆ (ಕ್ರಿ.ಶ. 634) ಕೂಡ ಹೋಲಿಸಲಾಗಿದೆ (ತೌಲನಿಕ ಕೋಷ್ಟಕವನ್ನು ನೋಡಿ).

ಶಾಸನದಪಾಠವನ್ನು ಟಿ.ಎಂ. ಕೇಶವ ಮತ್ತು ಎಸ್. ಕಾರ್ತಿಕ್ ಅವರುಗಳು ಅಡೋಬ್ ಫೋಟೋಶಾಪ್ ತಂತ್ರಜ್ಞಾನ ಮತ್ತು ಶಾಸನದ ಛಾಯಾಚಿತ್ರಗಳ ಸಹಾಯದಿಂದ ಪಿ.ವಿ. ಕೃಷ್ಣಮೂರ್ತಿ (ಶಾಸನ ಮತ್ತು ಲಿಪಿ ತಜ್ಞರು, ಬೆಂಗಳೂರು) ಅವರೊಟ್ಟಿಗೆ ಕುಳಿತು ತಾಳ್ಮೆಯಿಂದ ವಿವರವಾಗಿ ಮನುಪರಿಶೀಲಿಸಿ ಕಾಲನಿರ್ಣಯ ಮಾಡಿರುವುದಲ್ಲದೆ ಕನ್ನಡಭಾಷಾ ಪ್ರಯೋಗದ ಬಗ್ಗೆಯೂ ಗಮನವಿಟ್ಟು ಅಧ್ಯಯನ ನಡೆಸಲಾಗಿದೆ. ಈ ಶಾಸನ ದೊರೆತ ಸಮಯದಲ್ಲಿ ಇದರ ಚಿತ್ರವನ್ನು ಡಾ. ಶ್ರೀನಿವಾಸ ರಿತ್ತಿಯವರಿಗೆ ಕಳುಹಿಸಿಕೊಟ್ಟು ಅವರ ಅಭಿಪ್ರಾಯವನ್ನು ಕೋರಲಾಗಿತ್ತು. ಅವರು ಶಾಸನಪಾಠ ಪೂರ್ಣವಾಗಿಲ್ಲ, ಅರ್ಥೈಸಲು ಕ್ಲಿಷ್ಟವಾಗಿದೆ, ಅಕ್ಷರಗಳನ್ನು ಆಳವಾಗಿ ಮೂಡಿಸದೇ ಇರುವುದರಿಂದ ಈ ಶಾಸನದ ಕಾಲವನ್ನು ಕ್ರಿ.ಶ. 5–6 ನೆಯ ಶತಮಾನಕ್ಕೆ ಅಂದರೆ ಬಾದಾಮಿ ಚಾಲುಕ್ಯರ ಪ್ರಾರಂಭಿಕ ಲಿಪಿಗೆ ಹೋಲಿಸಬಹುದು ಎಂದು ಹೇಳಿದ್ದರು. ಇದು ಯಾವುದೇ ರೀತಿಯಿಂದಲೂ ಸರಿಯಾದ ಅಭಿಪ್ರಾಯವಲ್ಲ. ಲಿಪಿ ಸ್ವರೂಪವನ್ನೇ ಗಮನಿಸದೆ ನೀಡಿರುವ ಅಸಮೀಕ್ಷ್ಯಕಾರಿತ್ವದ, ಅವೈಜ್ಞಾನಿಕ ಅಭಿಪ್ರಾಯವಾಗಿದೆ. ದುರದೃಷ್ಟವಶಾತ್ ಭಾರತೀಯ ಪುರಾತತ್ತ್ವ ಇಲಾಖೆಯೂ ಇದೇ ಕಾಲವನ್ನು ಇತ್ತೀಚೆಗೆ ಕೇಂದ್ರಸರ್ಕಾರಕ್ಕೆ ರವಾನಿಸಿದೆ ಎಂದು ತಿಳಿದುಬಂದಿದೆ. ಶಾಸನ ದೊರೆತ ಸಮಯದಲ್ಲಿ ಭಾರತೀಯ ಶಾಸನಶಾಸ್ತ್ರ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಟಿ.ಎಸ್. ರವಿಶಂಕರ್ ಅವರು ಪೂರ್ಣ ವಿವರಣೆ ದೊರೆತಿಲ್ಲದ ಕಾರಣ ಇದರ ಕಾಲವನ್ನು 5 ನೆಯ ಶತಮಾನದ ಸುಮಾರೆಂದು ಹೇಳಿದ್ದರು. ಈಚೆಗೆ ಇದನ್ನು ಬಹಳ ವಿವರವಾಗಿ ಅಧ್ಯಯನ ಮಾಡಿ ಇದರ ಕಾಲ ಕ್ರಿ.ಶ. 4 ಶತಮಾನವೆಂದು ಖಚಿತವಾಗಿ ಒಪ್ಪಿಕೊಂಡಿರುವುದು ಗಮನಾರ್ಹ ಅಂಶವಾಗಿದೆ. ಡಾ. ರಾಜಾರಾಮ ಹೆಗಡೆ (ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ) ಅವರು ಕೂಡ ಇದು ಹಲ್ಮಿಡಿ ಶಾಸನಕ್ಕಿಂತ ಪೂರ್ವದ್ದೆಂದು ತಮ್ಮ ನಿಲವನ್ನು ತಿಳಿಸಿದ್ದಾರೆ. ಈ ಶಾಸನವನ್ನು ಮೊದಲು ಕಂಡುಹಿಡಿದು ಓದಿದ ಟಿ. ಎಂ. ಕೇಶವ ಅವರು ಮೊದಲೇ ಇದು ಕ್ರಿ.ಶ. ಸು 380 ಅಂದರೆ 4 ನೆಯ ಶತಮಾನದ ಶಾಸನವೆಂದು ಸೂಚಿಸಿದ್ದರು. ಇವೆಲ್ಲವುಗಳ ಹಿನ್ನೆಲೆಯಲ್ಲಿ ಈಗ ಮತ್ತೊಮ್ಮೆ ಶಾಸನವನ್ನು ಆಮೂಲಾಗ್ರವಾಗಿ ಪರೀಕ್ಷಿಸಿ ಸಂಪೂರ್ಣವಾಗಿ ಪರಿಷ್ಕರಿಸಿದ ಪಾಠವನ್ನು ಕೆಳಗೆ ನೀಡಲಾಗಿದೆ (ಚಿತ್ರ–7).

ಪರಿಷ್ಕರಿಸಿದ ಶಾಸನದ ಪಾಠ

1 . . . . ವುಸ

2 . . . . ತ್ಕೋಮಿಯಾ

3 . . . . ಕೊಟ್ಟಾರ್ ಪುಲೋನಾಗೇ ಸ್ಕ

4 . . . . ಯಮಾಂ ಚನ್ದ್ರಾದಿತ್ಯ

5 ಮೋಗಬೋಯ್ಗರಾ ನಾವಿದಾವಜೇ ನಾಗ[ಣ*]

6 ಪುಲಿ[ಣ್ಡ*]ಗೆಯಾ ಹಲಮಿ ಕೊಳ್ಳೆ ನಾಲ್ಕುಂ ಮಾಸೇ ತು

7 . . . . ಜಾ . . . ಮಿ . . . . ಭೂ

ಸಾರಾಂಶ : ಚಂದ್ರಾದಿತ್ಯನ ಆಡಳಿತ ಕಾಲದಲ್ಲಿ, ಕ್ಷೌರಿಕ ವೃತ್ತಿಯ ನಾಗಣ್ಣನಿಗೆ ನಾಲ್ಕು ಮಾಸ ಪರ್ಯಂತ ಅನುಭವಿಸಿಕೊಂಡು ಬರಲು ಪುಲಿಂದಿಗೆಯಲ್ಲಿ ಇನ್ನೂ ಉತ್ತಿರದ ಭೂಮಿಯನ್ನು ದಾನವಾಗಿ ನೀಡಲಾಗಿದೆ {ಅಥವಾ ನಾಲ್ಕು ಮಾಷ ಮಾನದ ಇನ್ನೂ ಉಳದ ಭೂಮಿಯನ್ನು ದಾನವಾಗಿ ನೀಡಲಾಗಿದೆ} ಎಂದು ಸ್ಥೂಲವಾಗಿ ಅರ್ಥ ಹೇಳಲು ಸಾಧ್ಯವಿದೆ.

ಇಲ್ಲಿ ಚಂದ್ರಾದಿತ್ಯನನ್ನು ಗುರುತಿಸುವಾಗ ಯಾವುದೇ ರಾಜವಂಶದ ವ್ಯಕ್ತಿಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವ ಅಗತ್ಯವಿಲ್ಲ. ಸಂದರ್ಭೋಚಿತವಾಗಿ ನೋಡಿದಲ್ಲಿ ಈ ಶಾಸನದಲ್ಲಿ ಬರುವ ಚಂದ್ರಾದಿತ್ಯನನ್ನು ಯಾವ ವಂಶದ ದೊರೆ ಎಂದು ಸೂಚಿಸುವ ಪದಗಳು ಹಿಂದಾಗಲೀ ಮುಂದಾಗಲೀ ಅಥವಾ ಇತರೆ ಸಾಲಿನಲ್ಲಿ ಎಲ್ಲಿಯೂ ಹೇಳಿರದ {ಸಂದರ್ಭ, ಭಾಷೆ, ಶಾಸನ ರಚನೆಯ ಬಂಧ ಇಂತಹ ಊಹೆಗೆ ಅವಕಾಶವೀಯುತ್ತವೆ} ಕಾರಣ ಆತನನ್ನು ಯಾವುದೇ ರಾಜವಂಶಕ್ಕೆ ಸೇರಿಸಿ, ಶಾಸನದ ಕಾಲವನ್ನು ನಿರ್ಧರಿಸಹೊರಡುವುದು ಔಚಿತ್ಯ ಪೂರ್ಣವಲ್ಲ ಎಂಬುದು ನಮ್ಮ ಅನಿಸಿಕೆ. ಪ್ರಾಯಶಃ ಬೊಯ್ಗರಾ ಎಂಬ ಶಬ್ದವನ್ನು ಆಳ್ವಿಕೆ ನಡೆಸುತ್ತಿದ್ದ ಸ್ಥಳೀಯ (ಮಂಡಲಾಧಿಕಾರಿ) ಎಂದು ತೆಗೆದುಕೊಳ್ಳಬಹುದು.

ಶಾಸನದ ಕಾಲ : ಸಾಮಾನ್ಯವಾಗಿ ಬಹುತೇಕ ಶಾಸನಗಳಲ್ಲಿ ಕಾಲ ನಮೂದಾಗಿದ್ದು ಇಂತಹ ದಿನ, ವಾರ, ತಿಥಿ, ಮಾಸ ಮತ್ತು ವರ್ಷಗಳು ಕರಾರುವಾಕ್ಕಾಗಿ ತಿಳಿದು ಬರುತ್ತದೆ. ಕೆಲವು ಶಾಸನಗಳಲ್ಲಿ ಬರುವ ಪ್ರಮುಖ ವ್ಯಕ್ತಿಗಳನ್ನು ಆಧರಿಸಿ ಸರಿ–ಸುಮಾರು ಕಾಲ ನಿರ್ಣಯ ಮಾಡಬಹುದು. ಕೆಲವು ಶಾಸನಗಳಲ್ಲಿ ಬರುವ ಬಹುಮುಖ್ಯವಾದ ಘಟನಾವಳಿಗಳನ್ನು ಗಮನಿಸಿ ಕಾಲನಿರ್ಣಯ ಮಾಡಬಹುದು. ಕೆಲವು ಶಾಸನಗಳ ಕಾಲವನ್ನು ಲಿಪಿಯ ಶೈಲಿ, ಭಾಷೆಯ ಆಧಾರದ ಮೇಲ್ ನಿರ್ಧಾರ ಮಾಡಬಹುದು. ಕೆಲವು ಶಾಸನಗಳ ಕಾಲವನ್ನು ಅವುಗಳನ್ನು ಹೊಂದಿಸಿರುವ, ಅಳವಡಿಸಿರುವ ಸ್ಥಳಗಳ ಆಧಾರದ ಮೇಲೆ ನಿರ್ಧರಿಸಲು ಸಾಧ್ಯವಿದೆ. ಆದರೆ ತಾಳಗುಂದದ ಈ ಶಾಸನ ತುಸು ವಿಭಿನ್ನವಾಗಿದ್ದು ಸಾಂದರ್ಭಿಕ ಆಧಾರಗಳನ್ನು ಆಧರಿಸಿಯೇ ಕಾಲವನ್ನು ನಿರ್ಧರಿಸಬೇಕಾಗಿದೆ. ಅವುಗಳನ್ನು ಕೆಳಗಿನಂತೆ ವಿವರಿಸಬಹುದಾಗಿದೆ.

1. ಮೊದಲಿಗೆ ಈ ಶಾಸನ ಭೂಮಿಗತವಾಗಿದ್ದು ಉತ್ಖನನದಲ್ಲಿ ತ್ರುಟಿತ ಸ್ಥಿತಿಯಲ್ಲಿ ಸುಮಾರು 2.00 ಮೀ ಆಳದಲ್ಲಿ ದೊರೆತಿದೆ.
2. ಈ ಶಾಸನ ಮಹಾದ್ವಾರದ ಪ್ರವೇಶ ಪಾವಟಿಕೆಗಳ ಇಕ್ಕೆಲದಲ್ಲಿ ನಿರ್ಮಿತವಾಗಿರುವ ಸಿಂಹ ಚಿತ್ರಣವಿರುವ ಕಟಾಂಜನದ ಹೊರಮೇಲ್ಬ್ಬ ಮೇಲೆ ಕೆತ್ತಲ್ಪಟ್ಟಿವೆ. ಈ ಸಿಂಹ

ಕಟಾಂಜನದ ಶಿಲ್ಪ ಲಕ್ಷಣಗಳು ಕ್ರಿ.ಶ. 4 ನೆಯ ಶತಮಾನದ ಸುಮಾರಿನಲ್ಲಿ ಬಳಕೆಯಾಗಿರುವ ಶೈಲಿಯಲ್ಲಿವೆ. ಇಂತಹ ಲಕ್ಷಣಗಳು ಕ್ರಿ.ಶ. ಸು 5 ನೆಯ ಶತಮಾನದ ನಂತರ ತೀರಾ ವಿರಳವಾಗುತ್ತದೆ. ಖ್ಯಾತ ಪುರಾತತ್ತ್ವ ವಿದ್ವಾಂಸರಾದ ಅ. ಸುಂದರ ಅವರು ಮತ್ತು ರಾಜಾರಾಮ ಹೆಗಡೆ ಅವರು ಈ ಅಂಶ ಖಚಿತವೆಂದು ಸ್ಪಷ್ಟವಾಗಿ ಹೇಳಿರುತ್ತಾರೆ. ಸನ್ನತಿಯಲ್ಲಿ ಮತ್ತು ಕನಗನಹಳ್ಳಿಯಲ್ಲಿ ದೊರೆತಿರುವ ಶಿಲ್ಪಗಳನ್ನು ಈ ಸಿಂಹಕಟಾಂಜನದ ಸಿಂಹದ ಕೆತ್ತನೆಗಳು ಹೋಲುತ್ತವೆ.

3. ಈ ಶಾಸನದಿಂದ ಪೂರ್ವಕ್ಕೆ 2 ಮೀ ಅಂತರದಲ್ಲಿ ಸುಪ್ರಸಿದ್ಧ ಕಾಕುಸ್ಥ-ಶಾಂತಿವರ್ಮರ ಪೇಟಿಕಾಶಿರ ಅಕ್ಷರಗಳುಳ್ಳ ಸ್ತಂಭ ಶಾಸನವಿದೆ. ಇದರ ಕಾಲಮಾನವನ್ನು ಕ್ರಿ.ಶ. ಸು 430 ಎಂದು ಲಿಪಿಯ ಆಧಾರದ ಮೇಲೆ ನಿರ್ಧರಿಸಲಾಗಿದೆ.

4. ಈ ಶಾಸನದಲ್ಲಿ [=-ತಾಳಗುಂದದ] ಬರುವ ಲಿಪಿಯು ಕದಂಬರ ಪೇಟಿಕಾ ಅಕ್ಷರಗಳಂತಲ್ಲದೆ ತುಸು ವಿಭಿನ್ನವಾಗಿದ್ದು ಮೇಲುನೋಟಕ್ಕೆ ಹಲ್ಮಿಡಿ ಶಾಸನದ ಅಕ್ಷರಗಳಂತೆ ಗೋಚರವಾಗುತ್ತವೆ.

5. ಮೇಲೆ ಮೊದಲೇ ಸೂಚಿಸಿರುವಂತೆ ಇದರ ಲಿಪಿ ಲಕ್ಷಣಗಳು ಸನಿಹದ ಮಳವಳ್ಳಿಯಲ್ಲಿರುವ ಶಿವಸ್ಕಂಧವರ್ಮನ ಶಾಸನದ (ಕ್ರಿ.ಶ. 3 ನೆಯ ಶತಮಾನ) ಅಕ್ಷರಗಳನ್ನು ಹೋಲುತ್ತದೆ.

6. ಉತ್ಖನನದಲ್ಲಿ ದೊರೆತ ಈ ಶಾಸನವು ಕದಂಬ ಕಾಕುಸ್ಥವರ್ಮನ ಶಿಲಾಶಾಸನದ ವೇದಿಕೆಯಿಂದ ಸುಮಾರು 80 ಸೆಂ.ಮೀ. ಆಳದಲ್ಲಿ ದೊರೆತಿದ್ದು ಇನ್ನಿತರ ಸಾಂದರ್ಭಿಕ ಆಧಾರಗಳಿಂದ ಸ್ತಂಭಶಾಸನಕ್ಕಿಂತ ಪೂರ್ವದ್ದಿರಬಹುದು ಎಂಬುದನ್ನು ಸೂಚಿಸುತ್ತದೆ.

7. ಮತ್ತೊಂದು ಸಂಗತಿ ಎಂದರೆ ಈ ವೇದಿಕೆಯನ್ನು ಉತ್ಖನನದಲ್ಲಿ ದೊರೆತ ಮಂಡಪದ ರಚನೆಗೆ ಹೊಂದಿಕೊಳ್ಳುವಂತೆ ರೂಪಿಸಲಾಗಿದ್ದು, ಇಟ್ಟಿಕೆಗಳಿಂದ ಜೋಡಿಸಿದ ನೆಲಹಾಸು ಇದ್ದು ಅದರ ಮೇಲೆ ಕಾಕುಸ್ಥವರ್ಮನ "ಕಾ" ಅಕ್ಷರವುಳ್ಳ ಚಿನ್ನದ ಬೇಳೆ ಕಾಸು ದೊರೆತಿದೆ.

8. ಸ್ಥಳದಲ್ಲಿ ದೊರೆತಿರುವ ಸಾಂದರ್ಭಿಕ ಆಧಾರಗಳನ್ನು, ಮಣ್ಣಿನ ಸ್ತರಗಳ ಚಿತ್ರಣ, ಲಿಪಿ ಶೈಲಿ ಮತ್ತು ಈ ಶಾಸನದಲ್ಲಿ ಬರುವ ಕನ್ನಡ ಭಾಷೆಯ ಪದಗಳನ್ನು ನೋಡಿ ಈ ಶಾಸನವು ಪ್ರಸ್ತುತ ಪ್ರಾಚೀನ ಶಾಸನವೆಂದು ಹೆಗ್ಗಳಿಕೆಗೆ ಪಾತ್ರವಾಗಿರುವ ಬೇಲೂರು ತಾಲ್ಲೂಕಿನ ಹಲ್ಮಿಡಿ ಶಾಸನಕ್ಕಿಂತ ಸುಮಾರು 50 ರಿಂದ 75 ವರ್ಷಗಳಷ್ಟು ಹಳೆಯದೆಂದೂ ಮತ್ತು ಈ ಶಾಸನದ ಕಾಲವಾದ ನಾಲ್ಕನೆಯ ಶತಮಾನದ ಅಂತ್ಯದಲ್ಲಿ ಕನ್ನಡ ಭಾಷೆಯು ಬಳಕೆಯಲ್ಲಿ ಇದ್ದಿತೆಂಬುದನ್ನು ಖಚಿತವಾಗಿ ಹೇಳಲು ಇದರಿಂದ ಸಾಧ್ಯವಾಗುತ್ತದೆ. ಇದರಿಂದ ಕನ್ನಡ ಭಾಷೆಯ ಲಿಖಿತ ಪ್ರಾಚೀನತೆಯ ಕಾಲಮಾನವನ್ನು ಈ ಶಾಸನದ ಕಾಲಮಾನಕ್ಕಿಂತ ಸುಮಾರು ಇನ್ನೂರು ವರ್ಷ ಹಿಂದಕ್ಕೆ ಕೊಂಡೊಯ್ಯಬಹುದೆಂದೂ ಧೈರ್ಯವಾಗಿ ಹೇಳಬಹುದು. ಕನ್ನಡ ಭಾಷೆಯ ಪ್ರಾಚೀನತೆಯನ್ನು ಮೊದಲನೆಯ ಶತಮಾನಕ್ಕೆ ಕೊಂಡೊಯ್ಯುವ ಈ ಅಂಶಕ್ಕೆ ಪುಷ್ಟಿ ನೀಡಲು ತಮಿಳುನಾಡಿನ ಸಿತ್ತನವಾಸಲ್ ಎಂಬಲ್ಲಿನ ಕ್ರಿ.ಪೂ. 2 ನೆಯ ಶತಮಾನದ

ಬ್ರಾಹ್ಮೀ/ವಟ್ಟೆಲುತ್ತು ಲಿಪಿಯ ಶಾಸನಗಳಲ್ಲಿ ಕನ್ನಡ ಪದಗಳನ್ನು ಗುರುತಿಸಲಾಗಿದೆ. ಎಂ. ಡಿ. ಸಂಪತ್ ಅವರು ಈ ಲೇಖನದ ಲೇಖಕರಲ್ಲಿ ಒಬ್ಬರಾದ ಟಿ. ಎಂ. ಕೇಶವ ಅವರಿಗೆ ಸ್ವತಃ ತಿಳಿಸಿರುವುದಲ್ಲದೆ, ಈ ವಿವರವನ್ನು 2017 ರ *Journal of the Epigraphical Society of India* ಸಂಪಾದಕೀಯದಲ್ಲಿಯೂ ಬರೆದಿದ್ದಾರೆ. ಲಿಪಿಯ ರೂಪುರೇಷೆ ಮೊದಲೇ ತಿಳಿಸಿರುವಂತೆ ಶಾಸನವನ್ನು ಸಿಂಹಕಟಾಂಜನದ ಮೇಲೆ ಕೆತ್ತಿರುವುದರಿಂದ ಅಥವಾ ಬರೆದಿರುವುದರಿಂದ ಸಿಂಹಪಾದಗಳಿಂದ ತುಸು ದೂರದಲ್ಲಿಯೇ ಅಕ್ಷರಗಳನ್ನು ನಿಲ್ಲಿಸಲಾಗಿದೆ. ಇದನ್ನು ನಾವು 4 ಮತ್ತು 7 ನೆಯ ಸಾಲಿನಲ್ಲಿ ನೋಡಬಹುದು. ಇಲ್ಲಿ ಶಾಸನದ ಅಕ್ಷರಗಳನ್ನು ಚೂಪಾದ ಲೇಖಣಿಯಲ್ಲಿ ಬರೆದಿದ್ದಾರೆಯೇ ಹೊರತು ದಕ್ಷಿಣ ಕಟಾಂಜನದಲ್ಲಿ ಆಳವಾಗಿ ಕೊರೆದಂತೆ ಇಲ್ಲಿ ಕೊರೆದಿಲ್ಲ. ಈ ಅಂಶವನ್ನು ಕೆಲವರು ಆಧಾರವಾಗಿಟ್ಟುಕೊಂಡು ಇಂತಹ ಉದಾಹರಣೆ ಮೊದಲು ಕಂಡುಬರುವುದು ಬಾದಾಮಿ ಚಲುಕ್ಯರ ಕಾಲದ ಶಾಸನಗಳಲ್ಲಿ, ಆದ ಕಾರಣ ಇದು ಪ್ರಾಚೀನ ಶಾಸನವಲ್ಲ ಎಂಬುದಾಗಿ ಮೌಖಿಕವಾಗಿ ವಾದಿಸಿರುವುದುಂಟು. ಬಾದಾಮಿ ಚಲುಕ್ಯರ ಕಾಲಕ್ಕಿಂತ ಮುಂಚಿನ ಕಾಲದಲ್ಲಿ ಇಂತಹ ಉದಾಹರಣೆ ದೊರಕಬಾರದೆಂದು ನಿಯಮವೇನಾದರೂ ಉಂಟೇ ? ಎಂಬುದನ್ನು ವಸ್ತುನಿಷ್ಠವಾಗಿ ಯೋಚಿಸಬೇಕು. ಇಂತಹ ನಿಲವನ್ನು ವ್ಯಕ್ತಪಡಿಸುತ್ತಿರುವವರಿಗೆ ಲಿಪಿಯ ಸೂಕ್ಷ್ಮಪರಿಚಯ, ಪುರಾತತ್ತ್ವ ಉತ್ಖನನಗಳ ಪರಿಚಯ ಎಳ್ಳಷ್ಟೂ ಇಲ್ಲವೆಂದು ಹೇಳಲೇಬೇಕಾಗಿದೆ. ಸನ್ನತಿ ಮತ್ತು ಕನಗನಹಳ್ಳಿಯಲ್ಲಿ ಇಂತಹ ಲಿಪಿಸ್ವರೂಪವುಳ್ಳ ಅನೇಕ ಶಾಸನಗಳು ದೊರೆತಿವೆ.

9. ಮೊದಲಿನ ಸಾಲಿನಲ್ಲಿ ಮೊದಲ ಅಕ್ಷರ ವು, ಎರಡನೆಯದು ಸ. ಈ ಸಾಲಿನ ಬಹುಭಾಗ ತ್ರುಟಿತವಾಗಿರುವುದರಿಂದ ಈ ಸಾಲನ್ನು ಅರ್ಥೈಸಲಾಗುವುದಿಲ್ಲ. ಎರಡನೆಯ ಸಾಲಿನ ಪ್ರಾರಂಭಿಕ ಕೆಲವು ಅಕ್ಷರಗಳು ತ್ರುಟಿತವಾಗಿದ್ದು ಉಪಲಬ್ಧವಿರುವ ಅಕ್ಷರಗಳು ತೋಣ್ಮಿಯಾ, ಮೂರನೆಯ ಸಾಲನ್ನು ಕೊಟ್ಟಾರ್ ಪುಲೋನಾಗೇ ಸ್ಕ ಎಂಬುದಾಗಿ ಓದಲಾಗಿದೆ. ವಿಶೇಷವಾಗಿ ಇಲ್ಲಿ ಗಮನಿಸಬೇಕಾದ್ದು ರ ಅಕ್ಷರದ ಕಾಲನ್ನು ಬಲಕ್ಕೆ ತಿರುಗಿಸುವ ಬದಲು ಎಡಕ್ಕೆ ತಿರುಗಿಸಿರುವುದು. ಈ ತರಹದ ಅಕ್ಷರವನ್ನು ಹಲ್ಮಿಡಿ ಶಾಸನದಲ್ಲೂ ಕಾಣಬಹುದು. ಆದರೆ ಲಿಪಿಯ ಬೆಳವಣಿಗೆಯನ್ನು ಗಮನಿಸಿದರೆ ಇದು ಹಲ್ಮಿಡಿಗಿಂತ ಸ್ವಲ್ಪ ಪೂರ್ವದ್ದೆಂದೇ ಹೇಳಬಹುದು. ಇದನ್ನು ನೋಡಿದಾಗ ಶಾಸನವನ್ನು ಬರೆದುಕೊಳ್ಳುವ ಆತುರದಲ್ಲಿ ಈ ಒಂದು ತಪ್ಪು ನುಸುಳಿರಬಹುದು. ಕ,ಟ,ಯ ಮತ್ತು ರ ಅಕ್ಷರಗಳು ಶಾತವಾಹನ–ಕದಂಬ ಕಾಲದ ನಡುವಿನ ಶೈಲಿಯನ್ನು ಹೋಲುತ್ತಿದ್ದು ಕದಂಬಾಕ್ಷರಗಳ ಕಡೆಗೆ ಸ್ವಲ್ಪ ಮಟ್ಟಿಗೆ ಹೋಲುವುದನ್ನು ಕಾಣಬಹುದು. ಪ ಅಕ್ಷರವು ಕದಂಬರ ಪೇಟಿಕಾಶಿರ ಅಕ್ಷರಗಳನ್ನು ಹೋಲುತ್ತದೆ. ಶ,ಸ ಮತ್ತು ಅ ಗಳು ಕದಂಬ ಶೈಲಿಯಲ್ಲೇ ಬರುತ್ತವೆ. ತಲೆಕಟ್ಟುಗಳನ್ನು ತ್ರಿಕೋಣ ರೂಪದಲ್ಲಿಯೂ ಮತ್ತು ಒಂದು ಗೀಟಿನ ರೂಪದಲ್ಲಿಯೂ ತೋರಿಸಲಾಗಿದೆ. ಆದರೆ ದಕ್ಷಿಣ ದಿಕ್ಕಿನಲ್ಲಿರುವ ಕಟಾಂಜನದಲ್ಲಿ ತ್ರಿಕೋಣಾಕೃತಿಯನ್ನು ಕಂಡರಿಸಿರುವುದನ್ನು ಕಾಣಬಹುದು. ನಾಲ್ಕನೆಯ ಸಾಲಿನ ಮೊದಲ ಮೂರು ಅಕ್ಷರಗಳು ತ್ರುಟಿತವಾಗಿದ್ದು ಯಮಾಂ ಚನ್ದಾದ್ರಿತ್ಯ ಎಂದು ಪಾಠವಿದೆ. ಎರಡನೆಯ ಅಕ್ಷರವನ್ನು ಮಾಂ ಎಂದು ಗುರುತಿಸಲಾಗಿದೆ. ಮುಂದಿನ ಪದ ಚನ್ದ್ರಾದಿತ್ಯ ಎಂದು

ಬರುವುದರಿಂದ ಹಿಂದಿನ ಪದಗಳು ಪದಪಿ ಅಥವಾ ರವ ಸೂಚಿಸುವ ಪದಗಳಾಗಿದ್ದಿರಬೇಕು. ಅಕ್ಷರಗಳೆಲ್ಲವೂ ಕದಂಬಕಾಲೀನ ಬೆಳವಣಿಗೆಯನ್ನು ತೋರುತ್ತವೆ. ವೊತ್ತಕ್ಷರ, ದೀರ್ಘ ಇತ್ಯಾದಿ ಲಿಪಿಕಾರನ ಆ ಕ್ಷಣದ ಬರಹವೇ ಹೊರತು ಬೇರೆಯದಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದನ್ನು ಹೇಳಲು ಕಾರಣ ಚಂದ್ರಾದಿತ್ಯ, ಬೊಯ್ಗರಾ ಎಂಬ ಒತ್ತಕ್ಷರದ ಪದಗಳ ಗೆರೆಗಳನ್ನು ಆವಶ್ಯಕತೆಗಿಂತ ತುಸು ಹೆಚ್ಚು ಕಲಾತ್ಮಕವಾಗಿ ರೂಪಿಸಿರುವುದು. ಇದು ಕಾಲದ ನಿರ್ಣಯದಲ್ಲಿ ನಂತರ ಕಾಲದ್ದು ಎಂದು ಹೇಳುವ ಭ್ರಮೆ ಉಂಟು ಮಾಡುತ್ತವೆ. ಕಲಾತ್ಮಕ ಬರವಣಿಗೆ ಕ್ರಿ.ಶ. 2–3 ನೆಯ ಶತಮಾನದಲ್ಲಿಯೇ ಇದ್ದಿತು ಎಂಬುದಕ್ಕೆ ಸನ್ನತಿಯಲ್ಲಿ, ಬನವಾಸಿಯಲ್ಲಿ ದೊರೆತಿರುವ ಶಾತವಾಹನಕಾಲೀನ ಅನೇಕ ಶಾಸನಗಳು ಸಾಕ್ಷಿಯಾಗಿವೆ.

10. ಮುಂದೆ ಶಾಸನ ಪಾಠ ಬೊಯ್ಗರಾ ನಾವಿದಾವಲಿ ನಾಗಣ ಅರ್ಥಾತ್ ಮಂಡಲದ ಅಧಿಕಾರಿ ನಾವಿದ ಅಂದರೆ ಕ್ಷೌರಿಕ ವೃತ್ತಿಯ ನಾಗಣ ಎಂದಾಗುತ್ತದೆ. ಇದರಿಂದಾಗಿ ಕ್ಷೌರಿಕ ವೃತ್ತಿಯನ್ನು ಹೆಸರಿಸುವ ಕನ್ನಡದ ಪ್ರಪ್ರಥಮ ಶಾಸನ ಇದೇ ಎಂದಾಗುತ್ತದೆ. ಅಲ್ಲದೆ ತಾಳಗುಂದದಲ್ಲಿಯೇ ದೊರೆತಿರುವ ಕ್ರಿ.ಶ. 1007 ರ ಶಾಸನದಲ್ಲಿ ಗೋಸಾಯಿ ಗುಗ್ಗುಳ ಎಂಬ ನಾವಿದನು ಸಾಂತಗೆಯನ್ನಾಳುತ್ತಿದ್ದ ಒಡಮಣ್ಣನ ವಿರುದ್ಧವಾಗಿ ಹೋರಾಡಿ ವೀರಮರಣವನ್ನು ಹೊಂದಿದನು ಎಂದು ದಾಖಲಾಗಿದೆ (**ಎಪಿಗ್ರಾಫಿಯಾ ಕರ್ಣಾಟಿಕಾ,** ಶಿಕಾರಿಪುರ–195, ಪುಟ 123). ಬೊಯ್ಗರಾ ಎನ್ನುವ ಶಬ್ದ ಎರಡನೆಯ ಆಳುವರಸನ ಬೆಳ್ಮಣ್ಣು ತಾಮ್ರಶಾಸನದಲ್ಲಿಯೂ (ಕ್ರಿ.ಶ. ಸು 8 ನೆಯ ಶತಮಾನ) ಕಂಡುಬರುತ್ತದೆ {ಇದರ್ಕೆ ಕಾಪು ಬೂಯ್ಗವರ್ಮನುಂ ಬೇಳದಾ ನಂದನಂ}. ಕೆ. ವಿ. ರಮೇಶ್ ಮತ್ತು ಎಂ. ಜೆ. ಶರ್ಮಾ ಅವರು ಇದನ್ನು ಆಡಳಿತಾಧಿಕಾರಿ ಎಂದು ಅರ್ಥೈಸಿದ್ದಾರೆ. ಈ ಶಬ್ದ ಇನ್ನೂ ಅನೇಕ ಶಾಸನಗಳಲ್ಲಿಯೂ ಬಳಕೆಯಾಗಿದೆ.

ಈ ಶಾಸನದ ಅಕ್ಷರಗಳೆಲ್ಲ ಕದಂಬ ಲಿಪಿಯನ್ನು ಹೋಲುತ್ತವೆ ಹಾಗೂ ಮೊದಲ ನೋಟಕ್ಕೆ ಹಲ್ಮಿಡಿ ಶಾಸನದಂತೆ ಕಂಡರೂ ಸೂಕ್ಷ್ಮವಾಗಿ ಅವಲೋಕಿಸಿದಾಗ ಶಾತವಾಹನ–ಕದಂಬ ಲಿಪಿಯ ನಡುವಿನ ಲಿಪಿ ಎಂಬುದು ವೇದ್ಯವಾಗುತ್ತದೆ. ಈಚೆಗೆ ಸಂಶೋಧಿತವಾಗಿ ಸಂಪಾದಿತಗೊಂಡು ಪ್ರಕಟವಾಗಿರುವ ಅರೆತಲೆಗದ್ದೆಯ ಅಪೂರ್ವ ತಾಮ್ರಶಾಸನಗಳು ಪ್ರಿಯವ್ರತವರ್ಮ, ಕೃಷ್ಣವರ್ಮ, ಶಾಂತಿವರ್ಮ, ರವಿವರ್ಮ, ಹರಿವರ್ಮ ಮತ್ತು ಪುಳಿನ್ದವರ್ಮರ ಕಾಲದ ಶಾಸನಗಳಾಗಿವೆ. ಇವು ಕದಂಬ ಇತಿಹಾಸದಲ್ಲಿ ಒಂದು ಕ್ರಾಂತಿಯನ್ನೇ ಮಾಡಿವೆ ಎಂದರೆ ಅದು ಉತ್ಪ್ರೇಕ್ಷೆಯಲ್ಲ. ಇದನ್ನು ಶ್ರಮವಹಿಸಿ ಮುತುವರ್ಜಿಯಿಂದ ಬೆಳಕಿಗೆ ತಂದ ಶಾಸನ ಶೋಧಕರ ಈ ಪ್ರಯತ್ನ ಮುಕ್ತ ಕಂಠದ ಪ್ರಶಂಸೆಗೆ ಪಾತ್ರವಾದುದು. ಇವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬನವಾಸಿ ಕದಂಬರ ಕಾಲಮಾನವನ್ನು ಮಯೂರ ಶರ್ಮ ಕ್ರಿ.ಶ. ಸು 360–380 ಎಂದೂ ಹರಿವರ್ಮನಿಗೆ ಕ್ರಿ.ಶ. ಸು 519–526 ಎಂದು ಊಹಿಸಿದ್ದಾರೆ. ನಾವೂ ಸಹ ಪ್ರಿಯವ್ರತವರ್ಮನ ತಾಮ್ರಶಾಸನದೊಂದಿಗೆ ಈ ಶಾಸನವನ್ನು ತುಲನಾತ್ಮಕವಾಗಿ ನೋಡಿ ಪರೀಕ್ಷಾ ಅಕ್ಷರಗಳಾದ ಕ, ರ ಮತ್ತು ಆ ಗಳೊಂದಿಗೆ ಹೋಲಿಸಿ ಮತ್ತು ಉತ್ಖನನದಲ್ಲಿ ದೊರೆತ ಸಂದರ್ಭಾನುಸಾರದ ಆಧಾರಗಳಿಂದ ಪ್ರಿಯವ್ರತನ ಶಾಸನಕ್ಕಿಂತ ಇದು ಕನಿಷ್ಠ

20–30 ವರ್ಷಗಳಷ್ಟು ಪೂರ್ವ ಎಂದು ನಿರ್ಧರಿಸಿದ್ದೇವೆ. ಇದಕ್ಕೆ ನಾವು ಬಿ. ಆರ್. ಗೋಪಾಲ ಅವರು ಕೊಟ್ಟಿರುವ ಕಾಲಸೂಚಿಯನ್ನು ಪರಿಗಣಿಸಿದ್ದೇವೆ. ಕಾರಣ ಅವರು ತಮ್ಮ ಕಾರ್ಪಸ್ ಆಫ್ ಕದಂಬ ಇನ್ಸ್‌ಕ್ರಿಪ್‌ಷನ್ಸ್, ಭಾಗ–1 ರಲ್ಲಿ ಜೆ. ಎಫ್. ಫ್ಲೀಟ್, ಗೋವಿಂದ ಪೈ, ನೆಲಮಂಗಲ ಲಕ್ಷ್ಮೀನಾರಾಯಣರಾವ್, ಆರ್. ಎಸ್. ಪಂಚಮುಖಿ ಅವರ ಪಟ್ಟಿಯೊಂದಿಗೆ ಅಂದಿನ ತನಕ ದೊರೆತಿರುವ ಶಾಸನಗಳ ಆಧಾರದಲ್ಲಿ ತುಲನಾತ್ಮಕ ಹಾಗೂ ವಿಮರ್ಶಾತ್ಮಕ ದೃಷ್ಟಿಯಿಂದ ಕಾಲನಿರ್ಣಯ ಮಾಡಿದ್ದಾರೆ. ಇದರ ಬಗ್ಗೆ ಯಾರೂ ಇದುವರೆಗೂ ಯಾವ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಬಹುಮಟ್ಟಿಗೆ ಹೆಚ್ಚಿಗೆ ಇದನ್ನು ಈಗ ಬೆಳಕಿಗೆ ಬಂದ ಅರತಲೆಗದ್ದೆಯ ಅಪೂರ್ವ ಶಾಸನಗಳ ಬೆಳಕಿನಲ್ಲಿ ವಿರೋಧಿಸದೇ ಇರುವುದರಿಂದ ಸದ್ಯಕ್ಕೆ ಈ ಕಾಲ ನಿರ್ಣಯಕ್ಕೆ ನಾವೂ ಒಮ್ಮತ ತೋರಿಸುತ್ತೇವೆ. ಈ ಶಾಸನದಲ್ಲಿ ಬರುವ ಚಂದ್ರಾದಿತ್ಯ ಒಬ್ಬ ಆಡಳಿತಗಾರನೇ ಹೊರತು ಅವನನ್ನು ಯಾವ ರಾಜನಿಗೂ ಹೋಲಿಸಲು, ಆ ಹೆಸರಿನ ಮುಂದೆ ಯಾವ ಪದವಿ, ಗೌರವ ಇತ್ಯಾದಿ ಪದದ ಸೂಚನೆ ಇಲ್ಲದಿರುವುದರಿಂದ ನಮಗೆ ಉಪಲಬ್ಧವಿರುವ ಬೇರೆ ಯಾವುದೇ ಚಂದ್ರಾದಿತ್ಯನಿಗೆ ಹೋಲಿಸಲಾಗದು. ಇಲ್ಲಿ ಇಮ್ಮಡಿ ಪುಲಕೇಶಿಯ (ಕ್ರಿ.ಶ. 609–642) ಮಗನೂ ಕವಯಿತ್ರಿಯಾದ ವಿಜಯ ಭಟ್ಟಾರಿಕೆಯ ಪತಿಯೂ ಆದ ಚಂದ್ರಾದಿತ್ಯನನ್ನು ಮನಸ್ಸಿನಲ್ಲಿರಿಸಿಕೊಂಡು ಹೇಳಲಾಗಿದೆ. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ಈ ಚಂದ್ರಾದಿತ್ಯನಿಗೂ ಪುಲಕೇಶಿಯ ಮಗನಿಗೂ ಸಂಬಂಧವಿಲ್ಲ. ಹೀಗಾಗಿ ಈ ಶಾಸನ ಮಯೂರವರ್ಮನಿಂದ ಹಿಡಿದು ರಘುವಿನ ತನಕ ಯಾರ ಕಾಲದ್ದಾಗಿದ್ದರೂ ಇದು ಹಲ್ಮಿಡಿಗೆ ಪೂರ್ವ ಶಾಸನವೇ ಆಗುತ್ತದೆ. ಇದನ್ನು ಮಯೂರಶರ್ಮನ (ಕ್ರಿ.ಶ. 325–345) ಕಾಲಕ್ಕೆ ಹೆಚ್ಚೆಂದರೆ ಕ್ರಿ.ಶ. 380 ರ ಆಸುಪಾಸಿಗೆ ಸೇರಿಸುವುದು ಸೂಕ್ತ. ಕಾರಣ ಅನಂತರದ ಅನ್ಯ ಶಾಸನಗಳು ಹೇಳುವಂತೆ ಮಹಾದೇವನ ದೇವಾಲಯದ ದುಃಸ್ಥಿತಿಯನ್ನು ಕಂಡ ದೊರೆ ಅಹಿಃಛತ್ರದಿಂದ ಬ್ರಾಹ್ಮಣ ಕುಟುಂಬದವರನ್ನು ಕರೆತಂದು ದೇವರಿಗೆ ಯಾವತ್ತೂ ಪೂಜೆ ಕೈಂಕರ್ಯಗಳನ್ನು ನಡೆಸಲು ವ್ಯವಸ್ಥೆ ಮಾಡಿದನೆಂದು ಹೇಳುತ್ತವೆ. ಹೀಗಿದ್ದಾಗ ಈ ಶಾತವಾಹನರ ಗಜಪೃಷ್ಠಾಕಾರದ ಆಯತಾಕಾರದ ದೇವಾಲಯವನ್ನು ಅವನು ದುರಸ್ತಿ ಮಾಡದೆ ಸುಮ್ಮನೆ ಬ್ರಾಹ್ಮಣ ಕುಟುಂಬದವರನ್ನು ಕರೆತರಲಾರ. ಊಹೆ ಹೆಚ್ಚಿನಿಸದಿದ್ದರೆ ಇದು ಅವನ ಕಾಲದ ತ್ರುಟಿತ ಶಾಸನವಾಗಿರಬಾರದೇಕೆ?. ಇಲ್ಲಿ ಮಯೂರವರ್ಮ ಅಹಿಃಛತ್ರದಿಂದ ಬ್ರಾಹ್ಮಣರನ್ನು ಕರೆತಂದ ವಿಷಯದಲ್ಲಿ ಅನೇಕ ಸಂದೇಹಗಳು ಮೂಡುತ್ತವೆಯಾದರೂ (ಇದಕ್ಕೂ ಒಂದು ಪರಿಹಾರವಿದ್ದು, ಅದನ್ನು ಮುಂದೆ ನೀಡಲಾಗಿದೆ) ಗಜಪೃಷ್ಠಾಕಾರದ ಕಟ್ಟಡ ಮತ್ತು ಶಾಸನದ ಕಾಲ ಮಾತ್ರ ವಿವಾದಾತೀತವೆಂದು ಒತ್ತಿ ಹೇಳಬೇಕಾಗಿದೆ.

ತ್ರುಟಿತ ಶೈವ ಶಿಲ್ಪ (ಚಿತ್ರ–7 ಅ)

ತಾಳಗುಂದದ ಪ್ರಣವೇಶ್ವರ ದೇವಾಲಯದ ಆವರಣದ ಉತ್ಖನನ ಸಂದರ್ಭದಲ್ಲಿ ಅನೇಕ ಅಮೂಲ್ಯ ಪುರಾತತ್ತ್ವೀಯ ಆಕರಗಳು ದೊರೆತಿವೆ. ಅವುಗಳಲ್ಲಿ ಬಹುಮುಖ್ಯವಾದುದು ಕದಂಬ ಸ್ತರದಲ್ಲಿ ದೊರೆತಿದ್ದು, ತ್ರುಟಿತವಾಗಿರುವ 4–5 ನೆಯ ಶತಮಾನದ್ದೆಂದು ಹೇಳಲು ಆಸ್ಪದವಿರುವ ಶೈವ ಶಿಲ್ಪವಾಗಿದ್ದು ಅದರ ರಚನೆ ಅದೇ ಕಾಲದ ಕರ್ನಾಟಕ ಶೈಲಿಯ ಇತರ ಶಿಲ್ಪಗಳಿಗಿಂತ ತುಸು ವಿಭಿನ್ನವಾಗಿದೆ.

ಒಂದು ಸಂಪೂರ್ಣ ಶೈವ ಶಿಲ್ಪದ (ಪ್ರಾಯಶಃ ಒಂದು ಸ್ತ್ರೀ ದೇವತೆ ಮಾಹೇಶ್ವರಿ, ಭೈರವಿ ಇತ್ಯಾದಿ) ಭಾಗವಾಗಿರುವ ಈ ಶಿಲ್ಪದ ಮೇಲ್ಭಾಗದಲ್ಲಿ ಒಂದು ಪಟ್ಟಿಕೆ ಇದೆ. ಒಂದು

ತ್ರಿಶೂಲದ ಶಿರೋಭಾಗದ ಚಿತ್ರಣದೊಂದಿಗೆ ಆಯುಧ ಪುರುಷನ ಶಿರದ ಭಾಗವನ್ನು ಕೆತ್ತಲಾಗಿದೆ. ಶಿರವನ್ನು ಆಯತಾಕಾರದ ಪಟ್ಟಿಕೆಯುಳ್ಳ ಪೀಠದ ಮೇಲೆ ಜಡಿಸಲಾಗಿದ್ದು ತ್ರಿಶೂಲದ ದಂಡ ಭಗ್ನವಾಗಿದೆ. ತ್ರಿಶೂಲದ ಮಧ್ಯದಲ್ಲಿರುವ ಮುಳ್ಳು ಭರ್ಜಿಯ ಮೊನೆಯಂತಿದ್ದು, ಇಕ್ಕೆಲದಲ್ಲಿರುವ ಮುಳ್ಳುಗಳು ಬುಡದಲ್ಲಿ ಮತ್ತು ಶಿರೋಭಾಗದಲ್ಲಿ ಹೊರ ಮುಖವಾಗಿ ಮಡಚಿಕೊಂಡು ಒಂದು ಪರಿತವಾದ ಆಯುಧವಾಗಿ ಪರಿಣಮಿಸಿದೆ. ಇದನ್ನು ಹಿಡಿದಿರುವ ಪುರುಷ ಮುಖಕ್ಕೆ ಒಂದು ಕಿರೀಟದ ರೂಪದಲ್ಲಿ ಇದನ್ನು ತೋರಿಸಲಾಗಿದೆ. ಆಯುಧ ಪುರುಷನ ಶಿರದಲ್ಲಿ ಹೆಚ್ಚು ಅಗಲವಿಲ್ಲದ ಹಣೆ, ಗೆರೆಗಳಿಂದ ರೂಪಿತವಾದ ಬಾಗಿದ ಸ್ವಲ್ಪ ದಪ್ಪ ಎನಿಸುವ ಹುಬ್ಬುಗಳು, ಅರ್ಧ ಮೀಲಿತ ಕಣ್ಣುಗಳು, ಅಗಲವಾದ ನಸು ಚಪ್ಪಟೆ ಮೂಗು ಮತ್ತು ದಪ್ಪ ತುಟಿಯ ಎದ್ದು ಕಾಣುವ ಗಡ್ಡವನ್ನು ಕಾಣಬಹುದು. ಪ್ರಯೋಗ ಹಂತದ ಸ್ಥಿತಿಯಲ್ಲಿ ಆಯುಧ ಇರುವುದರಿಂದ ಆಯುಧದ ಕಣ್ಣುಗಳು ಮುಚ್ಚಿದ ಸ್ಥಿತಿಯಲ್ಲಿ ಕಂಡು ಬರುತ್ತದೆ.

ಮೊದಲನೆಯದಾಗಿ, ಈ ರೀತಿಯಾಗಿ, ಈ ಶೈಲಿಯಲ್ಲಿರುವ ಆಯುಧ ಪುರುಷನ ಚಿತ್ರಣ ಇತಿಹಾಸ ಪ್ರಾರಂಭಿಕ ಕಾಲದಲ್ಲಿ ಇಲ್ಲವೇ ಇಲ್ಲ. ಕರ್ನಾಟಕದಲ್ಲಿನ ಆಯುಧಪುರುಷನ ಚಿತ್ರಣ ಕೇವಲ ಉತ್ತರ ಭಾರತದ ಸಾಂಸ್ಕೃತಿಕ ಸಂಬಂಧದ ಒಂದು ಅಂಶ. ಇದನ್ನು ನಾವು ಶುಂಗ–ಗುಪ್ತರ ಕಾಲದಲ್ಲಿ ನೋಡಬಹುದು. ಹೆಚ್ಚಾಗಿ ಮೃತ್–ಫಲಕಗಳಲ್ಲಿ, ಚರ್ಟ್ ಅಥವಾ ಕೆಂಪು ಮರಳುಕಲ್ಲಿನ ಫಲಕಗಳಲ್ಲಿ ಇವನ್ನು ನೋಡಬಹುದು. ಇಲ್ಲಿ ದೊರೆತಿರುವ ಶಿಲ್ಪ ಶೈಲಿಯು ಅಹಿಚ್ಛತ್ರದ ಉತ್ಖನನದಲ್ಲಿ ದೊರೆತಿರುವ 3–4 ನೆಯ ಶತಮಾನದ ಮೃತ್–ಫಲಕಗಳಲ್ಲಿನ ಚಿತ್ರಣದಂತೆಯೇ ಇದ್ದು ಅಹಿಚ್ಛತ್ರದಿಂದ ಬಂದವರು ಈ ಮೂರ್ತಿ ಫಲಕವನ್ನು ತಂದಿರಬಹುದು ಎನ್ನುವ ಅಂಶವನ್ನು ಆಲೋಚಿಸುವಂತೆ ಮಾಡುತ್ತದೆ. ಇದಕ್ಕೆ ಪೂರಕವಾಗಿ ಯಾಗಗಳಲ್ಲಿ ಹೋಮ ಕುಂಡಾಗ್ನಿಯನ್ನು, ಅರುಣಿಗಳನ್ನು ಸರಿಪಡಿಸಲು ಹಸ್ತಗಳಿಗೆ ಶಾಖ ತಗಲದಂತೆ ಸುಟ್ಟ ಮಣ್ಣಿನಿಂದ ಮಾಡಿದ ಹಸ್ತ ರಕ್ಷಕಗಳು ಇಲ್ಲಿ ಮಾತ್ರ ದೊರೆತಿದ್ದು ಕರ್ನಾಟಕದ ಇತರೆ ಸ್ಥಳಗಳಲ್ಲಿ ದೊರೆತಿಲ್ಲ. ಇಂತಹ ಹಸ್ತರಕ್ಷಕಗಳು ಸಿಂಧೂ–ಸರಸ್ವತೀ ನದಿಗಳ ನಾಗರೀಕತೆಯ ನೆಲೆಗಳಲ್ಲಿ ಮಾತ್ರವೇ ದೊರೆತಿದೆ ಎಂದು ಭಾರತದ ಖ್ಯಾತ ಪುರಾತತ್ತ್ವ ವಿದ್ವಾಂಸರಾದ ಡಾ. ಎಸ್. ನಾಗರಾಜು ಅವರು ಸೂಚಿಸಿರುವುದು ಗಮನಾರ್ಹ ಅಂಶವಾಗಿದೆ. ಹೀಗಾಗಿ ಈ ಅಂಶವೂ ಉತ್ತರ ಭಾರತದ್ದಿರಬಹುದು. ಅಹಿಚ್ಛತ್ರದಲ್ಲಿಯೂ ಪ್ರಾಯಶಃ ದೊರೆತಿದ್ದು ವರ್ಗೀಕರಣ ಮಾಡದ ಪುರಾತತ್ತ್ವ ಆಕರಗಳಲ್ಲಿ ಸೇರಿಹೋಗಿರಬಹುದು. ಈ ತ್ರುಟಿತ ಈ ಶಿಲ್ಪ ನಮಗೆ ಐತಿಹಾಸಿಕವಾಗಿ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಅಹಿಚ್ಛತ್ರಕ್ಕೂ ಸ್ಥಾಣಕುಂದೂರಕ್ಕೂ ಪ್ರಮುಖ ಮಹತ್ತ್ವಪೂರ್ಣ ಕೊಂಡಿ ಎಂದರೆ ತಪ್ಪಾಗಲಾರದು. ಇದು ಮಯೂರವರ್ಮನು ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆತಂದಿರಬಹುದು ಎಂಬ ಅಂಶವನ್ನು ಪುನರ್ ವಿಮರ್ಶಿಸಲು ಆಸ್ಪದ ನೀಡುತ್ತದೆ.

11. ಈ ಶಾಸನ ದೊರೆತಿರುವುದು ಉತ್ತರದ ಸಿಂಹ ಕಟಾಂಜನದಲ್ಲಿ. ದಕ್ಷಿಣದ ಸಿಂಹ ಕಟಾಂಜನದಲ್ಲಿಯೂ ಬಹುಶಃ ಇದೇ ಶಾಸನದ ವಿವರವನ್ನೇ ಒಳಕೊಂಡಿದ್ದಿರಬಹುದಾದ ಎರಡು ಶಾಸನಗಳಿದ್ದು ತ್ರುಟಿತವಾಗಿವೆ. ಇವುಗಳ ವಿವರವನ್ನು ಮೇಲೆ ಮೊದಲಿಗೇ ಸೂಚಿಸಲಾಗಿದ್ದು ಇವುಗಳ ಪಾಠವಿಂತಿದೆ (ಚಿತ್ರ–8).

ಪ್ರಣವೇಶ್ವರ ದೇವಾಲಯದ ಮುಖಮಂಟಪದ ದಕ್ಷಿಣ ಸಿಂಹಕಟಾಂಜನದ ಮೇಲೆ ಬರೆಯಲಾದ ತ್ರುಟಿತ ಸ್ಥಿತಿಯಲ್ಲಿರುವ ಶಾಸನ

1 ಮ[ಹಾದೇ*] . . . .

2 ಗುದ್ಗುಲುಮೂಲ್ಯ ಕ್ಷೇತ್ರಂ ಚನ್ದ್ರಾದಿತ್ಯ

ಪ್ರಣವೇಶ್ವರ ದೇವಾಲಯದ ಮುಖಮಂಟಪದ ದಕ್ಷಿಣ ಸಿಂಹಕಟಾಂಜನದ ಜಾರುವ ಭಾಗದ ಮೇಲೆ ಬರೆಯಲಾದ ತ್ರುಟಿತ ಶಾಸನ

ಗತಿಮವಿಭಿಃ

ಶಾಸನದ ಕನ್ನಡ ಭಾಷಾ ಪದ ಪ್ರಯೋಗ ಮತ್ತಿತರ ಅಂಶಗಳು : ಕೊಟ್ಟಾರ್, ಬೊಯ್ಗರಾ, ನಾಗಣ, ಪುಲಿಂದಿಗೆ, ನಾಲ್ಕು, ಕೊಳ್ಳೆ ಎಂಬುವು ಇಲ್ಲಿ ಬರುವ ಕನ್ನಡ ಪದಗಳು. ಇದರಲ್ಲಿ ಪುಲಿಂದಿಗೆ (ಪುಲಿ[ಣ್ಡಿ]ಗೆ), ನಾಗಣ ನಾಮಪದಗಳಾಗಿದ್ದು ಅನ್ವಯವಾಗುವುದಿಲ್ಲ ಎಂದು ತೆಗೆದುಕೊಂಡರೆ ಕೇವಲ 4 ಪದಗಳು ಕನ್ನಡದಲ್ಲಿವೆ.

1. ಕೊಟ್ಟಾರ್ ಎಂಬುದು ಕನ್ನಡ ಪದವಾಗಿದ್ದು ಇದರ ಅರ್ಥ ಕೊಟ್ಟರು ಎಂದು. ಕೊಟ್ಟಾರ್ ಎಂಬುದು ಕ್ರಿಯಾಪದವಾಗಿದ್ದು, ಕೊಟ್ಟಾ ಎಂದಿರುವೆಡೆ ಇರುವುದು ಪೂರ್ವದ ಹಳಗನ್ನಡದ ಷಷ್ಠೀ ವಿಭಕ್ತಿಪ್ರತ್ಯಯ ಆ ಎಂಬುದು ಗಮನಾರ್ಹ. ಈ ಶಬ್ದ ಇತರ ಯಾವ ದ್ರಾವಿಡ ಭಾಷೆಗಳಲ್ಲಿಯೂ ಇಲ್ಲ ಎಂಬುದು ಗಮನಾರ್ಹ.
2. ಬೊಯ್ಗರಾ ಎಂಬಲ್ಲಿ ಪೂರ್ವದ ಹಳಗನ್ನಡದ ಷಷ್ಠೀ ವಿಭಕ್ತಿಪ್ರತ್ಯಯ ಆ ಇರುವ ಕಾರಣ ಇದನ್ನು ಕನ್ನಡ ಶಬ್ದವೆಂದು ಗುರುತಿಸಬಹುದು.
3. ನಾಗಣ ಎಂಬುದು ನಾಗ + ಅಣ್ಣ = ನಾಗಣ್ಣ ಎಂಬುದರ ಸವೆದ ರೂಪವಾಗಿದೆ. ಅಣ್ಣ ಶಬ್ದ ಸ್ಪಷ್ಟವಾಗಿ ಕನ್ನಡ ಶಬ್ದ.
4. ಪುಲಿಂದಿಗೆ (ಪುಲಿ[ಣ್ಡಿ]ಗೆ) ಎಂಬುದು ಕೂಡ ಕನ್ನಡ ಶಬ್ದವಾಗಿದ್ದು ಇದೊಂದು ಸ್ಥಳನಾಮವಾಗಿದೆ. ಪುಲಿ ಶಬ್ದ ಮತ್ತು ಅಂತ್ಯದ ಗೆ ಪ್ರತ್ಯಯ ಇವು ಈ ಶಬ್ದ ಕನ್ನಡ ಭಾಷೆಯದೆಂದು ತಿಳಿಯಲು ಸಹಾಯಕವಾಗಿದೆ.
5. ಹಲಮಿ ಎಂಬುದು ಕನ್ನಡ ಪದವಲ್ಲ. ಹಲ ಎಂದರೆ ಸಂಸ್ಕೃತ ಭಾಷೆಯಲ್ಲಿ ನೇಗಿಲು ಎಂದರ್ಥ. ಹಲಮಿ ಎಂಬುದು ಶಾಸನಗಳಲ್ಲಿ ಬರುವ ಬ್ರಹ್ಮಚಾರಿ ಕ್ಷೇತ್ರ ಎಂದರೆ ಸಾಗುವಳಿ ಮಾಡದ ಭೂಮಿ ಎಂಬ ಅರ್ಥವನ್ನು ಉಳ್ಳ ಶಬ್ದದ ಸಮಾನ ಶಬ್ದವೆಂದು ಪುರಾತತ್ತ್ವ ವಿದ್ವಾಂಸರೂ ಸಂಸ್ಕೃತ–ಪ್ರಾಕೃತ, ಕನ್ನಡ ಭಾಷಾ ತಜ್ಞರೂ ಆಗಿದ್ದ ಎಂ. ವಿ. ವಿಶ್ವೇಶ್ವರ ಅವರು ಸೂಚಿಸಿದ್ದರು.
6. ನಾಲ್ಕು ಎಂಬುದು ಸ್ಪಷ್ಟವಾಗಿ ಸಂಖ್ಯಾವಾಚಿ ಕನ್ನಡ ಶಬ್ದವಾಗಿದೆ. ತೆಲುಗಿನಲ್ಲಿ ನಾಲುಗು, ತಮಿಳಿನಲ್ಲಿ ನಾಲ್, ಮಲಯಾಳದಲ್ಲಿ ನಾಲ್ಕ್ಯ, ತುಳುವಿನಲ್ಲಿ ನಾಲು ಎಂದು ಜ್ಞಾತಿ ಶಬ್ದಗಳಿವೆ. ಕನ್ನಡದಲ್ಲಿ ಈ ಶಬ್ದದ ಬಳಕೆ ಮೊದಲ ಬಾರಿಗೆ ಕಂಡುಬರುವುದು ಈ ಶಾಸನದಲ್ಲಿಯೇ ಆಗಿದೆ ಎಂದು ಖಚಿತವಾಗಿ ಹೇಳಬಹುದು. ನಾಲ್ಕು ಶಬ್ದವು ಸಂಯುಕ್ತಪದವಾಗಿದ್ದು, ಇದನ್ನು ಪರಿಗಣಿಸುವುದು ಸರಿಯಲ್ಲವೆಂಬ ಮೌಖಿಕ ಅಭಿಪ್ರಾಯಗಳು ಕೇಳಿಬಂದಿವೆ. ಇಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವವರು

ನಾಲ್ಕು ಶಬ್ದ ಕನ್ನಡಭಾಷೆಯದಲ್ಲವೆಂದು ಸಾಧಿಸಿ ತೋರಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

7. ಹಲಮಿ ಕೊಳ್ಳೆ ಎಂಬಲ್ಲಿನ ಕೊಳ್ಳೆ ಶಬ್ದದ ಮೂಲವು ಕೊಳ್ ಧಾತುವಾಗಿದೆ. ಇದರ ಅರ್ಥ ಪಡೆಯಲು ಎಂದು. ಅಂದರೆ ಸಾಗುವಳಿ ಮಾಡದ ಭೂಮಿಯನ್ನು ಪಡೆಯಲು ಎಂಬುದಾಗಿ ಅರ್ಥೈಸಬಹುದು.

ಉಪಸಂಹಾರ

ಒಟ್ಟಾರೆಯಾಗಿ ಹೇಳಬೇಕೆಂದರೆ ಲಿಪಿಶಾಸ್ತ್ರ, ಪುರಾತತ್ತ್ವ ಉತ್ಖನನ, ವಾಸ್ತು, ನಾಣ್ಯಗಳು ಮುಂತಾದ ಎಲ್ಲ ಅಂಶಗಳಿಂದಲೂ ಈ ಶಾಸನದ ಕಾಲವನ್ನು ನಿಷ್ಕರ್ಷಿಸಲಾಗಿರುವುದು ಗಮನಿಸಬೇಕಾದ ಅಂಶವಾಗಿದೆ. ತ್ರುಟಿತವಾಗಿರುವ ಈ ಶಾಸನದಲ್ಲಿ ಕೆಲವಾದರೂ ಕನ್ನಡ ಭಾಷೆಯ ಶಬ್ದಗಳು ಕಂಡುಬರುತ್ತಿರುವುದು ಗಮನಾರ್ಹವಾಗಿದೆ. ಕನ್ನಡದ ಲಭ್ಯ ಮೊದಲ ಶಾಸನವೆಂಬ ಹೆಗ್ಗಳಿಕೆಯನ್ನು ವಸ್ತುನಿಷ್ಠವಾಗಿ ತಾಳಗುಂದ ಶಾಸನಕ್ಕೆ ನೀಡಬೇಕಾದುದು ಕನ್ನಡಿಗರ ಕರ್ತವ್ಯವಾಗಿದೆ. ಉತ್ಖನನದಲ್ಲಿ ದೊರೆತ ಅನೇಕ ಅಪ್ರಕಟಿತ ಶಾಸನಗಳನ್ನೂ ಕೂಡ ಇಲ್ಲಿ ಸಮರ್ಪಕವೆನ್ನುವಂತಹ ಪಾಠದೊಂದಿಗೆ ಪ್ರಕಟಿಸಲಾಗಿದೆ. ಕನ್ನಡದ ಪ್ರಥಮ ದೊರೆ ಮಯೂರನ ಜನ್ಮ ಭೂಮಿಯಲ್ಲಿ ಈ ಶಾಸನ ದೊರೆತಿರುವುದು ಅಪೂರ್ವ ಮತ್ತು ಕುತೂಹಲವಲ್ಲದೆ ಕದಂಬರಾಳಿದ ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಇತ್ಯಾದಿ ಸ್ಥಳಗಳಲ್ಲಿ, ಇನ್ನೂ ಮುತುವರ್ಜಿಯಿಂದ ಸಂಶೋಧನೆ ನಡೆಸಬೇಕೆಂಬ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಕದಂಬರ ಇತಿಹಾಸದ ಪುನಾರಚನೆಗೆ ತಾಳಗುಂದದ ಉತ್ಖನನದ ವಿವರಗಳು ಮತ್ತು ಶಾಸನ ವ್ಯಾಪಕವಾಗಿ ನೆರವನ್ನು ನೀಡುತ್ತವೆ. ಹೀಗಾಗಿ ಹಲ್ಮಿಡಿ ಶಾಸನಕ್ಕಿಂತಲೂ ಸುಮಾರು 50 ವರ್ಷಗಳಷ್ಟು ಪೂರ್ವದ್ದಾದ ತಾಳಗುಂದದ ಪ್ರಣವೇಶ್ವರ ದೇವಾಲಯದ ಉತ್ಖನನಗೊಂಡ ಪೂರ್ವಮುಖ ಮಂಟಪದ ಉತ್ತರ ಸಿಂಹಕಟಾಂಜನ ಶಾಸನ ಕರ್ನಾಟಕದ ಶಾಸನಶಾಸ್ತ್ರ ಇತಿಹಾಸದಲ್ಲಿ ಅಪೂರ್ವವಾದ ಶಾಸನವೆಂದು ಮತ್ತು ಹಸ್ತಲಿಖಿತ ರೂಪದಲ್ಲಿರುವ, ಇದರಂತೆ ಇತರ ಹಸ್ತಲಿಖಿತ ರೂಪದಲ್ಲಿರುವ ಶಾಸನಗಳನ್ನು ಪುನರ್ ಪರಿಶೀಲಿಸುವ ಕಾಲ ಸನ್ನಿಹಿತವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಕನ್ನಡ ಭಾಷೆಯ ಪ್ರಾಚೀನತೆಯನ್ನು ಸಾರುವ ಲಿಪಿ ಮತ್ತು ಭಾಷೆಯ ಬೆಳವಣಿಗೆಯನ್ನು ಮತ್ತೂ ಹಿಂದಕ್ಕೆ ಕೊಂಡೊಯ್ಯುವ ಮೂಲಕ ಕನ್ನಡ ಭಾಷೆಯ ಸೇವೆಯನ್ನು ಮಾಡುವ ನಿಟ್ಟಿನಲ್ಲಿ ಶಾಸನ ಇತಿಹಾಸ ಲಿಪಿಶಾಸ್ತ್ರ ತಜ್ಞರು ಮಾಡಬೇಕಾದ ಬಗ್ಗೆ ವ್ಯಾಪಕವಾಗಿ ಗಮನ ಹರಿಸಬೇಕಾಗಿದೆ. ಪೂರ್ವಗ್ರಹರಹಿತವಾದ ಅಧ್ಯಯನವನ್ನೂ ಮಾಡಬೇಕಾಗಿದೆ. ಈ ವಿಷಯವನ್ನು ಕುರಿತು ವಿವರವಾದ ವಿಮರ್ಶಾತ್ಮಕ ಬರಹ ಸಿದ್ಧತೆಯ ಹಂತದಲ್ಲಿದ್ದು. ಅದರಲ್ಲಿ ಹೆಚ್ಚು ಮಾಹಿತಿಗಳನ್ನು ನೀಡಲಾಗಿದೆ. ಆಸಕ್ತರು ಅಗತ್ಯವಾಗಿ ಗಮನಿಸಬಹುದಾಗಿದೆ.

ಆಧಾರಸೂಚಿ

- **ಕದಂಬರ ಅರೆತಲಗದ್ದೆಯ ಅಪೂರ್ವ ತಾಮ್ರ ಶಾಸನಗಳ ಭಂಡಾರ** – (ಸಂ) ಎಸ್.ಜಿ.ಸಾಮಕ್, ಜಗದೀಶ, ಎಂ.ವಿ. ರಮೇಶ ಜೋಯಿಸ್, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ–2008.
- **ತುಳುನಾಡಿನ ಶಾಸನಗಳು (ಸಂಪುಟ–1)** – (ಸಂ) ಕೆ.ವಿ. ರಮೇಶ್, ಎಂ.ಜೆ. ಶರ್ಮ, ಗೀತಾ ಬುಕ್ ಹೌಸ್, ಮೈಸೂರು–1978.

- **ಬನವಾಸಿಯ ಕದಂಬರು [ಬನವಾಸಿಯ ಕದಂಬರ 41 ಶಾಸನಗಳು]** – ಬಾ.ರಾ. ಗೋಪಾಲ, ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ, ಶಿರಸಿ, ಉತ್ತರ ಕನ್ನಡ–1983.
- **ಕರ್ಣಾಟಕ ಶಾಸನ ಸಮೀಕ್ಷೆ**–ಕೆ.ವಿ. ರಮೇಶ್, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–1971
- **ಕರ್ಣಾಟಕ ಶಾಸನ ಕಲೆ**–ಎಚ್. ಆರ್. ರಘುನಾಥ ಭಟ್ಟ, ಭಾರತೀ ಪ್ರಕಾಶನ, ಮೈಸೂರು–1977
- *Corpus of Kadamba Inscriptions {Volume-1}* - (Ed) B.R. Gopal, Kadamba Institute of Cultural Studies, Sirsi, Uttara Kannada-1985.
- *Early Brahmi Inscriptions From Sannati* - (Ed) I.K. Sarma, J. Varaprasada Rao, Harman Publishing House, New Delhi, 1993.
- *Inscriptions of The Early Kadambas* - (Ed) G.S. Gai, I.C.H.R. and Pratibha Prakashan, New Delhi, 1996.
- *Inscriptions of The Western Gangas* - (Ed) K.V. Ramesh, I.C.H.R. and Agam Prakashan, New Delhi, 1984
- *Excavations at Banavasi*-(Ed) A.V. Narasimhamurthy & Others, Directorate of Archaeology and Museums, Mysore, India-1997
- *Excavations at Kanaganahalli (Sannati), Taluk Chitapur, Dist. Gulbarga, Karnataka*, Archaeological Survey Of India, New Delhi-2013
- *Coins and Currency System In Karnataka*-A.V. Narasimha Murthy, Directorate Of Archaeology And Museums Karnataka, Mysore-1997
- *Epigraphia Indica Volumes*
- *Journal of the Epigraphical Society of India Volumes*

ಸಹಾಯಕ ಬಳಗ

- ಮಹಾನಿರ್ದೇಶಕರು, ಭಾರತೀಯ ಪುರಾತತ್ತ್ವ ಸರ್ವೇಕ್ಷಣ, ದೆಹಲಿ
- ದಿವಂಗತ ಎಂ. ವಿ. ವಿಶ್ವೇಶ್ವರ, ಉಪ ಅಧೀಕ್ಷಕ ಪುರಾತತ್ತ್ವವಿದರು (ನಿವೃತ್ತ), ಭಾರತೀಯ ಪುರಾತತ್ತ್ವ ಸರ್ವೇಕ್ಷಣ, ಬೆಂಗಳೂರು ವಲಯ
- ಎಂ. ನಂಬಿರಾಜನ್, ನಿರ್ದೇಶಕರು, ಭಾರತೀಯ ಪುರಾತತ್ತ್ವ ಸರ್ವೇಕ್ಷಣ, ದೆಹಲಿ
- ಟಿ. ಅರುಣ್ ರಾಜ್, ಅಧೀಕ್ಷಕ ಪುರಾತತ್ವವಿದರು, ಭಾರತೀಯ ಪುರಾತತ್ತ್ವ ಸರ್ವೇಕ್ಷಣ, ಬೆಂಗಳೂರು ವಲಯ
- ಅ.ಸುಂದರ, ಪಿ.ವಿ. ಕೃಷ್ಣಮೂರ್ತಿ, ಎಂ.ಡಿ.ಸಂಪತ್, ಎಸ್. ಜಿ. ಸಾಮಕ್, ಶಿವಮೊಗ್ಗ
- ರಮೇಶ್ ಹಿರೇಜಂಬೂರು, ಪ್ರವೀಣ್, ತಾಳಗುಂದದ ಸ್ನೇಹಿತರಿಗೆ
- ಶಾಸನವನ್ನು ಮಣ್ಣಿನಿಂದ ಬಿಡಿಸಿ ಹೊರತೆಗೆದ ಸ್ಥಳೀಯ ಕೂಲಿ ಕಾರ್ಮಿಕರಿಗೆ
- ಆರ್. ವಿ. ಅನಿಲ್ ಕುಮಾರ್, ಸಹಾಯಕ ಶಾಸನ ತಜ್ಞರು, ಭಾರತೀಯ ಶಾಸನಶಾಸ್ತ್ರ ನಿರ್ದೇಶನಾಲಯ, ಮೈಸೂರು
- ಇಲಾಖೆಯ ಸಹೋದ್ಯೋಗಿಗಳಾದ ಸುಜನಾ, ಪ್ರೇಮಾ, ದಿವಂಗತ. ಜಯಂತ್, ನಿಖಿಲ್ ದಾಸ್, ಅರಿವಾಳಿ, ಅರ್ಜುನ್ ಬಂಗರಿಗಿ, ಗೋವಿಂದಪ್ಪ, ವೀರಣ್ಣ, ಜಗದೀಶ, ಶಿವಕುಮಾರ್, ನರಸಿಂಹ ಪ್ರಸಾದ್, ಶಂಕ್ರಮ್ಮ, ನಾಗವೇಣಿ, ಬಸಪ್ಪ ಮತ್ತು ಕಾಶಿಂಬಿ ಮುಂತಾದವರಿಗೆಲ್ಲ ಲೇಖಕರ ಹೃತ್ಪೂರ್ವಕ ನಮನಗಳು.

■

ಯಾದಗಿರಿ ಜಿಲ್ಲೆ ಶಹಾಪುರ ತಾಲ್ಲೂಕಿನ ರಾಮಗಿರಿ ಮಠದಲ್ಲಿ ಪತ್ತೆಯಾದ ಸೇವುಣದೊರೆ 2ನೇ ಸಿಂಘಣನ ಅಪ್ರಕಟಿತ ಶಾಸನ

ಎಸ್. ಹೆಚ್. ಗೋವರ್ಧನ
ಸಂಶೋಧನ ವಿದ್ಯಾರ್ಥಿ
ಡಾ. ಡಿ.ವಿ.ಗುಂಡಪ್ಪ
ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾಲಯ
ತುಮಕೂರು.
sunkamgovardhan@gmail.com

ರಾಜಗೋಪಾಲ ಎಂ. ವಿಭೂತಿ
ಮನೆ ಸಂಖ್ಯೆ 7–2–15,
ಗಂಗಾತೀರ, ಜಲಗಾರ ಬೀದಿ.
ಶೋರಾಪುರ 585224.
ಯಾದಗಿರಿ ಜಿಲ್ಲೆ.
rmvibhuti@gmail.com

ಪ್ರಸ್ತುತ ಯಾದಗಿರಿ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಶಹಾಪುರದ ರಾಮಗಿರಿ ಮಠದಲ್ಲಿ ಯಾದವ ಚಕ್ರವರ್ತಿ ಅಂದರೆ ಸೇವುಣ ದೊರೆ ಎರಡನೆಯ ಸಿಂಘಣ ದೇವನ ಅಪ್ರಕಟಿತ ಶಾಸನವೊಂದು ಇತ್ತೀಚೆಗೆ ಪತ್ತೆಯಾಗಿದ್ದು ಅದು ಪೋಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇತಿಹಾಸದಲ್ಲಿ ಅಪಾರವಾದ ಆಸಕ್ತಿ ಇರುವ ರಾಜಗೋಪಾಲ ಎಂ. ವಿಭೂತಿಯವರ ಪರಿಶ್ರಮದಿಂದ ಉಳಿದುಕೊಂಡಿದೆ. ಆ ಶಾಸನದ ಮಹತ್ತ್ವ ಹಾಗೂ ಸಾರಾಂಶವನ್ನು ಈ ಲೇಖನವು ಒಳಗೊಂಡಿದೆ.

ಶಾಸನ ದೊರೆತ ಸ್ಥಳ ಮತ್ತು ಸ್ವರೂಪ

ಯಾದಗಿರಿ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಶಹಾಪುರದಲ್ಲಿರುವ ರಾಮಗಿರಿ ಮಠದಲ್ಲಿ ಈ ಶಾಸನ ದೊರೆತಿದೆ. ರಾಮಗಿರಿ ಮಠದಲ್ಲಿ ಮನೆಗಳನ್ನು ನಿರ್ಮಿಸಲು ಅಗೆಯುತ್ತಿದ್ದಾಗ ಪ್ರಸ್ತುತ ಶಾಸನವು ದೊರೆತು ಅದನ್ನು ಅಲ್ಲೇ ಮತ್ತೆ ಹುಗಿಸಬೇಕು ಎಂದು ಯೋಚಿಸುತ್ತಿರುವಾಗ ಅದನ್ನು ತಿಳಿದ ರಾಜಗೋಪಾಲ್ ಈ ಶಾಸನವನ್ನು ಉಳಿಸಲು ಪ್ರಯತ್ನಿಸಿ ಎಸ್. ಕೆ. ಅರುಣಿಯವರನ್ನು ಸಂಪರ್ಕಿಸಿದಾಗ ಅರುಣಿಯವರು ಸುಂಕಂ ಗೋವರ್ಧನ ಅವರಿಗೆ ಈ ವಿಷಯವನ್ನು ತಿಳಿಸಿ ಲೇಖನವನ್ನು ಸಿದ್ಧಪಡಿಸಿ ಶಾಸನವನ್ನು ಪ್ರಕಟಿಸಲು ಸಹಕಾರಿಯಾಗಿರುತ್ತಾರೆ. ಈ ಶಾಸನದ ಉದ್ದ 46

ಇಂಚು. ಅಗಲ 17 ಇಂಚು. ದಪ್ಪ 7 ಇಂಚು. 22 ಸಾಲುಗಳನ್ನು ಉಳ್ಳ ಈ ಶಾಸನವು ಬಿಳಿ ಗ್ರಾನೈಟ್ ಶಿಲೆಯ ಮೇಲೆ ಅತ್ಯಂತ ಸ್ಪಷ್ಟವಾದ ಅಕ್ಷರಗಳಲ್ಲಿ ತುಂಬಾ ಮುದ್ದಾಗಿ ಕೊರೆಯಲಾಗಿದೆ.


ಶಾಸನದ ಸಂಪೂರ್ಣ ಪಾಠ ಇಂತಿದೆ.

1. ಶ್ರೀ ನಮಸ್ತುಂಗ ಸಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ
2. ನಗರಾರಂಭ ಮೂಲಸ್ತಂಭಾಯ ಸಂಭವೇ !! ಸಿವಃ
3. ಶ್ರೀ ಸ್ವಸ್ತಿ ಶ್ರೀಮತು ಯಾದವ ನಾರಾಯಣ ಸೇವುಣರಾಯ
4. ಪ್ರತಾಪ ಚಕ್ರವರ್ತ್ತಿ ಸಿಂಗಳದೇವ ವರಿಶದ 4ನೆಯ ರುದಿ
5. ರೋಧ್ಗಾರಿ ಸಂವತ್ಸರದ ಪಾಲ್ಗುಣ ಸುದ್ಧ 3 ಶ್ರೀ ಶ್ರೀ ಮತು
6. ರಾಜಧಾನಿ ಪಟ್ಟಣ ಸಗರದ ಹೊಂಬಟ್ಟೆಗಾ ಱಯೆಂ
7. ಟುಗಳ್ನಾಡು ಮುಖ್ಯವಶೇಶ ಸಮಯಂಗಳುಂ
8. ತಮೊಳೇಕಸ್ತರಾಗಿ ಶ್ರೀ ಮತ್ಸಂನ್ಧಿವಿಗ್ರಹಿ ಸ
9. ಮೆಯದ ದಂಣ್ಣಾಯಕ ರಾಮರ
10. ಸಂಗೆ ಕೊಟ್ಟ ವಳಿತದ ಪ್ರಕಾರವೆಂತೆಂದಡೆ [ದೇವ]
11. ಹಟ್ಟಗಾಱ ಮಾಲಗಾಱ ಸಿಂಪಿಗನಿಂನ್ತೀ ವರ ಮು
12. ಖ್ಯವಾಗಿ ನಂಮ ಸಮಯ ದರ್ಮ್ಮದೊಳಗಣ ವೊ
13. ಕಲು ಜಗತಿಯವರೊಳಗಾಗಿ ವೊಕಲಲು ಹಾಗವೆ
14. ರಡನು ಕಂನಡ ನಾಲು ಸಾಸಿರದೊಳಗೆಯಾಚಂದ್ರಾರ್ಕ
15. ತಾರಾಂಬರವೆತ್ತಿಕೊಂಡುಂಡು ಸುಖದಿಂದಿರ್ಪ್ಪನುಂ
16. ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾಮ್
17. ಷಷ್ಟಿರ್ವ್ವರಿಶ ಸಹಶ್ರಾಣಿಂ ವಿಷ್ಟಾಯಾಂ ಜಾಯತೇ
18. ಕ್ರಿಮಿ ವಿಷ್ಟಾಯಾಂ ಜಾಯತೇ ಕ್ರಿಮಿ !! ಯಿಂನ್ತೀ ಸಾ
19. ಸಾನ ಮರಿಯಾದೆಯ ನಡೆಸಿದವರು ಶ್ರೀ ಮ
20. ತು ವಾರಣಾಸಿಯಲು ವೇದಪಾರಗರಿಗೆ ಸಾಯಿರ ಕ
21. ವಿಲೆಯ ಕೊಟ್ಟ ಪುಂಣ್ಯ. ನಡೆಸದವರುಯನಿಸ ಕವಿ
22. ಲೆಯನಳಿದವರು !! ಗೋವಿಂದಾಯ ನಮಃ

ಶಾಸನದ ಸಾರಾಂಶ

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ಎಂಬ ಶೈವಸ್ತುತಿಯಿಂದ ಆರಂಭವಾಗುವ ಈ ಶಾಸನವು ಈ ಶ್ಲೋಕದ ನಂತರ ಸಿವಃ (ಶಿವಃ) ಎಂದು ಶಿವನನ್ನು ಸ್ತುತಿಸುತ್ತದೆ.

ಶ್ರೀ ಸ್ವಸ್ತಿ ಶ್ರೀಮತು ಯಾದವ ನಾರಾಯಣ ಸೇವುಣರಾಯನಾದ ಪ್ರತಾಪ ಚಕ್ರವರ್ತ್ತಿ ಸಿಂಗಳದೇವನ ಆಳ್ವಿಕೆಯ ನಾಲ್ಕನೆಯ ವರಿಶದ ರುದಿರೋಧ್ಗಾರಿ ಸಂವತ್ಸರದ ಪಾಲ್ಗುಣ ಶುದ್ಧ 3 ರಂದು ಶ್ರೀ ಶ್ರೀ ಮತು ರಾಜಧಾನಿ ಪಟ್ಟಣವಾದ ಸಗರದಲ್ಲಿ ಅಂದರೆ ಇಂದಿನ



ಶಹಾಪುರ ತಾಲ್ಲೂಕಿಗೆ ಸೇರಿದ ಸಗರ ಗ್ರಾಮದಲ್ಲಿ ಇದ್ದಂತಹ ಒಟ್ಟೆಗಾಜಿರು ಅಂದರೆ ನೇಕಾರರು ಎಂಟುನಾಡಿನಲ್ಲಿ ಇದ್ದ ತಮ್ಮ ಸಮುಂಯುಕ್ಕೆ ಸೇರಿರುವ ಅಶೇಷ ಸಮಯದವರು ತಮ್ಮಲ್ಲಿ ಎಲ್ಲರೂ ಒಂದಾಗಿ ಶ್ರೀ ಮತ್ಸಂನ್ನಿಪಿಗ್ರಹಿಯೂ ತಮ್ಮ ಕುಲಕ್ಕೆ ಸೇರಿದ ದಂಣ್ಣಾಯಕನೂ ಆದ ರಾಮರಸನಿಗೆ ಕೊಟ್ಟ ವಳಿತದ ಪ್ರಕಾರವೆಂತೆಂದಡೆ ಹಟ್ಟಗಾಜಿ ಅಂದರೆ ಪಟ್ಟೆಗಾರರು ಅಂದರೆ ನೇಕಾರರು, ಮಾಲಗಾಜಿ ಅಂದರೆ ಹೂವನ್ನು ಕಟ್ಟುವವರು ಅಥವಾ ದೇವಾಲಯಗಳಿಗೆ ಹೂಗಳನ್ನು ಸರಬರಾಜು ಮಾಡುವವರು, ಸಿಂಪಿಗರು ಅಂದರೆ ದರ್ಜಿ ಅಥವಾ ಚಿಪ್ಪಿಗ ಇವರೆಲ್ಲ ಸೇರಿಕೊಂಡು ಅವರ ಸಮಯ ದರ್ಮ್ಮದೊಳಗೆ ಇರುವ ಪ್ರತಿಯೊಂದು ಒಕ್ಕಲು ಜಗತಿಯುವರೊಳಗಾಗಿ ಒಕ್ಕಲಲ್ಲಿ ಎರಡು ಹಾಗವನ್ನು ಕಂನಡ ನಾಲ್ಕು ಸಾಸಿರದೊಳಗೆ ತಪ್ಪದೇ ನಡೆಯುವಂತೆ ಸೂರ್ಯಚಂದ್ರರು ಇರುವವರೆಗೆ ತೆರಿಗೆಯನ್ನು ತೆಗೆದುಕೊಂಡು ಅದನ್ನು ಸುಖವಾಗಿ ಅನುಭವಿಸಬೇಕು ಎಂದು ಕಟ್ಟಳೆಯನ್ನು ಮಾಡಲಾಗಿದೆ.

ಕಡೆಯಲ್ಲಿ ಶಾಪಾಶಯದ ಭಾಗದಲ್ಲಿ ಸಾಮಾನ್ಯವಾಗಿ ಶಾಸನಗಳಲ್ಲಿ ಇರುವಂತಹ ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾಮ್ ಷಷ್ಟಿರ್ವರಿಶ ಸಹಸ್ರಾಣಿ ವಿಷ್ಟಾಯಾಂ ಜಾಯತೇಕ್ರಿಮಿ !! ಎಂಬ ಶ್ಲೋಕವನ್ನು ಕೆತ್ತಲಾಗಿದೆ. ಮತ್ತು ಈ ಶಾಸನದಲ್ಲಿ ವಿಷ್ಟಾಯಾಂ ಜಾಯತೇ ಕ್ರಿಮಿ ಎಂದು ಎರಡೆರಡು ಬಾರಿ ಬರೆಯಲಾಗಿದೆ. ಈ ಶ್ಲೋಕದ ಅರ್ಥವೆಂದರೆ ನೀಡಲಾದ ದಾನವು ತನ್ನಿಂದಲೇ ನೀಡಲಾಗಿರಲೀ ಅಥವಾ ಬೇರೆಯವರಿಂದಲೇ ನೀಡಲಾಗಿರಲೀ ಅದನ್ನು ಅಪಹರಿಸಿದರೆ ಅರವತ್ತು ಸಾವಿರ ವರ್ಷಗಳು ಆತನು ಹುಳುವಾಗಿ ಹುಟ್ಟುತ್ತಾನೆ.

ಅದರ ನಂತರ ಯಿಂತ್ತೀ ಶಾಸನ ಮರಿಯಾದೆಯ ನಡೆಸಿದವರು ಶ್ರೀ ಮತು ವಾರಣಾಸಿಯಲು ವೇದಪಾರಗರಿಗೆ ಸಾಯಿರ ಕಪಿಲೆಯ ಕೊಟ್ಟ ಪುಂಣ್ಯ. ನಡೆಸದವರು ಅಷ್ಟೇ ಸಂಖ್ಯೆಯ ಬ್ರಾಹ್ಮಣರನ್ನು ಮತ್ತು ಕಪಿಲೆಯನಳಿದವರು !! ಎಂದು ಹೇಳಿ ಕಡೆಗೆ

ಗೋವಿಂದಾಯ ನಮಃ ಎಂದು ಶಾಸನವನ್ನು ಮುಗಿಸಿರುವುದು ಆಶ್ಚರ್ಯವನ್ನು ಹುಟ್ಟಿಸುತ್ತದೆ. ಆರಂಭದಲ್ಲಿ ಶೈವಸ್ತುತಿಯಿಂದ ಆರಂಭವಾಗಿರುವ ಶಾಸನವು ಕಡೆಯಲ್ಲಿ ಗೋವಿಂದಾಯ ನಮಃ ಎಂದು ಹೇಳಿರುವುದು ಕುತೂಹಲಕಾರಿ ಸಂಗತಿಯಾಗಿದೆ.

ಪ್ರಸ್ತುತ ಶಾಸನದ ಕಾಲ

ಪ್ರಸ್ತುತ ಶಾಸನದಲ್ಲಿ ಹೇಳಿರುವ ಕಾಲವು – ರುದಿರೋದ್ಗಾರಿ ಸಂವತ್ಸರದ ಫಾಲ್ಗುಣ ಶುದ್ಧ ತದಿಗೆ. ಇಲ್ಲಿ ಶಕವರ್ಷದ ಉಲ್ಲೇಖ ಇಲ್ಲದಿದ್ದರೂ ಸೇವುಣದೊರೆ ಸಿಂಗಣ ದೇವನ 4ನೆಯ ವರ್ಷದ ಆಳ್ವಿಕೆಯ ಪ್ರಸ್ತಾಪವಿದೆ. ಸಿಂಘಣದೇವನು ಕ್ರಿ.ಶ. 1199–1200ರಲ್ಲಿ ಆಳ್ವಿಕೆಯನ್ನು ಆರಂಭಿಸಿರುವುದರಿಂದ ಪ್ರಸ್ತುತ ಶಾಸನದ ಕಾಲ ಚಂದ್ರಮಾನ ಪಂಚಾಂಗದಂತೆ ಕ್ರಿ. ಶ. 1204 ರ ಫೆಬ್ರವರಿ 5ನೆಯ ತಾರೀಖಿಗೆ ಸರಿಯಾಗುತ್ತದೆ.

ವಿಶ್ಲೇಷಣೆ

ಈ ಶಾಸನವು ದೇವಗಿರಿಯ ಯಾದವರು ಎಂದು ಇತಿಹಾಸದಲ್ಲಿ ಕರೆಯುತ್ತಾ ಬಂದಿರುವ ಸೇವುಣರಿಗೆ ಸಂಬಂಧಿಸಿದ ಶಾಸನವಾಗಿದೆ. ಆ ಕಾಲದಲ್ಲಿ ಚಕ್ರವರ್ತಿಗಳಾಗಿ ಕರ್ನಾಟಕದ ಬಹುಪಾಲು ಸಾಮ್ರಾಜ್ಯವನ್ನು ಆಳುತ್ತಿದ್ದವರು ಕಲ್ಯಾಣದ ಚಾಳುಕ್ಯರು. ಇವರನ್ನು ಸೋಲಿಸಿ ಕಲಚೂರಿ ರಾಜ್ಯವನ್ನು ಬಿಜ್ಜಳನು ಎಂದು ಸ್ಥಾಪಿಸಿದನೋ ಅಂದೇ ಸ್ವತಂತ್ರ ರಾಜರಾಗಿ ಆಡಳಿತವನ್ನು ನಡೆಸಲು ಉತ್ಸುಕರಾಗಿದ್ದ ಹಲವಾರು ಅರಸುಮನೆತನಗಳು ಗರಿಬಿಚ್ಚತೊಡಗಿದರು. ಅವರಲ್ಲಿ ಮುಖ್ಯವಾಗಿ ಹೊಯ್ಸಳರು ಮತ್ತು ಸೇವುಣರು ಪ್ರತಿಸ್ಪರ್ಧಿಗಳಾಗಿ ಕನ್ನಡ ನಾಡಿನ ಹಲವು ಭಾಗಗಳನ್ನು ಆಳಲು ತೊಡಗಿದರು. ಇವರಲ್ಲಿ ಸೇವುಣರು ಕ್ರಿ. ಶ. 12ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರವರ್ಧಮಾನರಾಗಿ ಮುನ್ನಲೆಗೆ ಬಂದರು. ಸುಮಾರು 10ನೆಯ ಶತಮಾನದಲ್ಲಿ ಸೇವುಣಚಂದ್ರನಿಂದ ಆರಂಭವಾದ ಈ ವಂಶಕ್ಕೆ ಸೇವುಣ ವಂಶವೆಂದೇ ಹೆಸರಾಯಿತು. ಆದರೆ ಇವರನ್ನು ದೇವಗಿರಿಯ ಯಾದವರು ಎಂದು ಇತಿಹಾಸಕಾರರು ಕರೆದಿರುವುದನ್ನು ಶ್ರೀನಿವಾಸ ರಿತ್ತಿಯವರು ತಮ್ಮ ಪುಸ್ತಕದಲ್ಲಿ ನಿರಾಕರಿಸಿದ್ದಾರೆ.[1]

ಇನ್ನು ಸೇವುಣ ದೊರೆ ಸಿಂಘಣದೇವನೆಂದರೆ, ಈತ ಜೈತುಗಿಯ ಮಗನಾದ ಎರಡನೆಯ ಸಿಂಘಣದೇವ. "ಸಿಂಘಣನು ಕ್ರಿ.ಶ. 1210ರಲ್ಲಿ ಪಟ್ಟಕ್ಕೆ ಬಂದನೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಆದರೆ, ಈ ಘಟನೆ ನಡೆದದ್ದು ಕ್ರಿ.ಶ. 1199ರ ಮಧ್ಯಭಾಗದಲ್ಲಿ ಎಂದು ತೋರಿಸಲು ಆಧಾರಗಳಿವೆ." [2] ಎಂದು ಹೇಳುವ ಶ್ರೀನಿವಾಸ ರಿತ್ತಿಯವರು ಸಿಂಘಣನ ಆಳ್ವಿಕೆಯು ಕ್ರಿ.ಶ. 1247ರ ಅಕ್ಟೋಬರ್ ತಿಂಗಳಲ್ಲಿ ಕೊನೆಗೊಂಡಿತು ಎಂದೂ ದಾಖಲಿಸುತ್ತಾರೆ. ಶಾಸನತಜ್ಞ ಎ.ಎಂ.ಅಣ್ಣಿಗೇರಿಯವರು ತಿಳಿಸುವಂತೆ "2ನೆಯ ಸಿಂಘಣನು ತಮ್ಮ ಮನೆತನದ ದೇವಿಯಾದ ಪರ್ಣಖೇಟದ ನಾರಸಿಂಹಿಯ ಕೃಪೆಯಿಂದ ಹುಟ್ಟಿದ್ದರಿಂದ ಅವನಿಗೆ ಸಿಂಹಣ, ಸಿಂಘಣ ಅಥವಾ ಸಿಂಘಣದೇವ ಎಂಬ ಹೆಸರುಗಳಿದ್ದವು. ಅವನು ವಿಷ್ಣುಭಕ್ತನಾಗಿದ್ದನು." [3]

ಶಾಸನದ ಬಹಳ ಮುಖ್ಯವಿಷಯವೆಂದರೆ ರಾಜಧಾನಿ ಪಟ್ಟಣವಾಗಿದ್ದ ಸಗರದಲ್ಲಿ ಅಂದರೆ ಇಂದಿನ ಶಹಾಪುರ ತಾಲ್ಲೂಕಿನಲ್ಲಿರುವ ಸಗರವು ಹಿಂದೆ ಸಗರ ನಾಡು ಎನ್ನುವ ಭೂಪ್ರದೇಶದ ರಾಜಧಾನಿಯಾಗಿ ಮೆರೆಯುತ್ತಿತ್ತು. ಈ ಸಗರವು ಅದರ ರಾಜಧಾನಿ

ಪಟ್ಟಣವಾಗಿ ಪ್ರಸಿದ್ಧವಾಗಿತ್ತು. ಈ ಸಗರದಲ್ಲಿ ವಾಸವಾಗಿದ್ದ ದೇವಹಟ್ಟಗಾರರು, ಮಾಲಗಾರರು, ಸಿಂಪಿಗರು ಇವರೆಲ್ಲ ಒಂದೇ ಬಣಕ್ಕೆ ಸೇರಿದವರಾಗಿದ್ದರು. ಇವರೆಲ್ಲರೂ ಸೇರಿ ತಮ್ಮ ಕುಲದಲ್ಲಿ ಯಾವುದೇ ಸಂದರ್ಭದಲ್ಲಿಯೂ ಪ್ರತೀ ಒಕ್ಕಲು ಜನ ಎರಡು ಹಾಗವನ್ನು ತಮ್ಮ ಕುಲಕ್ಕೆ ಸೇರಿದ ಸಂಧಿವಿಗ್ರಹಿಯಾದ ರಾಮರಸ ದಂಣ್ಣಾಯಕನಿಗೆ ದಾನವಾಗಿ ನೀಡಿದರು ಎಂದು ತಿಳಿಸುವುದಾಗಿದೆ. ಇಲ್ಲಿನ ವ್ಯಾಪಾರಿಗಳಲ್ಲಿ ಹಲವಾರು ಬಣಗಳಿದ್ದವು. ಅದರಲ್ಲಿ ಎಂಟು ನಾಡಿಗೆ ಸೇರಿದ ನೇಕಾರರು, ಮಾಲೆಕಾರರು ಮತ್ತು ಚಿಪ್ಪಿಗರು ತಾವೇ ಒಂದು ವ್ಯಾಪಾರಿ ಬಣವನ್ನು ಕಟ್ಟಿಕೊಂಡಿದ್ದಂತೆ ತೋರುತ್ತದೆ. ಇವರು ತಮ್ಮ ಕೋಮಿಗೆ ಸೇರಿದ ವ್ಯಕ್ತಿಯನ್ನು ದಣ್ಣಾಯಕನಾಗಿ ನೇಮಿಸಲು ಪ್ರಭಾವವನ್ನು ಬೀರಿರಬಹುದು. ಹಾಗೂ ಆತನಿಗೆ ಸಹಾಯಧನವಾಗಿ ಅವರೆಲ್ಲರೂ ತಮ್ಮ ಕೋಮಿನ ಪ್ರತಿಯೊಂದು ಸಂದರ್ಭಗಳಲ್ಲೂ ಮನೆಗೊಂದರ ಲೆಕ್ಕದಂತೆ ಪ್ರತೀ ಒಕ್ಕಲೂ ಎರಡು ಹಾಗವನ್ನು ಬಿಡುವುದಾಗಿ ಕಟ್ಟಳೆಯೊಂದನ್ನು ತಮಗೆ ತಾವೇ ವಿಧಿಸಿಕೊಂಡಿದ್ದಾರೆ.

ಶಾಸನದ ಆರಂಭದಲ್ಲಿ ಬಂದಿರುವ ಶೈವಸ್ತುತಿಗೂ ಕಡೆಯಲ್ಲಿ ಬಂದಿರುವ ವಿಷ್ಣುಸ್ತುತಿಗೂ ಕಾರಣವೇನೆಂದರೆ, ಶಾಸನವನ್ನು ಹಾಕಿಸಿದವರು, ದಾನವನ್ನು ನೀಡಿದವರು ಹಟ್ಟಗಾರ, ಮಾಲಗಾರ ಹಾಗೂ ಸಿಂಪಿಗ ಸಮುದಾಯದ ಕೊತ್ತಳದವರು. ಇವರು ಶೈವರಾಗಿದ್ದರಿಂದಲೂ ತಮ್ಮ ನಾಯಕನಾದ ದಂಡನಾಯಕ ರಾಮರಸನೂ ಶೈವನಾಗಿದ್ದದರಿಂದ ಆರಂಭದಲ್ಲಿ ಶೈವಸ್ತುತಿಯನ್ನು ಮಾಡಲಾಗಿದೆ. ಆದರೆ ಕೊನೆಯಲ್ಲಿ ಬಂದಿರುವ ಗೋವಿಂದಾಯ ನಮಃ ಎನ್ನುವ ಮಾತು ದೊರೆ ಸಿಂಘಣನನ್ನು ಗೌರವಿಸಲೇ ಬೇಕಾದ ಅನಿವಾರ್ಯತೆಯಿಂದ ಸೃಷ್ಟಿಯಾದದ್ದಾಗಿದೆ. ಇದಕ್ಕೆ ಕಾರಣ ಎರಡನೆಯ ಸಿಂಘಣನು ವಿಷ್ಣುವಿನ ಪರಮಭಕ್ತನಾಗಿದ್ದನು.

ರಾಜಧಾನಿ ಪಟ್ಟಣ ಸಗರ

ಇಂದಿನ ಶಹಾಪುರ ತಾಲ್ಲೂಕಿಗೆ ಸೇರಿದ ಸಗರವು ಹಿಂದೆ ಕಲ್ಯಾಣದ ಚಾಳುಕ್ಯರು, ಸೇವುಣರು, ಹೊಯ್ಸಳರ ಕಾಲಘಟ್ಟದಲ್ಲಿ ರಾಜಧಾನಿ ಪಟ್ಟಣವಾಗಿ ಬಹಳ ಪ್ರಸಿದ್ಧವಾದ ಸ್ಥಳವಾಗಿತ್ತು. ಸಗರನಾಡು ಎಂಬುದು ಎಡದೊರೆ ಎರಡು ಸಾವಿರ ಎಂಬ ವಿಸ್ತಾರವಾದ ಭೂಭಾಗದ ಒಂದು ಪ್ರಮುಖ ಆಡಳಿತ ವಿಭಾಗವಾಗಿತ್ತು. ಸಗರನಾಡು ಕ್ರಿ. ಶ. 927ರಿಂದ 1106ರವರೆಗೆ ಮೂರುನೂರು ಗ್ರಾಮಗಳ ಆಡಳಿತ ಕೇಂದ್ರವಾಗಿದ್ದು ಮುಂದೆ 1130ರಷ್ಟರ ಹೊತ್ತಿಗೆ ಐದುನೂರು ಗ್ರಾಮಗಳಿಗೆ ರಾಜಧಾನಿಯಾಗಿ ಬಡ್ತಿ ಹೊಂದಿತ್ತು ಎಂಬುದನ್ನು ನಾವು ಗಮನಿಸಬೇಕಾಗಿದೆ.[4] ಇದಕ್ಕೆ ಕಾರಣ ಇದೊಂದು ಬಹಳ ಮುಖ್ಯವಾದ ವ್ಯಾಪಾರಿ ನೆಲೆಯಾಗಿದ್ದು ಆಯಕಟ್ಟಿನ ಜಾಗದಲ್ಲಿ ಇದ್ದುದರಿಂದ ಕೃಷಿ ಚಟುವಟಿಕೆಗಳು ಹಾಗೂ ವ್ಯಾಪಾರದಲ್ಲಿ ತೀವ್ರತರವಾದ ಬೆಳವಣಿಗೆಯು ಉಂಟಾಯಿತು.

ಕಂನಡ ನಾಲುಸಾಸಿರ

ಇದುವರೆಗಿನ ಶಾಸನಗಳ ಅಧ್ಯಯನದಿಂದ ಇಂದಿನ ಗುಲ್ಬರ್ಗ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹಾಗೂ ಶಹಾಪುರ ತಾಲ್ಲೂಕಿನಲ್ಲಿ ಅಂತರ್ಗತವಾಗಿದ್ದ ನಾಡುಗಳ ಪ್ರಸ್ತಾಪವನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ಆದರೆ ಪ್ರಸ್ತುತ ಶಾಸನದಲ್ಲಿ ವಿಶೇಷವಾಗಿ 'ಕಂನಡ ನಾಲುಸಾಸಿರ' ಎಂಬ ಆಡಳಿತ ಘಟಕದ ಉಲ್ಲೇಖವಿದೆ. ಬಹುಶಃ ಇದು ಕರಹಡ ನಾಲುಸಾಸಿರದ ಅಪಲಿಖಿತ ಇರಬಹುದೇನೋ ಅನ್ನಿಸಿದರೂ ಶಾಸನ ಪಠ್ಯದಲ್ಲಿ ಸ್ಪಷ್ಟವಾಗಿ

ಕಂನಡ ನಾಲುಸಾಸಿರ ಎಂಬ ಉಲ್ಲೇಖ ಗಮನ ಸೆಳೆಯುತ್ತದೆ. ಗುಲ್ಬರ್ಗ ಪ್ರಾಂತ್ಯದಲ್ಲಿ ಅಲಂದೆ ಸಾಸಿರ, ಗೊಂಕನಾಡು ನೂರ ಎಂಬತ್ತು, ಮನ್ನೆದಡಿ ಸಾಸಿರ, ಬೆರಣೆ ಆರುನೂರು, ಸಗರನಾಡು ಐನೂರು, ಮುಂತಾದ ಪ್ರಾಂತ್ಯಗಳಿದ್ದು ಪ್ರಸ್ತುತ ಶಾಸನ ತಿಳಿಸುವ ಕಂನಡ ನಾಲುಸಾಸಿರದ ಬಗ್ಗೆ ಇನ್ನು ಹೆಚ್ಚಿನ ಅಧ್ಯಯನವು ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಇದೊಂದು ಮಹತ್ತ್ವಪೂರ್ಣ ಶಾಸನವಾಗಿದೆ. ಈ ಹಿಂದೆ ಪ್ರಕಟವಾಗಿದ್ದ ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಇಂಗಳಗಿ ಮತ್ತು ಮಳಖೇಡ ಶಾಸನಗಳು[5] ಈ ಕಂನಡ ನಾಲುಸಾಸಿರವನ್ನು ಉಲ್ಲೇಖಿಸಿದ್ದವು. ಹಾಗೂ ಕ್ರಿ. ಶ. 1257 ರ ಪಡಕೇನೂರು ಶಾಸನವು ಕೂಡ ಈ ಕಂನಡ ನಾಲ್ಕು ಸಾಸಿರದ ದೇಸಿಯ ದಣ್ಣಾಯಕನನ್ನು ಉಲ್ಲೇಖಿಸಿತ್ತು. ಆದರೆ **ಶಾಸನ ಸಂಪದ**ವನ್ನು ಸಂಪಾದಿಸಿ ಪ್ರಕಟಿಸಿದ ಆರ್. ಸಿ. ಹಿರೇಮಠ ಮತ್ತು ಎಂ. ಎಂ. ಕಲಬುರ್ಗಿಯವರು ಈ ಉಲ್ಲೇಖಗಳನ್ನು ಕರಹಾಡ ನಾಲ್ಕುಸಾಸಿರ ಎಂದು ಗ್ರಹಿಸಿದರು.[6] ಕರಹಾಡ ನಾಲ್ಕುಸಾಸಿರ ಎಂಬ ಆಡಳಿತ ಘಟಕವು ಮಹಾರಾಷ್ಟ್ರದ ಸತಾರ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಕರಾಡ ಎಂದು ಸ್ವತಃ ಕಲಬುರ್ಗಿಯವರೇ ಪ್ರತಿಪಾದಿಸಿದ್ದಾರೆ. ಅವರು "ಇದರಲ್ಲಿ ಸಾತಾರ ಜಿಲ್ಲೆಯ ದಕ್ಷಿಣ ಭಾಗ, ಸಾಂಗಲಿ ಜಿಲ್ಲೆಯ ಬಹುಭಾಗ, ವಿಜಾಪುರ ಜಿಲ್ಲೆಯ ಕನಮಡಿಯನ್ನೊಳಗೊಂಡ ಭಾಗ ಸಮಾವೇಶಗೊಂಡಿದ್ದು, ಇದರ ಒಂದು ತುದಿ ಪಶ್ಚಿಮ ಘಟ್ಟವನ್ನು ಇನ್ನೊಂದು ತುದಿ ಇಂದಿನ ಕರ್ನಾಟಕದ ಪಶ್ಚಿಮ ಗಡಿರೇಖೆಯನ್ನು ಮುಟ್ಟಿದ್ದವು" ಎಂದಿದ್ದಾರೆ.[7]

ಕೃತಜ್ಞತೆಗಳು

ಎಲ್ಲಿಯ ಶಹಾಪುರ ಎಲ್ಲಿಯ ಬೆಂಗಳೂರು ; ನಮ್ಮಿಬ್ಬರ ನಡುವೆ ಸಂಪರ್ಕ ಸಾಧಿಸಿ ಈ ಶಾಸನವು ಪ್ರಕಟವಾಗಲು ಕಾರಣ ಐಸಿಎಚ್ಆರ್‌ನ ಗೆಳೆಯರಾದ ಎಸ್. ಕೆ. ಅರುಣಿಯವರು. ಅವರಿಗೆ ನಮ್ಮ ಪ್ರೀತಿಪೂರ್ವಕ ಕೃತಜ್ಞತೆಗಳು.

ಕೊನೆಟಿಪ್ಪಣಿಗಳು

1. Shrinivasa Ritti ; 1973. *The Seunas (The Yadavas of Devagiri)* ; Department of Ancient Indian History and Epigraphy ; Karnaataka University ; Dharvaad.
2. ಶ್ರೀನಿವಾಸ ರಿತ್ತಿ ; **ಸೇವುಣರು** ; ಪ್ರ. ಸಂ. ಬಿ. ಷೇಕ್ ಅಲಿ ಸಂಪಾದಕರು ಜಿ. ಸುರೇಂದ್ರರಾವ್ : 1997. **ಕರ್ನಾಟಕ ಚರಿತ್ರೆ (ಕ್ರಿಶ. 640–1336) ಸಂಪುಟ 2**(ಚರಿತ್ರೆ ಮಾಲೆ 2) ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಎ. ಎಂ. ಅಣ್ಣಿಗೇರಿ ; 1973. **2ನೆಯ ಸೇವುನ ಸಿಂಘಣ** ; ಐ ಬಿ ಎಚ್ ಪ್ರಕಾಶನ ; ಬೆಂಗಳೂರು.
4. ಚನ್ನಬಸವಯ್ಯ ಹಿರೇಮಠ ; 2014. **ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು** ; ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಹನುಮಾಕ್ಷಿ ಗೋಗಿ ; 1996. **ಕಲ್ಬುರ್ಗಿ ಜಿಲ್ಲೆಯ ಶಾಸನಗಳು** ; ಶಿವಚಂದ್ರ ಪ್ರಕಾಶನ ; ಹುಬ್ಬಳ್ಳಿ ; ಪುಟ ಸಂಖ್ಯೆ 124, 458.
6. ಆರ್. ಸಿ. ಹಿರೇಮಠ ಮತ್ತು ಎಂ. ಎಂ. ಕಲಬುರ್ಗಿ : 1968. **ಕನ್ನಡ ಶಾಸನ ಸಂಪದ** ; ಕರ್ನಾಟಕ ವಿಶ್ವವಿದ್ಯಾಲಯ ; ಧಾರವಾಡ ;
7. ಎಂ.ಎಂ. ಕಲಬುರ್ಗಿ ; 2012. **ಮಹಾರಾಷ್ಟ್ರದ ಕನ್ನಡ ಶಾಸನಗಳು** ; ಕನ್ನಡ ಸಾಹಿತ್ಯ ಪರಿಷತ್ತು ; ಬೆಂಗಳೂರು.

■

ಕ.ವೆಂ. ಅವರ ಬೌದ್ಧ ಮತದಲ್ಲಿ ಯಕ್ಷಕಲೆ ಸಾಂಸ್ಕೃತಿಕ ಸಂಶೋಧನ ಗ್ರಂಥ

ಮುರಳಿ ಕೆ.ವಿ.
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು.

ಬೌದ್ಧ ಮತದಲ್ಲಿ ಯಕ್ಷಕಲೆ ಎಂಬುದು ಕ.ವೆಂ. ರಾಜಗೋಪಾಲ ಅವರ ಸಂಶೋಧನಾ ಗ್ರಂಥ. ಈ ಕೃತಿಯು 1997ರಲ್ಲಿ ಪ್ರಕಟಗೊಂಡಿದೆ. ಕ.ವೆಂ. ಅವರು 1973ರಲ್ಲಿ ಈ ಕೃತಿಯ ಕರಡನ್ನು ರಚನೆ ಮಾಡಿದರು. ಆದರೆ ಪ್ರಕಟಣೆಯ ಸಂದರ್ಭದಲ್ಲಿ ಹಲವಾರು ವ್ಯತ್ಯಾಸಗಳಿಂದ ಸಫಲತೆಯನ್ನು ಪಡೆದು ಕೊಂಡಿರಲಿಲ್ಲ. ಈ ಸಂಶೋಧನಾ ಗ್ರಂಥವು ಕನ್ನಡ ಸಾರಸ್ವತ ಲೋಕಕ್ಕೆ ಬಹು ಚರ್ಚಿತವಾಗಿ ಆ ನೆಲೆಯಲ್ಲಿ ಕೆಲಸ ಮಾಡುವವರಿಗೆ ಮಾರ್ಗವಾಗಿ ನಿಲ್ಲ ಬಲ್ಲ ಕೃತಿಯಾಗಿದೆ. ಕ.ವೆಂ. ಅವರು ಮೂಲತಃ ಸಂಶೋಧನಾ ಕ್ಷೇತ್ರವನ್ನು ಆಯ್ಕೆ ಮಾಡಿ ಕೊಂಡವರಲ್ಲ. ಇವರು ಅಧ್ಯಾಪಕರು, ಕವಿ, ಕತೆಗಾರ ಮತ್ತು ನಾಟಕ ಪ್ರಯೋಗ ತಜ್ಞರಾಗಿ ಖ್ಯಾತರಾಗಿದ್ದರು. ತಮ್ಮ ಜೀವನದ ತಿರುವುಗಳಲ್ಲಿ ಸಂಶೋಧನಾ ಕ್ಷೇತ್ರದಲ್ಲೂ ಕೆಲಸ ಮಾಡಿದವರು. ಸರಿ ಸಂಪ್ರದಾಯ, ದೇವದಾಸಿ ಪದ್ಧತಿ, ಲಾವಣಿಗಳು, ಭೂತಾರಾಧನೆ, ಪಶ್ಚಿಮ ಕರಾವಳಿ ಸೂರ್ಯ ಹೀಗೆ ಬೇರೆ ಬೇರೆ ವಿಷಯಗಳನ್ನು ಕುರಿತ ಮೂಲಾಧಾರಗಳನ್ನು ಗುರುತಿಸಿ ಸೂಕ್ಷ್ಮವಾಗಿ ಅವುಗಳ ನೆಲೆ ಹಾಗೂ ಬೆಳವಣಿಗೆಯನ್ನು ತೆರೆದಿಡುತ್ತಾರೆ. ಪ್ರಸ್ತುತ ಬೌದ್ಧ ಮತದಲ್ಲಿ ಯಕ್ಷಕಲೆ ಕೃತಿಯು ಸಂಶೋಧನಾತ್ಮಕ ಕ್ಷೇತ್ರಾಧ್ಯಯನದ ಫಲವಾಗಿ ಮೂಡಿರುವ ಕೃತಿ.

'ಯಕ್ಷ' ಎಂಬ ಪದವು ಮಾಂತ್ರಿಕವಾದದ್ದು, ಬಹು ಪ್ರಾಚೀನ ಕಾಲದಿಂದಲೂ ಕೇಳಿ ಬರುವ ಈ ಪದದ ಅರ್ಥ 'ಕುಬೇರನ ಸೇವಕ' ಎಂದು. ಅವನು ತೋಟ ಮತ್ತು ಸಂಪತ್ತಿನ ರಕ್ಷಕನೆಂದು ಎಲ್ಲರಿಗೂ ತಿಳಿದ ವಿಷಯ. ಈ ಸಂಬಂಧದಿಂದಲೋ ಏನೋ ಯಕ್ಷನೊಬ್ಬ ತನ್ನ ಯಜಮಾನನ ಕೋಪಕ್ಕೆ ಗುರಿಯಾಗಿ ಶಾಪಗ್ರಸ್ಥನಾದಾಗ ಕಾಳಿದಾಸನ **ಮೇಘ ಸಂದೇಶ** ಖಂಡಕಾವ್ಯದಲ್ಲಿ "ಜನಕತನಯಾಸ್ನಾನಪುಣ್ಯೋದಕೇಷು ಸ್ನಿಗ್ಧಚ್ಛಾಯಾತರುಷು" ಒಂದು ವರ್ಷದ ಕಾಲಕ್ಕಾಗಿ ವಸತಿಯನ್ನು ನಿರ್ಮಾಣ ಮಾಡಿಕೊಂಡ ಎಂದು ಹೇಳುವ ಮಾತಿದೆ. ಯಕ್ಷ ಎಂಬ ಪದಕ್ಕೆ ಬೇರೆ ಅರ್ಥಗಳೂ ಇವೆ. ಯಕ್ಷನಿಂದ ಆವೃತನಾಗಿರುವವನು, ಯಕ್ಷಗ್ರಹ ಅಂದರೆ ದೆವ್ವ ಹಿಡಿಸಿಕೊಂಡವನು ಎಂಬರ್ಥವೂ ಇದೆ. ಯಕ್ಷ ಸಂಪತ್ತನ್ನು ರಕ್ಷಿಸುತ್ತಾನೆ ವಿನಃ ಅವನ್ನು ಭೋಗಿಸುವುದಿಲ್ಲ ಎಂಬರ್ಥದಲ್ಲಿ 'ಯಕ್ಷವಿತ್ತಃ' ಎಂದೂ ಹೇಳುವರು.

ಯಕ್ಷ-ಗಂಧರ್ವ-ಕಿನ್ನರರು ಸಂಗೀತ, ನೃತ್ಯ ಮುಂತಾದ ಕಲೆಗಳಲ್ಲಿ ನಿಪುಣರು ಭಾರತೀಯ ಶಿಲ್ಪಕಲೆಯಲ್ಲಿ ಇದಕ್ಕೆ ಹೊಂದಿಕೊಳ್ಳುವ ನಿರೂಪಣೆಗಳು ಬಹಳ ಪ್ರಾಚೀನ ಕಾಲದಿಂದಲೂ ದೊರೆಯುತ್ತದೆ. ಇಂತಹ ಕಲಾವಂತಿಕೆಯ ಕೊಂಡಿಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ಪ್ರಯತ್ನವೇ ಈ ಸಂಶೋಧನಾ ಗ್ರಂಥ.

ಒಟ್ಟು 12 ಅಧ್ಯಾಯಗಳಲ್ಲಿ ರಚಿತವಾಗಿರುವ ಈ ಕೃತಿಯಲ್ಲಿ ನವೀನ ಚಿಂತನೆಯ ಹರವು ಕಂಡು ಬರುತ್ತದೆ. ಬೌದ್ಧ ಮತದ ಹಿನ್ನೆಲೆಯಲ್ಲಿ ರಚಿತವಾದ ಚಿತ್ರ ಹಾಗೂ ವಾಸ್ತುಶಿಲ್ಪಗಳಲ್ಲಿ ಸಹ ಇಂಥವೇ ಚಿತ್ರಣ ಹೇರಳವಾಗಿ ಕಂಡು ಬರುತ್ತದೆ. "ಬೌದ್ಧ ಧರ್ಮವು ತನಗಿಂತಲೂ ಮುಂಚಿತವಾಗಿದ್ದ ಕೆಲವು ಸಾಂಪ್ರದಾಯಿಕ ಪದ್ಧತಿಗಳನ್ನು ಧಾರ್ಮಿಕವಾಗಿ ಒಳಗೊಂಡಿತು. ಅದರಲ್ಲಿ ಸಂನ್ಯಾಸ ಪದ್ಧತಿಯು ಮುಖ್ಯವೆನ್ನುವಂತೆ ಸಮಾಧಿ ಪದ್ಧತಿಯೂ ಸೇರುತ್ತದೆ. ಒಂದು ಬೌದ್ಧಯತಿಯ ರೀತಿ ನೀತಿಗೂ ಮತ್ತೊಂದು ಅವನ ಅವಶೇಷಗಳನ್ನು ಸ್ತೂಪಗಳಲ್ಲಿ ರಕ್ಷಿಸುವುದಕ್ಕೂ ಅವಕಾಶ ಮಾಡಿಕೊಡುತ್ತದೆ. ಈ ಸ್ತೂಪಗಳು ಕ್ರಮೇಣ ಬೌದ್ಧ ಧರ್ಮದ ಕಲೆಗಳಿಗೂ(ಅಥವಾ ಬೌದ್ಧ ಧರ್ಮವನ್ನು ಕ್ರಿ.ಶ. 7, 8ನೇ ಶತಮಾನದವರೆಗೂ) ಪಶ್ಚಿಮ ಭಾರತದ ಕಡಲ ಮತ್ತು ಕರಾವಳಿಗೆ ಹೊಂದಿದಂತೆ ಬೆಳೆಯಲು ಆಧಾರವಾಗಿದೆ."[1] ಎನ್ನುವ ಸಂಶೋಧಕರ ನಿಲುವು ಮುಂದೆ ಅದು ಬೆಳೆದ ರೀತಿಯನ್ನು ಸಂಶೋಧಿಸಲು ಸಹಕಾರಿಯಾಗುತ್ತದೆ.

ಶತಮಾನಗಳಿಂದ ಬಂದ ಬೌದ್ಧಮತದ ಶಾಖೆಗಳಾದ ಹೀನಯಾನ ಮತ್ತು ಮಹಾಯಾನ ಪಂಥಗಳು ಸಾಂಚಿ, ಕಾರ್ಲೆ, ನಾಸಿಕ್, ಅಜಂತ ಮತ್ತು ಎಲ್ಲೋರ ಮುಂತಾದವುಗಳು ಕಡೆ ಬೌದ್ಧಮತದ ಹಿನ್ನೆಲೆಯಲ್ಲಿ ರಚಿತವಾದ ಚಿತ್ರ- ಶಿಲ್ಪಕಲೆಗಳಲ್ಲಿ ಸಹ ಇಂಥಹ ಚಿತ್ರಣವನ್ನು ಹೇರಳವಾಗಿ ಕಂಡರಿಸಿದ್ದಾರೆ. "ಈ ಚಿತ್ರಗಳನ್ನು ಸ್ವತಃ ಬೌದ್ಧ ಬಿಕ್ಷುಗಳೇ ರಚಿಸಿದರೆಂದಾಗಲಿ ಅಥವ ಯಕ್ಷರಿರುವ ಶಿಲ್ಪಗಳನ್ನು ಅವರೇ ಕಡೆದವರೆಂದಾಗಲಿ ಹೇಳಲಾಗುವುದಿಲ್ಲ. ಆದರೆ ಬೋಧಿಸತ್ವ ಮತ್ತು ಬುದ್ಧರೊಡನೆ ಯಕ್ಷರು ಸದಾ ಕಾಣಿಸಿಕೊಳ್ಳುವುದು ವಸ್ತು ಸ್ಥಿತಿಯಾಗಿದೆ. ಬೌದ್ಧ ಚೈತ್ಯಾಲಯಗಳು ನೃತ್ಯ-ಸಂಗೀತ ನಾಟಕ ಕಲೆಗಳಿಗೆ ತಾಣವನ್ನೊದಗಿಸಿದ್ದವೆಂದು ಇಷ್ಟರಿಂದಲೇ ತೀರ್ಮಾನಿಸುವುದು ಕಷ್ಟ. ಯಕ್ಷಾರಾಧನೆಯನ್ನು ಪೋಷಿಸಲು ಈ ಚೈತ್ಯಾಲಯಗಳು ಬದ್ಧವಾಗಿದ್ದವೇ ಅಥವಾ ಯತ್ನಿಸಿದ್ದವೇ ಎಂಬುದು ಕುತೂಹಲದ ಒಂದು ಪ್ರಶ್ನೆ"[2] ಎಂಬುದು ಕ.ವೆಂ. ಅವರ ಇಂಗಿತವಾಗಿತ್ತು ಎನ್ನಬಹುದು. ಈ ಅಭಿಪ್ರಾಯಕ್ಕೆ ಇನ್ನು ಪುಷ್ಟಿ ಕೊಡಬೇಕಾದ ಅಗತ್ಯವಿದೆ ಎಂಬುದನ್ನು ನಾವು ಕಂಡುಕೊಂಡ ಸಂಗತಿ ಎನ್ನಬಹುದು.

ಭಾರತದಲ್ಲಿ ಹುಟ್ಟಿದ ಬೌದ್ಧಮತ ಇತರ ದೇಶಗಳಲ್ಲಿ ಹರಡಿ ತನ್ನ ಛಾಪನ್ನು ಮೂಡಿಸಿದ ಮೇಲೆ ಚೀನಾದಿಂದ ಬಂದ ಪ್ರವಾಸಿಗರು ತಮ್ಮ ವರದಿಗಳಲ್ಲಿ ಎಲ್ಲಿಯೂ ಈ ಅಂಶಗಳನ್ನು ನಮೂದಿಸದಿರುವುದು ಕಂಡುಬರುತ್ತದೆ. ಆದರೆ ಯಕ್ಷಾರಾಧನೆ ಚಿತ್ರಗಳು ಸೂಚಿಸುವಂತೆ ಬೌದ್ಧ ಚೈತ್ಯಾಲಯಗಳು ಕ್ರಮೇಣ ಯಕ್ಷರೂಪಕ್ಕೆ ಮತ್ತು ನಂತರದಲ್ಲಿ ಯಕ್ಷಗಾನದ ಪೂರ್ವರಂಗಕ್ಕೆ ಅನುವು ಮಾಡಿಕೊಟ್ಟಿರಬಹುದು ಎಂಬ ಊಹೆಯನ್ನು ಅಷ್ಟಾಗಿ ತಳ್ಳಿಹಾಕಲು ಆಗುವುದಿಲ್ಲ. ಜಿ. ರಾಮಕೃಷ್ಣ ಅವರು ಈ ಕೃತಿಯ ಮುನ್ನುಡಿಯಲ್ಲಿ ಅಭಿಪ್ರಾಯ ಪಡುವಂತೆ "ಕ.ವೆಂ. ಅವರು ಅನೇಕ ಆಕರಗಳ ಆಧಾರದ ಮೇಲೆ ಅದನ್ನು ಸಮರ್ಥಿಸಲು ಯತ್ನಿಸಿದ್ದಾರೆ. ಮತ್ತು ಯಕ್ಷಗಾನವು ಬೌದ್ಧಮತದ ಮೂಲದಿಂದ ಆವಿರ್ಭವಿಸಿದ್ದೆಂದು ಪ್ರತಿಪಾದಿಸಿದ್ದಾರೆ" ಎಂಬುದನ್ನು ಇಲ್ಲಿ ಒಪ್ಪಬಹುದು.

ಯಕ್ಷಗಾನದ ಉಗಮವನ್ನು ಕುರಿತು ಬರೆಯುತ್ತಾ ಕ.ವೆಂ. ಯಕ್ಷಗಾನವು ಕ್ರಮೇಣ ಮತಾಂತರಗೊಂಡಂತೆ ಬೆಳೆಯಿತೆಂದು ಅಭಿಪ್ರಾಯ ಪಡುತ್ತಾರೆ. ಯಕ್ಷಗಾನದ ಚರಿತ್ರಕಾರರ ಪ್ರತಿಕ್ರಿಯೆಯನ್ನು ಅವರು ಸಮಗ್ರವಾಗಿ ಇಲ್ಲಿ ಪರಿಚಯಿಸುತ್ತಾ ಆಧಾರ ಒದಗಿಸ ಹೊರಟಿರುವುದು ಸಂಶೋಧನೆಗೆ ಯೋಗ್ಯವಾದ ವಿಶ್ಲೇಷಣೆ ಎನ್ನಬಹುದು. ಕಾರ್ಲೆಯಲ್ಲಿರುವ ಚೈತ್ಯಾಲಯವನ್ನು ಉದಾಹರಿಸುವ ಸಂಶೋಧಕರು ಅಲ್ಲಿನ ವೈಶಿಷ್ಟ್ಯವನ್ನು ತೋರಿಸುತ್ತಾ ಅಲ್ಲಿ ಚೈತ್ಯಾಲಯದ ಎದುರು ಎಡಭಾಗದಲ್ಲಿ ಬೇರೊಬ್ಬ ದೇವತೆಯ ಸ್ಥಾಪನೆಯಾಗಿದೆ. ಆ ದೇವತೆಯ ಹೆಸರು 'ಯಮಾಯಿ'. ಏಕವೀರ ರೇಣುಕಾ ಎಂಬುವವಳ ಇನ್ನೊಂದು ಹೆಸರು ಅದು, ಒಳಗಿನ ಸ್ತೂಪದೊಡನೆ ಈ ದೇವತೆಯನ್ನು ಸಮೀಕರಿಸಿರುವುದು ಕಂಡುಬರುತ್ತದೆ.

ಬುದ್ಧನ ಕಾಲಾನಂತರದಲ್ಲಿ ಅವನನ್ನು ಪ್ರತಿನಿಧಿಸಲು ಕಲೆಯಲ್ಲಿ ಮರ, ಹೆಜ್ಜೆಗುರುತು, ಧರ್ಮಚಕ್ರ ಮುಂತಾದವುಗಳನ್ನೇ ಬಳಸಲಾಗುತ್ತಿತ್ತು. ಆನಂತರದ ಕಲ್ಪನೆಗಳ ಫಲವಾಗಿ ಅವನ ಬಗೆಗೆ ವಿವಿಧ ಭಂಗಿಗಳ ಚಿತ್ರಗಳು ಅಸ್ತಿತ್ವಕ್ಕೆ ಬಂದುವು, ಶಿಲ್ಪದಲ್ಲಿ ಯಕ್ಷರ ಬದಲಾವಣೆಯುಂಟಾಗಿರುವುದು ಸಹ ಇದರಂತೆಯೇ ಸಹಜವಾಗಿದೆ. ಬೌದ್ಧರ ಚೈತ್ಯಾಲಯಗಳಲ್ಲಿ ನಾಟಕ ಪ್ರಸಂಗಗಳು ನಡೆಯುತ್ತಿದ್ದವು. ಅಲ್ಲಿ ಬುದ್ಧನ ಜೀವನ ಕತೆ, ಬೌದ್ಧಧರ್ಮದ ತತ್ವಗಳು ಕುರಿತಂತೆ ಅನೇಕ ಪ್ರಸಂಗಗಳು ಜರುಗುತ್ತಿದ್ದವು. ಮುಂದೆ ಅವೇ ಸಂಗೀತ ನೃತ್ಯಗಳನ್ನೂ ಒಳಗೊಂಡ ಯಕ್ಷಗಾನ ರೂಪವನ್ನು ಪಡಿಯಿತೆ? ಹಾಗಿದ್ದರೆ ನಂತರ ಉಂಟಾದ ಮಾರ್ಪಾಡುಗಳೇನು? ಎಂಬ ಪ್ರಶ್ನೆ ಏಳುತ್ತದೆ. ಇದನ್ನೆಲ್ಲ ಆಧಾರ ಪೂರ್ವಕವಾಗಿ ಅನೇಕ ಹಿರಿಯ ವಿದ್ವಾಂಸರ ಪುಸ್ತಕಗಳಿಂದ ಪೂರಕ ಮಾಹಿತಿಗಳನ್ನು ಒದಗಿಸಿರುವ ಕ.ವೆಂ. ಅವರ ಸಂಶೋಧನ ಪಥ ಪ್ರಶಂಸನೀಯವಾದುದ್ದು.

ಯಕ್ಷಕಲೆಯ ಕುರಿತ ಅವರ ಶೋಧನೆಯ ಈ ಕೃತಿ ಎರಡು ದಶಕಗಳನ್ನು ಕಳೆದ ಮೇಲೆ ಹೊರಬಂದಿದೆ. ಈ ದಿಸೆಯಲ್ಲಿ ನಮ್ಮ ರಂಗಭೂಮಿಯ ಪರಿಕಲ್ಪನೆಯು ಬೌದ್ಧಮತದಲ್ಲಿಯೇ ಹುಟ್ಟಿಕೊಂಡಿರುವುದೇ? ಎಂಬ ಪ್ರಶ್ನೆಗಳಿಗೆ ಇವರ ವಾದಗಳು ಎಲ್ಲೋ ಒಂದು ಕಡೆ ಆಲೋಚನೆಗೆ ಹಚ್ಚುವುದು ಸತ್ಯವಾದ ಸಂಗತಿ. ಯಕ್ಷಗಾನ ಕರ್ನಾಟಕದ ಪ್ರಾದೇಶಿಕ ರಂಗಭೂಮಿಯ ಒಂದು ಮಾದರಿಯಾಗಿ ಇಂದು ಕಂಡುಬರುತ್ತಿದೆ. ಅದರ ಉಗಮ, ವಿಕಾಸ, ಇತರ ರಂಗ ಪ್ರಕಾರಗಳೊಡನೆ ಅದಕ್ಕಿರುವ ಸಂಬಂಧ ಇತ್ಯಾದಿಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಎಲ್ಲ ವಿಷಯಗಳಲ್ಲೂ ಒಮ್ಮತವಿಲ್ಲದಿದ್ದರೂ ಈ ರಂಗಭೂಮಿಯ

ಚರಿತ್ರೆಯ ಹಿಂದೆ ಸಾಗುತ್ತಲೆ ಇದೆ. ಈ ಹಿನ್ನೆಲೆಯೊಳಗೆ ಕ.ವೆಂ. ಯಾರೂ ಕಾಣದ, ಕಾಣಬಯಸದ ಹಾದಿಯಲ್ಲಿ ನಡೆದಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು "ಯಕ್ಷಗಾನದ ಉಗಮದ ಕ್ರಿ.ಶ.ದ ಮೊದಲ ಆರೇಳು ಶತಕಗಳಲ್ಲಿ ಇಳಿಸಿರುವುದೇ ಅಲ್ಲದೆ ಈ ರಂಗಭೂಮಿಗೂ ಬೌದ್ಧ ಧರ್ಮಕ್ಕೂ ಸಂಬಂಧವಿರುವುದನ್ನು ಕ.ವೆಂ. ತಮ್ಮ ಈ ಅಧ್ಯಯನದಲ್ಲಿ ಗುರುತಿಸುತ್ತಾರೆ"[3] ಅನ್ನುವ ಮಾತು ಅದನ್ನು ನಿರೂಪಿಸುತ್ತದೆ.

ಯಾವುದೇ ಒಂದು ಸಮಕಾಲೀನ ಸಾಂಸ್ಕೃತಿಕ ವಾಸ್ತವ ರೂಪಕ್ಕೆ ಚರಿತ್ರೆಯನ್ನು ರಚಿಸುವ ಹವ್ಯಾಸ ಈಗ ಚಾಲ್ತಿಯಲ್ಲಿದೆ. ಅದನ್ನು ಹೊಸ ಆಕರಗಳೊಂದಿಗೆ ಸಹೃದಯರ ಮುಂದಿಡುವ ಪ್ರಕ್ರಿಯೆ ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಅಂತಹ ಸಂಶೋಧನಾ ಬರವಣಿಗೆಯಲ್ಲಿ ಇದು ಕರ್ನಾಟಕಕ್ಕೆ ಒಂದು ಪ್ರಾಚೀನ ರಂಗಭೂಮಿ ಇಲ್ಲ ಎನ್ನುವುದು ಹಲವರ ಕೊರಗು, ಹಾಗಲ್ಲ ಅಂಥಹದೊಂದು ರಂಗಭೂಮಿ ಇದ್ದಿರಬೇಕು. ಅದರ ಗುರುತುಗಳನ್ನು ಪತ್ತೆ ಹಚ್ಚಲು ಬೇರೆ ಬೇರೆ ಕಾಲದ ದಾಖಲೆಗಳನ್ನು ಓದಲು ಯತ್ನಿಸಲಾಗಿದೆ. ಕ.ವೆಂ. ಪರ್ಯಾಯವಾಗಿ ಈಗಿರುವ ರಂಗಭೂಮಿಯ ಪ್ರಕಾರವೊಂದರಲ್ಲಿ ಪ್ರಾಚೀನತೆಯ ಸುಳಿವುಗಳನ್ನು ಕಾಣಬಹುದು ಎಂದು ಪ್ರಶ್ನೆಯನ್ನು ಹಾಕಿಕೊಳ್ಳುತ್ತಾರೆ. ಇಂದಿನ ಯಕ್ಷಗಾನದ ಕಥಾವಸ್ತು, ಪ್ರಸಾದನ, ಸಂಗೀತ, ಆಚರಣಾ ವಿಧಿಗಳಲ್ಲೇ ಅಡಗಿರುವ ಸೂಚನೆಗಳು ಕ.ವೆಂ. ಮೊದಲು ಮಾಡುತ್ತಾರೆ.

ಆ ಮೂಲಕ ಕ.ವೆಂ. ಅವರು ಪ್ರಾಚೀನತೆಯ ಬೇರುಗಳನ್ನು ಇಲ್ಲಿ ಹುಡುಕಲು ಪ್ರಯತ್ನಿಸಿರುವುದು ಕಂಡು ಕೊಂಡ ಸಂಗತಿಯಾಗಿದೆ. ಯಕ್ಷಗಾನದ ಒಡಲಿನಿಂದ ಕುತೂಹಲದ ಅಧ್ಯಯನ ಪ್ರಾಚೀನತೆಯ ಬೇರುಗಳನ್ನು ಕಾಣುತ್ತಲೇ ಇನ್ನೊಂದು ಕಡೆಯಿಂದ ಬೌದ್ಧ ಧರ್ಮದ ನಿರ್ದಿಷ್ಟ ಅವಸ್ಥಾಂತರದಲ್ಲಿ ಮೈದಳೆದಿರಬಹುದಾದ ಯಕ್ಷಕಲೆಗೂ ಯಕ್ಷಗಾನಕ್ಕೂ ಸಂಪರ್ಕ ಕಲ್ಪಿಸುತ್ತಾರೆ.

ಈ ಕೃತಿಯ ಪ್ರವೇಶಿಕೆಯಲ್ಲಿ ಕೆ.ವಿ. ನಾರಾಯಣ ಅವರು ತಮ್ಮ ನಿಲುವನ್ನು ಪ್ರತಿಕ್ರಿಯಿಸುತ್ತಾ ಹೀಗೆ ಬರೆಯುತ್ತಾರೆ "ಯಕ್ಷಗಾನದಲ್ಲಿ ಗುರುತಿಸಲು ಸಾಧ್ಯವಿರುವ 'ವೈದಿಕ' ಮತ್ತು 'ಅವೈದಿಕ' ಪದರುಗಳನ್ನು ಹೇಗೆ ಅರಿತುಕೊಳ್ಳಬೇಕೆಂದು ಕ.ವೆಂ. ಹಾಕಿಕೊಳ್ಳುವ ಪ್ರಶ್ನೆ. 'ಅವೈದಿಕ'ವಾದದನ್ನು 'ಜಾನಪದ'ವೆಂಬ ರಗ್ಗಿನೆಡೆಗೆ ತಳ್ಳಿ ಪ್ರಶ್ನೆಯನ್ನು ಸುಲಲಿತವಾಗಿ ಬಿಡಿಸಿಕೊಳ್ಳಬಹುದು. ಆದರೆ ಕ.ವೆಂ. ಜಿಗುಟಿನವರು ಹೀಗೆ 'ಜಾನಪದ'ದ ಮುಸುಕು ಸಾಲದೆಂದು ತಿಳಿಯುತ್ತಾರೆ. ಯಕ್ಷಗಾನದಲ್ಲಿ ಪ್ರದರ್ಶನಗೊಳ್ಳುವ **ಗಯಚರಿತ್ರೆ** ಮತ್ತು **ರತಿಕಲ್ಯಾಣ**ಗಳೆಂಬ ಕಥಾನಕಗಳ ಮೂಲಕ ಅವರು ನಡೆಸಿರುವ ಉತ್ಖನನಗಳನ್ನು ನಿದರ್ಶನಗಳನ್ನಾಗಿ ನೋಡಬಹುದು. **ರತಿಕಲ್ಯಾಣ**ದಲ್ಲಿ ಕಾಣುವ ದ್ರೌಪದಿ ಮಹಾಭಾರತದ ಮುಖ್ಯ ಪ್ರವಾಹದಿಂದ ಭಿನ್ನಳಾದವಳು. ಇಂಥ ವಿಕಲ್ಪಗಳನ್ನು 'ಅವೈದಿಕ' ನೆಲೆಯಲ್ಲಿ ಇರಿಸುವುದಾದರೆ ಅದರ ಬೇರುಗಳು ಬೌದ್ಧಧರ್ಮದ ಯಕ್ಷ ಪುರಾಣಗಳಿಗೆ ಸರಿಯುತ್ತವೆ ಎಂಬುದು ಕ.ವೆಂ. ಅವರ ವಾದ. **ಗಯಚರಿತ್ರೆ**ಯಲ್ಲಿ ಕಥಾರೂಪದಲ್ಲಿ ಯಕ್ಷಗಾನದ 'ಅವೈದಿಕ' ನೆಲೆ(ಬೌದ್ಧಯಕ್ಷ) ಮತ್ತು ವೈದಿಕ ನೆಲೆಗಳಿಗೆ ನಡೆದ ಸಂಘರ್ಷವೇ ರೂಪಕವಾಗಿದೆಯೆಂದು ಕ.ವೆಂ. ಹೇಳುತ್ತಾರೆ. ಈ ತೀರ್ಮಾನಗಳನ್ನು ವಿದ್ವಾಂಸರು ಚರ್ಚಿಸಬಹುದು"[4] ಎಂಬಲ್ಲಿ ಕ.ವೆಂ. ಅವರ ನಿಲುವು ವ್ಯಕ್ತವಾಗುತ್ತದೆ ಎನ್ನಬಹುದು.

ಯಕ್ಷರಿಗೂ, ಯಕ್ಷಗಾನಕ್ಕೂ ಸಂಬಂಧ ಕಲ್ಪಿಸುವ ಅವರು ಇಂದಿನ ಯಕ್ಷಗಾನದ ಪೂರ್ವರೂಪವನ್ನು ಕಲ್ಪಿಸಿಕೊಳ್ಳುವುದು ಇಲ್ಲಿ ಕಂಡುಬರುತ್ತದೆ. ಅಂತಹ ಪ್ರೇರಕ

ಸಾಮಗ್ರಿಗಳನ್ನು ಹತ್ತಾರು ಮೂಲಗಳಿಂದ ಅವರು ಕಲೆಹಾಕುತ್ತಾರೆ. ಈ ಪೂರ್ವ ರೂಪವು ಪರಿವರ್ತನೆಗೊಂಡದ್ದನ್ನು ಹಂತ ಹಂತವಾಗಿ ನಿರೂಪಿಸುತ್ತಾರೆ. ಇಲ್ಲಿ ಪ್ರಚಲಿತವಿದ್ದ ನಾಗಾರಾಧನೆಯಂಥ ವಿಧಿ ನೃತ್ಯಗಳಿಗೆ ಅವಕಾಶ ನೀಡುವ ಸಂಗೀತಕ್ಕಿಂತ ಭಿನ್ನವಾದ ಗೇಯತೆ ಮತ್ತು ತಾಳವೇ ಪ್ರಧಾನವಾಗಿ ಬೆಳೆದ ಯಕ್ಷಗಾನದ ಸಂಗೀತದ ಬಗ್ಗೆ ವಿವಾದಕ್ಕೆ ಎಡೆಯಿಲ್ಲದಂತೆ ವಿಚಾರವನ್ನು ಮಂಡಿಸುತ್ತಾರೆ.

ಕ.ವೆಂ. ಅವರು ಈ ಕೃತಿಯಲ್ಲಿ ಕೆಲವು ಪ್ರಶ್ನೆಗಳನ್ನು ಹಾಕಿಕೊಂಡು ಉತ್ತರಿಸುವ ವಿಧಾನ ಭಿನ್ನವಾದದು. ಅವರು ಎತ್ತುವ ಪ್ರಶ್ನೋತ್ತರಗಳೆಂದರೆ

1. ಯಕ್ಷಗಾನದ ಪಾತ್ರಗಳು ಆಭರಣಗಳು, ವೇಷ, ಭೂಷಣಗಳಿಂದ ಬೋಧಿಸತ್ವದ ರೂಪವನ್ನು ಒಳಗೊಳ್ಳುತ್ತದೆ ಎನ್ನುವರು.

   ಈ ವಿಚಾರವಾಗಿ ಯಕ್ಷಗಾನದ ಕಿರೀಟ ಕರ್ಣಕುಂಡಲಗಳು ಕೇರಳದ 'ಕಥಕ್ಕಳಿ'ಯಿಂದ ಎರವಲಾಗಿ ಬಂದಿವೆಯಾದರೂ ಉಳಿದ ಎಲ್ಲಾ ವೇಷಭೂಷಣಗಳೂ ನಮ್ಮ ನಾಡಿನ ಯಾವುದೇ ಶಿಲ್ಪವನ್ನಾಗಲಿ, ಚಿತ್ರವನ್ನಾಗಲೀ ಹೋಲುತ್ತಿಲ್ಲ. ಇವು ಕೇವಲ ಸ್ವತಂತ್ರ ಸೃಷ್ಟಿಗಳು ಎಂದು ಶಿವರಾಮಕಾರಂತರು ತಮ್ಮ **ಯಕ್ಷಗಾನ ಬಯಲಾಟ** ಎಂಬ ಪುಸ್ತಕದಲ್ಲಿ ಹೇಳಿರುವುದನ್ನು ಗುರುತಿಸಬಹುದಾದರೂ ಇದಕ್ಕೂ ಖಚಿತವಾದ ಆಧಾರಗಳಿಲ್ಲ ಮತ್ತು ಸರ್ವಸಮ್ಮತವಾದ ಅಭಿಪ್ರಾಯವಿಲ್ಲ ಎಂದೇ ಹೇಳಬೇಕು.

2. ಬುದ್ಧನ ಬದುಕಿಗೆ ಸಂಬಂಧಿಸಿದ **ಮದನ ವಿಜಯ** ದಂತಹ ಕಥಾನಕಗಳನ್ನು ಶಿಷ್ಯರಿಗೆ ಮನದಟ್ಟು ಮಾಡಲು ಈ ನೃತ್ಯರೂಪಕ ಹುಟ್ಟಿರಬೇಕು ಎಂಬ ಸಾಧ್ಯತೆ ನೆಲೆಯನ್ನು ಹುಡುಕುವಂತೆ ಪ್ರಯತ್ನಿಸುತ್ತಾರೆ.

3. ಯಕ್ಷಗಾನದಲ್ಲಿ ಸ್ತ್ರೀ ವೇಷವಿಲ್ಲ ಎಂಬ ಮಾತುಗಳನ್ನು ದಾಖಲಿಸುತ್ತಾರೆ.

ನಮ್ಮ ನಾಡ ಸಂಸ್ಕೃತಿಯ ಕುರುಹಾದ ಯಕ್ಷಗಾನದ ಮೂಲವನ್ನು ಊಹಿಸುವಂತಹ ಪ್ರಯತ್ನದ ಹಾದಿ ವಿಭಿನ್ನವಾಗಿದೆ. ಈ ದಿಕ್ಕಿನಲ್ಲಿ ಇನ್ನು ಹೆಚ್ಚಿನ ಪರಿಶೋಧನೆಯ ಅಗತ್ಯವಿದೆ ಎನಿಸುತ್ತದೆ. ರಂಗಪ್ರಕಾರದೊಳಗೇ ಹುದುಗಿರುವ ಅದರ ಚರಿತ್ರೆಯನ್ನು ಅನಾವರಣಗೊಳಿಸುವ ಅವರ ಯತ್ನ ಇಲ್ಲಿ ಮುಖ್ಯವಾಗುತ್ತದೆ. ಹೀಗೆ ಕಾಲಗರ್ಭದ ತೆಕ್ಕೆಗೆ ಹೋಗಿ ಅಲ್ಲಿ ಅಡಗಿರುವ ಮೂಲ ಸತ್ವಗಳನ್ನು ನವೀನ ದೃಷ್ಟಿಯೊಂದಿಗೆ ಕಟ್ಟಿಕೊಡಲು ಹೊರಟ ಕ.ವೆಂ. ಸಂಶೋಧನೆ ನಿಜಕ್ಕೂ ಮೆಚ್ಚುವಂತಹದ್ದು. ಭಾರತೀಯ ಚರಿತ್ರೆಯ ಹಿನ್ನೆಲೆಯಲ್ಲಿ ಅಡಗಿರುವ ಮೂಲ ಬೇರುಗಳನ್ನು ಯಕ್ಷ ಕಲ್ಪನೆಯ ಚೌಕಟ್ಟು ಐತಿಹಾಸಿಕ ಹಂತಗಳು, ಯಕ್ಷಯುಗ, ಅನಂತರದಲ್ಲಿ ಅಜಂತ, ಎಲ್ಲೋರ, ನಾಸಿಕ್ ಮುಂತಾದ ದೇವಾಲಯಗಳಲ್ಲಿ ಮೊಳೆದ ಕಲೆ, ಯಕ್ಷಗಾನದ ಹಾದಿ, ಯಕ್ಷಗಾನದ ಪ್ರಥಮ ಸ್ವರೂಪ, ರಾಗ, ಸಂಗೀತ, ಛಂದೋಗತಿಗಳು, ಸಾಂಘಿಕ ಕಲೆ, ಯಕ್ಷಗಾನದಲ್ಲಿ ಬೌದ್ಧ ಅಂಶಗಳು ಎಲ್ಲವನ್ನು ಅಮೂಲಾಗ್ರವಾಗಿ ಸಾಂಸ್ಕೃತಿಕ ಸಂಶೋಧನೆಗೆ ಒಳಪಡಿಸಿ ಸಂಶೋಧನೆಯ ಹೊಸ ಹಾದಿಗೆ ಈ ಗ್ರಂಥ ಅಸುವು ಮಾಡಿಕೊಟ್ಟಿರುವುದು ಗೋಚರವಾಗುತ್ತದೆ.

ಕೊಂಡಜ್ಜಿ ವೆಂಕಟೇಶ್ ಅವರು ಈ ಕೃತಿಯ ಕುರಿತು "ಇಂದಿಗೂ ಕ.ವೆಂ. ಅವರು ಆಲೋಚಿಸಿರುವ, ವಿಚಾರ ಮಾಡಿರುವ ವಿಷಯಗಳನ್ನು ಈವರೆಗೂ ಯಾವ ಸಂಶೋಧಕನೂ ಚಿಂತಿಸದೇ ಇರುವ ಕಾರಣದಿಂದಾಗಿ **ಬೌದ್ಧ ಮತದಲ್ಲಿ ಯಕ್ಷಕಲೆ** ಇವತ್ತಿಗೂ ಸಾಂದರ್ಭಿಕವಾಗಿಯೂ, ಅಗತ್ಯವಾಗಿಯೂ, ವೈಚಾರಿಕವಾಗಿಯೂ

ಶಕ್ತಿಯುತವಾಗಿದೆ ಎಂದು ನಾನು ಭಾವಿಸುತ್ತೇನೆ."[5] ಎಂಬ ಮಾತನ್ನು ಒಂದು ಸಂಶೋಧನಾ ಪೂರ್ಣ ಗ್ರಂಥವನ್ನು ತಾರ್ಕಿಕವಾಗಿ ನಿರೂಪಿಸಿದ ಕ.ವೆಂ. ಅವರ ವಿಚಾರಧಾರೆಯನ್ನು ಇಲ್ಲಿ ಗುರುತಿಸಲು ಮುಂದಾಗುವುದು ಔಚಿತ್ಯವೆನಿಸುತ್ತದೆ.

ಕೊನೆ ಟಿಪ್ಪಣಿ









1. **ಬೌದ್ಧ ಮತದಲ್ಲಿ ಯಕ್ಷಕಲೆ,** ಪುಟ ಸಂಖ್ಯೆ– 01.
2. ಅದೇ, ಪುಟ ಸಂಖ್ಯೆ– 06.
3. ಅದೇ, ಪುಟ ಸಂಖ್ಯೆ– 10.
4. ಅದೇ, ಪುಟ ಸಂಖ್ಯೆ– 04.
5. ಅದೇ, ಪುಟ ಸಂಖ್ಯೆ– 05.

ಆಧಾರ ಸೂಚಿ

1. **ರಾಜಗೋಪಾಲ ಕ.ವೆಂ. : ಬೌದ್ಧಮತದಲ್ಲಿ ಯಕ್ಷಕಲೆ,** ಕೊಂಡಜ್ಜಿ ಪ್ರಕಾಶನ, ಬೆಂಗಳೂರು, 1997.
2. **ಡಾ. ಶಿವರಾಮಕಾರಂತ ಕೆ.: ಯಕ್ಷಗಾನ ಮತ್ತು ಬಯಲಾಟ,** ಹರ್ಷ ಪ್ರಕಟಣಾಲಯ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ, 1963.

■

Diary of early dated inscriptions as a guide
Note: Ashokan and other Inscriptions are taken from Sannati and excavated site, Kanaganahalli

3RD CENTURY BC		Maurya Asoka,Sannati, Dist Gulbarga
1ST CENTURY BC		kKanaganahalli stupa,Dist. Gulbarga
36BC To 1st. century AD		CHIMUKHA SHATAVAHANA U.D.Slab,Kan aganahalli, Dist. Gulbarga **RA JA SI RI CHI MUKHA SADA VA HA NO**
		
124AD Ra ya Pu lu ma vi sa a ja ya m ta sa uja		U.D.Slab,Kan aganahalli, Dist. Gulbarga
126AD		Vasithiputra siri Pulumavisa, Satavahana floor slab, Pseudo Prakshina ver Medhi,Kanaganahalli
138 AD		Vasishtiputra Siri Satakarni 11th regnal year
182 AD		Gautamiputra Sri Yagna Satakarni 11th regnal year
236 AD		Madhariputra Siri Pulumavi, 10th regnal year
c.250-300 AD		Sivakhada Nagasri Naga inscription,Banavasi
c.350-380		Northern Balustrade inscription of Chandraditya (fair copy of the northern balustrade, Pranaveswara temple
c.350-380		Southern Balustrade inscription of Chandraditya (fair copy of the northern balustrade, Pranaveswara temple
c.450AD		Halmidi; Kakusthavarma

ITIHASA DARPANA (Quarterly) : A Peer Reviewed Journal of Historical Research in Kannada, Book : 31-32, October 2016 - March 2017, Pages : 168, Edited by : Rajesh H.G. # 33/A, Near I.T.I. College, Kempegowda Nagara, Vishwaneedam Post, Bengaluru-560 091. Mob.: 7829404063. Email: itihasadarpana@gmail.com



ISSN 232-13590

9 772321 359006

ಬೆಲೆ: ₹160/-